TIGHT BINDING BOOK

—ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ—

# ಪರಿಣಾಮ

200105

83
'46pa

ಲೇಖಕ:

ಮುರಲಿ.

೧-೪-೦ ರೂ.

# ಶ್ರೀ ಶೇಷಾಚಲ ಗ್ರಂಥಮಾಲೆಯ ಪುಸ್ತಕಗಳು

**ನಮ್ಮಲ್ಲಿಯ ಐತಿಹಾಸಿಕ ಕಾದಂಬರಿ**

೧ ಅಲ್ಲಾಹೊ ಅಕಬರ [೨ನೇ ಆ.] ೧೦ಆ
೨ ಅಡಮುಟ್ಟಿ ಸಿಪಾಯಿ ೩ಆ
೩ ಅಮಾತ್ಯರಾಕ್ಷಸ ೪ಆ
೪ ಅಮಾತ್ಯ [illegible] ಗ್ಲೇಜ ೧|ರೂ.
,, ರಫ್ ೧|ರೂ.
೫ ಆತ್ಮಬಲಿ ಗ್ಲೇಜ ೧ರೂ.
,, ರಫ್ ೧೪ಆ
೬ ಈಶಸಂಕಲ್ಪ ಗ್ಲೇಜ ೧೪ಆ
,, ರಫ್ ೧೨ಆ
೭ ಊರ್ಮಿಳಾ [illegible]
೮ ಎಚ್ಚಮ ನಾಯಕ ೮ಆ
೯ ಕಂಕಣಬಂಧನ [೨ನೇ ಆ.] ೧|ರೂ.
೧೦ [illegible] ೧|ರೂ.
,, [illegible]
೧೧ ಗೋ[illegible] (೨ನೇ ಆ.) ೧೨ಆ
೧೨ ಚಾ[illegible] (೨ನೇ ಆ) ೧೨ಆ
೧೩ ಚೋ[illegible] ೨ರೂ
,, ರಫ್ ೧||ರೂ.
೧೪ ಛದ್ರ ಗ್ಲೇಜ ೧|ರೂ.
,, ರಫ್ ೧ರೂ.
೧೫ [illegible] [೨ನೇ ಆ] ೧೪ಆ
೧೬ [illegible] ೧|ರೂ
,, ರಫ್ ೧|ರೂ.
೧೭ ತಾ[illegible]ನಾಡು ೧ರೂ.
೧೮ ದೈವಸಂಕಲ್ಪ [೨ನೇ ಆ.] ೧೪ಆ.
,, ರಫ್ ೧೨ಆ
೧೯ ನರವೀರ [illegible] [೨ನೇ ಆ.] ೧|ರೂ.
,, ರಫ್ ೧ರೂ.
೨೦ ನೇ[illegible] [೨ನೇ ಆ] ೮ಆ

೨೧ ಪತಿತೋದ್ಧಾರ [೨ನೇ ಆ] ೪ಆ
,, ರಫ್ ೩ಆ
೨೨ ಪತ್ರ[illegible] ೪ಆ
೨೩ [illegible] ೮ಆ
೨೪ ಪ್ರಾಣದಾನ ೩ಆ
೨೫ [illegible] ೩ಆ
೨೬ [illegible] ೬ಆ
೨೭ [illegible] ಗ್ಲೇಜ ೧ ರೂ. ೪ ಆ
,, ರಫ್ ೧ ರೂ. ೨ ಆ
೨೮ ಫಿರಂಗಿಗಳ ಉತ್ಪಾತ ೧ರೂ
೨೯ ಬಲಿದಾನ ಗ್ಲೇಜ ೧ರೂ. ೪ಆ
,, ರಫ್ ೧ರೂ. ೨ಆ
೩೦ ಭಯಂಕರ ಸೇಡು ಗ್ಲೇಜ ೧||ರೂ.
,, ರಫ್ ೧|ರೂ.
೩೧ ಭಾಗ್ಯೋದಯ ೮ಆ
೩೨ ಮಾತೃಭೂಮಿಗಾಗಿ (೨ನೇ ಆ) ೩ಆ
೩೩ ಮಂದಾಕಿನಿ ೧೨ಆ
೩೪ ರಕ್ತ[illegible] [೨ನೇ ಆ.] ೨ಆ
೩೫ ರಾಣೀ [illegible] ೩ಆ
೩೬ ರಾಣೀ ಅರುಣಕುಮಾರಿ ೧ರೂ
೩೭ ವಡಗಾವದ ವಿಜಯ [೨ನೇ ಆ.] ೧|ರೂ
,, ರಫ್ ೧ರೂ.
೩೮ ವಿಮಲಾ [೨ನೇ ಆ.] ಗ್ಲೇಜ ೧೪ಆ
,, ರಫ್ ೧೨ಆ
೩೯ ವೀರಕಾಂತಾ [೨ನೇ ಆ.] ೧೦ಆ
೪೦ ವೀರಕುಮಾರಿ ಕನಕಲತೆ ೩ಆ
೪೧ ಶಲ್ಯ[illegible] [೨ನೇ ಆ.] ಗ್ಲೇಜ ೧ರೂ
,, ರಫ್ ೧೪ಆ
೪೨ ಸೌಂದರ್ಯಸಂಜೀವನ ೧೪ಆ
೪೩ ಸತ್ಯಮೇವ ಜಯತೆ ೧೨ಆ
೪೪ ಸೂರ್ಯಾಸ್ತ ೮ಆ
೪೫ ಸೂರ್ಯಗ್ರಹಣ ೧ರೂ
೪೬ ಹಂಸಾ (೨ನೇ ಆವೃತ್ತಿ) ೧|ರೂ.
೪೭ ಹಿಂದೂ-ಮುಸಲ್ಮಾನರ ಐಕ್ಯ (೨ನೇ ಆ) ೨ಆ

[ಈ ಪುಸ್ತಕದ ಕೊನೆಯ ಪುಟದಲ್ಲಿ ನೋಡಿರಿ]

# ಪರಿಣಾಮ

ಸಿರಿಗನ್ನಡಂ ಗೆಲ್ಗೆ

# ಪರಿಣಾಮ

(ವಿಜಯನಗರ ಕಾಲೀನ ಒಂದು ಐತಿಹಾಸಿಕ ಕತೆ)


ಲೇಖಕ:

ಮುರಲಿ.



ಪ್ರಕಾಶಕ:

ಮ. ಗು. ಕುಲಕರಣಿ,

ಸಂಪಾದಕ ಸ. ಪ್ರ.

ಆನಂದವನ-ಗದಗ

ಬೆಲೆ ೧-೪-೦ರೂ.

# ಅರಿಕೆ.

Checked 1965

ಶ್ರೀ ಶೇಷಾಚಲ ಸದ್ಗುರುವಿನ ಅನುಗ್ರಹದಿಂದ ನನ್ನ 'ಗಜಪತಿ ಸಪ್ತಾಂಗ ಹರಣ' ಓದುಗರ ಕೈ ಸೇರಿದ ಅಲ್ಪಾವಕಾಶದಲ್ಲಿಯೇ ಈ ಪುಸ್ತಕ ಓದುಗರ ಕೈಸೇರುವದೆಂಬ ಸಂಗತಿಯಿಂದ ನನಗೆ ಅತ್ಯಾನಂದವಾಗುತ್ತಲಿದೆ. ಇದರ ಸಂಪೂರ್ಣ ಶ್ರೇಯಸ್ಸು ಶ್ರೀಮಾನ್ ಛಿ. ಪ. ಕಾಳೆಯವರಿಗೇನೇ ಇರುತ್ತದೆ. ಅವರು ನನಗೆ ಆಗ್ರಹ ಮಾಡದಿದ್ದರೆ, ನಾನು ಇಷ್ಟು ಬೇಗನೆ ಬರೆಯುತ್ತಲಿರಲಿಲ್ಲವೆಂಬದು ಸ್ಪಷ್ಟವೇ ಇರುತ್ತದೆ.

ನಮ್ಮಾ ಹೆಮ್ಮೆಯ ವಿಜಯನಗರ ಸಾಮ್ರಾಜ್ಯದ ವಿಷಯಕವಾಗಿ ನಾನು ಬೇರೆ ಬರೆಯಬೇಕಿಲ್ಲ. ಮೊನ್ನೆ ತಾನೇ ಅತ್ಯಂತ ವಿಜೃಂಭಣೆಯಿಂದ ನೆರವೇರಿದ ವಿಜಯನಗರದ ಷಟ್ ಶತ ಸಾಂವತ್ಸರಿಕೋತ್ಸವವು ಸಕಲರ ಹೃದಯದಲ್ಲಿ ವಿಜಯನಗರ ನೆಲೆಗೊಳ್ಳುವಂತೆ ಮಾಡಿದೆ. ಅದೇ ಸಮಯದಲ್ಲಿ ಅನೇಕ ಅಜ್ಞಾತ ಸಂಗತಿಗಳೂ ಬೆಳಕಿಗೆ ಬಂದಿವೆ. ಅಂದಿನಿಂದಲೇ ವಿಜಯನಗರದ ಸಾಹಿತ್ಯ ಕನ್ನಡ ವಾಙ್ಮಯ ಮಂದಿರದಲ್ಲಿ ಮುಂದೆ ಮುಂದೆ ಕಾಲಿಕ್ಕುತ್ತಲಿದೆ. ನಾನಾದರೂ ನನ್ನ 'ಅಳಲಿಯ ಭಕ್ತಿ'ಯನ್ನು ರಾಮರೂಪೀ ಓದುಗರಿಗೆ, ಕನ್ನಡ ಸಾಹಿತ್ಯಕ್ಕೆ ಅರ್ಪಿಸುವ ನಿರ್ಧಾರದಿಂದ ಮುಂದೆ ಸಾಗುತ್ತಲಿರುವೆ. ಪ್ರೇಮದಿಂದ ಕೈಗೊಟ್ಟು ಸಾಹಿತ್ಯ ಮಂದಿರದ ಮೆಟ್ಟಲು ಏರುವಂತೆ ನನಗೆ ನೆರವು ನೀಡುತ್ತಲಿರುವವರು ಶ್ರೀ ಶೇಷಾಚಲ ಸಂಸ್ಥೆಯವರು.

ನನ್ನೀ ಕತೆಗೆ ವಿಜಯನಗರದ ಸಾಹಿತ್ಯವಾದ ಬೇರೆ ಬೇರೆ ಪತ್ರಿಕೆಗಳು ಮತ್ತು ಶ್ರೀಮಾನ್ ದೇಸಾಯಿ ಪಾಂಡುರಂಗರಾಯರು ಬರೆದ 'ವಿಜಯನಗರದ ಸಾಮ್ರಾಜ್ಯ' ಗಳೇ ಮುಖ್ಯವಾದ ಸಾಧನಗಳು. ಇದಲ್ಲದೆ ನಾನು ಕರ್ನಾಟಕ ಐತಿಹಾಸಿಕ ಪಠ್ಯ ಪುಸ್ತಕವಾಗುವ ಯೋಗ್ಯತೆಯುಳ್ಳ [illegible] ಗ್ರಂಥವನ್ನೇ ಹೆಚ್ಚಾಗಿ ಅನುಸರಿಸಿದ್ದೇನೆ. ಆ ಬಗ್ಗೆ ನಾನು ಶ್ರೀ [illegible] ಅವರಿಗೆ ಉಪಕೃತನಾಗಿರುವೆ.

'ನಿರಂಕುಶಾಃ ಕವಯಃ' ಎಂದಿದ್ದರೂ ಇದರ ಕೆಲವು ಭಾಗವನ್ನಾದರೂ ಕತೆಗಾರರು, ಕಾದಂಬರಿಕಾರರು ಆಕ್ರಮಿಸಿಕೊಳ್ಳುವದುಂಟು. ಹಾಗೆ ನಾನಾದರೂ ಕೊಂಚ ನಿರಂಕುಶದಿಂದಲೇ ಬರೆದಿರುವನೆಂದು ಸಮ್ಮತಿಸುವೆನು.

ಕಥಾನಾಯಿಕೆ ಹೇಮಾಂಬಿಕೆಯು ಕಲ್ಪಿತ ಪಾತ್ರವು ಇತಿಹಾಸಗಳಲ್ಲೆಲ್ಲಿಯೂ ಸಿಕ್ಕಲಾರದು. ಕನ್ನಡಿತಿಯರ ನಿಜವಾದ ಹೃದಯ ತೋರಿಸುವ ಇಂತಹ ಪಾತ್ರ ಈ ವಸ್ತುವಿಗವಶ್ಯವೆಂದು ತೋರಿತು. ಆದುದರಿಂದ ಇಂತಹ ಒಂದು ಪಾತ್ರ ನಿರ್ಮಿತ

ವಾಯಿತು. ಈ ಕಲ್ಪಿತ ಪಾತ್ರದಿಂದ ಕತೆ ಎಷ್ಟು ಸುಂದರವಾಗಿದೆಯೆಂಬುದನ್ನರಿಯುವುದು ತಮ್ಮೆಲ್ಲರ ಕೆಲಸ. ಲಂಕೆಯ ದಂಡಯಾತ್ರೆಗೆ ಹೋದವನು ಲಕ್ಷ್ಮಣ ಮಂತ್ರಿಯು. ನಾನು ಕತೆಯ ರಾಮಣೀಯಕತೆಗೆಂದು ಮಲ್ಲಿಕಾರ್ಜುನ-ವಿರೂಪಾಕ್ಷರನ್ನು ಅವನಿಗೆ ಜೊತೆಗೂಡಿಸಿರುವೆ.

ಇದರ ಮುಖ್ಯ ವಸ್ತುವಾದ 'ದುರ್ಘಟನೆ'ಯಲ್ಲಿ ಮಾರ್ಪಾಟು ಮಾಡಿರುವೆ. ಅತಿಥಿಗಳೊಬ್ಬೊಬ್ಬರನ್ನೇ ಕರೆದೊಯ್ದು ವಧಿಸಿದರೆಂಬುವದು. ಅದನ್ನು ನನಗೆ ಸರಿಗಂಡ ರೀತಿಯಲ್ಲಿ ಮಾರ್ಪಡಿಸಿರುವೆನು. ಅದು ಹೇಗಾಗಿದೆಯೆಂದು ತಾವೇ ತಿಳಿಯಬೇಕು.

ಇನ್ನೂ ಇಂತಹ ಮಾರ್ಪಾಟು ಅಲ್ಲಲ್ಲಿ ಕಾಣಬರಬಹುದು. ಈ ವಿಷಯದಲ್ಲಿ ನಾನು ಇತಿಹಾಸಕಾರರ ಕ್ಷಮೆಯನ್ನು ಯಾಚಿಸುತ್ತೇನೆ.

ಮತ್ಸರ, ಸಾಹಸ, ಮನೋದೌರ್ಬಲ್ಯ ಮುಂತಾದ ಭಿನ್ನಭಿನ್ನ ಗುಣಗಳ ಪರಿಣಾಮ ತಿಳಿಸುವದೇ ಕತೆಯ ಗುರಿ. ಆ ಆ ಗುಣವಿಶೇಷದ ಪರಿಣಾಮ ಆ ಆ ಪಾತ್ರಗಳು ಹೇಗೆ ಹೊಂದಿದರೆಂಬದು ಇದರಲ್ಲಿ ವಿವರಿಸಲ್ಪಟ್ಟಿದೆ.

ಸುಹೃದಯರಾದ ವಾಚಕರಿಗೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಶ್ರೀ ಶೇಷಾಚಲ ಗ್ರಂಥಮಾಲೆಯ ಮುಖಾಂತರವಾಗಿಯೇ ನನ್ನ ಇದುವರೆಗಿನ ಕತೆಗಳೂ ಮತ್ತು ಸದ್ಯದ ಕತೆಯೂ ಪ್ರಕಟಿಸಲ್ಪಟ್ಟಿವೆ. ಅವರು ಹೇಗೆ ಲೋಕಸೇವೆಗಾಗಿ ಹಗಲಿರುಳು ಯತ್ನಿಸುತ್ತಲಿರುವರೆಂಬ ಸಂಗತಿ ಎಲ್ಲರಿಗೂ ಗೊತ್ತಿದ್ದುದೇ ಇದೆ. ಅವರ ಸ್ವಾರ್ಥತ್ಯಾಗಪರ ದುಡಿತಕ್ಕೆ ತಾವೆಲ್ಲರೂ ಯೋಗ್ಯ ಉತ್ತೇಜನ ಕೊಡಬೇಕೆಂಬುದೇ ನನ್ನ ನಮ್ರ ವಿನಂತಿ.

ಹಿಂದಿನ ಕತೆಯಲ್ಲಿ ನಾನು ಹೇಳಿದ್ದಂತೆ ಕರ್ನಾಟಕ ಸಾಮ್ರಾಜ್ಯವು ಭಿನ್ನಭಿನ್ನ ಅರಸುಮನೆತನಗಳಲ್ಲಿ ಸಾವಿರಕ್ಕಿಂತ ಮೇಲ್ಪಟ್ಟು ವರ್ಷ ನಡೆಯಿತು. ವೈಭವದಿಂದ ಮೆರೆಯಿತು. ಅನೇಕ ಪರದೇಶದ ಆಯುಭಿಲಾಷಿಗಳು ಬಂದರು. ಅಂತಹ ದೀರ್ಘಕಾಲೀನ ಇತಿಹಾಸದಲ್ಲಿ ಲಕ್ಷಾವಧಿ ಪುಸ್ತಕಗಳನ್ನು ಬರೆದರೂ ತೀರದಷ್ಟು ಸಾಹಿತ್ಯವಿದೆ. ಅದರಲ್ಲಿ ನನ್ನ ಅಲ್ಪಭಾಗ ಪೂರಯಿಸುವ ಸಂಕಲ್ಪಮಾಡಿರುವೆ. ಸದ್ಬೋಧ ಚಂದ್ರಿಕೆಯ ಸಂಪಾದಕರು, ಶ್ರೀಶೇಷಾಚಲ ಗ್ರಂಥಮಾಲೆ ನನಗೆ ನೆರವು ಕೊಟ್ಟಿರುವರು. ನನ್ನ ಪುಸ್ತಕದಲ್ಲಿ ಯೋಗ್ಯತೆಯಿದ್ದರೆ, ಅದು ಮನ್ನಣೆಪಡೆಯಲೇಬೇಕು. ಹಾಗಾದಲ್ಲಿ ನಾನು ಮತ್ತ ಬರೆವೆ ಬರೆಯುವೆನು.

ಮುರಲಿ.

# ಪರಿವಿಡಿ


| ವಿಷಯ | ಪುಟ |
|---|---|
| ೧ ಮತ್ಸರಾಗ್ನಿ | ೧ |
| ೨ ಪೂರ್ವ ಪರಿಚಯ | ೧೩ |
| ೩ ಹೇಮಾಂಬಿಕೆ | ೨೦ |
| ೪ ಎದೆಯುರಿ | ೩೪ |
| ೫ ಯುವರಾಜ-ಮಲ್ಲಿಕಾರ್ಜುನ | ೪೪ |
| ೬ ಅಬ್ದುಲ್ ರಜಾಕ್ | ೫೯ |
| ೭ ಗುಪ್ತ ಕಟ್ಟು | ೬೭ |
| ೮ ಗೌಪ್ಯ ಸ್ಫೋಟ! | ೭೫ |
| ೯ ಕಾರ್ಮೋಡ | ೮೪ |
| ೧೦ ಮಲ್ಲಿಕಾರ್ಜುನ ಮಂದಿರ | ೯೩ |
| ೧೧ ಸಮಾರಂಭ | ೧೦೧ |
| ೧೨ ಅಕಲ್ಪಿತ ವಿಘ್ನ | ೧೦೯ |
| ೧೩ ಅಸಹಾಯ ಯುವರಾಜ | ೧೧೬ |
| ೧೪ ದಾರುಣ ನೋಟ | ೧೨೪ |
| ೧೫ ಪ್ರಸಂಗಾವಧಾನ | ೧೩೩ |
| ೧೬ ಪರಿಣಾಮ | ೧೪೨ |
| ೧೭ ಶೋಕ! | ೧೫೨ |
| ೧೮ ಸಭೆ | ೧೬೨ |
| ೧೯ ಮಂಗಲ | ೧೬೬ |
| ೨೦ ಉಪಸಂಹಾರ | ೧೭೧ |



# ಪರಿಣಾಮ.

## ೧ ಮತ್ಸರಾಗ್ನಿ.

ವಿಜಯನಗರವೆಂದರೆ ಕೇಳಬೇಕೆ? ಸಿರಿದೇವಿಯ ತವರೂರು; ಸರಸತಿಯ ನೆಲೆಯೂರು. ಈ ಅತ್ತೆ-ಸೊಸೆಯರು ತಮ್ಮ ಸ್ವಭಾವ ಸಹಜವಾದ ಮಾತ್ಸರ್ಯವನ್ನು ಮರೆತು ಬಿಟ್ಟು ಅಲ್ಲಿ ಬಲು ನೆಮ್ಮದಿಯಲ್ಲಿ ವಾಸಿಸುತ್ತಲಿದ್ದರು. ಅಂದಿನ ಕನ್ನಡ ಪ್ರಜೆಗಳು ಆವಾಗಲೂ ಸುಖ-ಸಂತೋಷಗಳಲ್ಲಿ ತೇಲಾಡುತ್ತಲಿದ್ದರೆಂದು ಕೇಳಬೇಕೆ? ಕನ್ನಡ ದೊರೆಯೆಂದರೆ, ಸ್ವಾರ್ಥಲೋಲುಪನಲ್ಲ; ಪರಧರ್ಮದ್ವೇಷಕನಲ್ಲ. ಆವಾಗಲೂ ತನ್ನ ಸಾಮ್ರಾಜ್ಯವು ಸುಖ-ಸಂತೋಷಗಳಲ್ಲಿಯೇ ಮುಳುಗಿರಬೇಕೆಂದು ಯತ್ನಿಸುತ್ತಲಿದ್ದನು. ಕನ್ನಡ ರಾಜ್ಯಕ್ಕಾಗಿಯೇ ಆತನ ಜೀವನ; ಕನ್ನಡಿಗರಿಗಾಗಿಯೇ ಆತನ ಮರಣಗಳಿದ್ದುವು. ಆತನ ಬಾಳುವೆಯೆಂದರೆ, ಕನ್ನಡರಾಜ್ಯಪರಿಪಾಲನೆಯೇ. ಆತನ ಆಟ-ನೋಟಗಳೆಂದರೆ, ಕನ್ನಡರಾಜ್ಯದ ಹಗೆಗಳನ್ನು ಹಣ್ಣುಮಾಡುವುದರಲ್ಲಿಯೇ. ಹೀಗೆ ಆವಾಗಲೂ ತನ್ನ ಜೀವನವನ್ನೇ ಧಾರೆಯೆರೆದು, ಕನ್ನಡ ರಾಜ್ಯವನ್ನುಳಿದು ತನ್ನ ಅಸ್ತಿತ್ವವೇ ಇಲ್ಲವೆಂದು ನೆನೆದು, ಕನ್ನಡಕ್ಕಾಗಿಯೇ ತನ್ನ ಇರವೆಂದು ನಂಬಿ, ಆವಾಗಲೂ ತನ್ನ ತನುಮನಧನಗಳಿಂದ ಕನ್ನಡ ರಾಜ್ಯ ಪರಿಪಾಲನೆ ಮಾಡ ತ್ತಲಿರಲು, ಕನ್ನಡಿಗರಿಗೆ ಸುಖ ಸಂತೋಷಗಳು ಸಿಕ್ಕದಿರಬಹುದೆ? ಕನ್ನಡ ಸಾಮ್ರಾಜ್ಯವು ಸಂಪದ್ವೈಭವಗಳಿಂದ ಮೆರೆಯದಿರಬಹುದೆ? ನಿಜವಾಗಿಯೂ ಅಂದಿನ ಕನ್ನಡಿಗರ ವೈಭವವು ಅತುಲವಾದುದು. ಅವರ ನಾಗರಿಕತ್ವವು ಹಾಗೆಯೇ ಬೆಳೆದು ಹೋಗಿದ್ದಿತು. ಅದರಲ್ಲಿಯೂ ವಿಜಯನಗರವೆಂದರೆ, ವೈಭವಶಾಲೀ ಕನ್ನಡ ಸಾಮ್ರಾಜ್ಯದ ರಾಜಧಾನಿ. ಅಲ್ಲಿಯ ಸಿರಿ-ಸಂಪತ್ತುಗಳನ್ನೂ, ಪಟ್ಟಣದ ಸೌಂದರ್ಯವನ್ನೂ, ರಾಜನ ವೈಭವವನ್ನೂ ನೋಡಿದವರೇ ಧನ್ಯರು! ಅನುಭವಿಸಿದವರೇ ಧನ್ಯರು! ಅದು ಊಹೆಗೆ ಮೀರಿದುದಿದೆ. ಆವಾಗಾದರೊಮ್ಮೆ ಬಂದು ನೋಡಿ,

ಮಾನವಕೋಟಿಯು ಸುಖದ ಸುಗ್ಗಿಯಲ್ಲಿ ಹಿಗ್ಗಿ, ಅತ್ಯಂತ ಆನಂದಿತರಾಗಿ ಬರೆದಿಟ್ಟ ಪರಕೀಯ ಪ್ರವಾಸಿಗರ ಬರಹಗಳನ್ನು ನೋಡಿದರೆ, ಅದರ ಅಲ್ಪಸ್ವಲ್ಪ ಕಲ್ಪನೆಯು ಬರುವಂತಿದೆ.

ಇಂತಹ ಸಂಪತ್ಪೂರ್ಣ ನಾಡಿನಲ್ಲಿ ರಾಜರ ನಾಡಹಬ್ಬ ನಡೆದಿದ್ದಿತು. ಅದು ನಾಡಹಬ್ಬವು. ನಾಡವರೆಲ್ಲರೂ ಅತೀವ ಉತ್ಸಾಹದಿಂದ ಹಿಂದು ಮುಂದುಗಳನ್ನೆಲ್ಲ ಮರೆತೇ ಆಚರಿಸುತ್ತಲಿದ್ದರು. ಅವರ ಉತ್ಸಾಹವು ಆವರ್ಣನೀಯವಾದುದು. ಹೀಗೆ ಅತ್ಯಂತ ವೈಭವಪರಿಪೂರ್ಣವಾದ ನಾಡಹಬ್ಬದ ಉತ್ಸವವನ್ನು ಅನೇಕರು ಬಣ್ಣಿಸಿರುವರು. ಕ್ರಿ. ಶ. ೧೪೪೩ನೇ ವರುಷದ ವಿಜಯದಶಮಿಯು ಆ ಸಲದ ವಿಜಯದಶಮಿಯ ವೈಭವವು ಎಲ್ಲವುಗಳನ್ನೂ ಹಿಂದೆ ಹಾಕುವಂತಿದ್ದಿತು. ನಾಡಿನಲ್ಲೆಲ್ಲ ಆ ಸಲದ ನಾಡಹಬ್ಬವು ಅತೀವ ವಿಜೃಂಭಣೆಯಿಂದ ಆಚರಿಸಲ್ಪಡುತ್ತಲಿದ್ದಿತು. ಅದಕ್ಕೆ ಪ್ರಬಲವಾದ ಕಾರಣ ಒಂದಿದ್ದಿತು. ಅದೇ ವರುಷವೇ ಆಳುವ ದೊರೆಯಾದ ಇಮ್ಮಡಿದೇವರಾಯನ ಹಿರಿಯಮಗ ಕರ್ನಾಟಕದ ಯುವರಾಜ ಮಲ್ಲಿಕಾರ್ಜುನನು ತನ್ನ ಚಿಕ್ಕಪ್ಪನ ಮಗನಾದ ವಿರೂಪಾಕ್ಷ ಮುಖ್ಯಮಂತ್ರಿಯಾದ ಲಕ್ಕಣ್ಣದಣ್ಣಾಯಕರನ್ನೊಡಗೊಂಡು ಹೋಗಿ ಶೂರತನದಿಂದ ಕಾದಿ ಲಂಕೆಯನ್ನು ಗೆದ್ದು ಬಂದಿದ್ದನು. ಆಗ್ಗೆ ಲಂಕೆಯಲ್ಲಿ ಪರಾಕ್ರಮಬಾಹುವು ರಾಜ್ಯವಾಳುತ್ತಲಿದ್ದನು. ಕನ್ನಡಿಗರು ಬಹಳ ಕಲಿತನದಿಂದ ಕಾದಿದರು. ಕೊನೆಗೆ ವಿಜಯ ಸಂಪಾದಿಸಿದರು. ಈರ್ವರೂ ರಾಜಪುತ್ರರು ನಾಡಹಬ್ಬದಲ್ಲಿ ಭಾಗವಹಿಸಲು ಆಗತಾನೇ ಬಂದಿದ್ದರು. ಸಿಂಹಲದ್ವೀಪವನ್ನು ಗೆದ್ದು ಬಂದ ವಿಜಯೀ ವೀರರನ್ನು ಮನ್ನಿಸುವದಕ್ಕಾಗಿ, ಭಾವೀ ಸಮ್ರಾಟನನ್ನು ಸತ್ಕರಿಸುವದಕ್ಕಾಗಿ, ಕನ್ನಡಿಗರ ಕಡುಗಲಿಯಾದ ಯುವರಾಜನ ಯಶೋಗಾನ ಪಾಡುವುದಕ್ಕಾಗಿ ಅಂದು ಪ್ರತಿಯೊಬ್ಬ ಕನ್ನಡಿಗನೂ ಮನಮುಟ್ಟಿ ಯತ್ನಿಸುತ್ತಲಿದ್ದನು. ಯುವರಾಜ ಮಲ್ಲಿಕಾರ್ಜುನನು ಅಂದು ಕನ್ನಡಿಗರ ಹೆಮ್ಮೆಯ ವಿಷಯವಾಗಿದ್ದನು. ಅಚ್ಚುಮೆಚ್ಚಿನ ರಾಜಪುತ್ರನಾಗಿದ್ದನು. ಅತ್ಯಂತ ಪ್ರೇಮದ ಆಪ್ತನಾಗಿದ್ದನು. ಯಾರ ಬಾಯಿಯಲ್ಲಾದರೂ ಆತನ ಹೆಸರೇ ಕೇಳಬರುತ್ತಲಿದ್ದಿತು. ಯಾರೊಬ್ಬರೂ ಆತನ ಗುಣಗಾನವನ್ನೇ ಮಾಡುತ್ತಲಿದ್ದರು. ಯಾರಾದರೂ ಆತನ ಕಲಿತನವನ್ನೇ ಬಣ್ಣಿಸುತ್ತಲಿದ್ದರು. ಅಂದು ವಿಶಾಲವಾದ ಕರ್ನಾಟಕ ಸಾಮ್ರಾಜ್ಯದಲ್ಲೆಲ್ಲ ಏಕಕಂಠದಿಂದ ಕನ್ನಡವೀರ ರಾಜಪುತ್ರ ಮಲ್ಲಿಕಾರ್ಜುನನ ಗುಣಗಾನವೇ ನಡೆದಿದ್ದಿತು. ಆತನಿಗೆ ಆಯುರಾರೋಗ್ಯವಿತ್ತು ಕನ್ನಡಸಾಮ್ರಾಜ್ಯವನ್ನು ಅತ್ಯಂತ ವೈಭವದಿಂದ ಪರಿಪಾಲಿಸಲೆಂದು ಪಂಪಾಪತಿಗೆ ಪ್ರಾರ್ಥನೆ ಸಲ್ಲಿಸುತ್ತಲಿದ್ದರು. ಅಂದು ಅತ್ಯಂತ ವೈಭವಪೂರ್ಣವಾದ ಮೆರವಣಿಗೆ ಹೊರಟಿದ್ದಿತು. ಎಲ್ಲಕ್ಕೂ ಮುಂದೆ ಮಂಗಲವಾದ್ಯಗಳು, ಹಿಂದಿನಿಂದ ಸೈನ್ಯದ ಸಾಲು ಮುಂತಾಗಿ ಸಕಲ ವೈಭವದಿಂದ ಹೊರಟ ಆ ಮೆರವಣಿಗೆಯನ್ನು ಬಣ್ಣಿಸ ಹೋಗುವುದು ನನ್ನ ಅಳವಿನ ಕಾರ್ಯವಲ್ಲ. ಆಗಾಗ್ಗೆ ಚಲಚ್ಚಿತ್ರಗಳಲ್ಲಿ ನೋಡಿದ ಅಥವಾ ಅಂದಿನ ವಿಜಯನಗರ ವೈಭವ

ವನ್ನು ಕೆಲವಂಶದಿಂದ ತೋರ್ಪಡಿಸುವ ಸದ್ಯದ ಕನ್ನಡ ಪ್ರಭುಗಳಾದ ಮೈಸೂರೊಡೆಯರ ಮಾನವಮಿಯ ಉತ್ಸವ ನೋಡಿದವರು ಅದರ ಕಲ್ಪನೆ ಮನಸ್ಸಿನಲ್ಲಿ ತಂದು ಕೊಂಡು ಅಂದಿನ ಆ ವಿಜೃಂಭಣೆಯ ಮೆರವಣಿಗೆಯು ಇನ್ನೂ ನೂರಾರು, ಸಾಸಿರ ಪಟ್ಟು ಸುಂದರವಾದ ಚಿತ್ರವೊಂದನ್ನು ಊಹಿಸಿ ಬಿಟ್ಟರೆ ಅದೆಷ್ಟು ಸುಂದರವಾಗ ಬಹುದೋ, ಅಷ್ಟೇ ಅಥವಾ ಇನ್ನೂ ಕೊಂಚ ಹೆಚ್ಚೇ ಸುಂದರವಾದ ಮೆರವಣಿಗೆ ಅಂದಿನದಿದ್ದಿತೆಂದು ಹೇಳಿಬಿಡುವೆನು.

ನೋಟಕರ ಕಣ್ಮನಗಳನ್ನು ತಣಿಸುವಾ ಮೆರವಣಿಗೆ ವಿಶಾಲವಾದ ಪಟ್ಟಣದ ಬೀದಿಗಳಲ್ಲಿ ಹಾಯುವಾಗ ಅಲ್ಲಲ್ಲಿ ಪುಷ್ಪವೃಷ್ಟಿಯಾಗುತ್ತಲಿದ್ದಿತು. ವಿಜಯೀ ಯುವ ರಾಜನಿಗೆ, ಆಳುವ ದೊರೆಗೆ ಸುವಾಸಿನಿಯರು ಮಂಗಲಾರುತಿ ಬೆಳಗುತ್ತಲಿದ್ದರು. ದೃಷ್ಟಿ ಮುರಿಯುತ್ತಲಿದ್ದರು. ಎಲ್ಲರ ಲಕ್ಷ್ಯವೂ ಮಧ್ಯದಲ್ಲಿ ರಾಜತುರಗದ ಮೇಲೆ ಒಳ್ಳೇ ಆಢ್ಯತೆಯಿಂದ ಕುಳಿತು ಬಹು ಮೆಲ್ಲನೆ ಮುಂಮೊರೆಯುತ್ತಲಿದ್ದ ಯುವರಾಜ ಮಲ್ಲಿಕಾರ್ಜುನನ ಮೇಲೆಯೇ ಇದ್ದಿತು. ಸುಹಾಸದಿಂದ ಒಪ್ಪುತ್ತಲಿದ್ದ ಮೊಗ, ಶೌರ್ಯವನ್ನು ದ್ಯೋತಿಸುವ ಕಣ್ಣುಗಳು, ಬುದ್ಧಿವಂತಿಕೆಯನ್ನು ಸಾರುವ ವಿಶಾಲ ಹಣೆ ಇವೆಲ್ಲವುಗಳು ಅಲ್ಲಿಯ ಜನರ ಮನಗಳನ್ನು ಸೆಳೆದುಬಿಟ್ಟಿದ್ದುವು. ಕೂಡಿದ ಜನತೆಯಲ್ಲಿ, ನಡೆಯುವ ಅಧಿಕಾರಿಗಳಲ್ಲಿ, ಓಡುವ ಸೈನಿಕರಲ್ಲಿ ಒಂದೇ ಒಂದು ವಿಷಯ ನಡೆದಿದ್ದಿತು. ಅದೆಂದರೆ, ಮಲ್ಲಿಕಾರ್ಜುನನ ವಿಜಯ ವರ್ಣನೆ. ಅಲ್ಲಲ್ಲಿ ಮಾನ-ಮನ್ನಣೆಗಳನ್ನು ಹೊಂದುತ್ತ ಆ ರಾಜಪರಿವಾರವು ಗೋಧೂಳಿಯ ಸಮಯಕ್ಕೆ ಅರಮನೆಯ ದ್ವಾರಕ್ಕೆ ಬಂದಿತು. ಅತ್ಯಂತ ರಮಣೀಯವಾಗಿ ಶೃಂಗರಿಸಲ್ಪಟ್ಟ ರಾಜಮಂದಿರದ ದ್ವಾರದಲ್ಲಿಯೇ ಸುವಾಸಿನಿಯರು ಮಂಗಲಾರುತಿ ಬೆಳಗಿದರು. ಒಡನೆಯೇ ಪರಿವಾರವೆಲ್ಲವೂ ಕೆಳಗಿಳಿದು ಸಭಾಮಂದಿರದತ್ತ ಹೊರಟಿತು. ಸುಂದರವಾದ ಸಭಾಮಂದಿರವು ಚಿತ್ರವಿಚಿತ್ರ ರಂಗಗಳಿಂದಲೂ, ವಿವಿಧ ದೀಪಗಳಿಂದಲೂ, ಭಿನ್ನಭಿನ್ನ ಅಲಂಕಾರಗಳಿಂದಲೂ, ನಾನಾ ಬಗೆಯ ಕಲಾಕೃತಿಗಳಿಂದಲೂ ಅತ್ಯಂತ ಮನೋಹರವಾಗಿ ತೋರುತ್ತಲಿದ್ದಿತು. ಒಡನೆಯೇ ವಂದಿಗಳ ಜಯ ಜಯಕಾರದೊಡನೆ ಕರ್ನಾಟಕ ಸಾರ್ವಭೌಮ ಇಮ್ಮಡಿ ದೇವರಾಯನು ನವರತ್ನಖಚಿತ ಸಿಂಹಾಸನವೇರಿದನು. ಸಿಂಹಾಸನಕ್ಕೆ ಕೊಂಚ ಸಮೀಪದಲ್ಲಿಯೇ ಮಲ್ಲಿಕಾರ್ಜುನನಿಗೆಂದು ಒಂದು ಸಿಂಹಾಸನವು ಮಂಡಿಸಲ್ಪಟ್ಟಿದ್ದಿತು. ಇನ್ನೊಂದು ಭಾಗಕ್ಕೆ, ಸಂಗಣ್ಣದಣ್ಣಾಯಕ ಮತ್ತು ಲಕ್ಕಣ್ಣದಣ್ಣಾಯಕ-ವಿಜಯನಗರದ ಮುಖ್ಯ-ಮಂತ್ರಿಗಳ ಆಸನಗಳಿದ್ದುವು. ಮೊದಲಿನ ಆಸನವು ಬರಿಯದಿದ್ದಿತು; ಏಕೆಂದರೆ, ಮುಖ್ಯ ಮಂತ್ರಿಗಳೀರ್ವರಲ್ಲಿ ಓರ್ವನಾದ ಲಕ್ಕಣ್ಣದಣ್ಣಾಯಕನಿನ್ನೂ ಮರಳಿ ಬಂದಿರಲಿಲ್ಲ. ಸಿಂಹಳದ್ವೀಪದ ದಂಡಯಾತ್ರೆಗೆ ಹೋದವನು ಅಲ್ಲಿ ಪರಾಕ್ರಮಬಾಹುವಿನ ಸಂಗಡ ಒಪ್ಪಂದದ ವ್ಯವಸ್ಥೆಗೆ ತೊಡಗಿದ್ದನು. ಇನ್ನೊಂದರಲ್ಲಿ ಸಂಗಣ್ಣದಣ್ಣಾಯಕ ಕುಳಿತಿದ್ದನು. ಅದರ ಕೆಳಗಡೆ ಎಲ್ಲ ಸರದಾರರ ಆಸನಗಳಿದ್ದುವು. ಸರದಾರರ ಆಸನಗಳ

ಲ್ಲಿಯೇ ಕೊಂಚ ಮೇಲ್ಗಡೆ ಇಮ್ಮಡಿ ದೇವರಾಯನ ತಮ್ಮನಾದ ಪ್ರತಾಪದೇವ ರಾಯನ ಮತ್ತು ಆತನ ಮಗ ವಿರೂಪಾಕ್ಷನ ಆಸನಗಳಿದ್ದುವು.

ಹೀಗೆ ಎಲ್ಲರೂ ತಮ್ಮ ತಮ್ಮ ಸ್ಥಳಗಳನ್ನು ಸ್ವೀಕರಿಸುತ್ತಲೇ ಸಂಗಣ್ಣದಣ್ನಾಯಕನು ಯುವರಾಜನಿಗೆಂದು ತನ್ನ ಪ್ರೇಮ ತೋರಿಸಲು, ರಾಜನಿಷ್ಠೆ ಪ್ರದರ್ಶಿಸಲು ಎದ್ದು ನಿಂತನು.

'ಕರ್ನಾಟಕದ ಆಳುವ ದೊರೆಗಳೇ ಮತ್ತು ಕರ್ನಾಟಕ ಸಾಮ್ರಾಜ್ಯದ ಆಧಾರ ಸ್ತಂಭಗಳಂತಿರುವ ಸರದಾರರೇ ಹಾಗು ನನ್ನ ಅಣ್ಣ-ತಮ್ಮಂದಿರೇ, ಇಂದಿನ ಈ ಅತ್ಯಂತ ಶುಭದಿನದಲ್ಲಿ ಪ್ರತಿಸಲದಂತೆ ನಾವು ನಮ್ಮ ರಾಜನಿಷ್ಠೆ ವ್ಯಕ್ತಪಡಿಸಲು ನಮ್ಮ ದೊರೆಗಳಿಗೆ ಆಯುರಾರೋಗ್ಯ ದಯಪಾಲಿಸಲು ಇಲ್ಲಿ ಕೂಡಿರುತ್ತೇವೆ; ಆದರೆ ಇಂದಿನ ದಿನದಲ್ಲಿ ಒಂದು ವೈಶಿಷ್ಟ್ಯವಿದೆ ಈ ಸಲದ ನಾಡಹಬ್ಬವು ನಮ್ಮ ಸ್ಮರಣೆಯಲ್ಲಿ ಬಹಳ ದಿನ ಉಳಿಯುವಂತಹ ವೈಲಕ್ಷಣ್ಯವನ್ನೊಳಗೊಂಡಿದೆ. ವಿಜಯನಗರದಿತಿಹಾಸಿನಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲ್ಪಡುವಂತಹ ಒಂದು ಅತ್ಯಂತ ಮಹತ್ವದ ಸಂಗತಿಯ ಬಗ್ಗೆ ನಾವೆಲ್ಲರೂ ಅಭಿಮಾನಪಡಬೇಕಾಗಿದೆ. ಅಂತಹ ವಿಷಯವೆಂದರೆ, ನಮ್ಮ ಶೂರ, ಧೀರ, ಚತುರ ಯುವರಾಜರು. ನಮ್ಮ ಯುವರಾಜರು ಕರ್ನಾಟಕದ ಕೀರ್ತಿಯನ್ನು ಬಹಳವಾಗಿ ಬೆಳೆಯಿಸಿರುವರು. ವಿಜಯನಗರದ ವೀರ ಪತಾಕೆಯನ್ನು ಲಂಕೆಯ ಮೇಲೆ ನೆಟ್ಟಿರುವರು. ಕನ್ನಡಿಗರ ಯಶೋದುಂದುಭಿಯನ್ನು ದಶದಿಶೆಗಳಲ್ಲಿ ಮೊಳಗಿಸಿರುವರು. ಲಂಕೆಯೊಡೆಯ ಪರಾಕ್ರಮ ಬಾಹುವಿಗೆ ಕನ್ನಡಿಗರ ಕಲಿತನದ ಅನುಭವ ತಂದುಕೊಟ್ಟಿರುವರು. ಅವರ ವೀರ ಕೃತಿಗಳನ್ನು. ಚತುರ ಯುಕ್ತಿಗಳನ್ನು ನೀವೆಲ್ಲರೂ ಈಗಲೇ ಕೇಳಿರುವಿರಿ. ಆ ಬಗ್ಗೆ ನಾನು ಹೇಳುತ್ತ ನಿಮ್ಮ ವೇಳೆ ಕಳೆಯುವದಿಲ್ಲ. ಈಗ ಮುಖ್ಯವಾದ ಕಾರ್ಯವೆಂದರೆ, ನಮ್ಮ ಯುವರಾಜನಿಗೆ ನಮ್ಮಗಳ ಪ್ರೇಮದ ಕಾಣಿಕೆ ಅರ್ಪಿಸುವದು. ಯುವರಾಜರ ಸದ್ಗುಣಗಳೇ ಅವರಿಗೆ ಹೆಚ್ಚಿನ ಕಾಣಿಕೆಯಾಗಿರುತ್ತವೆ. ಆ ದೃಷ್ಟಿಯಿಂದ ನಾವು ಅವರಿಗೆ ಯಾವ ಕಾಣಿಕೆಯನ್ನೂ ಕೊಡಲಾರೆವು. ಅವರ ಶೂರತನವಾದರೂ ಅದ್ವಿತೀಯವಾಗಿದೆ. ಇವೆಲ್ಲವುಗಳ ಜೊತೆಗೆ ನಮ್ಮಗಳ ಪ್ರೇಮದ ಕುರುಹೊಂದಿರಲಿ, ಎಂಬುದೇ ನನ್ನ ಅಭಿಲಾಷೆ. ಇಂದು ನಾವುಗಳು ಮಾಡಬೇಕಾಗಿರುವ ಮುಖ್ಯ ಕೆಲಸಗಳಲ್ಲಿ ಇದೊಂದು. ಇದರ ಹೊರತು ನಮ್ಮ ದೊರೆಗಳಿಗೂ ಮತ್ತು ಯುವರಾಜರಿಗೂ ಆಯುರಾರೋಗ್ಯ ದಯಪಾಲಿಸಲು ಪಂಪಾಧೀಶನಿಗೆ ಪ್ರಾರ್ಥನೆ ಸಲ್ಲಿಸುವದು. ಅವುಗಳಲ್ಲಿ ಮೊದಲಿನ ಕಾರ್ಯವನ್ನು ನೀವೆಲ್ಲರೂ ನನಗೆ ಒಪ್ಪಿಸಿರುವಿರಿ. ನಾನಾದರೂ ಅದನ್ನು ಅತ್ಯಂತ ಆನಂದದಿಂದ ಕೈಕೊಂಡಿರುವೆನು.'

ಹೀಗೆ ಮಾತನಾಡಿ ಹಿಂದೆ ನೋಡುತ್ತಲೆ ಒಬ್ಬ ಸೇವಕ ಒಂದು ಮುಚ್ಚಿದ ರನ್ನದ್ಹರಿವಾಣ ತಂದಿಟ್ಟನು ಮುಖ್ಯ ಮಂತ್ರಿ ಅದನ್ನು ತನ್ನ ಕೈಯಲ್ಲಿ ತೆಗೆದು ಕೊಂಡು ಯುವರಾಜನ ಬಳಿಗೆ ಹೋಗಿ, ಅದರಲ್ಲಿನ ನವರತ್ನಖಚಿತ ಹಿಡಿಕೆಯ

ಖಡ್ಗವನ್ನು ಉತ್ಕೃಷ್ಟ ತರಗತಿಯ ಪಟ್ಟಿಯೊಡನೆ ಯುವರಾಜನ ನಡುವಿಗೆ ಕಟ್ಟಿದನು. ಯುವರಾಜನ ನಾಮಘೋಷದಿಂದ ದಿಕ್ತಟಗಳು ತುಂಬಿ ಹೋದುವು. ಸೈನಿಕರ ವೀರ ಗರ್ಜನೆಯಿಂದ ನಭೋಮಂಡಳವು ಅದುರಿ ಹೋಯಿತು. ಮಂಗಲ ವಾದ್ಯಗಳ ಸಂಗೀತದಿಂದ ಸುರರೂ ತಣಿದು ಹೋದರು. ಎಲ್ಲರ ಕಂಠಗಳು ಬಿಗಿದವು. ಯುವರಾಜನು ತನ್ನ ಪ್ರಜೆಗಳ ಭಕ್ತಿಯಿಂದ ಉದ್ರಿಕ್ತನಾದನು. ರಾಜನ ಕಣ್ಣುಗಳಿಂದ ಆನಂದಬಾಷ್ಪಗಳು ಧಾರೆಗಟ್ಟಿದುವು. ಇಂತಹ ಮಗನನ್ನು ದಯಪಾಲಿಸಿದುದಕ್ಕೆ ಪಂಪಾಪತಿಗೆ ಮನದಲ್ಲಿಯೇ ಪೊಡಮಟ್ಟನು.

ಅಂದು ಇಮ್ಮಡಿದೇವರಾಯನಿಗೆ ಅತ್ಯಂತ ಹರುಷವಾಗಿದ್ದಿತು; ಮತ್ತು ಹಾಗೆ ಆಗುವುದಾದರೂ ಸ್ವಾಭಾವಿಕವೇ; ಏಕೆಂದರೆ, ತಂದೆಯ ಇಚ್ಛೆಯಾದರೂ ಇನ್ನೇನು? ಮಗನು ಮುಂದಕ್ಕೆ ಬರಬೇಕು. ಮಗನ ಕೀರ್ತಿ ಹರಡಬೇಕು. ದೇಶಹಿತ, ರಾಷ್ಟ್ರಹಿತಗಳನ್ನು ತನ್ನಗಿಂತಲೂ ಹೆಚ್ಚಾಗಿ ಮಾಡಬೇಕು. ಎಂದೇ ಅಲ್ಲವೆ? ಚಿಕ್ಕವನಾದರೂ ಮಲ್ಲಿಕಾರ್ಜುನನು ಇವುಗಳನ್ನೆಲ್ಲ ಚನ್ನಾಗಿಯೇ ಸಾಧಿಸಿದ್ದನು. ಮಲ್ಲಿಕಾರ್ಜುನನ ಕೀರ್ತಿ ಆಗಲೇ ಎಲ್ಲೆಡೆಯಲ್ಲಿಯೂ ಹರಡಿದ್ದಿತು. ಆತನೊಳ್ಳೇ ಪ್ರಜಾನಿಷ್ಠ ಸಾರ್ವಭೌಮನಾಗುವನೆಂದು ಪ್ರಜೆಗಳೆಣಿಸಿದ್ದರು ಹೀಗೆ ಒಳ್ಳೇ ಪ್ರೇಮದಿಂದ ಪ್ರಜೆಗಳು ಮಗನನ್ನು ಮನ್ನಣೆ ಮಾಡಿರುವುದನ್ನು ನೋಡಿ, ರಾಯನು ಆನಂದದಿಂದ ಉಬ್ಬಿಹೋಗುವದು ಸ್ವಾಭಾವಿಕವಲ್ಲವೆ? ಅತ್ಯಂತ ಆನಂದದಿಂದ ಅಂದಿನ ಆನಂದಕರ ಉತ್ಸವವನ್ನು ನೋಡುತ್ತಲಿದ್ದನು.

ಮುಖ್ಯ ಮಂತ್ರಿಯ ಭಾಷಣಕೊನೆಗೊಳ್ಳುತ್ತಲೆ ಮತ್ತೆ ಕೆಲವರು ಸರದಾರರು ಮಾತನಾಡಿದರು. ಎಲ್ಲ ಮುಖ್ಯ ಅಭಿಪ್ರಾಯವು ಯುವರಾಜನ ಗುಣಗಾನವೇ ಆಗಿದ್ದಿತು. ಪ್ರತಿಯೊಂದು ವ್ಯಕ್ತಿಯ ಹೃದಯವೂ ಮಲ್ಲಿಕಾರ್ಜುನನ ವಿಷಯಕ ಪ್ರೇಮದಿಂದ ತುಂಬಿದ್ದಿತು ಯಾರಲ್ಲಿಯೂ ಅನ್ಯಥಾ ಭಾವನೆಯಿರಲಿಲ್ಲ; ಮತ್ತು ಇರುವುದಾದರೂ ಹೇಗೆ? ತಮ್ಮದೇ ಕನ್ನಡನಾಡು. ತಮ್ಮ ನಾಡಿನ ದೊರೆಯೇ ಇಮ್ಮಡಿ ದೇವರಾಯ ಆ ಇಮ್ಮಡಿ ದೇವರಾಯನ ಮಗನೇ ಮಲ್ಲಿಕಾರ್ಜುನ ಅವನೇನನ್ಯನೇ? ತಮ್ಮ ಯುವರಾಜನೇ ಆತನಾಗಿದ್ದನಲ್ಲವೇ? ಭಾವೀ ಕರ್ನಾಟಕದ ತಮ್ಮ ಸಾರ್ವಭೌಮನೇ ಆತನಾಗಿದ್ದನಲ್ಲವೇ? ತಮ್ಮೆಲ್ಲರ ಹಿತದ ಸಲುವಾಗಿ ಹೋರಾಡುವ ತಮ್ಮ ಅತೀವ ಹಿತದ ಅಪ್ಪನೇ ಆತನಾಗಿದ್ದನಲ್ಲವೆ? ಅಂತಹದರಲ್ಲಿ ಅನ್ಯಥಾ ಭಾವನೆಗೆ ಅವಕಾಶ ಹೇಗೆ ಸಿಕ್ಕುವುದು? ಪ್ರತಿಯೊಬ್ಬನು ಆತನ ವಿಷಯಕ ಭಕ್ತಿ-ವಿಶ್ವಾಸಗಳಿಂದ ಕೂಡಿ ಹೋಗಿ, ಆತನ ಕುಶಲ ಚಿಂತನೆಯಲ್ಲಿ ಕಾಲಕಳೆಯುವ ಮಿತ್ರರೇ ಅಲ್ಲಿದ್ದರಲ್ಲದೆ, ಶತ್ರುಗಳು ಇರಬಹುದೇ? ಯಾರಾದರೂ ಇಲ್ಲವೆಂದೇ ಉತ್ತರ ಕೊಡುವದುಂಟು; ಆದರೆ ಕೊಂಚ ಶೋಧಕ ಬುದ್ಧಿಯಿಂದ ನಿರೀಕ್ಷಿಸಿದರೆ, ಒಂದಲ್ಲ ಎರಡು-ಮೂರು ಇಂತಹ ವ್ಯಕ್ತಿಗಳಿದ್ದವೆಂದು ತಿಳಿದು ಬರುವಂತಿದ್ದಿತು.

ಅಗೋ, ಓದುಗ ಮಹಾಶಯ! ಅಲ್ಲಿ ನೋಡಿ, ಸುಗಂಧ ತೈಲಗಳ ಪ್ರಖರ

ಜ್ಯೋತಿಯಲ್ಲಿ ನೀವು ಚೆನ್ನಾಗಿ ನೋಡಬಲ್ಲಿರಷ್ಟೆ? ಅಲ್ಲಿ ಮೇಲ್ಗಡೆ ಸರದಾರರ ಮೊದಲು ಸಾಲಿನ ಮೇಲಿನ ಎರಡು ಆಸನಗಳಲ್ಲಿ ಕುಳಿತ ಎರಡು ವ್ಯಕ್ತಿಗಳನ್ನು ಚೆನ್ನಾಗಿ ನೋಡಿರಿ. ಅವರಾರೆಂಬದನ್ನು ನೀವು ಈಗಲೆ ಅರಿತಿರುವಿರಿ. ಅಹುದು. ನಿಜ. ಮಧ್ಯಮ ವಯಸ್ಸಿನ ಆ ಪುರುಷನೇ ಪ್ರತಾಪದೇವರಾಯ. ಆತನ ಬದಿಗೆ ಕುಳಿತ ಆ ತರುಣನೇ ವಿರೂಪಾಕ್ಷ. ವಿರೂಪಾಕ್ಷನು ಪ್ರತಾಪದೇವರಾಯನ ಪುತ್ರನು. ಅವರೀರ್ವರ ಮುಖಮುದ್ರೆಗಳನ್ನು ಕೊಂಚವೇ ನಿರೀಕ್ಷಿಸಿರಿ. ರಾಜನಿಷ್ಠೆಯಿಂದಲೂ ಪವಿತ್ರಭಕ್ತಿಯಿಂದಲೂ ಉಕ್ಕುತ್ತಲಿರುವ ಈ ಸಾವಿರಾರು ಮುಖಕಮಲಗಳಲ್ಲಿ ಅವು ಬೇರೇಯಾಗಿ ಹೇಗೆ ಕಾಣುತ್ತವೆ ನೋಡಿರಿ. ರಾಜನಿಷ್ಠ ಸೇವಕರು ಒಂದೆಡೆ ಕಲೆತ ನೋಟವು ಅದೆಷ್ಟು ಸುಂದರವಿರುತ್ತದೆಂಬದನ್ನು, ನೋಡದವರು ಅರಿಯುವ ಬಗೆ ಹೇಗೆ? ಪ್ರತಿಯೊಬ್ಬನ ಮುಖಕಮಲವೂ ಪವಿತ್ರವಾದ ಭಕ್ತಿಯಿಂದ ರಾಜನಲ್ಲಿಯ ಅಚಲ ಶ್ರದ್ಧೆಯಿಂದ ಬೆಳಗುತ್ತಲಿರುತ್ತದೆ. ಅಂತಹ ಕಾಂತಿಯುಕ್ತ ಮುಖಗಳ ಸಮೂಹವು ಒಂದು ಅತ್ಯಂತ ಸುಂದರ ನೋಟವನ್ನುಂಟು ಮಾಡುತ್ತದೆ. ಅಂತಹ ರಮಣೀಯ ನೋಟವು ಇಮ್ಮಡಿ ದೇವರಾಯನಾಸ್ಥಾನದಲ್ಲಿ ಅಂದು ಕಾಣುತ್ತಲಿದ್ದಿತು; ಆದರೆ ಆ ಎರಡು ಮೊಗಗಳು ಮಾತ್ರ ಒಂದು ದುರ್ಭಾವನೆಯಿಂದ ಪ್ರೇರಿತವಾದಂತೆ ಕಾಣುತ್ತಲಿದ್ದುವು. ಈರ್ವರೂ ಅಲ್ಲಿ ನಡೆಯುವ ಕಾರ್ಯಗಳನ್ನು ಅಸೂಯಾಪರ ದೃಷ್ಟಿಯಿಂದ ನೋಡುತ್ತಲಿದ್ದರು. ಎಲ್ಲರ ಹೃದಯಗಳಿಗೂ ಅತ್ಯಾನಂದವನ್ನುಂಟು ಮಾಡಿದರೆ, ಅವರ ಹೃದಯಗಳಿಗೆ ಭಯಂಕರ ವೇದನೆಯನ್ನುಂಟು ಮಾಡುತ್ತಲಿದ್ದಿತು. ಮಲ್ಲಿಕಾರ್ಜುನನ ಸ್ತುತಿಪರ ಒಂದೊಂದೇ ಶಬ್ದವು ಪ್ರತಿಯೊಬ್ಬ ರಾಜನಿಷ್ಠನ ಎದೆಯಲ್ಲಿ ಹರ್ಷದ ಬುಗ್ಗೆಯನ್ನೇ ಹುಟ್ಟಿಸಿದರೆ, ಅವರೀರ್ವರ ಹೃದಯದಲ್ಲಿ ಅಲಗಿಕ್ಕಿ ಹೊಡೆದಂತಾಗುತ್ತಿದ್ದಿತು. ರಾಯ ಮತ್ತು ಮಲ್ಲಿಕಾರ್ಜುನರು ಚಿರಾಯುಗಳಾಗಿ ಆವಾಗಲೂ ಕರ್ನಾಟಕ ಸಾಮ್ರಾಜ್ಯದ ವಿಜಯ ದುಂದುಭಿಯನ್ನು ಮೊಳಗಿಸುತ್ತಲಿರಲಿ, ಆವಾಗಲೂ ಕನ್ನಡಿಗರ ಕಲಿತನವನ್ನು ಜಗತ್ತಿಗೆ ತೋರಿಸಿಕೊಡಲಿ, ಎಂಬ ಭಾವ ಪ್ರತಿಯೊಬ್ಬ ಕನ್ನಡಿಗನ ಮುಖದಲ್ಲಿ ಬಿಂಬಿಸಿ ಹೋಗಿದ್ದರೆ, ಅವರಿಬ್ಬರ ಮುಖದಲ್ಲಿ ಮಾತ್ರ ಕನ್ನಡ ಸಮ್ರಾಟ್ ಮತ್ತು ಯುವರಾಜರೀರ್ವರ ವಿಜಯದ ದುರ್ಭಾವನೆಯು ನಾಟ್ಯವಾಡುತ್ತಲಿದ್ದಿತು. ಕನ್ನಡದುನ್ನತಿಗೆ ಆತ್ಮಾರ್ಪಣೆ ಮಾಡಿದ ಆ ತಂ-ದೆಮಕ್ಕಳೀರ್ವರು ಅತ್ಯಂತ ಪವಿತ್ರತಮ ಮೂರ್ತಿಗಳಾಗಿ ಕಾಣಿಸಿದರೆ, ಈ ತಂದೆ-ಮಕ್ಕಳ ಕಣ್ಣಿಗೆ ಮಾತ್ರ ಅತ್ಯಂತ ಸ್ವಾರ್ಥಿಗಳೂ, ದುಷ್ಟರೂ, ನೀಚರೂ ಆಗಿತೋರುತ್ತಲಿದ್ದರು. ಓದುಗ ಮಹಾಶಯ! ಅವರೀರ್ವರು ಅಲ್ಲಿದ್ದರೆಂದೇ ಆ ಸುಂದರನೋಟವನ್ನು ಅದೆಷ್ಟೋ ಮಟ್ಟಿಗೆ ಅಂದಗೆಡಿಸಲು ಕಾರಣರಾಗಿದ್ದರು. ಉಜ್ವಲ ಕಾಂತಿಯಿಂದ ಬೆಳಗುವ ಅಣಿಮುತ್ತುಗಳ ಸಮೂಹದಲ್ಲಿ ಕೂಡಿದ ಎರಡು ಕಾಡಕಲ್ಲುಗಳಂತೆ—ಅಥವಾ ಮಧುರವಾದ ನೊರೆವಾಲಿನಿಂದ ತುಂಬಿದ ಕೊಡದಲ್ಲಿ ಅಲಕ್ಷ್ಯದಿಂದ ಬಿದ್ದ ಎರಡು ಉಪ್ಪಿನ ಹರಳಿನಂತಿದ್ದರೆಂದರೂ

ಅನ್ನಬಹುದು. ಅಂತೆಯೇ ಆ ಕೊಡ ಹಾಲನ್ನು ಬಹಳ ಮಟ್ಟಿಗೆ ಕೆಡಿಸಲೂ ಕಾರಣರಾದರು.

ಇಮ್ಮಡಿ ದೇವರಾಯ-ಮಲ್ಲಿಕಾರ್ಜುನರು ಕರ್ನಾಟಕ ಮಾತೆಯ ನಿಃಸ್ವಾರ್ಥೀ ಪ್ರೇಮದಿಂದ, ಅತುಲ ಶೌರ್ಯದಿಂದ, ಚತುರ ಯುಕ್ತಿಗಳಿಂದ ಸುಮಧುರ ನಡತೆಯಿಂದ ಜನತೆಯನ್ನಾಕರ್ಷಿಸಿಕೊಂಡಿದ್ದರೆ. ಪ್ರಜರ ಪ್ರೇಮಕ್ಕೆ ಪಾತ್ರರಾಗಿದ್ದರೆ ಅವರನ್ನು ಪ್ರತಾಪದೇವರಾಯನಾಗಲಿ, ಆತನ ಮಗ ವಿರೂಪಾಕ್ಷನಾಗಲಿ ಏಕೆ ದ್ವೇಷಿಸಬೇಕು? ತಾವಾದರೂ ಅವರಂತೆ ಕರ್ನಾಟಕ ವಿಷಯಕವಾದ ಪರಿಶುದ್ಧ ಪ್ರೇಮ ತೋರಿದರೆ, ಅವರಿಗಾದರೂ ಮನ್ನಣೆ ಸಿಕ್ಕಲೇಬೇಕಲ್ಲವೆ? ಅಹುದು; ಆದರೆ ಎಲ್ಲರ ವಿಚಾರಗಳಾಗಲಿ, ಎಲ್ಲರ ಸ್ವಭಾವವಾಗಲಿ ಒಂದೇ ಇರುವದು ಎಂದೂ ಸಾಧ್ಯವಿಲ್ಲವಷ್ಟೇ? ಒಂದೆರಡು ವರುಷಕ್ಕೆ ಮೊದಲು ಹುಟ್ಟಿದ ಮಾತ್ರಕ್ಕೆ ಇಮ್ಮಡಿದೇವರಾಯ ಸಾರ್ವಭೌಮನಾಗಬೇಕು; ಆತನಿಗಿಂತ ಯಾವ ವಿಧದಲ್ಲಿಯೂ ಕಡಿಮೆಯಿಲ್ಲದ ತಾನು ಆತನ ಅಡಿಯಾಳಾಗಬೇಕು, ಇದೆಲ್ಲಿಯ ನ್ಯಾಯ? ರತ್ನಖಚಿತ ಸಿಂಹಾಸನದಲ್ಲಿ ಸೇವಕ-ಸೇವಿಕೆಯರಿಂದ ಸೇವೆಗೊಳ್ಳುತ್ತಾ, ಸರದಾರರಿಂದ ಮನ್ನಣೆ ಪಡೆಯುತ್ತ, ಪ್ರಜೆಗಳಿಂದ ಸ್ತುತಿಸಲ್ಪಡುತ್ತ ಮೆರೆಯಬೇಕು. ಆತ ಜನಿಸಿದ ತಂದೆಯಿಂದಲೇ ತಾನೂ ಜನಿಸಿದ್ದರೂ, ಆತನ ಧಮನಿಗಳಲ್ಲಿ ಹರಿಯುತ್ತಲಿದ್ದ ರಕ್ತವೇ ತನ್ನ ಧಮನಿಗಳಲ್ಲಿ ಹರಿಯುತ್ತಲಿದ್ದರೂ, ಆತನಂತೆ ತಾನೂ ಶೂರ, ಧೀರನಾಗಿದ್ದರೂ ತಾನೊಬ್ಬ ಸಾಮಾನ್ಯ ಸೇವಕನಂತೆ ಸರದಾರರ ಸಮೂಹದಲ್ಲಿ ಕೂರಬೇಕು. ಇದಕ್ಕಿಂತಲೂ ಹೆಚ್ಚಿನ ಅನ್ಯಾಯ ಬೇರೊಂದಿರಬಹುದೇ? ಪ್ರಯತ್ನ, ಸಾಹಸ, ಶೌರ್ಯಗಳಿಗಾಗಲಿ, ಸ್ವಾರ್ಥತ್ಯಾಗಕ್ಕಾಗಲಿ, ಚಾತುರ್ಯಕ್ಕಾಗಲಿ, ವಿದ್ವತ್ತಿಗಾಗಲಿ ಕೊಂಚವಾದರೂ ಅವಕಾಶವಿಡದೆ, ಬರಿಯ ಜನುಮಕ್ಕೆ ಮಾತ್ರ ಮಹತ್ವಕೊಡುವದು ಅದೆಷ್ಟು ಮೂರ್ಖತನವು?

ಇತ್ಯಾದಿ ವಿಚಾರಗಳು ಆ ತಂದೆ-ಮಕ್ಕಳ ಮನದಲ್ಲಿ ಮೂಡಿದ್ದುವು. ಅವು ಅಯೋಗ್ಯವಾದುವೋ ಇಲ್ಲವೆ ಯೋಗ್ಯವಾದುವೋ ಹೇಳುವುದು ಕೊಂಚ ಕಠಿಣವೇ. ಏಕೆಂದರೆ ಸದ್ಯದ ಪ್ರಜಾಪ್ರಭುತ್ವದ ಸಮಯದಲ್ಲಿ ಕೂಡಾ ಜಗತ್ತಿನಲ್ಲಿ ವಿಷಮತೆ ಕಾಣಬರುತ್ತಿದೆಯಲ್ಲ! ಆ ಬಗ್ಗೆ ನಮ್ಮ ಮನಗಳಲ್ಲಿ ಆಗಾಗ್ಗೆ ಇಂತಹ ಯೋಚನೆ ಬರುವದುಂಟು. ಬರಿಯ ವತನದಾರನ ಮಗನಾದ ಮೂಲಕ ಆತ ಯಾವ ಯೋಗ್ಯತೆ ಇಲ್ಲದಿದ್ದರೂ, ಏನೂ ಕೆಲಸ ಮಾಡದಿದ್ದರೂ, ಅಲ್ಪವಾದರೂ ಶರೀರ ಸವೆಸದಿದ್ದರೂ ಸುಖದ ಶಿಖರದಲ್ಲಿ ನರ್ತಿಸಬೇಕು, ಪಕ್ವಾನ್ನಗಳನ್ನು ಭುಂಜಿಸಬೇಕು, ಮೋಟಾರುಗಳಲ್ಲಿ ತಿರುಗಬೇಕು, ಸುಂದರ ಬಂಗಲೆಗಳಲ್ಲಿ ಒಂದೂವರೆ ಫೂಟು ದಪ್ಪದ ಗಾದಿಯ ಮೇಲೆ ಹೊರಳಬೇಕು. ಆತನ ಭೂಮಿಗಳನ್ನೇ ಉಳುವ, ಉದಯದಿಂದ ಅಸ್ತಕಾಲ ಪರಿಯಂತ ಒಂದೇ ಸಮನೆ ಅಲ್ಪವಾದರೂ ವಿಶ್ರಾಂತಿಯಿಲ್ಲದೆ ದುಡಿಯುವ ಬಡ

ರೈತನು ಹೊಟ್ಟೆಗೆ ತುತ್ತು ಕೂಳು ಕಾಣಬಾರದು, ಇರಲು ಒಂದು ಮುರುಕು ಗುಡಿಸಲು ಕಾಣಬಾರದು, ಮೈಗೆ ಚಿಂದಿಗಳಿಲ್ಲದೆ ಅಲೆಯಬೇಕು. ಇದೆಂತಹ ನ್ಯಾಯ? ಇಂತಹ ಹಲವು ವಿಚಾರಗಳು ಆಧುನಿಕ ತರುಣರ ಮನದಲ್ಲಿ ಮೂಡಿ ಹೃದಯದಲ್ಲಿ ಬಂಡನ್ನೇ ಎಬ್ಬಿಸುತ್ತವೆ; ಮತ್ತು ಸದ್ಯದ ವಿಚಾರಣೆಯಂತೆ ಇದು ಯೋಗ್ಯವೇ ಅನ್ನಬಹುದಾಗಿದೆ; ಆದರೆ ಇಷ್ಟರಿಂದಲೇ ಪ್ರತಾಪದೇವರಾಯನಾಗಲಿ ಆತನ ಮಗ ವಿರೂಪಾಕ್ಷನಾಗಲಿ ಇಮ್ಮಡಿದೇವರಾಯ ಮತ್ತು ಆತನ ಮಗನ ವಿಷಯಕ್ಕೆ ಅಸೂಯೆ ಪಡುವುದು ಯೋಗ್ಯವೇ ಎಂದು ನಾನನ್ನುತ್ತೇನೆ, ಎಂದು ತಾವು ಭಾವಿಸಕೂಡದು.

ಮಲ್ಲಿಕಾರ್ಜುನನ ಬಗ್ಗೆ ಸರದಾರರಾಗಲಿ ಇನ್ನಾರೇ ಆಗಲಿ ವ್ಯಕ್ತಪಡಿಸುತ್ತಲಿದ್ದ ಒಂದೊಂದೇ ಸ್ತುತಿಪರ ಶಬ್ದವು ಈ ತಂದೆ-ಮಕ್ಕಳೀರ್ವರ ಮನಗಳಲ್ಲಿ ಬಹಳ ನೋವನ್ನುಂಟು ಮಾಡಹತ್ತಿತು "ಮಲ್ಲಿಕಾರ್ಜುನನೊಡನೆ ನನ್ನ ಮಗ ವಿರೂಪಾಕ್ಷ ಹೋಗಿರಲಿಲ್ಲವೆ? ಆತ ಒಂದಾದರೂ ಶೂರತನದ ಕಾರ್ಯ ಕೈಗೂಡಿಸಲಿಲ್ಲವೆ? ಅಥ ದಿಂದ ಇತಿಯ ವರೆಗೂ ಮಲ್ಲಿಕಾರ್ಜುನನ ಸ್ತೋತ್ರವೇ ಸ್ತೋತ್ರ. ವಿರೂಪಾಕ್ಷನ ಹೆಸರು ಒಂದು ಸಲವಾದರೂ ಬರಕೂಡದೆ? 'ಬಲವಂತನೇ ನೀತಿವಂತನೆ'ಂಬಂತೆ ಯುವರಾಜನಿರುವ ಮೂಲಕವೂ ಆತನ ತಂದೆ ಸಾರ್ವಭೌಮನಿರುವ ಮೂಲಕವೂ ಆತನ ಸ್ತುತಿಯೇ ಸ್ತುತಿ ಇದಕ್ಕಿಂತ ಹೆಚ್ಚಿನ ಅಪಮಾನ ಬೇರೊಂದಿರಬಹುದೆ? ಶೂರನಾದವನು ಇಂತಹ ಅಪಮಾನಗಳನ್ನು ಸಹಿಸಬೇಕೆ?"....ಮುಂತಾಗಿ ಪ್ರತಾಪ ದೇವರಾಯನ ಮನದಲ್ಲಿ ಮಹಾಯುದ್ಧವಾರಂಭವಾಯಿತು. ವಿರೂಪಾಕ್ಷನಾದರೂ ಇಂತಹ ವಿಚಾರಗಳಿಂದಲೇ ಆವೃತ್ತನಾದನು. ಇಬ್ಬರೂ ತಮ್ಮದು ಭಯಂಕರ ಅಪಮಾನವಾಯಿತೆಂದು ತಿಳಿದರು. ಇಬ್ಬರ ವಿಚಾರಗಳೂ ಅವರವರ ಮುಖದ ಮೇಲೆ ಚನ್ನಾಗಿ ಮೂಡಿದ್ದುವು. ಕೊಂಚ ನಿರೀಕ್ಷಿಸಿದಲ್ಲಿ ಅವರ ಹೃದ್ಗತವನ್ನು ಚೆನ್ನಾಗಿಯೇ ಅರಿಯಬಹುದಾಗಿದ್ದಿತು; ಆದರೆ ಅದರ ಅರಿವಾರಿಗೆ? ಎಲ್ಲರೂ ತಮ್ಮ ಪ್ರಭು ಯಶೋಚಿಂತನೆಯಲ್ಲಿ ಮಗ್ನರಾಗಿ ಅಲ್ಲಿ ನಡೆಯುತ್ತಲಿದ್ದ ಕಾರ್ಯಕ್ರಮಗಳಲ್ಲಿ ಆನಂದದಿಂದ ಭಾಗವಹಿಸುತ್ತಲಿದ್ದರು. ಇಂತಹ ದುರ್ಮುಖಿ ಒಬ್ಬನಾದರೂ ಹೊರಡ ಬಹುದೆಂಬ ಕಲ್ಪನೆಯಾದರೂ ಆ ರಾಜನಿಷ್ಠ ಕನ್ನಡಿಗರಿಗೆ ಹೇಗೆ ಬರಬೇಕು? ಅವರು ಎಲ್ಲರೂ ತಮ್ಮ ಹಾಗೆಯೇ ಪವಿತ್ರಭಾವನೆಗಳಿಂದ ಕೂಡಿದ್ದವರೇ ಇದ್ದಾರೆಂದು ನಂಬಿದ್ದರು; ಆದರೆ ಈ ತಂದೆ-ಮಕ್ಕಳಿಗೆ ಮಾತ್ರ ಅವರೆಲ್ಲರು ದುಷ್ಟರೂ ಸ್ವಾರ್ಥಿಗಳೂ ಇದ್ದಾರೆಂದು ನಂಬುಗೆಯಾಯಿತು. ಅವರ ಮನಸ್ಸಿನಲ್ಲಿ ಸೇಡಿನ ಕಲ್ಪನೆಯೊಂದು ಬಂದಿತು. ಇಂದು ತಮಗಾದ ಘೋರ ಅಪಮಾನದ ಸೇಡು ತೀರಿಸಿಕೊಳ್ಳಲೇ ಬೇಕೆಂದು ಅವರ ದೃಢತೆಯಾಯಿತು. ಈರ್ವರೂ ಆ ಅಪಮಾನದ ಸೇಡು ಹೇಗೆ ತೀರಿಸಿಕೊಳ್ಳತಕ್ಕುದೆಂದು ಯೋಚಿಸಹತ್ತಿದರು

ಎಲ್ಲ ಸರದಾರರ ಭಾಷಣಗಳು ಮುಗಿಯಲು ಅವೆಲ್ಲವುಗಳಿಗೂ ಉತ್ತರ ರೂಪವಾಗಿ ಮಾತನಾಡಲು ಮಲ್ಲಿಕಾರ್ಜುನನು ಎದ್ದನು.

‘ಕರ್ನಾಟಕ ಸಿಂಹಾಸನಾಧೀಶ್ವರರ ಸನ್ನಿಧಾನವಾಸಿಗಳಾದ ನನ್ನ ಪ್ರಿಯ ಸರದಾರರೇ ಮತ್ತು ಕನ್ನಡಿಗರ ಮುಖ್ಯ ಮಂತ್ರಿಗಳೇ, ಇಂದು ತಾವು ನನ್ನನ್ನು ಬಹಳವಾಗಿ ಸತ್ಕರಿಸಿದ ಬಗ್ಗೆ ನಾನು ತಮ್ಮೆಲ್ಲರಿಗೂ ಬಹಳ ಋಣಿಯಾಗಿರುವೆನು. ನಿಜವಾಗಿಯೂ ತಮ್ಮ ಈ ಎಲ್ಲ ಸ್ತುತಿಗೆ ನಾನು ಪಾತ್ರನಲ್ಲವೆಂದರಿತಿರುವೆ; ಆದರೆ ತಾವು ಸಿಂಹಾಸನದಲ್ಲಿರಿಸಿದ ಅಚಲವಾದ ಭಕ್ತಿಯ ಮೂಲಕ ತಮ್ಮೆಲ್ಲರ ಈ ಮಾತುಗಳನ್ನು ಸ್ವೀಕರಿಸಿ, ಅವಕ್ಕೆ ತಕ್ಕಂತೆ ನಾನಾಗಲು ಯತ್ನಿಸುವೆನು.

‘ನಿಜವನ್ನು ಹೇಳಬೇಕೆಂದರೆ, ನಾನು ಮಾಡಿದ್ದು ತೀರಾ ಸ್ವಲ್ಪ. ಸಿಂಹಲದ್ವೀಪದ ದಂಡಯಾತ್ರೆಯ ವಿಜಯಕ್ಕೆ ಸಂಪೂರ್ಣ ಕಾರಣರು ಬೇರೆಯೇ ಇರುವರು. ಅವರೆಂದರೆ, ಕನ್ನಡಿಗರ ಮುಖ್ಯ ಮಂತ್ರಿಗಳಲ್ಲೋರ್ವರಾದ ಲಕ್ಕಣ್ಣ ದಣ್ಣಾಯಕರು. ಈ ಸಮಯದಲ್ಲಿ ಅವರು ಇನ್ನೂ ಲಂಕೆಯಲ್ಲಿಯೇ ಪರಾಕ್ರಮಬಾಹುವಿನ ಸಂಗಡ ಸಂಧಿಯ ಕರಾರು ಮತ್ತು ಅವನು ಕೊಡತಕ್ಕ ಕಪ್ಪದ ವ್ಯವಸ್ಥೆ ಮಾಡುತ್ತಲಿರುವದರಿಂದ, ಅವರ ಪಾಲಿನ ಯಶವೂ ನನ್ನ ಪಾಲಿಗೇನೇ ಬಂದಿದೆ. ಅವರ ಚತುರ ಯುಕ್ತಿ, ಶೌರ್ಯಸಾಹಸಗಳ ಸಹಾಯವಿಲ್ಲವಾಗಿದ್ದರೆ ನಾನೆಂದೂ ಈ ಕಾರ್ಯ ಕೈಗೂಡಿಸಲು ಶಕ್ತನಾಗುತ್ತಲಿರಲಿಲ್ಲ. ಆದುದರಿಂದ ನಾವು ಸದ್ಯದ ವಿಜಯದ ಶ್ರೇಯಸ್ಸನ್ನು ಲಕ್ಕಣ್ಣಮಂತ್ರಿಗಳಿಗೇನೇ ಕೊಡತಕ್ಕದು. ಈ ಸಂದರ್ಭದಲ್ಲಿ ನಾನು ನಮ್ಮ ಈ ವಿಜಯದ ಶ್ರೇಯಸ್ಸಿನಲ್ಲಿ ನನ್ನ ಬಂಧು ವಿರೂಪಾಕ್ಷನನ್ನು ಕೂಡ ಮರೆಯುವಂತಿಲ್ಲ. ಆತನೆಂದರೆ ನನ್ನ ಒಡನಾಡಿ, ನನ್ನ ಗೆಳೆಯ, ನನ್ನ ಬಂಧುವೆಂದೇ ಭಾವಿಸಿರುವೆನು. ಈ ಸಮಯದ ಶ್ರೇಯಸ್ಸಿನಲ್ಲಿ ಅವನದೂ ಬಹಳ ಭಾಗವಿದೆಯೆಂದು ನಾನು ಹೇಳದಿರಲಾರೆ. ಪಂಪಾಪತಿಯು ಈ ವರೆಗೆ ದಯಪಾಲಿಸಿದಂತೆ ಮುಂದಾದರೂ ನಮ್ಮ ವೀರ ಕನ್ನಡಿಗರಿಗೆ ಶ್ರೇಯೋಭಿವೃದ್ಧಿಗಳುಂಟಾಗಿ ಆವಾಗಲೂ ಕರ್ನಾಟಕದ ಕೀರ್ತಿಧ್ವಜ ಮೆರೆಯುವಂತೆ ಪ್ರಸಾದ ಪಾಲಿಸುವಂತೆ ಬೇಡುವೆನು.’

ಯುವರಾಜನ ಭಾಷಣ ಮುಗಿಯುತ್ತಲೇ ಎಲ್ಲೆಡೆಯಲ್ಲೂ ಆನಂದವೇ ಆನಂದವು ತುಂಬಿಹೋಯಿತು. ಎಲ್ಲರ ಮುಖವಲ್ಲ ಮೆಲುನಗೆ ಮನೆ ಮಾಡಿತು. ಎಲ್ಲರೂ ಹರ್ಷಿತರಾದರು; ಆದರೆ ವಿರೂಪಾಕ್ಷ ಮತ್ತು ಪ್ರತಾಪದೇವರಾಯರು ಮಾತ್ರ ಆ ಆನಂದಕ್ಕೆ ಹೊರತಾಗಿದ್ದರು. ಅವರ ಮನಗಳಲ್ಲಿ ಬಹಳವಾದ ತಳಮಳವು ಮನೆ ಮಾಡಿದ್ದಿತು. ಆ ಎಲ್ಲ ಸಂಗತಿಯಿಂದ ಅವರಿಗೆ ಇನ್ನೂ ಹೆಚ್ಚೇ ಅಪಮಾನವಾದಂತೆ ಎನಿಸಿತು. ಅವರ ಮನಸ್ಸಿನಲ್ಲಿ ‘ಸೇಡು’ ‘ಸೇಡು’ ಎಂಬ ಭೀಕರ ಸ್ವರವು ಮಾತ್ರ ಕೇಳಬರುತ್ತಲಿದ್ದಿತು. ಸಭಾಕಾರ್ಯಕೊನೆಗೊಳ್ಳುತ್ತಲೆ ಅವರು ಎದ್ದರು. ಆ ವರೆಗೆ ಮಾತ್ರ ಅನಿವಾರ್ಯವಾಗಿ ಕುಳಿತಿದ್ದರು. ಒಡನೆಯೇ ಅವರು ಬೇರೆಯವರ ಸಂಗಡ ಮಾತುಗಳನ್ನು ಕೂಡ ಆಡದೆ, ತಮ್ಮ ತಮ್ಮ ಬೀಡಾರಕ್ಕೆ ಹೊರಟರು.

ಹೀಗೆ ಅಂದು ಅಂತಹ ಶುದಿನದಲ್ಲಿ-ವಿಜಯದಶಮಿಯಂತಹ ಸುಮುಹೂರ್ತದಲ್ಲಿಯೇ ಇಬ್ಬರ ಹೃದಯಗಳಲ್ಲಿ ಮತ್ಸರಾಗ್ನಿ ಹೊತ್ತಿತು. ಹೊತ್ತಿದುದೇ ತಡ,

ಪ್ರಜ್ವಲಿಸಿ ಉರಿಯುತ್ತಿ ಕರ್ನಾಟಕ ಸಾಮ್ರಾಜ್ಯವನ್ನೇ ಆಹುತಿ ತೆಗೆದುಕೊಳ್ಳಲು ಸಿದ್ಧವಾಯಿತು. ಅಂದೇ ಇವರಿಬ್ಬರಲ್ಲದೆ ಇನ್ನೊಂದು ವ್ಯಕ್ತಿಗೂ ಅಪಮಾನವೆನಿಸಿತು.

ಅಂತಃಪುರದಲ್ಲಿಯೂ ಮತ್ತೊಂದು ಘಟನೆ ಸಂಭವಿಸಿತು.

ರಾಣೀವಾಸದಲ್ಲಿ ಇಮ್ಮಡಿದೇವರಾಯನ ಪತ್ನಿ ಪೊನ್ನಲದೇವಿ ಸುಂದರವಾದ ಆಸನದಲ್ಲಿ ಕುಳಿತಿದ್ದಳು. ಎದುರಿನಲ್ಲಿ ನಾಲ್ಕಾರು ದಾಸಿಯರು ಕುಳಿತಿದ್ದರು. ಅವರಾದರೂ ಯುವರಾಜನ ಶೂರ-ಸಾಹಸಗಳ ವರ್ಣನೆಯನ್ನೇ ಮಾಡುತ್ತಲಿದ್ದರು.

೧ನೇ ದಾಸಿ:—ಯುವರಾಜರು ಅತ್ಯಂತ ಚಾತುರ್ಯದಿಂದ ದುರ್ಗವನ್ನು ಕೈವಶ ಪಡಿಸಿಕೊಂಡರಂತೆ ಅಮ್ಮನವರೇ.

ಪೊನ್ನಲದೇವಿ:—ಅದು ನಿಜವೇ?

೨ನೇ ದಾಸಿ:—ಅಹುದು ಮಹಾರಾಣಿಯವರೇ; ಮತ್ತು ಬಹಳ ಕೌಶಲ್ಯವನ್ನು ತೋರಿಸಿದರಂತೆ.

೩ನೇ ದಾಸಿ:—ರಾಣಿಯವರೇ, ಒಂದು ಸಲವಂತೂ ಯುವರಾಜರು ತಮ್ಮ ಯುಕ್ತಿಯಿಂದ ವೈರಿಗಳ ಕಣ್ಣಲ್ಲಿ ಮಣ್ಣೆರಚಿದುದಲ್ಲದೆ, ವೈರಿಗಳ ಕೈಯಲ್ಲಿ ಸಿಕ್ಕಿದ್ದ ಕುಮಾರರನ್ನೂ ಬಿಡಿಸಿದರಂತೆ.

ಕುಮಾರನೆಂದರೆ ವಿರೂಪಾಕ್ಷನು. ಮಲ್ಲಿಕಾರ್ಜುನನಿಗೆ ಯುವರಾಜನೆಂದೂ ವಿರೂಪಾಕ್ಷನಿಗೆ ಕುಮಾರನೆಂದೂ ಕರೆಯುವ ರೂಢಿಯಿದ್ದಿತು. ಹೀಗೆ ಅವರಲ್ಲಿ ಸಂಭಾಷಣೆ ನಡೆದಿದ್ದಿತು. ಪೊನ್ನಲದೇವಿಯು ಮಗನ ಕೀರ್ತಿಯನ್ನು ಅತೀವ ಹೆಮ್ಮೆಯಿಂದ ಕೇಳುತ್ತಲಿದ್ದಳು. ಮಗನ ಮೇಲ್ಮೆಯಿಂದ ಯಾವ ತಾಯಿಗಾದರೂ ಹರುಷವೆನಿಸುವದು ಸಹಜವಿದೆ. ಅದರಲ್ಲಿ ಇನ್ನೊಂದು ವೈಶಿಷ್ಟ್ಯವೆಂದರೆ, ಸಮಾನರಲ್ಲಿ-ಅದೂ ಸವತಿಯ ಅಣ್ಣ-ತಮ್ಮಂದಿರಲ್ಲಿ, ಮಗನು ಮನ್ನಣೆ ಪಡೆದುದೆಂದರೆ, ತಾಯಿಗೆ ಇನ್ನೂ ಹರುಷ. ಹಾಗೆಯೇ ವಿರೂಪಾಕ್ಷನನ್ನು ಯುಕ್ತಿಯಿಂದ ತನ್ನ ಮಗನು ಪಾರುಮಾಡಿದ ಕತೆಯನ್ನು ಅತೀವ ಆನಂದದಿಂದ ಕೇಳುತ್ತ ಕುಳಿತಿದ್ದಳು. ಅದೇ ಸಮಯಕ್ಕೆ ಪ್ರತಾಪದೇವರಾಯನ ಪತ್ನಿ ಚಿನ್ನಾದೇವಿ ಅಲ್ಲಿಗೆ ಬಂದಳು. ಆಕೆ ಬರುವ ಸಮಯಕ್ಕೇನೇ ತನ್ನ ಮಗನಾದ ವಿರೂಪಾಕ್ಷನ ಹೆಸರು ಹೊರಟುದುದು ಕೇಳಲು, ಸ್ತ್ರೀಸಹಜವಾದ ಶಂಕೆಯಿಂದ ಕೇಳಬೇಕೆಂದು ಅಡಗಿ ನಿಂತಳು. ಪಾಪ ದಾಸಿಯರಿಗೇನು ಗೊತ್ತು? ಒಂದು ವೇಳೆ ತಿಳಿದಿದ್ದರೂ ಕೂಡ ಅವರೇನೂ ಅಷ್ಟು ಯೋಚಿಸುತ್ತಿರಲಿಲ್ಲ; ಏಕೆಂದರೆ, ಆಕೆಯೇನೂ ಅಧಿಕಾರಿಯಾದ ರಾಣಿಯಾಗಿರಲಿಲ್ಲ. ಅಧಿಪತಿ ಮಹಾರಾಣಿಯು ಎದುರಿನಲ್ಲಿರುವಾಗ ಅವರು ಯಾವದಕ್ಕೂ ಯೋಚಿಸುವದಿಲ್ಲ. ಅದೇನಿದ್ದರೂ ಅಂದುಮಾತ್ರ ಚಿನ್ನಾದೇವಿ ಬಂದು ನಿಂತುದನ್ನು ಅವರು. ನೋಡಿರಲಿಲ್ಲ.

ಪೊನ್ನಲದೇವಿ:—ನಿಜವಾಗಿಯೂ ಯುವರಾಜನು ವಿರೂಪಾಕ್ಷನನ್ನು ಬಿಡಿಸಿದನಂತೆಯೇ?

೧ನೇ ದಾಸಿ:—ಅಹುದು ಮಹಾರಾಣಿಯವರೆ.

ಪೂನ್ನ:—ಅದು ಹೇಗೆ, ಹೇಳು ನೋಡುವಾ?

೨ನೇ ದಾಸಿ:—ನಾನು ಹೇಳುವೆನು ಕೇಳಿರಿ.

೩ನೇ ದಾಸಿ:—ಇಲ್ಲ ಬಿಡೇ. ನಾನು ಹೇಳುವೆನು. ನೀನು ಚೆನ್ನಾಗಿ ಕೇಳಿಲ್ಲ; ಮತ್ತು ನಿನಗೆ ಕತೆ ಹೇಳಲು ಬರುವದಿಲ್ಲ.

೨ನೇ ದಾಸಿ:—ಓಹೋ! ನೀನು ಮಾತ್ರ ಬಹು ಬಲ್ಲಿದೆ?

೪ನೇ ದಾಸಿ:—ಯಾರೂ ಬೇಡ. ನಾನು ಹೇಳುವೆನು.

ಪೂನ್ನಲದೇವಿ:—ಹಾಗೇ ಆಗಲಿ, ನೀನೇ ಹೇಳು.

೪ನೇ ದಾಸಿ:—ಮಹಾರಾಣಿಯವರೇ, ಒಂದು ದಿನ ಇರುಳಿನಲ್ಲಿ ಯುವರಾಜರೂ ಮತ್ತು ಕುಮಾರರರೂ ಇನ್ನೂ ನಾಲ್ಕು ಜನ ಸೈನಿಕರೂ ಕೂಡಿ ವೈರಿಗಳ ಪಡೆಯ ಗೊತ್ತು ಹಚ್ಚಲು ಹೊರಟಿದ್ದರಂತೆ.

ಪೂನ್ನಲದೇವಿ:—ಆಗ್ಗೆ ಏನಾಯಿತು?

೧ನೇ ದಾಸಿ:—ಮಹಾರಾಣಿಯವರೇ, ಸಿಂಹಲರಾಜನ ಕಡೆಯವರೂ ಇವರು ಬರುವದರ ಸುಳುವನ್ನು ಹೇಗೋ ತಿಳಿದಿದ್ದರಂತೆ

ಪೂನ್ನಲದೇವಿ:—ಅಂ, ವೈರಿಗಳೇ?

೨ನೇ ದಾಸಿ:—ಅಹುದು ರಾಣಿಯವರೇ, ವೈರಿಗಳು ಇವರು ಬಂದ ಸುಳುವನ್ನು ಹೇಗೋ ತಿಳಿದಿದ್ದರಂತೆ.

ಪೂನ್ನಲ:—ಮುಂದೇನಾಯಿತು?

೩ನೇ ದಾಸಿ:—ಸಿಂಹಲರಾಜನ ಪಕ್ಷದವರು ಯುವರಾಜರನ್ನೂ ಕುಮಾರರನ್ನೂ ಹಿಡಿದು ಹಾಕಬೇಕೆಂದು ಹೊಂಚು ಹಾಕಿದರಂತೆ. ಅವರು ತಮ್ಮ ಜನರನ್ನು ಕರೆದುಕೊಂಡು ಇವರು ಅಲ್ಲಿ ಹೋಗಲಿಕ್ಕೆ ದಾರಿಯಲ್ಲಿಯೇ ಅಡಗಿ ಕುಳಿತಿದ್ದರಂತೆ.

ಪೂನ್ನಲ:—ಮುಂದೇನಾಯಿತು?

೪ನೇ ದಾಸಿ:—ಯುವರಾಜರು ಮುಂದೆ ಮುಂದೆ ಹೊರಟಿದ್ದರಂತೆ. ಅವರಿಗೆ ವೈರಿಗಳ ಸುಳುವು ಬಹು ಬೇಗ ಸಿಕ್ಕಿತಂತೆ. ಕೂಡಲೆ ಅವರು ಅಲ್ಲಿಯೇ ಮರೆಯಲ್ಲಿ ಅಡಗಿದರಂತೆ; ಆದರೆ ಹಿಂದೆ ಬರುವ ಕುಮಾರರಿಗಾಗಲಿ ಇನ್ನಿತರರಿಗಾಗಲಿ ಕೊಂಚವೂ ಸುಳುವು ಹತ್ತದ್ದರಿಂದ, ಅವರು ಹಾಗೆಯೇ ಮುಂದೆ ಹೊರಟಿದ್ದರಂತೆ. ಆಗ್ಗೆ ಒಮ್ಮೆಲೆ ವೈರಿಗಳು ಮುಂದೆ ಬಂದು ಅವರೆಲ್ಲರನ್ನೂ ಬಂಧಿಸಿಬಿಟ್ಟರಂತೆ!

ಪೂನ್ನಲದೇವಿ:—ಮುಂದೆ ಮುಂದೇನಾಯಿತು?

೩ನೇ ದಾಸಿ:—ಮುಂದಾಗುವದೇನು? ಕುಮಾರರೂ ಅವರ ಸಂಗಡಿಗರೂ ತೀರಾ ಗಾಬರಿಯಾದರಂತೆ. ನಮ್ಮ ಅಣ್ಣನೂ ಅವರ ಸಂಗಡಲೇ ಇದ್ದನಂತೆ. ಆಗ್ಗೆ ಅವರ ಅವಸ್ಥೆ ಅವನ ಬಾಯಿಂದ ಕೇಳಬೇಕು. ರಾಣಿಯವರೇ, ಬಿದ್ದುಬಿದ್ದು ನಗುವಂತಾಗುತ್ತದೆ.

ಪೊನ್ನಲ:—ಆ ಮೇಲೇನಾಯಿತು?

೩ನೇ ದಾಸಿ:—ಆ ಮೇಲೆ ಆಗುವದೇನು? ವೈರಿಗಳು ತಮ್ಮ ಗುಪ್ತದೀಪಗಳಿಂದ ಎಲ್ಲರ ಮುಖಗಳನ್ನೂ ಪರೀಕ್ಷಿಸಹತ್ತಿದರಂತೆ. ಅವರಿಗೆ ಯುವರಾಜರು ಬೇಕಾಗಿದ್ದರು. ಆದರೆ ಯುವರಾಜರು ಮೊದಲೇ ಪಾರಾಗಿದ್ದರು. ಹೀಗೆ ಅವರು ಪರೀಕ್ಷಿಸುತ್ತಲಿರುವಾಗಲೇ ನಮ್ಮ ಯುವರಾಜರು ಸಿಂಹಲೀ ಸರದಾರನ ವೇಷ ಧರಿಸಿ ಬಂದರಂತೆ.

ಪೊನ್ನಲ:—ಯಾರು ಮಲ್ಲಿಕಾರ್ಜುನನೇ?

೨ನೇ ದಾಸಿ:—ಅಹುದು. ದೇವಿಯವರೇ, ಅವರೇ. ನಸುವಾದರೂ ತಿಳಿಯಗೊಡದಂತೆ ಸಿಂಹಲೀ ಸರ್ದಾರನಿಗೆ ಕೊಂಚವೂ ಭೇದವಿಲ್ಲದಂತೆ ವೇಷ ಧರಿಸಿದ್ದರಂತೆ.

ಪೊನ್ನಲ:—ಅಂತಹ ಇರುಳಿನಲ್ಲಿ ಆ ವೇಷವೆಲ್ಲಿ ಸಿಕ್ಕಿತೋ?

೩ನೇ ದಾಸಿ:—ಸಿಂಹಲೀ ಸರದಾರನೂ ಅಲ್ಲಿಯೇ ಬಂದಿದ್ದನಂತೆ ಯುವರಾಜರು ಕತ್ತಲಲ್ಲಿ ಕಿಂಚಿತ್ತಾದರೂ ಸದ್ದಾಗದಂತೆ ಸಿಂಹಲೀ ಸರದಾರರನ್ನು ಬಂಧಿಸಿ, ಅವನ ವೇಷವನ್ನು ಕಿತ್ತು ತಾವು ಧರಿಸಿದರಂತೆ.

ಪೊನ್ನಲದೇವಿ:—ಮುಂದೆ?

೨ನೇ ದಾಸಿ:—ಆಗ್ಗೆ ಯುವರಾಜರು ಕುಮಾರ ಮೊದಲಾದವರನ್ನು ಬಂಧಿಸಿದ ಸ್ಥಳಕ್ಕೆ ಬಂದರಂತೆ ಆಗ್ಗೆ ಸಿಂಹಲೀ ಸೈನಿಕರೆಲ್ಲರೂ ತಮ್ಮ ಸರದಾರನೆಂದೇ ತಿಳಿದು ವಂದನೆ ಮಾಡಿದರಂತೆ.

ಪೊನ್ನಲ:—ಆಂ, ಹೀಗೆಯೊ?

೩ನೇ ದಾಸಿ:—ಅಹುದು, ಅಮ್ಮನವರೇ, ನಮ್ಮ ಅಣ್ಣನು ಆ ಸಮಯದಲ್ಲಿ ಯುವರಾಜರ ಹಾವ-ಭಾವವನ್ನೂ ಶಬ್ದಗಳ ಉಚ್ಚಾರವನ್ನೂ ಬಹಳ ಚೆನ್ನಾಗಿ ಬಣ್ಣಿಸುತ್ತಾನೆ. ಅವನಿಗಾದರೂ ಯುವರಾಜರೆಂಬ ಬಗ್ಗೆ ನಸುವಾದರೂ ತಿಳಿಯಲಿಲ್ಲವಂತೆ.

ಪೊನ್ನಲ:—ಬಲು ಜಾಣತನ. ಹುಂ, ಮುಂದೆ ಏನಾಯಿತು?

೩ನೇ ದಾಸಿ:—ಮಹಾರಾಣಿಯವರೇ, ಆಗ್ಗೆ ಯುವರಾಜರ ಯುಕ್ತಿಯಿಂದ ಆ ಸಿಂಹಲೀ ಸೈನಿಕರಿಗೆಲ್ಲ ಒಂದಿಲ್ಲೊಂದು ಕೆಲಸ ಹೇಳಿ, ಎಲ್ಲಿಗೋ ಅಟ್ಟಿದರಂತೆ. ಆ ಮೇಲೆ ತಾವೊಬ್ಬರೇ ಉಳಿಯಲು, ನಮ್ಮ ಅಣ್ಣನ ಬಳಿಗೆ ಬಂದರಂತೆ. ನಮ್ಮ ಅಣ್ಣನ ಕೈಕಾಲೇ ಹೋದವಂತೆ. ಆಗ್ಗೆ ಯುವರಾಜರು ಅವನ ಕಿವಿಯಲ್ಲಿ ತಮ್ಮ ಹೆಸರು ಹೇಳಿ ಅವನ ಬಂಧ ಬಿಚ್ಚಿ ಓಡಲು ಹೇಳಿದರಂತೆ. ಅಷ್ಟಾದರೂ ಕುಮಾರರಿಗೆ ಏನೂ ತಿಳಿಯಲಿಲ್ಲವಂತೆ. ದೂರ ಬಂದ ಮೇಲೆ ಸಿಂಹಲೀ ಸರದಾರನ ಬಗ್ಗೆ ಕುಮಾರರು ಅಣ್ಣನನ್ನು ಕೇಳಿದರಂತೆ. ಆಗ್ಗೆ ಅಣ್ಣನು ಯುವರಾಜರ ಹೆಸರು ಹೇಳಲು, ಕುಮಾರರು ತಮ್ಮ ಬೆರಳು ಕಚ್ಚಿದರಂತೆ.

ಇತ್ಯಾದಿಯಾಗಿ ಸಂಭಾಷಣೆ ನಡೆದಿತ್ತು. ಅಂದಿನ ಹರಟೆಯಲ್ಲಿ ಮುಖ್ಯವಾಗಿ ಮಲ್ಲಿಕಾರ್ಜುನನ ಚಾತುರ್ಯದ ಕತೆಗಳೇ ತುಂಬಿದ್ದವು. ಚೆನ್ನಾದೇವಿ ಕೇಳಿ

ದಳು; ಮತ್ತೂ ಕೇಳಿದಳು. ತನ್ನ ಮಗನ ಸ್ತುತಿ ಕೊಂಚವಾದರೂ ಕೇಳಬರದೆ, ಮಲ್ಲಿಕಾರ್ಜುನನ ಹೊಗಳಿಕೆಯೇ ಕೇಳಿಸಿತು. ಆಕೆಯ ಹೊಟ್ಟೆಯಲ್ಲಿ ಸಂಕಟವಾಯಿತು. ಭಾಗಾದಿ ತನ್ನ ಮಗನನ್ನು ಹಿಂದೆ ಹಾಕಿದನೆ? ತನ್ನ ಮಗನೇನು ಅಷ್ಟು ನಿರ್ಬಲನೆ? ಅವನಿಗೇನೂ ಶಕ್ತಿಯಿಲ್ಲವೆ? ಅವನೇನು ಜಾಣನಲ್ಲವೆ? ಇದ್ದರೂ ಆವಾಗಲೂ ಆತನನ್ನು ಹೀಯಾಳಿಸಿಯೇ ಮಾತನಾಡುವುದೇಕೆ? ಮುಂತಾಗಿ ಚಿನ್ನಾದೇವಿಯ ಮನವು ಭಿನ್ನ ವಿಚಾರಗಳಿಂದ ತಳಮಳಗೊಂಡಿತು. ಹೆಚ್ಚು ಸಮಯ ಕುಳ್ಳಿರಲು ಆಕೆಯಿಂದಾಗಲಿಲ್ಲ. ಬಂದಂತೆಯೇ ಮರಳಿದಳು; ಆದರೆ ಭಾವನೆಯಲ್ಲಿ ಬಹಳ ಬದಲಾಗಿದ್ದಿತು. ಬರುವಾಗ್ಗೆ ಆಕೆ ದುರ್ವಿಚಾರ ಪ್ರೇರಿತಳಾಗಿರಲಿಲ್ಲ. ಆಕೆಯಲ್ಲಿ ಯಾರ ಬಗ್ಗೆಯೂ ಕ್ರೋಧವಿರಲಿಲ್ಲ ಅದೇನೋ ಒಂದು ಸದುದ್ದೇಶ ಪ್ರೇರಿತಳಾಗಿಯೇ ಅಲ್ಲಿ ಬಂದಿದ್ದಳು; ಆದರೆ ಬರುತ್ತಲೇ ತನ್ನ ಮಗನ ಹೆಸರು ಕಿವಿಗೆ ಬೀಳಲು, ಭಾಗಾದಿಯು ತನ್ನ ಮಗನ ನಿಂದೆ ಮಾಡುತ್ತಲಿದ್ದಿರಬಹುದೆಂಬ ಶಂಕೆಯೂ ಬಂದಿತು. ಪೂರ್ಣ ಕೇಳಬೇಕೆಂಬ ಉತ್ಕಂಠೆಯೂ ಉಂಟಾಯಿತು. ನಿಂತು ಕೇಳಿಯೂ ಆಯಿತು. ಮರಳುವಾಗ್ಗೆ ಮಾತ್ರ ಇಮ್ಮಡಿ ದೇವರಾಯ ಆತನ ಪತ್ನೀ-ಪುತ್ರರ ವಿಷಯದ ರೊಚ್ಚು, ತನಗಾದ ಅಪಮಾನದ ಭೀಕರ ಕಲ್ಪನೆ, ಸೇಡು ತೀರಿಸಿಕೊಳ್ಳುವ ದುರ್ವಿಚಾರಗಳಿಂದ ಪರಿಪೂರ್ಣಳಾಗಿಯೇ ಹೊರಟಳು. ಬರುವಾಗ್ಗೆ ಮತ್ತು ಹೋಗುವಾಗ್ಗೆ ಇದ್ದ ಅಂತರವಿಷ್ಟು.

ಆ ಸಲದ ವಿಜಯದಶಮಿಯ ವಿಜೃಂಭಣೆಯ ಉತ್ಸವವು ವಿಜಯನಗರದಲ್ಲೆಲ್ಲ ಬೆಳಗಿತು. ಕನ್ನಡಿಗರ ಕಲಿತನವನ್ನು ತೋರಿಸಿತು. ಆಳುವ ಅರಸಿನ ಆಳಲಿದ್ದ ಅರಸು ಕುವರನ ಶೌರ್ಯ-ವೀರ್ಯಾದಿಗಳನ್ನು ಪ್ರದರ್ಶಿಸಿತು. ಇಷ್ಟೆಲ್ಲ ಕಾರ್ಯದೊಡನೆಯೇ ಮೂವರು ವ್ಯಕ್ತಿಗಳ ಮನದಲ್ಲಿ ಮಾತ್ಸರ್ಯಾಗ್ನಿಯನ್ನೂ, ಹೊತ್ತಿಸಿತು. ಅದರ ಪರಿಣಾಮವೇನಾಯಿತೆಂಬುದನ್ನು ಓದುಗರು ಆ ಮೇಲೆ ಅರಿಯುವರು.

---

## ೨ ಪೂರ್ವ ಪರಿಚಯ

ಮೊನ್ನೆ ತಾನೇ ಜರುಗಿದ ವಿಜಯನಗರದ ಷಟ್ಶತ ಸಾಂವತ್ಸರಿಕೋತ್ಸವದ ಮೂಲಕ ವಿಜಯನಗರದ ಪರಿಚಯವು ಬಹಳ ಜನರಿಗೆ ಆಗಿದೆ. ಅನೇಕ ಮಾಸಪತ್ರಿಕೆಯವರು ಆ ವಿಷಯವನ್ನು ಇನ್ನೂ ಮನದಟ್ಟಾಗಿ ಮಾಡಿರುತ್ತಾರೆ. ಬಹಳ ಜನ ಕನ್ನಡಿಗರ ಹೃದಯದಲ್ಲಿ ಕರ್ನಾಟಕದ ಎಂದೂ ಮರೆಯದ ಸಾಮ್ರಾಜ್ಯದ ಸ್ಮರಣೆ ಎಂದೂ ಮರೆಯದಂತೆಯೇ ನಾಟಿದೆ. ಆದರೂ ನಾನು ಇಲ್ಲಿ ನನ್ನ ಓದುಗರು ಅನೇಕ ಸಲ ಕೇಳಿದ ಓದಿದ ವಿಷಯವನ್ನೇ ಮತ್ತೆ ಬರೆಯುವೆನು. ಅದರ ಉದ್ದೇಶವಿಷ್ಟೆ-ಕನ್ನಡಿಗರಿಗೆ ಆ ವಿಷಮದ-ಆ ವೈಭವಶಾಲೀ ವಿಜಯನಗರ ಸಾಮ್ರಾ

ಜ್ಯದ-ನಮ್ಮ ಕಡು ಕಲಿಗಳಾದ ಕನ್ನಡಿಗರ ಸ್ಮರಣೆ ಮತ್ತೆ ಮತ್ತೆ ಉಂಟಾಗಬೇಕು-ಆ ವಿಷಯದ ಪಠಣ ಮತ್ತೆ ಮತ್ತೆ ಸಂಭವಿಸಬೇಕು. ಅಂದಿನ ವೀರ ಕನ್ನಡಿಗರ ಆ ಪವಿತ್ರತಮ ದೇಶೋದ್ಧಾರಕ ಭಾವ ಪ್ರತಿಯೊಬ್ಬ ಓದುಗರಿಗೆ ದೊರೆಯಬೇಕು.

ಭಾರತದ ನಾಗರಿಕತ್ವವು ಹೇಗೆ ಪ್ರಾಚೀನವಾದುದೆಂದು ಹೆಮ್ಮೆಯಿಂದ ನಾವು ಹೇಳಿಕೊಳ್ಳುವಂತಿದೆಯೋ, ಹಾಗೆಯೇ ಕರ್ನಾಟಕದ ಸಾಮ್ರಾಜ್ಯವಾದರೂ ಬಹು ಪ್ರಾಚೀನವಾದುದೆಂದು ನಾವು ಎದೆ ತಟ್ಟಿ ಹೇಳಬಹುದು. ಕರ್ನಾಟಕ ಸಾಮ್ರಾಜ್ಯವು ಇಂದಿನದಲ್ಲ-ನಿನ್ನೆಯದಲ್ಲ-ಮೊನ್ನೆಯದಲ್ಲ; ಕ್ರಿಸ್ತಶಕಕ್ಕಿಂತಲೂ ಮೊದಲೇ ಉಚ್ಚತರಗತಿಯಲ್ಲಿ ವೈಭವದಿಂದ ಬೆಳೆಯುತ್ತಲಿದ್ದಿತೆಂಬುದಕ್ಕೆ ಇತಿಹಾಸಿನಲ್ಲಿ ಆಧಾರಗಳು ಅನೇಕವುಂಟು. ಹಾಗೆ ಬಹು ಪ್ರಾಚೀನ ಸಮಯದಲ್ಲಿಯೇ ಆರಂಭವಾದುದು. ಎಲ್ಲಿಯೋ ಅಲ್ಪ ಕಾಲ ಬಾಳಿ ಅದೃಶ್ಯವಾಗಲಿಲ್ಲ. ಕ್ರಿ. ಶ. ೧೩೦೦ರ ವರೆಗೂ ಅವಿಚ್ಛಿನ್ನವಾಗಿ ಬಾಳಿ ಅತ್ಯಂತ ವೈಭವದಿಂದ ಬೆಳಗಿತು. ಆ ಕಾಲವೆಂದರೆ ಕರ್ನಾಟಕದ ಅತ್ಯಂತ ವೈಭವದ ಸಮಯ. ಗಂಗ, ಕದಂಬ, ಚಾಲುಕ್ಯ ಮೊದಲಾದ ರಾಜವಂಶಗಳು ವೈಭವದಿಂದ ರಾಜ್ಯವಾಳಿದುವು. ಮಯೂರವರ್ಮ, ಸತ್ಯಾಶ್ರಯ ಪುಲಿಕೇಶಿ, ಹೊಯ್ಸಳ ಮೊದಲಾದ ನರರತ್ನಗಳು ಸಕಲ ಭೂಮಂಡಲವನ್ನೇ ಬೆರಗುಗೊಳಿಸಿದುವು. ನಮ್ಮ ಇತಿಹಾಸು ಅತ್ಯಂತ ಉಜ್ವಲವಾದುದಿದೆ; ಆದರೆ ದುರ್ದೈವದಿಂದ ಅದರ ಅರಿವು ಮರವಾಗಿ, ನಾವು ನಮ್ಮ ಕನ್ನಡ ಸಾಹಿತ್ಯವನ್ನು ಪರಪ್ರಾಂತೀಯ ಪರದೇಶೀಯ ಐತಿಹಾಸಿಕ ಗ್ರಂಥಗಳಿಂದ ತುಂಬಿಕೊಂಡಿರಬೇಕಾಗಿದೆ. ಈಗಲಾದರೂ ಅದೆಷ್ಟೋ ಚೈತನ್ಯವುಂಟಾಗಿದೆ ಅದೇ ಕ್ಷೇಮ.

ಹೀಗೆ ಒಳ್ಳೇ ವೈಭವದಿಂದ ಒಂದಿಲ್ಲೊಂದು ಕನ್ನಡ ರಾಜವಂಶಗಳು ಕ್ರಿ. ಶ. ೧೩೦೦ರ ವರೆಗೆ ರಾಜ್ಯವಾಳಿದುವು. ಕ್ರಿ. ಶ. ೧೩೦೦ರ ಮೇಲೆ ಮಾತ್ರ ಕರ್ನಾಟಕಕ್ಕೆ ಕಾಳರಾತ್ರಿಯ ಸಮಯ, ಆಗ್ಗೆ ಬರಿಯ ಕರ್ನಾಟಕವೇ ಏಕೆ, ಯಾವ ದೇಶೀಯ ರಾಜ್ಯಗಳೂ ಉಳಿಯಲಿಲ್ಲ. ಪರರಾಷ್ಟ್ರಗಳಿಂದ ದಾಳಿಯಿಟ್ಟ ಬೇರೆ ಬೇರೆ ಮಹಮ್ಮದೀಯ ದಾಳಿಗಾರರ ಹೊಡತಕ್ಕೆ ಸಿಕ್ಕು, ಎಲ್ಲ ಹಿಂದೀ ರಾಜ್ಯಗಳು ಬಹುತರ ನಾಮಶೇಷವೇ ಆದುವು. ಹಲವು ರಜಪೂತ ಸಂಸ್ಥಾನಗಳು ಮಾತ್ರ ಇನ್ನೂ ಉಳಿದಿದ್ದವು. ಅವುಗಳನ್ನುಳಿದು ಇನ್ನಾವ ರಾಜ್ಯವೂ ಮಹಮ್ಮದೀಯರ ದಾಳಿಗೆ ತಡೆಯಲಿಲ್ಲ. ಅಂದು ರಾಷ್ಟ್ರದ ಸ್ಥಿತಿ ಬಹಳ ಭೀಕರವಾಗಿದ್ದಿತು.

ಪಾರತಂತ್ರ್ಯದಲ್ಲಿಯೇ ಹುಟ್ಟಿ ಪಾರತಂತ್ರ್ಯದಲ್ಲಿಯೇ ಬೆಳೆದ ನಮ್ಮಗಳಿಗೆ ಸ್ವಾತಂತ್ರ್ಯದ ಬೆಲೆ ತಿಳಿಯದು; ಆದರೆ ಆಗಲೇ ಸ್ವಾತಂತ್ರ್ಯ ಕಳೆದುಕೊಂಡ ಆ ಕನ್ನಡಿಗರ ಅವಸ್ಥೆ ತೀರಾ ಶೋಚನೀಯವಾಗಿದ್ದಿತು. ಪಾರತಂತ್ರ್ಯವೆಂಬ ಹೆಸರು ಕೂಡಾ ಸಹನವಾಗುತ್ತಿರಲಿಲ್ಲ. ಪ್ರತಿಯೊಬ್ಬನ ಹೃದಯದಲ್ಲಿಯೂ ಸ್ವಾತಂತ್ರ್ಯ ಜ್ಯೋತಿ ಪ್ರಖರವಾಗಿ ಉರಿಯುತ್ತಲಿದ್ದಿತು. ಪ್ರತಿಯೊಬ್ಬನ ಅಂತರಂಗವೂ ಸ್ವಾತಂತ್ರ್ಯಪ್ರೇಮದಿಂದ ತಳಮಳಿಸುತ್ತಲಿದ್ದಿತು. ಪ್ರತಿಯೊಬ್ಬನಿಗೂ ಕಳೆದು

ಹೋದ ಸ್ವಾತಂತ್ರ್ಯದ ಸ್ಮರಣೆ ಎದೆಯಲ್ಲಿ ಕಟುತರವಾದ ನೋವನ್ನುಂಟುಮಾಡುತ್ತಲಿದ್ದಿತು. ಇಂತಹ ಪರಿಸ್ಥಿತಿಯಲ್ಲಿ ಪ್ರತಿಯೊಂದು ಮಾನವ ಪ್ರಾಣಿಯೂ ಕಳೆದು ಹೋದ ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಲಿದ್ದನೆಂದರೆ ಯಾರೂ ಆಶ್ಚರ್ಯ ವ್ಯಕ್ತಪಡಿಸಲಾರರು.

ಹೀಗೆ ನಿತ್ಯವೂ ನೂರಾರು, ಸಾವಿರಾರು ಜನ ಅದೇಕೆ, ಪ್ರತಿಯೊಬ್ಬರೂ ಕಳೆದು ಹೋದ ಸ್ವಾತಂತ್ರ್ಯ ಮರಳಿ ದೊರಕಿಸಲು ಯತ್ನಿಸುತ್ತಲೇ ಇದ್ದರು. ಅಂತಹರಲ್ಲಿ ಹೊಯ್ಸಳ ವಂಶದ ಕೊನೆಯರಸನಾದ ಮುಮ್ಮಡಿ ವೀರಬಲ್ಲಾಳನೇ ಮುಖ್ಯನು. ದೋರ ಸಮುದ್ರವು ಈ ಅರಸನ ರಾಜಧಾನಿಯು. ಮಲಿಕ ಕಾಫರನು ಅವನ್ನು ಕ್ರಿ. ಶ. ೧೩೧೦ರಲ್ಲಿ ವಶಮಾಡಿಕೊಂಡನು. ಆಗ್ಗೆ ಕರ್ನಾಟಕವೆಲ್ಲವೂ ಮಹಮ್ಮದೀಯರ ವಶವಾಯಿತು. ವೀರ ಬಲ್ಲಾಳನು ತನ್ನ ರಾಜ್ಯ ಕಳೆದು ಹೋದರೂ ಎದೆಗೆಡದೆ, ಕಳೆದುದನ್ನು ಗಳಿಸಲು ಟೊಂಕ ಕಟ್ಟಿದನು. ಪಾರತಂತ್ರ್ಯಾಂಧಕಾರದಲ್ಲಿ ಮುಳುಗಿ ಮುಂಗಾಣದೆ ಕುಳಿತ ಕನ್ನಡ ಕಲಿಗಳಿಗೆ ಸ್ವಾತಂತ್ರ್ಯ ಜ್ಯೋತಿಯನ್ನು ತೋರಿಸಿ ಆ ತಿಳಿಬೆಳಕಿನಲ್ಲಿ ಸಕಲರೂ ಮುಂದೊರೆದು ಬಂದು, ಅಳಿದ ಸ್ವಾತಂತ್ರ್ಯವನ್ನು ಮರಳಿ ಗಳಿಸಲು ಸಿದ್ಧರಾಗುವಂತೆ ಬಹಳವಾಗಿ ಯತ್ನಿಸಿದನು. ಕರ್ನಾಟಕಕ್ಕೊದಗಿದ ಕಾಳರಾತ್ರಿಯಲ್ಲಿ ಕಿಂಚಿತ್ತಾದರೂ ಬೆಳಕು ದೊರೆತುದು ಈತನಿಂದಲೇ. ಸ್ವಾತಂತ್ರ್ಯ ರವಿ ಬೇಗನೆ ಉದಯನಾಗುವ ಕಾಲ ಒದಗಿತು. ಮುಮ್ಮಡಿ ವೀರ ಬಲ್ಲಾಳನು ತನ್ನ ಕೆಲವು ಸಹಚರರೊಡನೆ ಅವಿಶ್ರಾಂತವಾಗಿ ಹಗಲು-ಇರುಳೆನ್ನದೆ ಊಟ-ನಿದ್ರೆಗಳ ಪರಿವೆಯಿಲ್ಲದೆ, ಮನೆ ಮಾರುಗಳ ಯೋಚನೆಯಿಲ್ಲದೆ ನಾಡಿನ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸ್ವಾತಂತ್ರ್ಯಜ್ಯೋತಿಯನ್ನು ಮುಂದೆ ಮುಂದೆ ಹಿಡಿದುಕೊಂಡು ಅದೇ ಮಲಗಲಿದ್ದ ಸ್ವಾತಂತ್ರ್ಯಸ್ಫೂರ್ತಿಯನ್ನು ಜಾಗ್ರತಗೊಳಿಸುತ್ತ ತಿರುಗಿದನು. ಜನತೆಯಲ್ಲಿ ಸ್ವಾತಂತ್ರ್ಯ ಸ್ಫೂರ್ತಿ ಇನ್ನೂ ನಷ್ಟವಾಗದಿರುವಾಗಲೇ, ಪಾರತಂತ್ರ್ಯ ಕತ್ತಲೆ ರೂಢವಾಗುವದಕ್ಕೆ ಮೊದಲೇ, ತನ್ನ ಕಾರ್ಯ ಕೈಗೂಡಬೇಕೆಂದು ಬಹಳವಾಗಿ ಯತ್ನಿಸಿದನು. ಕನ್ನಡಿಗರ ಸುದೈವದಿಂದ ಆ ಕಾರ್ಯದಲ್ಲಿ ಅವನು ಯಶಸ್ವಿಯೂ ಆದನು.

ಮುಮ್ಮಡಿ ವೀರಬಲ್ಲಾಳನು ಕ್ರಿ. ಶ. ೧೩೩೬ರಲ್ಲಿ ತನ್ನ ಆಪ್ತಮಂತ್ರಿಗಳದೊಂದು ಮಂತ್ರಾಲೋಚನೆ ನೆರೆಸಿದನು. ಸಂಗಮಪುತ್ರರಾದ ಹರಿಹರ ಬಂಧುಗಳೂ ಅದರಲ್ಲಿ ಪ್ರಮುಖ ಪಾತ್ರವಹಿಸಿದರು. ಮುಂದೆ ಅನೇಕ ಕಷ್ಟನಷ್ಟಗಳನ್ನು ಸಹಿಸಿದರು. ಈ ಪವಿತ್ರತಮ ಕಾರ್ಯದಲ್ಲಿ ವೀರಯತಿ ವಿದ್ಯಾರಣ್ಯರ ತಪೋಬಲವೂ ಕೂಡಿತೆಂಬುದು ಪರಂಪರಾಗತ ನಂಬಿಕೆ. ಅನೇಕ ಇತಿಹಾಸಕಾರರು ಇದರಲ್ಲಿ ವಿದ್ಯಾರಣ್ಯರ ಭಾಗವೇ ಇರಲಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈಗಲೇ ಯಾವ ಇತ್ಯರ್ಥವೂ ಆಗಿಲ್ಲ. ಆದರೂ ನಮ್ಮ ಭಾರತೀಯ ರಾಜ್ಯಗಳನ್ನು ಕೊಂಚ ಸೂಕ್ಷ್ಮವಾಗಿ ನಿರೀಕ್ಷಿಸಿದಲ್ಲಿ, ಒಂದಿಲ್ಲೊಂದು ತಪೋಬಲದ ಸಹಾಯವಿದ್ದೇ ಇರುತ್ತ

ದೆಂದು ತಿಳಿದು ಬರುತ್ತದೆ. ಚಂದ್ರಗುಪ್ತ-ಚಾಣಕ್ಯ, ಶಿವಾಜಿ-ರಾಮದಾಸ ಮುಂತಾಗಿ ಎಲ್ಲೆಡೆಯಲ್ಲೂ ಹೀಗೆ ಜೊತೆಗಳೇ ಕಾಣುತ್ತವೆ. ಈ ನಿಯಮಕ್ಕೆ ನಮ್ಮ ಕರ್ನಾಟಕ ಸಾಮ್ರಾಜ್ಯವೇ ಏಕೆ ಹೊರತಾಗಬೇಕು? ಆದುದರಿಂದ ಸದ್ಯದ ಸಮಯಕ್ಕಂತೂ ಶ್ರೀವಿದ್ಯಾರಣ್ಯಯತಿವರರು ಮುಖ್ಯವಾಗಿ ವಿಜಯನಗರ ರಾಜ್ಯಸ್ಥಾಪನೆಗೆ ಕಾರಣರಾದರೆಂದು ನಂಬುವಾ; ಮತ್ತೂ ಏನೆಂದರೆ, ನಾವು ವಿಜಯನಗರದ ರಾಜ್ಯ ಸಂಸ್ಥಾಪನೆಯಲ್ಲಿ ವಿದ್ಯಾರಣ್ಯರು ಪಾತ್ರ ವಹಿಸಿದ್ದರೆಂದು ನಂಬಿಬಿಟ್ಟರೆ, ನಮ್ಮ ಮನದಲ್ಲಿ ಎಂತಹ ಪವಿತ್ರಭಾವನೆಗಳುಂಟಾಗುತ್ತವೆಯೋ, ನಮ್ಮ ಹೃದಯದಲ್ಲಿ ತಪೋಬಲದ ಮಹಿಮೆ ಹೇಗೆ ನೆಲೆಗೊಳ್ಳುವದೋ ಹಾಗೆ ವಿಜಯನಗರವು ವಿದ್ಯಾರಣ್ಯರದಲ್ಲವೆಂದಲ್ಲಿ ಆಗಲಿಕ್ಕಿಲ್ಲವೆಂದು ನನ್ನ ಕಲ್ಪನೆ. ಇದುವರೆಗ ನಾವೆಲ್ಲರೂ ವಿದ್ಯಾರಣ್ಯರ ಕರ್ತೃತ್ವವನ್ನು ಪೂರ್ಣ ನಂಬಿದ್ದರಿಂದ, ಹೀಗಾಗಿದ್ದರೂ ಆಗಿರಬಹುದು. ಇರಲಿ.

ಕನ್ನಡಿಗರು ಕಳೆದುಕೊಂಡಿದ್ದ ಸ್ವಾತಂತ್ರ್ಯವನ್ನು ಅಲ್ಪಾವಕಾಶದಲ್ಲಿಯೇ ಮರಳಿ ಪಡೆದರು. ಅವರ ಸ್ವಾತಂತ್ರ್ಯಾಭಿಮಾನ ಬಹಳ ದಿನ ಕೊರಗೊಡಲಿಲ್ಲ. ಅಂತಸ್ಸ್ಫೂರ್ತಿಯು ಬೇಗನೆ ಬಡಿದೆಬ್ಬಿಸಿತು; ಮತ್ತು ಕಾರ್ಯರೂಪವಾಗಾಚರಿಸಿ ಬೇಗನೆ ತಮ್ಮ ಸ್ವತಂತ್ರ್ಯವನ್ನು ಮರಳಿ ಸಂಪಾದಿಸಿದರು.

ಹೀಗೆ ಹೊಸದಾಗಿ ಕರ್ನಾಟಕ ಸಾಮ್ರಾಜ್ಯಸ್ಥಾಪನೆಯು ವಿಜಯನಗರದಲ್ಲಿ ಆದುದು ಸಂಗಮಪುತ್ರ ಹರಿ-ಹರರಾಯನಿಂದ. ಅವನ ವಂಶಕ್ಕೆ ಸಂಗಮ ವಂಶವೆಂದು ಹೆಸರು. ಆತನು ಒಳ್ಳೇ ವೈಭವದಿಂದ ರಾಜ್ಯವಾಳಿದನು. ರಾಜ್ಯದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದನು. ಆದರೂ ಆತನ ಬಹಳ ಅವಧಿ ಶತ್ರುಗಳ ಸಂಗಡ ಹೋರಾಡುವುದರಲ್ಲಿಯೇ ಹೋಯಿತು. ಸುತ್ತಲಿನ ಬೇರೆ ಬೇರೆ ರಾಷ್ಟ್ರಗಳನ್ನು ವಿಜಯನಗರದ ಅಂಕಿತದಲ್ಲಿ ತಂದನು. ಹರಿಹರರಾಯನು ಹೀಗೆ ಬಹಳ ಯಶಸ್ವೀಯಾಗಿ ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿ ಅದಕ್ಕೊಂದು ಮೂರ್ತಸ್ವರೂಪ ಕೊಟ್ಟು ಇ. ಸ. ೧೩೫೬ರಲ್ಲಿ ಕಾಲಾಧೀನನಾಗಲು, ಆತನ ತಮ್ಮ ಬುಕ್ಕರಾಯನು ಪಟ್ಟವೇರಿದನು. ಬುಕ್ಕರಾಯ ಅಣ್ಣನಿರುವಾಗಲೇ ಸಕಲ ರಾಜ್ಯಕಾರಭಾರವನ್ನೂ ಅರಿತುದರಿಂದ, ಅವನಿಗೆ ರಾಜ್ಯದ ನೊಗವನ್ನು ಭರದಿಂದ ವಹಿಸಲನುವಾಯಿತು. ಆತನು ರಾಜ್ಯದ ಶತ್ರುಗಳನ್ನು ಭರದಿಂದ ಶಿಕ್ಷಿಸುತ್ತ ರಾಜ್ಯವಿಸ್ತರಣಕಾರ್ಯಕ್ಕೆ ಕೈಕೊಟ್ಟನು. ಹಾಗೆಯೇ ಒಳದೇಶದೊಳಗಿನ ಜನತೆಯ ಸುಖ-ಸಂತೋಷಗಳಿಗೆ ಆತಂಕವನ್ನುಂಟುಮಾಡುವ ತೊಂದರೆಗಳನ್ನು ದೂರಮಾಡುತ್ತಲೇ ಇದ್ದನು.

ಅವನು ಮಾಡಿದ ಒಂದು ಮಹತ್ಕಾರ್ಯ ಚಿರಸ್ಮರಣೀಯವಾಗಿದೆ. ಭಾರತೀಯರೆಲ್ಲರೂ ಈ ಸಮಯದಲ್ಲಿ ಅದನ್ನು ಅನುಕರಿಸುವ ಕಾಲ ಬಂದಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಬುಕ್ಕರಾಯ ರಾಜ್ಯವಾಳುತ್ತಿರಲು ರಾಜ್ಯದಲ್ಲಿ ಮುಖ್ಯಧರ್ಮಗಳಾದ ಜೈನ ಮತ್ತು ರಾಮಾನುಜರ ನಡುವೆ ಕಲಹವೆದ್ದಿತು. ಈ ಧರ್ಮದ ಕಲಹ

ಗಳಾದರೂ ಜಗತ್ತಿನಲ್ಲಿ ಭಯಂಕರವಾದ ಅನರ್ಥಗಳಿಗೆ ಕಾರಣವಾಗಿರುತ್ತವೆಯೆಂದು ಇತಿಹಾಸ ಬಲ್ಲವರೆಲ್ಲರೂ ಅರಿತೇ ಇರುವರು. ಸದ್ಯಕ್ಕೆ ತಮ್ಮ ದೇಶವು ಅಂತಹ ಕಲಹಗಳಿಗೆ ಆಗರವಾಗಿದೆ; ಆದರೆ ಇನ್ನಾವ ದೇಶಗಳಲ್ಲಿಯೂ ಇಂತಹ ಕಲಹಗಳು ಸಂಭವಿಸಲಿಲ್ಲವೆಂದು ಭಾವಿಸಕೂಡದು. ವ್ಯಕ್ತಿ ವ್ಯಕ್ತಿ, ಪಂಥ ಪಂಥಗಳಲ್ಲಿ ಕಲಹವೆದ್ದಿರುವಾಗ್ಗೆ ಎರಡು ಧರ್ಮಗಳು ಕೂಡಿದಾಗ್ಗೆ ಕಲಹವುಂಟಾಗದಿರುವದು ಶಕ್ಯವಾದರೂ ಇದೆಯೆ? ಪ್ರತಿಯೊಂದು ದೇಶದಲ್ಲಿಯೂ ಇಂತಹ ಯುದ್ಧಗಳು ಅನೇಕ ಸಲ ನಡೆದಿವೆ. ಅಂತಹದೇ ಒಂದು ಸಂನಿವೇಶ ಬುಕ್ಕರಾಯನ ಕಾಲದಲ್ಲಿ ಸಂಭವಿಸಿತು.

ಅರಸನೆಂದರೆ ಆವಾಗಲೂ ಪಕ್ಷಾತೀತನು. ಆತನು ಯಾವದೇ ಮತದವನಿದ್ದರೂ ಗದ್ದುಗೆಯ ಮೇಲಿರುವ ವರೆಗಾದರೂ ತನ್ನ ಮತವನ್ನು ಮರೆತು ಎಲ್ಲ ಮತದವರನ್ನೂ ಒಂದೇ ವಿಧವಾಗಿ ನೋಡಬೇಕಾಗುತ್ತದೆ. ಬುಕ್ಕರಾಯನಾದರೂ ತನ್ನ ಆ ಪಕ್ಷಭೇದ ವಿರಹಿತ ಪರಿಶುದ್ಧ ಭಾವ ವ್ಯಕ್ತಪಡಿಸಿದುದಲ್ಲದೆ ತನ್ನ ಪವಿತ್ರ ಆಚರಣೆಯಿಂದ ಶ್ರೀ ವೈಷ್ಣವ ಮತ್ತು ಜೈನ ಮತದವರಲ್ಲಿ ಹುಟ್ಟಿದ ಮತಭೇದವನ್ನು ಶೀವ್ರವೇ ನೊಂದಿಸಿ ಒಬ್ಬರನ್ನೊಬ್ಬರು ಬಂಧುಭಾವದಿಂದ ನೋಡಹಚ್ಚಿದ ಕತೆಯು ಬಹು ಸ್ವಾರಸ್ಯವಾಗಿದೆ. ಎಲ್ಲರಿಂದಲೂ ಅನುಕರಣ ಮಾಡಲು ಯೋಗ್ಯವಾದುದಿದೆ. ಈ ಜೈನ ರಾಮಾನುಜೀಯ ಒಡಂಬಡಿಕೆಯು ಕನ್ನಡ ರಾಜರ ಸರಳವರ್ತನೆಗೊಂದು ಸಾಕ್ಷಿಯಾಗಿದೆ.

ಹೀಗೆ ಬಹಳ ಲೋಕಪ್ರಿಯತೆಯಿಂದ ರಾಜ್ಯವಾಳಿದ ಬುಕ್ಕರಾಯನು ಕ್ರಿ. ಶ. ೧೩೭೬ರಲ್ಲಿ ಕಾಲಾಧೀನನಾಗಲು, ಆತನ ಹಿರಿಯ ಮಗ ಇಮ್ಮಡಿ ಹರಿಹರರಾಯನು ಪಟ್ಟವೇರಿದನು. ಇವನನಂತರ ಇಮ್ಮಡಿ ಬುಕ್ಕರಾಯ, ಇಮ್ಮಡಿ ವಿರುಪಾಕ್ಷರಾಯರೆಂಬವರು ಆಳಿದರು. ಮುಂದೆ ಅಲ್ಪಾವಕಾಶದಲ್ಲಿ ಸಂಧಿ ಸಾಧಿಸಿ ಒಂದನೇ ದೇವರಾಯ ಪಟ್ಟವೇರಿದನು. ಅವನ ತರುವಾಯ ವೀರ ವಿಜಯರಾಯನು ಪಟ್ಟವೇರಿದನು. ಈ ವೀರ ವಿಜಯರಾಯನಿಗೆ ಮೂವರು ಗಂಡುಮಕ್ಕಳಿದ್ದರು. ಹಿರಿಯನೇ ಇಮ್ಮಡಿದೇವರಾಯನು. ಇನ್ನೊಬ್ಬ ವೀರಪಾರ್ವತಿರಾಯನೆಂಬವನು. ಮತ್ತೊಬ್ಬನೇ ಹಿಂದಿನ ಪ್ರಕರಣದಲ್ಲಿ ಬಂದ ಪ್ರತಾಪದೇವರಾಯನು. ಶ್ರೀಗಿರಿ ಭೂಪಾಲನೆಂಬದು ಅವನ ಇನ್ನೊಂದು ಹೆಸರು.

'ಗುರುವಿನಂತೆ ಶಿಷ್ಯ, ತಂದೆಯಂತೆ ಮಗ' ಎಂಬದೊಂದು ಕನ್ನಡ ನಾಡ ನುಡಿಯುಂಟು. ಆದರೆ ಒಂದು ಆಕ್ಷೇಪಣೆಯೆಂದರೆ 'ತಂದೆಯಂತೆ ಮಗ' ಎಂಬಲ್ಲಿ ಒಬ್ಬನೋ ಎಲ್ಲರೋ ಎಂಬ ಸಂದೇಹ ಬರುತ್ತದೆ. ಒಬ್ಬ ತಂದೆಯಲ್ಲಿ ಹುಟ್ಟಿದ ಎಲ್ಲ ಮಕ್ಕಳೂ ತಂದೆಯಂತೆಯೇ ಇರುತ್ತಾರೋ? ಅಥವಾ ಒಬ್ಬನಿದ್ದರಾಯಿತೋ? ಎಲ್ಲರೂ ತಂದೆಯಂತೆಯೇ ಇದ್ದರೆ ಅಣ್ಣ ತಮ್ಮಂದಿರಲ್ಲಿ ಭಿನ್ನಾಭಿಪ್ರಾಯವೇ ಉಂಟಾಗುತ್ತಲಿರಲಿಲ್ಲ. ಹಾಗಿದ್ದಲ್ಲಿ ಮನೆತನಗಳ ಒಡೆದು ಚೂರಾಗುತ್ತಲಿರಲಿಲ್ಲ. ಅಂತಃಕಲಹಗಳು ಯಾವ ಕುಟುಂಬದಲ್ಲಿಯೂ ಉದ್ಭವಿಸುತ್ತಲಿರಲಿಲ್ಲ. ಆದರೆ ಎಲ್ಲೆಡೆಯಲ್ಲೂ ಇದಕ್ಕೆ ವಿಪರೀತ

ವಾದ ಉದಾಹರಣೆಗಳೇ ಕಾಣಬರುತ್ತಿವೆಯಲ್ಲ! ಇದಕ್ಕೇನೆನ್ನಬೇಕು? ಹಾಗಾದರೆ 'ತಂದೆಯಂತೆ ಮಗ' ಎಂಬ ನಾಣ್ಣುಡಿಯೇ ಸಟಿಯೆನ್ನಬೇಕಾಗುತ್ತದೆ. ತಂದೆಯಂತೆ ಮಗನಿರಬಹುದು. ಒಂದೊಂದು ಸಲ ತಂದೆಗಿಂತಲೂ ಶ್ರೇಷ್ಠನಾದ ಮಗನೂ ಇರಬಹುದು. ಒಂದೊಂದು ಸಲ ಕನಿಷ್ಠನಾದವನೂ ಸಿಕ್ಕಬಹುದು. ಆದರೂ ಒಬ್ಬನೇ ತಂದೆಯ ಇಬ್ಬರು ಮಕ್ಕಳಿದ್ದರೂ ಇಬ್ಬರೂ ಭಿನ್ನರಾಗಿಯೇ ಇರುತ್ತಾರೆ. ಈ ನಿಯಮವು ಸದ್ಯದ ಕತೆಗೆ ಸಂಬಂಧಿಸಿದ ಇಬ್ಬರು ಅಣ್ಣ ತಮ್ಮಂದಿರಿಗೂ ಅನ್ವಯಿಸುತ್ತದೆ. ಇಮ್ಮಡಿದೇವರಾಯ ಮತ್ತು ಪ್ರತಾಪದೇವರಾಯ ಇಬ್ಬರೂ ವೀರವಿಜಯರಾಯನ ಮಕ್ಕಳು. ಇಬ್ಬರೂ ಸುಶಿಕ್ಷಿತರು. ರಾಜಕಾರಣ ಕುಶಲರು. ಇಬ್ಬರೂ ಕಡುಗಲಿಗಳು; ಆದರೆ ಇಷ್ಟರಿಂದಲೇ ಇಬ್ಬರೂ ಸಮಾನಸ್ವಭಾವದವರೆಂದು ಮಾತ್ರ ಊಹಿಸಲಾಗದು. ಇಬ್ಬರಲ್ಲಿಯೂ ಅಂತರವಿದ್ದಿತು.

ಇಮ್ಮಡಿದೇವರಾಯನಲ್ಲಿ ತಂದೆಯ ಎಲ್ಲ ಸುಗುಣಗಳೂ ಇಳಿದು ಬಂದಿದ್ದವಲ್ಲದೆ ಇನ್ನೂ ಎಷ್ಟೋ ಸದ್ಗುಣಗಳು ಕೂಡಿದ್ದುವು. ಮುಖ್ಯವಾಗಿ ರಾಯನು ವಿದ್ಯಾಪ್ರೇಮಿ. ಕನ್ನಡ ಸಮ್ರಾಟರು ವಿದ್ಯಾಪ್ರೇಮಕ್ಕೆ, ಪಂಡಿತರ ಆಶ್ರಯಸ್ಥಾನಕ್ಕೆ ಆವಾಗಲೂ ಹೆಸರು ಹೊಂದಿದವರು. ಇಮ್ಮಡಿದೇವರಾಯನ ಆಶ್ರಿತನಾದ ಚಂದ್ರಕವಿಯೆಂಬವನು ಅಷ್ಟಭಾಷಾವಿಶಾರದನಾಗಿದ್ದನು. ವೀರಶೈವ ಕವಿ ಜಕ್ಕಣಾರ್ಯನು ಬಹಳ ಹೆಸರು ಪಡೆದವನು. ಇನ್ನೂ ಎಷ್ಟೋ ಕವಿಗಳಿಗೆ ಇವನು ಆಶ್ರಯಸ್ಥಾನವಾಗಿದ್ದನು. ಎರಡನೆಯ ಭೋಜರಾಜನೆಂದು ಹೊಗಳಿಸಿಕೊಂಡ ತನ್ನ ತಂದೆಗಿಂತಲೂ ಇವನು ಮುಂದುವರೆದನು.

ಹಾಗೆಯೇ ಇಮ್ಮಡಿದೇವರಾಯನು ದೇವ ಭಕ್ತನು. ಅನೇಕ ದೇವಾಲಯಗಳನ್ನು ಕಟ್ಟಿಸಿದನು. ಅವನು ಪ್ರಜಾಪ್ರೇಮಿಯು. ಪ್ರಜೆಗಳ ಸುಖ-ಸಂಪದಗಳು ಯಾವಾಗಲೂ ಅಭಿವೃದ್ಧಿಹೊಂದಬೇಕೆಂದು ಇಚ್ಛಿಸುತ್ತ ಅದರಂತೆ ಯತ್ನಿಸುತ್ತಲಿದ್ದನು. ರಾಯನ ಆಳಿಕೆಯಲ್ಲಿ ವ್ಯಾಪಾರವು ಬಹಳ ಅಭಿವೃದ್ಧಿ ಪಡೆಯಿತು. ಅನೇಕ ಪರದೇಶೀಯ ವ್ಯಾಪಾರಸ್ಥರು ತಮ್ಮ ಸರುಕು ತರುತ್ತಲಿದ್ದರು.

ತಾನು ಶೈವಮತಾನುಯಾಯಿಯಾಗಿದ್ದರೂ, ಅನ್ಯಮತೀಯರಿಗೆ ಆತನ ರಾಜ್ಯದಲ್ಲಿ ಯಂತ್ಕಿಂಚಿತ್ತಾದರೂ ತೊಂದರೆಯಿರಲಿಲ್ಲ. ಈತನಲ್ಲಿದ್ದ ಇನ್ನೊಂದು ವೈಶಿಷ್ಟ್ಯವೆಂದರೆ ಕನ್ನಡಸಾಮ್ರಾಜ್ಯದ ಹುಟ್ಟುಹಗೆಗಳಾದ ಮಹಮ್ಮದೀಯರನ್ನು ಕೂಡ ಅವನು ದ್ವೇಷಿಸುತ್ತಿರಲಿಲ್ಲ. ಅನೇಕ ಮಹಮ್ಮದೀಯರು ತನ್ನ ರಾಜ್ಯದಲ್ಲಿ ಬಂದು ನೆಲೆಸುವಂತೆ ಆಮಂತ್ರಣವಿತ್ತನು. ಅವರ ಧರ್ಮ-ಕರ್ಮಗಳಿಗೆ ತೊಂದರೆಯಾಗದಂತೆ ಅಪ್ಪಣೆ ಮಾಡಿದನು. ಕೆಲವು ಮಹಮ್ಮದೀಯರಿಗೆ ಉಂಬಳಿಗಳನ್ನು ಹಾಕಿಕೊಟ್ಟನು. ರಾಜಧಾನಿಯಲ್ಲಿ ಅವರ ಸಲುವಾಗಿ ಅವರಿಗೊಂದು ಮಸೀದೆ ಕಟ್ಟಿಸಿಕೊಟ್ಟನು. ಸಿಂಹಾಸನಕ್ಕೆ ಬರುವಾಗ್ಗೆ ಅವರ ಮನಸ್ಸು ನೋಯಬಾರದೆಂದು ಒಂದು ಉಚ್ಚಸ್ಥಳದಲ್ಲಿ ಅಲ್ಲಿಯೇ ಮಹಮ್ಮದೀಯರ ಪವಿತ್ರ ಗ್ರಂಥ ಇರಿಸುತ್ತಲಿದ್ದನು.

ಇದರಿಂದ ರಾಯನ ಉದಾರ ಹೃದಯದ ಪರಿಚಯವಾಗುವಂತಿದೆ. ಶತ್ರುಗಳನ್ನು ಕೂಡ ಮಿತ್ರರನ್ನಾಗಿ ಮಾಡುವ ಔದಾರ್ಯ ಪ್ರತಾಪದೇವರಾಯನಲ್ಲಿ ಕಾಣಬರುತ್ತಿರಲಿಲ್ಲ. ದೇವರಾಯ ಶಾಂತಸ್ವಭಾವದವನಿದ್ದರೆ ಇವನು ಸಿಡುಕಿನವನು. ಅಣ್ಣ ವಿಚಾರವಂತನಾದರೆ ಈತ ದುಡುಕಿಯು. ಹೀಗೆ ಇಬ್ಬರಲ್ಲಿಯೂ ಅದೆಷ್ಟೋ ಅಂತರವಿದ್ದಿತು; ಮತ್ತು ಅದು ಹಾಗೆ ಇರಲೇಬೇಕು. ಇಲ್ಲವಾದರೆ 'ಮೂರ್ತಿಗಳಷ್ಟು ಪ್ರಕೃತಿಯವರು' ಎಂಬ ನಾಣ್ನುಡಿ ಅಸ್ತಿತ್ವದಲ್ಲಿಯೇ ಇರುತ್ತಿರಲಿಲ್ಲ; ಆದರೆ ಇಷ್ಟರಿಂದಲೇ ಪ್ರತಾಪದೇವರಾಯನೆಂದರೆ ದುಷ್ಟನೆಂದು ಯಾರೂ ಭಾವಿಸಕೂಡದು; ಮತ್ತು ಇಮ್ಮಡಿದೇವರಾಯನು ಪೂರ್ಣತ್ವ ಪಡೆದವನೇ ಎಂದೂ ತಿಳಿಯಕೂಡದು. ಆತನಲ್ಲಿಯೂ ಎಷ್ಟೋ ಸದ್ಗುಣಗಳಿದ್ದುವು. ಈತನಲ್ಲಿಯೂ ಲೋಪಗಳಿದ್ದುವು. ಮುಖ್ಯವಾಗಿಯೆಂದರೆ ಇಮ್ಮಡಿ ದೇವರಾಯನು ಪಟ್ಟಾಧಿಕಾರಿಯಾದುದರಿಂದ, ಅರಸನಿಗೆ ಬೇಕಾದ ಗುಣಗಳೇ ಅವನಲ್ಲಿ ಹೆಚ್ಚಾಗಿದ್ದುವು. ಪ್ರತಾಪದೇವರಾಯನೊಬ್ಬ ಸಾಮಾನ್ಯ ಅಧಿಕಾರಿಯಾದುದರಿಂದ, ಅವನಿಗೆ ತಕ್ಕ ಗುಣಗಳೇ ಅವನಲ್ಲಿದ್ದುವು, ಎನ್ನಬಹುದು.

ತಂದೆಯಂತೆ ಮಗನೆಂಬ ನಿಯಮವು ಇವರಿಬ್ಬರ ಮಕ್ಕಳಿಗೆ ಮಾತ್ರ ತಪ್ಪದೇ ಅನ್ವಯಿಸುವಂತಿದ್ದಿತು. ಯುವರಾಜ ಮಲ್ಲಿಕಾರ್ಜುನನು ತಂದೆಯಂತೆ ಪ್ರಜಾಪ್ರೇಮಿಯು, ಪ್ರಜಾಹಿತಕ್ಕೆಂದರೆ ಅವನು ಯಾವ ಸ್ವಾರ್ಥತ್ಯಾಗವನ್ನಾದರೂ ಮಾಡಲು ಸಿದ್ಧನೇ. ಪ್ರಜೆಗಳ ದೂರುಗಳನ್ನು ಕೇಳಿಕೊಂಡು, ಅವುಗಳನ್ನು ನಿವಾರಿಸುವುದೆಂದರೆ ಅವನಿಗೆ ಬಹಳ ಆಸಕ್ತಿ; ಆದುದರಿಂದಲೇ ಪ್ರಜೆಗಳು ಯುವರಾಜನೆಂದರೆ ಅವನನ್ನು ಬಹಳ ಪ್ರೇಮದಿಂದ ಕಾಣುತ್ತಿಲಿದ್ದರು. ಆತನ್ನಭಿನನಂದಿಸುವ ಯಾವ ಸಂಧಿಯನ್ನೂ ವ್ಯರ್ಥವಾಗಿ ಹೋಗಗೊಡುತ್ತಿರಲಿಲ್ಲ. ಅನೇಕ ಸಲ ಯುವರಾಜನಿಗೆ ತನ್ನಲ್ಲಿದ ಪ್ರಜೆಗಳ ಪ್ರೇಮವನ್ನು ತಿಳಿದು ಬಹಳ ಆನಂದವೆನಿಸುವದು. ಆವಾಗಲಾದರೂ ಪ್ರಜೆರು ತನ್ನ ಜಯಘೋಷ ಮಾಡಿದುದನ್ನು ಕೇಳುತ್ತಲೇ ಅವನ ಕಂಠವು ಉಬ್ಬಿಬರುವದು. ಹೃದಯ ಸಂತೋಷದಿಂದ ನರ್ತಿಸುವುದು. ಆನಂದಬಾಷ್ಪಗಳುದುರುವುವು. ಕೃತಜ್ಞತೆ ಅವನ ರೋಮ ರೋಮಗಳಲ್ಲಿ ವ್ಯಕ್ತವಾಗಿ ತೋರುವದು. ಇದರಿಂದ ಅವನ ಪ್ರಜಾಭಿಮಾನವು ಹೆಚ್ಚಾಗಿ ಪ್ರಜಾಪ್ರೇಮವು ದ್ವಿಗುಣಿತವಾಗುವದು. ಯುವರಾಜನಲ್ಲಿ ಬೆಳೆದ ಪ್ರಜಾಪ್ರೇಮವನ್ನು ಕಾಣುತ್ತಲೇ ಪ್ರಜೆರಲ್ಲಿನ ರಾಜನಿಷ್ಠೆ ದ್ವಿಗುಣಿತವಾಗುವದು. ಹೀಗೆ ಆ ರಾಜ-ಪ್ರಜೆರ ಅನ್ಯೋನ್ಯ ಪ್ರೇಮ ಸಂಬಂಧ ಬೆಳೆಯುತ್ತಲೇ ಹೋಗುತ್ತಲಿದ್ದಿತು.

ಮಲ್ಲಿಕಾರ್ಜುನನು ಹಾಗೆಯೇ ಅದ್ವಿತೀಯ ಶೂರನು. ಅವನ ಹೆಸರನ್ನು ಕೇಳಿದರೆ ಸಾಕು ವೈರಿಗಳ ಎದೆ ನಡುಗಿ ಹೋಗುತ್ತಲಿದ್ದಿತು. ತೀರಾ ಚಿಕ್ಕವನು. ೧೯-೨೦ ವರ್ಷದ ಹುಡುಗನಾದರೂ ಲಂಕೆಯ ದಂಡಯಾತ್ರೆಯಲ್ಲಿ ಪರಾಕ್ರಮಬಾಹುವನ್ನು ಬೆರಗುಗೊಳಿಸಿ ಬಿಟ್ಟನು. ಈ ಶೂರತನದೊಡನೆ ಆತನಲ್ಲಿ ಒಂದು ದೋಷವೂ ಇದ್ದಿತು. ಅಥವಾ ನಿಶ್ಚಯವಾಗಿ ಅದಕ್ಕೆ ದೋಷವೆಂದೇ ಅನ್ನಲು ಬಾರದು. ಆದರೂ ರಾಜನಾಗು

ವವನಲ್ಲಿ ಅದು ದೋಷವೇ ಸರಿ. ಮಲ್ಲಿಕಾರ್ಜುನನು ಬಹಳ ಸಭ್ಯಸ್ವಭಾವದವನು. ಜನರ ಗುಣಾವ ಗುಣಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುವಷ್ಟು ಚತುರ ಅವನಾಗಿರಲಿಲ್ಲ. ಬಿಳಿಯದೆಲ್ಲವೂ ಹಾಲೇ ಎನ್ನುವವ. ಯಾರಾದರೂ ಏನಾದರೂ ಹೇಳಿದರಾಯಿತು. ನಿಜವೆಂದು ನಂಬಿಬಿಡುವವ. ಸಟೆಯೋ ದಿಟವೋ ಎಂದು ತೂಗಿನೋಡುವಷ್ಟು ಕೌಶಲ್ಯ ಅವನಲ್ಲಿರಲಿಲ್ಲ. ಅಥವಾ ಅವನಿಗೆ ಸಟೆದಿಟಗಳ ಸಂದೇಹವೇ ಬರುತ್ತಲಿರಲಿಲ್ಲ. ವಿರೂಪಾಕ್ಷನನ್ನು ಅವನು ಮನವುಟ್ಟಿ ಪ್ರೀತಿಸುತ್ತಲಿದ್ದನು; ಆದರೆ ವಿರೂಪಾಕ್ಷ ಮಾತ್ರ ಚಾಣಾಕ್ಷನು. ತನ್ನ ಯಾವದೊಂದು ಲಾಭವಿಲ್ಲದೆ ಪರರ ಸಮೀಪಕ್ಕೆ ಸಹ ಸುಳಿಯುವವನಲ್ಲ; ಮತ್ತು ತನ್ನ ಕಾರ್ಯ ಒಂದಿಲ್ಲೊಂದು ಹಂಚಿಕೆಯಿಂದ ಸ್ಥಾಪಿಸುವ ಸಂಚುಗಾರ ಧೂರ್ತ. ಅವರಂತೆಯೇ ಹೋಗಿ ತನ್ನ ಬೇಳೆ ಬೇಯಿಸಿಕೊಳ್ಳುವವ. ತನ್ನ ಗುಪ್ತ ಎಂದೂ ಬಿಚ್ಚುವವನಲ್ಲ. ಅನ್ಯರ ಗುಪ್ತ ಎಂದೂ ಬಿಡುವವನಲ್ಲ. ಯುವರಾಜನನ್ನು ನೆರಳಿನಂತೆ ಹಿಂಬಾಲಿಸುತ್ತಲಿದ್ದನು. ಆತನ ನಿಜವಾದ ಹಿತಚಿಂತಕನಂತೆ ವರ್ತಿಸುತ್ತಲಿದ್ದನು. ಆವಾಗಲೂ ಯುವರಾಜನಿಗೆ ಸಹಾಯ ಮಾಡಲು ತತ್ಪರನಾಗಿರುತ್ತಲಿದ್ದನು. ಅದೆಲ್ಲವೂ ಅವನ ಕಪಟಜಾಲ, ಧೂರ್ತ ಬಲೆ, ಸ್ವಾರ್ಥ ಸಾಧನೆ.

ಇದರ ಹೊರತು ವಿರೂಪಾಕ್ಷನಾದರೂ ಕಡುಗಲಿಯು. ಕಲಾಭಿಮಾನಿಯು. ವಿದ್ಯಾಪ್ರೇಮಿಯು. ಪ್ರಜೆಗಳಲ್ಲಿ ಆವಾಗಲೂ ಪ್ರೇಮವನ್ನೇ ವ್ಯಕ್ತಪಡಿಸುವ; ಆದರೆ ಅದೆಲ್ಲದರಲ್ಲಿ ಸ್ವಾರ್ಥವಿಲ್ಲದಿರಲಿಲ್ಲ. ಸದ್ಯವನ್ನಷ್ಟೇ ನೋಡದೆ ಭವಿಷ್ಯವನ್ನೂ ಊಹಿಸಿ, ಆ ಭವಿಷ್ಯದ ಹಿತಸಾಧನೆಗೆಂದು ಇಂದೇ ಬೇಕಾದ ಸ್ವಾರ್ಥತ್ಯಾಗವನ್ನೂ ಮಾಡಲು ಸಿದ್ಧನಾಗುತ್ತಲಿದ್ದ.

ಹೀಗೆ ಒಂದೇ ವಂಶವೃಕ್ಷದ ಎರಡು ಫಲಗಳು ಭಿನ್ನಭಿನ್ನ ರುಚಿಗಳುಳ್ಳವಾಗಿದ್ದವೆನ್ನಬಹುದು.

# ಹೇಮಾಂಬಿಕೆ.

ಕಲಾಪ್ರೇಮಿಗಳಾದ ಕನ್ನಡ ಸಮ್ರಾಟರ ಅಂತಃಪುರದಲ್ಲಿ ನರ್ತನ ಶಾಲೆ. ಅಲ್ಲಿಯ ಅಲಂಕಾರಗಳನ್ನೂ ಶೋಭೆಯನ್ನೂ ಬಣ್ಣಿಸುವ ಸಾಮರ್ಥ್ಯವಾರದು! ಒಂದು ಸಲ ಒಳಹೊಕ್ಕರೆ ಅಸ್ತಿತ್ವವನ್ನೇ ಮರೆಯುವಂತಿದ್ದಿತು. ತಾನಿರುವುದು ಭೂಮಿಯೋ ಸ್ವರ್ಗವೋ, ವಿಜಯನಗರದ ನರ್ತನಶಾಲೆಯೋ, ಅಮರಾವತಿಯ ನಾಟ್ಯಮಂದಿರವೋ ಎಂದು ಭ್ರಮೆ ಹಿಡಿಯುವಂತಿದ್ದಿತು. ಪುರಾಣಗಳಲ್ಲಿ ಓದುವ ಇಂದ್ರನ ಅಮರಾವತಿಯಲ್ಲಿನ ಅಪ್ಸರೆಯ ನಾಟ್ಯಮಂದಿರವನ್ನು ಅಲ್ಲಿ ಪ್ರತ್ಯಕ್ಷ ಕಾಣುವಂತಿದ್ದಿತು. ಸುಂದರವಾದುದೊಂದು ವಿಶಾಲಗೃಹ. ಕಲ್ಲು ಕೆತ್ತನೆಯ ಕೆಲಸ ಅಪೂರ್ವವಾಗಿದ್ದಿತು. ಅಷ್ಟಕೋನಾಕೃತಿಯಾಗಿದ್ದಿತು. ಸಾವಿರಾರು ಜನರಿಗೆ ಪ್ರವೇಶ ಸಿಕ್ಕುವಷ್ಟು ವಿಶಾಲವಾಗಿ

ದ್ದರೂ ನಡುವೆ ಅಡ್ಡ ಬರುವಂತೆ ಒಂದಾದರೂ ಕಂಬ-ಗೋಡೆಗಳಿರಲಿಲ್ಲ. ಕಲ್ಲಿನಲ್ಲಿ ಕೆತ್ತಿದ ಸುಂದರವಾದ ವಿಗ್ರಹಗಳು ಸಜೀವ ಮೂರ್ತಿಗಳಂತೆ ಕಂಗೊಳಿಸುತ್ತಲಿದ್ದುವು. ಪ್ರತಿಯೊಂದು ಬದಿಗೂ ಭಿನ್ನ ಭಿನ್ನ ಭಂಗಿಗಳನ್ನು ವ್ಯಕ್ತಪಡಿಸುವ ಅಪ್ಸರೆಯರ, ಸರಸತಿಯ, ನಟರಾಜನ ಮೂರ್ತಿಗಳಿದ್ದುವು. ಒಂದಕ್ಕಿಂತ ಮತ್ತೊಂದು ಭಿನ್ನವೇ. ಒಂದರ ಮುಖಮುದ್ರೆ ಇನ್ನೊಂದಕ್ಕಿಂತ ಭಿನ್ನವೇ. ಒಂದು ನಗುಮುಖವಾಗಿದ್ದರೆ, ಇನ್ನೊಂದು ಗಂಭೀರ. ಒಂದರ ಮುಖದಲ್ಲಿ ಪ್ರಣಯಪ್ರೇಮ ನಾಟ್ಯವಾಡುತ್ತಿದ್ದರೆ, ಇನ್ನೊಂದರ ಮುಖದಲ್ಲಿ ಪುತ್ರಪ್ರೇಮ ವ್ಯಕ್ತವಾಗುತ್ತಿದೆ. ಹಾಗೆಯೇ ಕುಣಿತದ ವಿಷಯ. ಭಿನ್ನ ಭಿನ್ನ ತಾಳಗಳಿಗೆ ಸರಿಯಾದ ಭಿನ್ನ ಭಿನ್ನ ಪರನ್ಯಾಸ. ಹೀಗೆ ಭಿನ್ನ ಭಿನ್ನ ವಿಗ್ರಹಗಳು ಕಲೆಯನ್ನು ಮೂರ್ತಿಮಂತಾಗಿ ಸಾದರಗೊಳಿಸುತ್ತಲಿದ್ದುವು. ಯಾವ ಗುರುವೂ ಬೇಡ. ಯಾವ ಶಿಕ್ಷಕನೂ ಬೇಡ. ಆ ಮೂರ್ತಿಗಳ ನಿರೀಕ್ಷಣೆಯಿಂದಲೇ ನರ್ತನ ಕಲೆಯ ನೈಪುಣ್ಯವೂ ದೊರೆಯುವಂತಿದ್ದಿತು. ಶಿಲ್ಪಿಗಳನ್ನು ಬಿಟ್ಟರೆ ಚಿತ್ರಗರ ಕೆಲಸವೂ ಅಲ್ಲಿ ಅಸಾಮಾನ್ಯವಾಗಿದ್ದಿತು. ಮಂದಿರದ ಒಂದು ಕಲ್ಲು ಉಳಿದರೂ ಕೂಡ ಬಣ್ಣವನ್ನು ನೋಟಕರಿಗೆ ತಪ್ಪದೇ ತೋರಿಸುವಂತಹ ಮೇಲ್ತರಗತಿಯ ಬಣ್ಣ. ಅಂತಹ ಉತ್ಕೃಷ್ಟ ಬಣ್ಣದಲ್ಲಿ ಅತ್ಯಂತ ನೈಪುಣ್ಯ ತೋರಿಸುವ ಬರೆಹ. ಸುಂದರ ಚಿತ್ರಸ್ಥ ಕಲಾವಂತಿಯರ ಅವಲೋಕನದಿಂದ ಯಾರಿಗಾದರೂ ಕುಣಿಯುವಂತಾಗುವಂತಿದ್ದಿತು. ಅಂತಹ ಕಲಾಸ್ಫೂರ್ತಿ ಸ್ವಾಭಾವಿಕವಾಗಿ ಉತ್ಪನ್ನವಾಗುವಂತಹ ಸುಂದರ ಬರೆಹ. ಶಿಲ್ಪಕಲೆ ಚಿತ್ರಕಲೆಗಳು ಅಲ್ಲಿ ಪ್ರತ್ಯಕ್ಷವಾಗಿ ವಾಸಿಸುವಂತೆ ತೋರುತ್ತಿದ್ದಿತು. ಇದಕ್ಕೆ ಸರಿಯಾಗಿ, ಮುತ್ತು ರತ್ನಗಳ, ರೇಷ್ಮೆಯ ಬೆಲೆಯುಳ್ಳ ವಸ್ತ್ರ-ಒಡವೆಗಳ-ಸುಂದರತಮವಾದ ಜೋಡಣೆ ಕೂಡಿದುದರಿಂದ, ನರ್ತನಶಾಲೆ ಆವಾಗಲೂ ನರ್ತಿಸುತ್ತಲಿರುವಂತೆ ಭಾಸವಾದರೆ ಆಶ್ಚರ್ಯವೇನು? ವಿಜಯನಗರದ ಸಂಪತ್ತಿ ಅಗಣಿತವಾಗಿದ್ದಿತು. ಹಾಗೆಯೇ ಅರಸರೂ ಕಲಾಪ್ರೇಮಿಗಳು. ಮಾಮರ ತಳ್ತರೆ ಕೋಗಿಲೆಗೆ ಆಮಂತ್ರಣವೇ ಬೇಡ. ವಿಜಯನಗರದ ಆಸ್ಥಾನದಲ್ಲಿ ಕಲಾವಂತರಿಗೂ ವಿದ್ವಜ್ಜನರಿಗೂ ಬಹು ಮನ್ನಣೆ. ಅಂತೆಯೇ ಅನೇಕ ಕಲಾವಿದರೂ ಅಲ್ಲಿ ಕೂಡಿಯೇ ಇರುತ್ತಿದ್ದರು.

ಮೊದಲೇ ಸುಮನೋಹರವಾದ ನರ್ತನಶಾಲೆ. ಅಂದು ಮನಃಪೂರ್ವಕವಾಗಿ ಶೃಂಗರಿಸಲ್ಪಟ್ಟಿದ್ದಿತು. ಅವರ್ಣನೀಯವಾದ ಶೋಭೆಯಿಂದ ಬೆಳಗುತ್ತಲಿದ್ದಿತು. ವಿಜಯೀ ಯುವರಾಜ ಮತ್ತು ಕುಮಾರ ವಿರೂಪಾಕ್ಷರ ಸ್ವಾಗತಾರ್ಥವಾಗಿ ಅಂದಿನ ಕಾರ್ಯಕ್ರಮವಿದ್ದಿತು. ರಾತ್ರಿಯ ಪ್ರಥಮಪ್ರಹರಾಂತ್ಯಕ್ಕೆ ಈರ್ವರೂ ನರ್ತನಶಾಲೆಗೆ ಬಂದರು. ಈರ್ವರನ್ನೂ ಸೇವಕನು ಕರೆದು ತಂದು ಉಚ್ಚಾಸನದಲ್ಲಿ ಕೂಡ್ರಿಸಿದನು. ಒಡನೆಯೇ ಕೋಲ್ಮಿಂಚು ಹೊಡೆದಂತಾಯಿತು. ಇಬ್ಬರೂ ಕಣ್ದೆರೆದು ನೋಡುತ್ತಾರೆ! ಅದೆಂತಹ ರಮ್ಯ ನೋಟ! ತಾವೀರ್ವರು ಕುಳಿತುದು ನಾಟ್ಯಶಾಲೆಯೋ ಇಲ್ಲವೆ ಇಂದ್ರನ ನಂದನವನವೋ ತಿಳಿಯದಂತಿದ್ದಿತು. ಈ ಸಲದ ನರ್ತನದ ಯೋಜನೆ

ಯಲ್ಲಿ ಅಪೂರ್ವವಾದ ಮಾರ್ಪಾಟಾಗಿದ್ದಿತು. ಹೊಸ ಹೊಸ ನೋಟಗಳನ್ನೂ, ಚಿತ್ರಿತ ತೆರೆಗಳನ್ನೂ ಸುಂದರ ದೀಪಗಳನ್ನೂ ಕುಶಲಕಾರಾಗೀರರಿಂದ ಸಿದ್ಧಪಡಿಸಲ್ಪಟ್ಟಿದ್ದುವು. ಎಲ್ಲ ವ್ಯವಸ್ಥೆಯೂ ಹೊಸಬಗೆಯದೇ ಆಗಿದ್ದಿತು.

ಒಂದು ಸುಂದರವಾದ ಕೊಳ. ಅತ್ಯಂತ ರಮಣೀಯವಾದ ಕಮಲಕುಸುಮ ಗಳು ಸುಮನೋಹರವಾಗಿ ಅರಳಿದ್ದುವು. ಕನ್ನೈದಿಲೆಗಳು ಕೊಳದ ತುಂಬ ರಾಜಿಸುತ್ತ ಲಿದ್ದುವು. ಪ್ರತ್ಯಕ್ಷವಾಗಿ ಕೊಳವೇ ಅಲ್ಲ. ಒಂದಷ್ಟು ನೈಜವಾದ ನೋಟ ಅಲ್ಲಿದ್ದಿತು. ಮಧ್ಯದಲ್ಲಿ ಒಂದು ಸುಂದರವಾದ ಇಂದೀವರವು ಅದೇ ಮೇಲಕ್ಕೆದ್ದಿತು. ಇನ್ನೂ ಅರಳು ಮಗ್ಗು ಮೇಲಕ್ಕೆ ಬರುತ್ತಲೇ ಮೊಗ್ಗು ಅರಳಿತು. ಅದರಲ್ಲಿ ಒಂದು ಮಾನವದುಂಬಿ ಝೇಂಕಾರ ಮಾಡಹತ್ತಿತು. ಹಿಮ್ಮಗ್ಗಲು ಒಂದು ಸ್ಥಳದಲ್ಲಿ ಸಂಗೀತವಾದ್ಯಗಳ ಜೋಡಣೆಯಿದ್ದಿತು. ಮಾನವದುಂಬಿಯ ಝೇಂಕಾರವು ಅತೀವ ಮಧುರವಾಗಿದ್ದಿತು. ಆ ಮಾನವ ದುಂಬಿಯ ಝೇಂಕಾರದಲ್ಲಿಯೇ ಯುವರಾಜನ ಸ್ವಾಗತ ಪದ್ಯವೊಂದು ಅಸ್ಪಷ್ಟವಾಗಿ ಆದರೆ ಅತೀವ ಮನೋಹರವಾಗಿ ಕೇಳಬರುತ್ತಲಿದ್ದಿತು. 'ಕರ್ನಾಟಕ ವೆಂಬ ನಂದನವನಕ್ಕೆ ವಸಂತನೋಪಾದಿಯಲ್ಲಾಗಮಿಸುವ ಯುವರಾಜನಿಗೆ ಸ್ವಾಗತವು' ಎಂಬದೇ ಆ ಪದದ ಭಾವವಿದ್ದಿತು. ಆ ಮಾನವ ದುಂಬಿ ಪ್ರತ್ಯಕ್ಷ ದುಂಬಿಯನ್ನು ಹಂಪೆ ಹಾಕುವಂತಿದ್ದಿತು. ಕುಸುಮದಿಂದ ಕುಸುಮಕ್ಕೆ ಹಾರುವ ಆ ಭೃಂಗಿ, ಮಧು ವನ್ನು ಈಂಟುವ ಆ ಸೊಬಗು, ಮತ್ತವಾಗಿ ಗೈಯುವ ಝೇಂಕಾರ ಎಲ್ಲವೂ ಅವರ್ಣ ನೀಯವಾದುವು.

ಒಡನೆಯೇ ನೋಟ ಬದಲಾಯಿತು. ಯಮುನಾತೀರದಲ್ಲಿ ಗೋಪಿಕೆಯರ ಮೇಳ ನೆರೆಯಿತು. ಆದರೆ ಕೃಷ್ಣನೇ ಕಾಣದಾದನು. ಎಲ್ಲೆಡೆಯಲ್ಲೂ ಅರಸಿದರು. ಆತನ ಸುಳುವೇ ಇಲ್ಲ. ಗೋಪಸುಂದರಿಯರು ಕಾತರರಾದರು. ಇಂದೀವರದಂತಹ ಸುಂದರ ಮೊಗಗಳು ಬಾಡಿ ಕಳೆಗೆಟ್ಟುವು. ಅಶ್ರುಧಾರೆ ಸಂತತವಾಯಿತು. ಆರ್ತಸ್ವರ ದಿಂದ ಕೂಗಿದರು ಬೇಡಿದರು. ನಿರಾಸೆಯಿಂದ ಬಳಲಿ ಬೆಂಡಾಗಿ ಭೂಮಿಗುರುಳಿದರು. ಒಡನೆಯೇ ಅಮೃತವರ್ಷಾವವಾದಂತೆ ಶ್ರೀಕೃಷ್ಣಪ್ರಕಟನಾದ. ಅದೆಂತಹ ಮಾರ್ಪಾಟು! ಮೂಡುವ ಪೂರ್ಣ ಚಂದ್ರನ ಪ್ರಭೆಯನ್ನು ಮೊಗಗಳು ಹಿಂಮಾಡಿದುವು. ಚೆಲ್ನಗೆ ಮೊಗದಲ್ಲಿ ಮೂಡಿತು. ಆಕರ್ಷಕ ತೇಜ ಕಣ್ಣಲ್ಲಿ ಬಿಂಬಿಸಿತು. ದೇಹವೆಲ್ಲವೂ ಆನಂದ ದಿಂದ ನರ್ತಿಸತೊಡಗಿತು.

ಯುವರಾಜ ಮತ್ತು ಕುಮಾರರೀರ್ವರೂ ಪರವಶರೇ ಆದರು. ಅದೆಷ್ಟೋ ನರ್ತನಗಳಿಗೆ ಅವರು ಹೋಗಿದ್ದರು. ಆದರೆ ಅಂದಿನ ನರ್ತನದ ವೈಖರಿ ಬೇರೆ ತರ ದ್ದಾಗಿದ್ದಿತು. ಒಂದಕ್ಕಿಂತ ಒಂದು ಅಪೂರ್ವ ಕಾಂತಿಯನ್ನೇ ಬೀರುತ್ತಲಿದ್ದಿತು. ಸಂಗೀತದ ಜೋಡಣೆ ಅಪ್ರತಿಮವಾಗಿದ್ದಿತು. ನೋಟಗಳ ಬೆಡಗು ಅವರ್ಣನೀಯ ವಾಗಿದ್ದಿತು. ಜ್ಯೋತಿಗಳ ರಚನೆ ಅಸಾಮಾನ್ಯವಾಗಿದ್ದಿತು.

ಗೋಪಾಂಗನಿಯರು ಕೃಷ್ಣನನ್ನು ಕಾಣುತ್ತಲೆ ನೋಟ ಬದಲಾಯಿತು.

ಮುಂದಿನ ನೋಟವೇ ಮುಖ್ಯವಾದುದಿದ್ದಿತು. ಒಂದು ಸುಂದರವಾದ ವನ. ಹಸುರು ಮುರಿಯುವ ವೃಕ್ಷರಾಜಿಗಳಿಂದ ರಾಜಿಸುತ್ತಲಿದ್ದಿತು. ದೂರದಲ್ಲಿ ತುರುಗಳು ಮೆಲಕಾಡಿಸುತ್ತ ನಿಂತಿದ್ದುವು. ಅಲ್ಲಲ್ಲಿ ಬೇರೆ ಬೇರೆ ತರದ ಕುಸುಮಗಳರಳಿ ವನದ ಸೊಬಗನ್ನು ಹೆಚ್ಚಿಸುತ್ತಲಿದ್ದುವು. ವನದ ಇನಿನೋಟ ನೋಡುತ್ತಲಿರುವಾಗಲೇ ಅದೆಲ್ಲಿಯೋ ದೂರದಲ್ಲಿ ಸಂಗೀತ ಸುಸ್ವರವು ಬಹು ಸೊಂಪಾಗಿ, ಆದರೆ ಬಹು ಸೂಕ್ಷ್ಮವಾಗಿ ಕೇಳಬರಹತ್ತಿತು. ಆ ಸಂಗೀತದೇವತೆಯಾರೆಂದು ಶೋಧಿಸುವಲ್ಲಿ ಅವಳೊಬ್ಬ ವನದೇವತೆ. ಹಸುರೆಲೆಗಳಿಂದಸೆವ ಗಿಡವೊಂದರ ಟೊಂಗೆಯಲ್ಲಿ ಚಿಗುರಿನ ಮಧ್ಯದಲ್ಲಿ ಕುಳಿತಿದ್ದಳು. ಆಕೆಯುಟ್ಟುದೂ ಹಸಿರುವಟ್ಟೆ. ಆ ಸುಂದರಿಗೆ ಬಾಹ್ಯ ಪ್ರಪಂಚದ ಅರಿವೇ ಇರಲಿಲ್ಲ. ಗಾನಮಗ್ನೆ ಮೊದಲು ದೂರ ಕಾಣುತ್ತಲಿದ್ದರೂ ಅಲ್ಪಾವಕಾಶದಲ್ಲಿಯೇ ಚನ್ನಾಗಿ ಕಾಣಹತ್ತಿದಳು. ಸಂಗೀತದೇವತೆಯೇ ಅವಳೆನ್ನಬಹುದು. ಕಾಯವೇ ಸಂಗೀತಮಯವಾಗಿದ್ದಿತು. ರೋಮರೋಮಗಳಲ್ಲಿ ಸಂಗೀತ ತುಂಬಿದ್ದಂತೆ ತೋರಿತು. ಆಕೆಯಾ ಸ್ವರ್ಗೀಯ ಸಂಗೀತದ ಪರಿಣಾಮವಾಗಿ ವೃಕ್ಷರಾಜಿಗಳೆಲ್ಲವೂ ಸ್ತಬ್ಧವಾದುವು. ತುರುವಿಂದು ಮೊಗವೆತ್ತಿ ನಿಂತುಬಿಟ್ಟಿತು. ಖಗಸಮೂಹ ಭೂಮಿಗಿಳಿಯಿತು. ಆದರವಳಿಗದರರಿವೇ ಇಲ್ಲ. ಗಾನಾನಂದೆ ತನ್ನಾ ಮಧುರ ಗಾನವನ್ನುಳಿದು ಇನ್ನೇನೂ ತಿಳಿಯಳು. ಧ್ವನಿ ಸೂಕ್ಷ್ಮವಾದುದು ಆದರೆ; ಅತ್ಯಂತ ಮಧುರ ಗಾನ ಅತೀವ ಇಂಪಾಗಿದ್ದಿತು. ಪ್ರತಿಯೊಂದು ಆಲಾಪವೂ ಸುಸ್ಪಷ್ಟವೂ ಸುಮಧುರವೂ ಆಗಿ ಕೇಳಬರುತ್ತಲಿದ್ದಿತು. ಆ ಗಾನದೇವಿ ಇಂಚರದಿಂದ ಹಾಡುತ್ತಲಿದ್ದಳು. ಹಿಂದಿನ ಸಂಗೀತ ಜೋಡಣೆಯೂ ಅಷ್ಟೇ ಸುಮಧುರವಾಗಿದ್ದಿತು. ಆಗಾಗ್ಗೆ ಆ ಸುಂದರಿ ತನ್ನ ಆಲಾಪ ನಿಲ್ಲಿಸುತ್ತಲಿದ್ದಳು. ಆದರದು ಆವಾಗ ತನ್ನ ಗಾನಮಾಧುರ್ಯಪಾನ ಮಾಡಿ ಮಾಡಿ ಕಂಠವು ತುಂಬಿಬಂದಾಗ. ಶರೀರವೆಲ್ಲವೂ ಮತ್ತಭೃಂಗದಂತಾಗುತ್ತಲಿದ್ದಿತು. ಕಣ್ಣುಗಳಿಂದ ಆನಂದ ಬಾಷ್ಪಗಳುದುರುತ್ತಲಿದ್ದುವು. ಗಾನಾನಂದದಾವೇಗ ಕೊಂಚ ಇಳಿಯಲು ಮತ್ತೆ ಹಾಡಲಾರಂಭಿಸುತ್ತಲಿದ್ದಳು.

ಕಲಾಪಟು, ಸಂಗೀತಪ್ರೇಮಿ ಮಲ್ಲಿಕಾರ್ಜುನನೂ ಮುಗ್ಧನಾದನು; ಮೈಮರೆತೇ ಕುಳಿತನು. ಹಿಂದಿನ ಹಲವು ಸನ್ನಿವೇಶಗಳಿಗಿಂತಲೂ ಅದು ಅತಿ ಸುಂದರತರವಾಗಿದ್ದಿತು. ಆ ಸಂಗೀತ ಸುಂದರಿಯ ಸಂಗೀತ ಮಾಧುರ್ಯಕ್ಕೂ ಅಭಿನವ ಕೌಶಲ್ಯಕ್ಕೂ ಬೆರಗಾದನು. ಸಂಗೀತದೇವಿ ಸರಸತಿಯೇ ಮೈಗೊಂಡು ಬಂದಂತೆ ಬಗೆದನು. ಕಣ್ಣೆವೆ ಹಳಚದೇ ನೆಟ್ಟದಿಟ್ಟಿಯಿಂದ ಸುಂದರಾಂಗಿಯನ್ನೇ ನೋಡಿದನು. 'ಗಾನಾನಂದೆ' ಅದೆಂತಹ ಆನಂದವದು? ಆನಂದವು ತುಂಬಿ ಸೂಸಿ ಹರಿಯುಹತ್ತಿದ್ದಂತೆ ತೋರುತ್ತಲಿದ್ದಿತು. ಆ ಸುಂದರಿ ಗಾನದಿಂದ ಮೈಮರೆತೇ ಹೋಗಿದ್ದಳಲ್ಲವೆ? ಅದೆಂತಹ ಗಾನಮರವದು? ಯುವರಾಜ ಸ್ವಪ್ನಸೃಷ್ಟಿಯಲ್ಲಿಯೇ ಕುಳಿತಿದ್ದನು. ಆ ಗಾನದೇವಿ, ಆ ಇನಿನೋಟಗಳು ಅವನ ಕಣ್ಣೆದುರು ಸುಮಧುರವಾಗಿ ತೋರುತ್ತಲಿದ್ದುವು. ಗಾನಾನಂದೆಯ ಆನಂದದಲ್ಲಿ ತಾನು ಮಗ್ನನಾದನು. ಅಂತಹ ಆನಂದವನ್ನನುಭವಿಸುತ್ತಲೇ

ಕುಳಿತುಬಿಟ್ಟನು. ಅವನ ಕಣ್ಣಿಗೆ ಕಾಣುತ್ತಲಿದ್ದವಳು ಆ ಗಾನಸುಂದರಿಯೋರ್ವಳೇ. ಆಕೆಯ ಆ ಭಂಗಿ ಆ ಅಭಿನಯಗಳು ಅವನನ್ನು ಪೂರ್ಣವಾಗಿ ಸೆಳೆದುವು. ಸುಂದರ ಮರವೊಂದರ ಶಾಖೆಯಲ್ಲಿ ಕುಳಿತವಳು ಅಲ್ಲಿಯೇ ಕುಳಿತಿದ್ದಳು. ಎಲ್ಲಿಯೂ ಕದಲ ಲಿಲ್ಲ, ಕಾಯ ನಲುಗಿಸಿರಲಿಲ್ಲ; ಆದರೆ ಅದೆಂತಹ ಅಭಿನಯ! ಮೂಲೋಕವನ್ನೇ ತಲ್ಲೀನ ಮಾಡುವಂತಹ ಮಾಧುರ್ಯ. ಯುವರಾಜನಿಗೆ ಇನ್ನೇನೂ ಕಾಣದಾಯಿತು.

ಅಷ್ಟರಲ್ಲಿ 'ಯುವರಾಜ....' ಎಂಬ ಸುಮಧುರ ಇಂಚರವೊಂದು ಕೇಳಬಂದಿತು.

ಯುವರಾಜನ ಸ್ವಪ್ನಸೃಷ್ಟಿ ಮಾಯವಾಯಿತು. ಗಾನಾನಂದೆಯ ಸುಂದರ ನೋಟ ನೋಡುತ್ತಲಿರದೇ ತಂದ್ರೀಭೂತನಾಗಿದ್ದನೆಂದು ತಿಳಿದು ಅಚ್ಚರಿಯೆನಿಸಿತು. ಜಾಗ್ರತಾವಸ್ಥೆಗೆ ಬರುತ್ತಲೇ ಕಣ್ದೆರೆದು ನೋಡುತ್ತಾನೆ ಎದುರಿನಲ್ಲಿ ಹೇಮಾಂಬಿಕೆ.

'ಹೇಮಾ, ನೀನೀ ರೀತಿಯಾಗಿ ಸಂಭಾವನೆ ಕೊಡುವೆಯೆಂದು ತಿಳಿದಿದ್ದರೆ—'

'ತಿಳಿದಿದ್ದರೆ ಏನು ಮಾಡುತ್ತಲಿದ್ದಿರಿ ಯುವರಾಜ?' ಹೇಮಾಂಬಿಕೆ ಯುವರಾಜ ನತ್ತ ನಲ್ನೋಟ ಬೀರಿ ಮುಗುಳು ನಗೆಯಿಂದ ಕೇಳಿದಳು.

'ಲಂಕಾಧೀಶನೋರ್ವನೇ ಏಕೆ ಸಕಲ ಭೂಮಂಡಲದಧಿನಾಯಕರನ್ನೇ ಸೆರೆ ಹಿಡಿದು ತರುತ್ತಲಿದ್ದೆನು.' ಯುವರಾಜ ಪ್ರೇಮದಿಂದ ನುಡಿದನು.

ಯುವರಾಜನ ಈ ವರ್ಣನೆಯಿಂದ ಹೇಮಾಂಬಿಕೆ ಅತೀವ ಆನಂದಪೊಂದಿದಳು. ಕೃತಜ್ಞತೆಯ ನೋಟವನ್ನು ಯುವರಾಜನತ್ತ ಬೀರಿದಳು. ಯುವರಾಜನೆಂದರೆ ಕಲಾಭಿಜ್ಞನೆಂದು ಆಕೆಯ ಹೆಮ್ಮೆ ಬಹಳ. ಅಂತೆಯೇ ಅಂದು ತನ್ನ ಕೌಶಲ್ಯವನ್ನೆಲ್ಲ ತೋರಿಸಿದ್ದಳು. ಯುವರಾಜನ ಸ್ತುತಿಪರ ಒಂದೇ ಒಂದು ಶಬ್ದದಿಂದ ಆಕೆಯ ಪ್ರಯತ್ನ ಸಾರ್ಥಕವಾದಂತಾಯಿತು ಇನ್ನೂ ಯುವರಾಜನಿಂದ ಸ್ತುತಿಗಳನ್ನು ಗೆದೆಯ ಬೇಕೆಂದು 'ಯುವರಾಜ, ನೀವು ಹಾಸ್ಯವನ್ನಂತೂ ಬಿಡುವದೇ ಇಲ್ಲ.' ಕೊಂಚ ನಟ ನೆಯ ಕೋಪದಿಂದ ಕೇಳಿದಳು.

ಯುವರಾಜನಿಗೆ ಅಂದು ನಿಜವಾಗಿಯೂ ಆನಂದವಾಗಿದ್ದಿತು. ಹೇಮಾಂಬಿ ಕೆಯ ವಿಷಯವಾಗಿ ಅವನು ಪ್ರಸನ್ನನೇ ಆಗಿದ್ದನು. 'ಹೇಮಾ, ಹಾಸ್ಯಕ್ಕಲ್ಲ. ನಾನು ನಿಜವನ್ನೇ ಹೇಳಿದೆ. ಇಂದು ನಿನ್ನ ನರ್ತನ ಶಾಲೆಯಲ್ಲಿ ನಾವೀನ್ಯ ತುಂಬಿ ಹೋಗಿದೆ. ಹೊಸ ವ್ಯವಸ್ಥೆ, ಹೊಸ ನೋಟ, ಹೊಸ ಸಂಗೀತ, ಹೊಸ ಅಭಿನಯ, ಎಲ್ಲವೂ ಹೊಸದೇ ಆಗಿದೆ....'

'ಆದರೆ ಹೇಮಾಂಬಿಕೆ ಬೇರೆ ಹೊಸಬಳಲ್ಲವಷ್ಟೆ?' ಹೇಮಾಂಬಿಕೆ ನಡುವೇ ಬಾಯಿಹಾಕಿ ಕೇಳಿದಳು.

'ಹೇಮಾಂಬಿಕೆ, ಹೊಸಬಳಲ್ಲದಿದ್ದರೂ ಹೇಮಾಂಬಿಕೆಯ ಕಲಾ, ಆಕೆಯ ಅಭಿನಯ, ಚಾತುರ್ಯ, ಗಾನಕುಶಲತೆ ಎಲ್ಲವೂ ಹೊಸವೇ ಆಗಿರುತ್ತವೆ. ಹೇಮಾ, ಇದೆಲ್ಲವನ್ನೂ ನೀನು ಎಲ್ಲಿ ಕಲಿತೆ?' ಯುವರಾಜ ಮುಗ್ಧಭಾವದಿಂದ ಸಹಜವಾಗಿ ಕೇಳಿದನು.

'ಕನ್ನಡಿಗರು ಕಲೆಯನ್ನು ಅನ್ಯರಿಂದ ಕಲಿಯಬೇಕೆ?' ಹೇಮಾಂಬಿಕೆಯು ಅಭಿಮಾನಪೂರ್ವಕವಾಗಿ ನುಡಿದಳು.

ಹೇಮಾಂಬಿಕೆಯ ಕನ್ನಡಾಭಿಮಾನವನ್ನು ನೋಡಿ ಯುವರಾಜನಿಗೆ ಇನ್ನೂ ಆನಂದವಾಯಿತು. 'ಭಾಪು! ಭಾಪು! ಹೇಮಾ, ಈ ಕನ್ನಡಾಭಿಮಾನವು ನಿನ್ನ ಈ ಚಾತುರ್ಯಕ್ಕೆ ಶೋಭಿಸುವಂತಿವೆ. ಬಹು ಸೊಗಸು, ಬಹು ಸುಂದರ-' ಯುವರಾಜ ಆನಂದಸ್ಫೂರ್ತಿಯಾದಂತೆ ಉಚ್ಚರಿಸಹತ್ತಿದನು.

'ಯುವರಾಜ, ಇಂದಿನ ಕಾರ್ಯಕ್ರಮವು ನಿಜವಾಗಿಯೂ ಸುಂದರವಾಯಿತೋ ಇಲ್ಲವೆ ಸುಮ್ಮನೆ ಹೇಮಾಂಬಿಕೆ ನೊಂದುಕೊಳ್ಳಬಹುದೆಂದು ಹೀಗೆ ಹೇಳುವಿರೋ—' ಹೇಮಾಂಬಿಕೆ ಯುವರಾಜನ ಮನವರಿತರೂ ಸ್ತ್ರೀಸ್ವಭಾವದಿಂದ ನಸುನಗುತ್ತ ತುಂಬ ನೋಟಬೀರುತ್ತ ಕೇಳಿದಳು.

ಯುವರಾಜ ಅಂದಿನ ಕಲಾಪ್ರದರ್ಶನಕ್ಕೆ ಅತೀವ ಸಂತುಷ್ಟನೇ ಆಗಿದ್ದನು. ಅವನು ಹೇಮಾಂಬಿಕೆಯನ್ನು ಮನಃಪೂರ್ವಕ ಅಭಿನಂದಿಸಿದನು. 'ಹೇಮಾ, ನಾನು ನಟಿಯಾಡಲಿಲ್ಲ. ಇಂದಿನ ನಿನ್ನ ಗಾನಕೌಶಲ್ಯ ಮತ್ತು ಅಭಿನಯ ಚಾತುರ್ಯಗಳು ಉತ್ಕೃಷ್ಟವಾದುವು. ಹಿಂದೆಂದೂ ನೀನು ಇಷ್ಟು ಸುಂದರವಾಗಿ ನಿನ್ನ ಚಾತುರ್ಯ ವ್ಯಕ್ತಪಡಿಸಿರಲಿಲ್ಲ. ಗಾನಾನಂದೆಯೇ ನೀನಿರುವೆ. ನಿನ್ನಾ ಗಾನಾನಂದದಿಂದ ನೀನು ತೋರಿಸಿದಂತೆ ಸಕಲ ಭೂಮಂಡಲವನ್ನೇ ತಲ್ಲೀನಗೊಳಿಸುವಷ್ಟು ಯೋಗ್ಯಳು ನೀನಿರುವೆ; ಧನ್ಯಳು! ಹೇಮಾ, ಕಲೆಯ ನೆಲೆಯರಿತ ನೀನೇ ಧನ್ಯಳು. ಇಂದಿನ ನಿನ್ನ ನೈಪುಣ್ಯ ನೋಡಲು ದೊರೆತ ನಾವೇ ಧನ್ಯರು!' ಯುವರಾಜ ಅತೀವ ಮೃದುಸ್ವರದಿಂದ ಕೃತಜ್ಞತೆ ವ್ಯಕ್ತಪಡಿಸುತ್ತ ನುಡಿದನು.

ಹೇಮಾಂಬಿಕೆಗೆ ತನ್ನ ಜೀವನ ಸಾರ್ಥಕವಾಯಿತೆಂದೆನಿಸಿತು. ಯುವರಾಜನಿಗಾಗಿಯೇ ತನ್ನ ಜೀವನ, ಯುವರಾಜನಿಗಾಗಿಯೇ ತನ್ನ ಮರಣಗಳಿದ್ದುವೆಂದು ಆಕೆ ಪೂರ್ಣವಾಗಿ ನಂಬಿದ್ದಳು. ಸಿಂಹಲದ್ವೀಪದ ದಂಡಯಾತ್ರೆಗೆ ಹೊರಡುವಾಗಲೇ ಯುವರಾಜ ಜಯಶೀಲನಾಗಿ ಬರುವನೆಂದು ಆಕೆಯ ನಂಬಿಕೆ. ವಿಜಯಿಯಾಗಿ ಬರುತ್ತಲೇ ಆತನನ್ನು ಹೇಗೆ ಅಭಿನಂದಿಸಬೇಕೆಂಬುದೇ ಆಕೆಯ ವಿಚಾರ. ಏನಾದರೂ ಸುಂದರ ವಸ್ತುವನ್ನು ಬಹುಮಾನವೀಯಬೇಕೆ? ಅತ್ಯಂತ ವೈಭವಶಾಲೀ ವಿಜಯನಗರದ ಯುವರಾಜನಿಗೆ ಸುಂದರವಾದ ವಸ್ತ್ರ ಹೆಣೆದೀಯಬೇಕೆ? ಅತ್ಯಂತ ಚಾತುರ್ಯದಿಂದ ಸಿದ್ಧವಾದ ವಸನಗಳ ರಾಶಿಯೇ ಅಲ್ಲಿದ್ದಿತು. ಕಾವ್ಯ ಮುಂತಾದದ್ದೇನಾದರೂ ಅರ್ಪಿಸಬೇಕೆ? ನುಡಿವೆಣ್ಣಾಣುಗ ಅವನೇ ಆಗಿದ್ದನು. ಹಾಗಿದ್ದರೆ ಏನು ಮಾಡಬೇಕು ಬಹಳ ಅವಧಿ ಯೋಚಿಸಿದಳು. ಕೊನೆಗೊಂದು ಹಂಚಿಕೆ ಹೊಳೆಯಿತು. ಬಹು ಸುಂದರವಾದ ಹಂಚಿಕೆ. ಅದರಿಂದಾಕೆಗೆ ಪೂರ್ಣ ಸಮಾಧಾನವಾಯಿತು. ಅನಂತರ ಕಾರ್ಯಕ್ಕೆ ಕೈಗೊಟ್ಟಳು. ಅದರ ಪರಿಣಾಮವೇ ಅಂದಿನ ಆ ಸುಂದರತಮ ನೃತ್ಯ ನೋಟ. ತನ್ನ ಪ್ರಯತ್ನಕ್ಕೆ ಯೋಗ್ಯ ಸಮಾಧಾನಕರ ದೊರೆತುದಕ್ಕೆ ಹೇಮಾಂಬಿಕೆ ಬಹಳ [illegible]

ನಾಯಿತು. ಯುವರಾಜ ವರ್ಣಿಸದಿದ್ದರೆ, ಅವರ ಬದಲು ಭೂಮಂಡಲವನ್ನೇ ಕಾಣಿಕೆಯಾಗಿತ್ತಿದ್ದರೂ ಆಕೆಗಷ್ಟು ಆನಂದವಾಗುತ್ತಿರಲಿಲ್ಲ. ಯುವರಾಜನ ಮೇಲೆ ಆಕೆಯದು ಅಷ್ಟು ನಿರ್ವ್ಯಾಜ ಪ್ರೇಮ. ಯುವರಾಜ ಮನಃಪೂರ್ವಕ ಸ್ತುತಿಸಲು, ಹೇಮಾಂಬಿಕೆ ಹರ್ಷದಿಂದ ಉಬ್ಬಿಹೋದಳು. ಕಂಠ ತುಂಬಿ ಬಂದಿತು. ಕೃತಜ್ಞತೆ ನೋಟದಲ್ಲಿ ಚನ್ನಾಗಿ ಬಿಂಬಿಸಿತು. ಕೊಂಚ ಸಮಯ ಮಾತುಗಳಿಲ್ಲದೇ ಕೆಳಮೊಗಳಾಗಿ ಕುಳಿತಳು.

'ಹೇಮಾ, ನಾನು ದಿಟವನ್ನೇ ನುಡಿದೆನು. ಇಲ್ಲಿಯೇ ಕುಳಿತ ವಿರೂಪಾಕ್ಷನನ್ನಾದರೂ ಕೇಳು ಬೇಕಾದರೆ. ಏಕೆ ವಿರೂಪಾಕ್ಷ, ನಾನು ಹೇಳಿದುದು ದಿಟವಲ್ಲವೆ?'

ವಿರೂಪಾಕ್ಷ ತಂದ್ರಿಯಿಂದೆಚ್ಚತ್ತು 'ಆಂ' ಎಂದನು.

'ಏಕೆ, ಸ್ವಪ್ನ ಕಾಣುತ್ತಲಿರುವೆಯೇನು?' ಯುವರಾಜ ಹಾಸ್ಯಗೈಯ್ಯುವ ಉದ್ದೇಶದಿಂದ ಪ್ರಶ್ನೆ ಮಾಡಿದನು.

ವಿರೂಪಾಕ್ಷ ಕೊಂಚವೇ ಗೊಂದಲದಲ್ಲಿ ಬಿದ್ದನು; ಆದರೆ ಪರಿಸ್ಥಿತಿ ಅವನ ಚಿತ್ತದಲ್ಲಿ ಕೂಡಲೆ ಬಂದಿತು. ಹೇಮಾಂಬಿಕೆಯ ಯಶಸ್ವೀಪ್ರಯೋಗ ನೋಡಿದ್ದನು. ಅದು ಬಹಳ ಮೇಲ್ತರಗತಿಯದಾದುದನ್ನೂ ಅರಿತಿದ್ದನು. ಆ ಮೇಲೆ ಯುವರಾಜ ಮನಮುಟ್ಟಿ ಹೊಗಳುವನೆಂದು ಊಹಿಸಿದ್ದನು; ಮತ್ತು ಸಮೀಪದಲ್ಲಿಯೇ ಹೇಮಾಂಬಿಕೆ ನಿಂತಿದ್ದಳು. ಇಷ್ಟರಿಂದಲೇ ಯುವರಾಜನ ಪ್ರಶ್ನೆಯನ್ನು ಊಹಿಸಿದನು. ಹೇಮಾಂಬಿಕೆಯ ಯಶಸ್ವೀ ಪ್ರಯೋಗದ ವಿಷಯಕವಾಗಿಯೇ ಇರಬಹುದೆಂದೆನಿಸಿತು. ಏನಿದ್ದರೂ ಸರಿಯೇ. ಎಲ್ಲದಕ್ಕೂ ಸರಿಯಾಗುವಂತೆ ಉತ್ತರ ಕೊಡಬೇಕೆಂದು:— 'ಅಹುದು. ಯುವರಾಜ, ಸ್ವಪ್ನದಲ್ಲಿದ್ದುದು ನಿಜವು. ಗಾನಾನಂದೆಯ ಸುಂದರ ಗಾನಾಭಿನಯನಗಳ ಕನಸು ಕಾಣುತ್ತಲಿದ್ದೆನು. ಆ ಅಪೂರ್ವ ನೋಟವನ್ನು ನೋಡಿ, ನಾನು ನನ್ನನ್ನೇ ಮರೆತೆನು. ನಾನು ಅದಾವುದೋ ಒಂದು ಅನನುಭೂತ ಆನಂದವನ್ನನುಭವಿಸುವವರಲ್ಲಿ ನಾನೇ ನಾನಾಗಿ ಹೋಗಿದ್ದೆನು.' ಎಂದುಉತ್ತರ ಕೊಟ್ಟನು.

ವಿರೂಪಾಕ್ಷನ ಉತ್ತರದಿಂದ ಬಹಳ ಸಂತುಷ್ಟನಾದನು. ಹೇಮಾಂಬಿಕೆಯ ಅಂದಿನ ಗಾನಾಭಿನಯನೈಪುಣ್ಯ ಅವನ ಮನಸ್ಸಿನಲ್ಲಿ ನೆಟ್ಟು ಹೋಗಿದ್ದಿತು. ತನ್ನ ಹಾಗೆ ವಿರೂಪಾಕ್ಷನೂ ಸದಭಿಪ್ರಾಯ ವ್ಯಕ್ತಮಾಡಿದುದರಿಂದ ಅವನಿಗೆ ನಿಜವಾಗಿಯೂ ಆನಂದವಾಯಿತು. ಹರ್ಷದಿಂದ:—'ಕೇಳು ಹೇಮಾ, ಕುಮಾರನನ್ನಾದರೂ ಕೇಳು. ಇಂದಿನ ಪ್ರಯೋಗವೆಂದರೆ, ಅಪೂರ್ವವಾದುದು. ಇಂದು ನಮ್ಮ ಕಣ್ಣು, ಕಿವಿ, ಮನಗಳಿಗೆ ಹಬ್ಬವನ್ನುಂಟು ಮಾಡಿದೆ' ಎಂದು ನುಡಿದನು.

'ಅಂದರೆ ಈಗ ಹೇಮಾಂಬಿಕೆಯ ಪ್ರಯೋಗದ ಚರ್ಚೆಯೇ ನಡೆದಿದ್ದಿತೇನು?' ವಿರೂಪಾಕ್ಷ ಆಶ್ಚರ್ಯಮಿಶ್ರಿತ ಸ್ವರದಲ್ಲಿ ಪ್ರಶ್ನೆ ಮಾಡಿದನು.

'ಅಹುದು. ಪ್ರಯೋಗ ಬಹು ಸೊಗಸಾಯಿತೆಂದರೆ, ಸಟೆಯೆನ್ನುತ್ತಾಳೆ ಹೇಮಾ' ಯುವರಾಜ ಬಿಚ್ಚುಮನದಿಂದ ನುಡಿದನು.

'ಇಲ್ಲ, ಹೇಮಾ, ಅದು ಸಟೆಯಲ್ಲ. ಇಂದಿನ ನಿನ್ನ ನೈಪುಣ್ಯ ಅಪ್ರತಿಮ

ವಾದುದು. ಸಂಗೀತಕ್ಕೂ ನನಗೂ ಆವಾಗಲೂ ಸರಿಹೋಗುವುದಿಲ್ಲ. ಆದರೂ ಇಂದು ನನಗೆ ಗುಂಗು ಹಿಡಿಸಿಬಿಟ್ಟಿ. ಆ ನಿನ್ನ ಗಾನಾನಂದವೆಯು ನನ್ನನ್ನು ತಂದ್ರೀಭೂತನನ್ನಾಗಿ ಮಾಡಿಬಿಟ್ಟಿತು.' ವಿರೂಪಾಕ್ಷನೆಂದನು.

ವಿರೂಪಾಕ್ಷ ತಂದ್ರಿಯಲ್ಲಿ ಕುಳಿತುದು ನಿಜವು. ಅವನ ಮನಸ್ಸು ಕನಸು ಕಾಣುತ್ತಲಿದ್ದುದೂ ನಿಜವು. ಬಾಹ್ಯಜ್ಞಾನ ಇಲ್ಲದೇ ಅಂತರ್ಮುಖನಾದುದೂ ನಿಜವೇ; ಆದರೆ ಆ ಎಲ್ಲವುಗಳ ವಿಷಯ ಬೇರೆ. ಅದು ಗಾನಾನಂದೆಯ ಅಭಿನಯ ಕೌಶಲ್ಯವಲ್ಲ, ಆಕೆಯ ಗಾನನೈಪುಣ್ಯವಲ್ಲ; ಆ ಅಪೂರ್ವ ಸಂಗೀತ ಜೋಡಣೆಯಲ್ಲ; ಬಹಳವೇನು, ಅಲ್ಲಿಯ ಯಾವ ವಿಷಯವೂ ಅವನಲ್ಲಿ ಆಳವಾಗಿ ನೆಟ್ಟಿರಲಿಲ್ಲ. ಹೇಮಾಂಬಿಕೆಯ ಗಾನಕುಶಲತೆಯಲ್ಲಾಗಲಿ, ಅಭಿನಯಚಾತುರ್ಯದಲ್ಲಾಗಲಿ, ಬುದ್ಧಿ ಮತ್ತೆಯ ಸಲುವಾಗಿಯಾಗಲಿ ಆತನಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ. ಅಂದಿನ ಆ ಅತ್ಯಂತ ರಮಣೀಯ ಪ್ರಯೋಗವು ಸುಂದರವೇ ಆಯಿತೆಂದು ಆತನಾದರೂ ಅರಿತಿದ್ದನು; ಆದರೆ ಅಷ್ಟರಿಂದಲೇ ಅವನನ್ನು ಕನಸು ಕಾಣಹಚ್ಚಿದ ವಿಷಯ ಅದೇ ಎಂದು ಎಂದೂ ಹೇಳಲಾಗದು. ಆತನನ್ನು ಅಷ್ಟು ವಿಚಾರಕ್ಕೊಳಪಡಿಸಿದುದು, ಬಾಹ್ಯ ಪ್ರಪಂಚವನ್ನೇ ಮರೆತು ಅಂತರ್ಮುಖನನ್ನಾಗಿ ಮಾಡಿದುದು ಬೇರೆಯಾಗಿದ್ದಿತು. ಅದು ಅಂದಿನ ಸಂಗೀತಪ್ರಯೋಗವಾಗಿರದೆ, ಅದರ ಕರ್ತ್ರಿಯ ವಿಷಯವಾಗಿದ್ದಿತು. ಅವನನ್ನು ಅಷ್ಟು ದೀರ್ಘವಿಚಾರಕ್ಕೊಳಪಡಿಸಿದವಳು ಹೇಮಾಂಬಿಕೆಯೇ.

ಹೇಮಾಂಬಿಕೆ ಇಮ್ಮಡಿದೇವರಾಯನ ಸರದಾರರಲ್ಲೊರ್ವನ ಪುತ್ರಿ. ಹೇಮಾಂಬಿಕೆಯ ತಂದೆ ಅತೀವ ಸ್ವಾಮಿನಿಷ್ಠ. ರಾಜಕಾರ್ಯಕ್ಕೆ ಅವನು ತನುಮನಧನಗಳನ್ನರ್ಪಿಸಿದನು. ಕೊನೆಗೆ ಪ್ರಾಣವನ್ನು ಕೂಡ ಅರ್ಪಿಸಿದನು. ಹೇಮಾಂಬಿಕೆಯ ತಾಯಿ ಮೊದಲೇ ತೀರಿದುದರಿಂದ ಅನಾಥಳಾದ ಮಗುವನ್ನು ಅರಮನೆಯಲ್ಲಿಯೇ ತಂದಿರಿಸಿ ಪಾಲಿಸಹತ್ತಿದರು. ಅಂದಿನಿಂದ ಅರಮನೆಯ ಪರಿವಾರದವರಲ್ಲೊಬ್ಬಳು ಹೇಮಾಂಬಿಕೆಯಾದಳು. ಬೆಳೆದು ಮೋಹಕ ಮಗುವಾದಳು.

ಕಲೆಗೆ ನೆಲೆಯೇ ವಿಜಯನಗರವು. ಹೇಮಾಂಬಿಕೆಗೆ ಕಲಾಪ್ರೀತಿ ಹುಟ್ಟುತ್ತಲೇ ಬಂದಿದ್ದಿತು. ಆಕೆ ಕಲೆಗೆ ಕೈಗೊಟ್ಟಳು. ನೃತ್ಯ, ಗೀತ ಮತ್ತು ಅಭಿನಯಗಳು ಆಕೆಯ ಕರಗತವಾದುವು. ಸಂಗೀತಾದಿಗಳಲ್ಲಿ ಆಕೆಯ ಪ್ರಾವೀಣ್ಯ ನೋಡಿ ಸಕಲರಿಗೂ ಆನಂದವೆನಿಸುವದು. ಎಲ್ಲರೂ ಮುಕ್ತಕಂಠದಿಂದ ಸ್ತುತಿಸುವರು. ಹೇಮಾಂಬಿಕೆ ಸ್ತುತಿಗೆ ಹಿಗ್ಗದೆ ಕಲೆಯನ್ನು ಕೈವಶ ಮಾಡಿಕೊಳ್ಳುವದರಲ್ಲಿ ಮುಂದುವರಿದಳು.

ಯುವರಾಜ ಕುಮಾರರ ಪರಿಚಯ ಮೊದಲೇ ಕೊಟ್ಟಿದ್ದಾಗಿದೆ. ಅವರೀರ್ವರ ಸ್ವಭಾವ ಭಿನ್ನತೆಯ ಬಗ್ಗೆಯೂ ಮೊದಲು ಹೇಳಿದ್ದಾಗಿದೆ. ಇಬ್ಬರೂ ಸಾಧಾರಣ ಸಮವಯಸ್ಕರು. ಆಳುವ ದೊರೆಯಾದರೂ ಕುಮಾರನು. ತಮ್ಮನ ಮಗನೆಂದು ಭೇದವೆಣಿಸಿರಲಿಲ್ಲ. ಯುವರಾಜನ ಜೊತೆಯಲ್ಲಿಯೇ ಅವನ ಊಟ ನಿದ್ರೆಗಳಾಗುತ್ತಲಿದ್ದುವು. ಯುವರಾಜ ಕುಮಾರರೀರ್ವರೂ ಕೂಡಿಯೇ ಒಂದೇ ಎಡೆಯಲ್ಲಿ ಆಡಿದರು.

ಒಂದೇ ಶಾಲೆಯಲ್ಲಿ, ಓರ್ವನೇ ಗುರುವಿನಲ್ಲಿ ಕಲಿತರು. ಚಿಕ್ಕತನದಿಂದಲೂ ಈರ್ವರ ಆಹಾರ, ವಿಹಾರ, ಶಿಕ್ಷಣಗಳೆಲ್ಲವೂ ಒಂದೇ ವಿಧವಾದುದರಿಂದ ಅವರ ಸ್ವಭಾವವೂ ಒಂದೇ ಬಗೆಯಾಗಬೇಕಿದ್ದಿತು; ಆದರೆ ಜನ್ಮದಿಂದ ಬಂದುದು ಯಾವಾಗಲೂ ಬಿಡ ಲಾಗುವದಿಲ್ಲವಲ್ಲ!

ಅಷ್ಟರಿಂದ ಕುಮಾರನೆಂದರೆ ದುಷ್ಟನೆಂದೂ ಅಲ್ಲ. ಯುವರಾಜನ ಪದವಿ-ಮಾನಗಳ ಬಗ್ಗೆ ಹೇವವೆನಿಸುತ್ತಲಿದ್ದಿತು; ಮತ್ತು ಅದು ಯಾವನಿಗಾದರೂ ಅನಿಸು ವುದು ಸಹಜವೇ; ಆದರೆ ಅಷ್ಟರಿಂದ ಯುವರಾಜನಿಗೆ ಕೇಡು ಬಗೆಯಬೇಕೆಂದಾಗಲಿ, ರಾಜ್ಯವನ್ನು ಕಸಿದುಕೊಳ್ಳಬೇಕೆಂದಾಗಲಿ ಎಂದೂ ಯೋಚಿಸಿದವನಲ್ಲ. ದೈವೀದತ್ತವಾದ ಅಧಿಕಾರ ಪದವಿಗಳಿಗೆ ಉಪಾಯವಿಲ್ಲವೆಂಬ ವಿಚಾರವೇ ಆತನನ್ನು ಸುಮ್ಮನೇ ಕೂರಿ ಸಿದ್ದಿತು. ಆದರೂ ರಾಜ್ಯಪ್ರಾಪ್ತಿ, ಪದವಿ ಸಂಪಾದನೆಗಳು ನಿಜವಾಗಿಯೂ ದೈವ ದಿಂದ ಪ್ರಾಪ್ತವಾದುವೇ, ಇಲ್ಲವೆ ಸಾಹಸದಿಂದ ಸಿಕ್ಕವೇ, ಎಂಬ ಆಂದೋಲನ ಅವ ನನ್ನು ಬಿಟ್ಟಿರಲಿಲ್ಲ. ದೈವೀದತ್ತವೇ ಎಂದರೆ, ತನ್ನ ಹಿರಿಯ, ವಿಜಯನಗರ ರಾಜ್ಯ ಸ್ಥಾಪಕ. ಕರ್ನಾಟಕ ಸಾಮ್ರಾಜ್ಯವನ್ನು ಹೇಗೆ ಸ್ಥಾಪಿಸಿದನು? ಯಾರಾದರೂ ಆತನಿಗೆ ರಾಜ್ಯ ಬಿಟ್ಟುಕೊಟ್ಟರೆ? ವಾರಸಸಂಬಂಧ ಹತ್ತಿ ತಾನಾಗಿಯೇ ಬಂದಿತೆ? ಬಾಹು ಬಲ ದಿಂದ ಅದನ್ನು ಪರಿಹರಿಸಾಯ ಗಳಿಸಲಿಲ್ಲವೆ? ಸ್ವಭುಜಬಲದಿಂದ ವೈರಿಗಳನ್ನು ಮಣ್ಣು ಮುಕ್ಕಿಸಿ, ತನ್ನವರನ್ನು ಹುರುಪುಗೊಳಿಸಿ, ಸಾಹಸದಿಂದ ಮುಂದೊರೆದು ಯತ್ನಿಸಿ ಯಶಸ್ವಿಯಾಗಲಿಲ್ಲವೆ? ತನ್ನ ಉಜ್ವಲ ಸಾಹಸದ ಪರಿಣಾಮದಿಂದ ಸಕಲ ವೈಭವ ಪೂರ್ಣ ಕರ್ನಾಟಕ ಸಾಮ್ರಾಜ್ಯ ಸ್ಥಾಪಿಸಿ ತನ್ನ ಹೆಸರು ಆ ಚಂದ್ರಾರ್ಕವಾಗುಳಿಯು ವಂತೆ ಮಾಡಲಿಲ್ಲವೆ? 'ದೈವ' 'ದೇವರು' ಎಂದು ಕುಳಿತಿದ್ದರೆ ವಿಶಾಲ ಕರ್ನಾಟಕ ಸಾಮ್ರಾಜ್ಯ ಅಸ್ತಿತ್ವದಲ್ಲಾದರೂ ಬರುತ್ತಲಿದ್ದಿತೆ? ಹಿಂದುಧರ್ಮ ಪುನರುಜ್ಜೀವನ ಪಡೆಯುತ್ತಲಿದ್ದಿತೆ? ಕೋಟ್ಯವಧಿ ಜನರು ದುಷ್ಟರ ಕಾಟದಿಂದ ಮುಕ್ತರಾಗುತ್ತಲಿದ್ದರೆ? ಶಕ್ಯವೇ ಇಲ್ಲ. ಇವೆಲ್ಲ ದೈವವೆಂದು ಕುಳಿತುಕೊಳ್ಳದೆ ತನ್ನ ತೋಳ್ಗಳಲ್ಲಿ ನಂಬಿಗೆ ಇಟ್ಟು, ಸಾಹಸದಡಿಯಲ್ಲಿ ಶ್ರದ್ಧೆಯಿಟ್ಟು, ಸ್ವಬುದ್ಧಿಯಿಂದ ಮುಂದೊರೆದುದರ ಪರಿಣಾಮವು ಆತನಂತೆ ಕರ್ನಾಟಕದ ಸಿಂಹಾಸನಕ್ಕೆ ನಾನೇಕೆ ಯತ್ನಿಸಬಾರದು? ನನ್ನ ತೋಳ್ಗಳಲ್ಲಿ ಬಲವಿಲ್ಲವೆ? ಎದೆಯಲ್ಲಿ ಸಾಹಸವಿಲ್ಲವೆ? ಶರೀರದಲ್ಲಿ ಶೌರ್ಯವಿಲ್ಲವೆ? ಎಂತೆಂತ ಯುದ್ಧ ಗಳಲ್ಲಿ ಕೂಡ ವೈರಿಗಳನ್ನು ಬೆರಗುಗೊಳಿಸಿದ ನಾನು ಯತ್ನಿಸಿದರೆ, ರಾಜ್ಯಪದವಿ ದೊರೆಯಲಿಕ್ಕಿಲ್ಲವೆ? ರಾಜ್ಯಲಕ್ಷ್ಮಿ ಸಿಕ್ಕಲಾರಳೆ? ಉನ್ನತಪದವಿ ಹೊಂದಲಾರೆನೆ? ಛೀ! ಪ್ರಯತ್ನಕ್ಕೆ ಯಾವದು ತಾನೆ ಅಸಾಧ್ಯ? ಯತ್ನಮಾಡದೆ ದೈವದತ್ತವಾದುದು ಎಂದು ಕುಳಿತುಕೊಳ್ಳುವುದು ಹೇಡಿತನವು, ಕೀಳತನವು.....ಮುಂತಾಗಿ ಅನೇಕ ವಿಚಾರಗಳು ಬಾರದಿರುತ್ತಲಿರಲಿಲ್ಲ. ಇಂತಹ ಭಿನ್ನ ಭಿನ್ನ ವಿಚಾರಗಳಲ್ಲಿ ಸಿಕ್ಕು ಅವನ ಮನಸ್ಸು ತೀರ ವ್ಯಗ್ರವಾಗಿದ್ದಿತು.

ಕುಮಾರನ ಈ ಮನೋವ್ಯಗ್ರತೆ ವರ್ಧಿಸಲು ಹೇಮಾಂಬಿಕೆ ಇನ್ನೊಂದು ಬಲ

ವತ್ತರವಾದ ಕಾರಣಗಳಾದಳು. ಹೇಮಾಂಬಿಕೆ ಸಹಜ ಸುಂದರಿ. ಯಾರಾದರೂ ಒಂದು ಸಲ ನೋಡಿದರೆ ಸಾಕು. ಅಪ್ರತಿಮ ಲಾವಣ್ಯವತಿಯೆಂದು ಒಪ್ಪುವಂತಿದ್ದಳು. ತೆಳುವಾದ ಉದ್ದನೆಯ ಶರೀರಯಷ್ಟಿ. ದಾರಿಯಲ್ಲಿ ನಡೆಯುಹತ್ತಿದರೆ ಗಾಳಿಗೆ ಹಾರುವಂತೆ ಕಾಣುತ್ತಲಿದ್ದಳು; ಆದರೂ ಬಹು ಚಪಲೆ. ಬಂಗಾರದ ವರ್ಣದ ಮೈಕಾಂತಿ. ದುಂಡು ಮೊಗದಲ್ಲಿಯ ಆ ಅಗಲವಾದ ಕಣ್ಣುಗಳ ಕಾಂತಿಯು ಎಂತಹ ಧೀರರನ್ನೂ ಅಲುಗಾಡಿಸುವಂತಿದ್ದಿತು. ಪುರುಷನನ್ನು ಸೆರೆಗೆಯ್ಯುವ ಕಣ್ಣಲ್ಲಿಯೇ ನೀಚರ ದೌರ್ಬಲ್ಯವೆಳೆಯುವ ಶಕ್ತಿಯೂ ತುಂಬಿದ್ದಿತು. ಕಲೆಗಳಂತೂ ಆಕೆಯಲ್ಲಿ ನೆಲೆಯಾಗಿ ನಿಂತಿದ್ದುವು. ಸ್ವರವೂ ಅತಿ ಮಾಧುರ್ಯ. ಬರಿಯ ಮಾತನಾಡಿದರೆ ಸಾಕು, ಕುಶಲವಾದಕ ಸಾರಂಗಿಯ ಮೇಲೆ ತನ್ನ ನೈಪುಣ್ಯ ತೋರಿಸಿದಂತಾಗುವದು. ಆಕೆ ಒಂದು ಸಲ ನಡೆದರೆ ಸಾಕು, ಸೋಗೆ ನವಿಲೂ ಮತ್ಸರಗೊಳುವಂತಿದ್ದಿತು. ಆಕೆಯ ಒಂದೊಂದು ವಿಧವೂ ಒಂದೊಂದು ವೈಶಿಷ್ಟ್ಯವನ್ನೇ ತೋರುತ್ತಲಿದ್ದವು.

ಹೇಮಾಂಬಿಕೆಯ ಸ್ವಭಾವವಾದರೂ ಬಲು ಸರಳ. ತನ್ನ ಬಿಚ್ಚುಮನದಿಂದಲೂ ಸುಹಾಸಪೂರ್ಣ ಭಾಷಣದಿಂದಲೂ ಮೃದುಮಧುರತೆಯ ಮಾತುಗಳಿಂದಲೂ ಎಂತಹ ಮನವನ್ನಾದರೂ ಆಕರ್ಷಿಸುವಳು. ಹಾಗೆಯೂ ಬಹು ಕುಶಲಳು. ಏನನ್ನಾದರೂ ನೋಡಿದರಾಯಿತು. ಅದರ ಮೂಲವರಿಯದೆ ಬಿಡುವವಳಲ್ಲ. ಯಾರನ್ನಾದರೂ ಕಂಡರಾಯಿತು. ಒಂದೆರಡು ಮಾತುಗಳಲ್ಲಿಯೇ ಅವರ ಸ್ವಭಾವ, ನೀತಿ, ನಡೆವಳಿಗಳನ್ನೆಲ್ಲ ಅರಿದು ಬಿಡುವಳು. ಸ್ವಲ್ಪದರಲ್ಲಿ ಹೇಳಬೇಕೆಂದರೆ ಯಾವನೊಬ್ಬ ಚತುರನು ಬಯಸುವಂತಹ ಅಪ್ರತಿಮ ವಧು ಅವಳಾಗಿದ್ದಳು.

ವಿರೂಪಾಕ್ಷನನ್ನು ಇನ್ನೂ ತೊಂದರೆಗೆ ಹೇಮಾಂಬಿಕೆ ಸಿಲುಕಿಸಿದ್ದಳು. ಹೇಮಾಂಬಿಕೆ ಆರೇಳು ವರುಷದವಳಿರುವಾಗಲೇ ವಿಜಯನಗರದರಸರ ಪರಿವಾರದಲ್ಲಿ ಸೇರಿದಳು. ಆಗ್ಗೆ ಯುವರಾಜ ಮತ್ತು ಕುಮಾರರಿಗೆ ಹತ್ತು-ಹನ್ನೊಂದು ವರುಷಗಳಿರಬಹುದು. ಇವರೀರ್ವರೂ ತಮ್ಮ ತಮ್ಮ ವಿದ್ಯಾಭ್ಯಾಸದಲ್ಲಿ ತೊಡಗಿದ್ದರು. ಆದರೂ ಬಿಡುವಿನಲ್ಲಿ ಹೇಮಾಂಬಿಕೆಯನ್ನು ಕಾಣದಿರುತ್ತಿರಲಿಲ್ಲ. ಹೇಮಾಂಬಿಕೆ ಇಬ್ಬರೊಡನೆಯೂ ಸಲುಗೆಯಿಂದ ವರ್ತಿಸುವಳು. ಇಬ್ಬರನ್ನೂ ಪ್ರೇಮದಿಂದ ಕಾಣುವಳು. ಇಬ್ಬರ ಸಂಗಡಲೂ ಮನಬಿಚ್ಚಿ ಮಾತನಾಡುವಳು. ಆದರೂ ಆಕೆಯ ಒಲವು ಯುವರಾಜನತ್ತವೇ ಇರುತ್ತಲಿದ್ದಿತು.

ಒಂದು ಸಲ. ವಿಜಯನಗರದ ಅಂತಃಪುರೋದ್ಯಾನ. ಸುಂದರವಾದ ಲತಾಮಂಟಪವೊಂದರಲ್ಲಿ ಹನ್ನೆರಡು-ಹದಿಮೂರು ವರ್ಷದ ಕಿಶೋರಿ ಹೇಮಾಂಬಿಕೆ ಕುಳಿತಿದ್ದಳು. ಸುತ್ತಲೂ ಸಾವಿರಾರು ಕಾರಂಜಿಗಳು ಚಿಮ್ಮುತ್ತಲಿವೆ. ಮುಳುಗುವ ಸೂರ್ಯನ ಹೊಂಗಿರಣಗಳು ಉದ್ಯಾನದ ಶೋಭೆಯನ್ನು ನೂರ್ಮಡಿಯಾಗಿ ಹೆಚ್ಚಿಸಿವೆ. ಬಂಗಾರದ ಬೆಳಕು ಹೇಮಾಂಬಿಕೆಯ ಮೇಲೆಲ್ಲ ಹರಡಿದ್ದಿತು. ಸುಂದರಾಲಕಗಳು ಮಾರ್ಗವನ್ನೆಲ್ಲ ಮುತ್ತುತ್ತಲಿದ್ದುವು. ಲತಾಮಂಟಪವು ಸುರಸುಂದರಿಯ ಸುಮನೋಹರ

ರೂಪಿಗೆ ಬೆರಗಾಗಿ ಅಭಿನಂದನಾರ್ಥವಾಗಿ ಪೂಮಳೆಗರೆಯುತ್ತಲಿದ್ದಿತು. ಲತಾಪಲ್ಲವಗಳು ಸುರಸುಂದರಿಯ ಸ್ಪರ್ಶಸುಖವನ್ನನುಭವಿಸಬೇಕೆಂದು ಮುಂಬರುತ್ತಲಿದ್ದುವು; ಆದರೆ ಇವಾವುಗಳ ಅರಿವೂ ಅವಳಿಗಿರಲಿಲ್ಲ. ಶುಭ್ರಶಿಲೆಯಲ್ಲಿ ಸುರುವಿದ ವಿವಿಧ ಬಣ್ಣಗಳ ಸುಂದರ ಕುಸುಮರಾಸಿಯೊಳಗಿಂದ ಸರಿಗಂಡ ಕುಸುಮವನ್ನಾಯ್ದು ಪೂಮಾಲೆ ರಚಿಸುವದರಲ್ಲಿ ಮಗ್ನಳಾಗಿದ್ದಳು. ಚಪಲವಾದ ಕರದ ಚಲನವಲನವೇ ಚಲನವಲನ. ಇಲ್ಲವಾಗಿದ್ದರೆ ಕುಶಲ ಶಿಲ್ಪಿಗ ಅತ್ಯಂತ ಪರಿಶ್ರಮವಹಿಸಿ ಕಟೆದು ಸಿದ್ಧಪಡಿಸಿದ ಶಿಲಾಮೂರ್ತಿಯೆನ್ನುವಷ್ಟು ಅಚಲತೆಯಿಂದ ಕುಳಿತಿದ್ದಳು. ಇಲ್ಲವೆನ್ನುವದಕ್ಕೆ ಇನ್ನೊಂದು ಇದ್ದಿತು. ಅದೇಂದರೆ, ಬಹು ಸೂಕ್ಷ್ಮವಾಗಿ ಆದರೆ ಅತೀವ ಮಧುರವಾಗಿ ಕೇಳಬರುತ್ತಲಿದ್ದ ಕಂಠಧ್ವನಿ, ಅದು ಹೇಮಾಂಬಿಕೆಯೇ ಹಾಡುತ್ತಲಿದ್ದಳೆಂದು ಯಾರೂ ಹೇಳುವಂತಿರಲಿಲ್ಲ. ಅಲ್ಲೆಲ್ಲಿಯಾದರೂ ಕರ್ನಾಟಕ ಸಮ್ರಾಟರ ಉದಾರ ಚರಿತದ ಪರಿಣಾಮವಾಗಿ ಯಾವ ಆತಂಕವೂ ಇಲ್ಲದೆ ಯಥೇಚ್ಛವಾಗಿ ಮಧುವನ್ನೀಂಟಿ ಮತ್ತವಾದ ಭೃಂಗಗಳು ಗಾನಗೆಯ್ಯುವಂತಿದ್ದಿತು; ಅಥವಾ ತನ್ನಾ ಹಾಡುವಿಕೆಯತ್ತ ಆಕೆಯದೇ ಚಿತ್ತವಿರಲಿಲ್ಲ. ಆಕೆಯ ಲಕ್ಷ್ಯವೆಲ್ಲವೂ ಕರವೊಳಗಿನ ಹಾರದಲ್ಲಿ ಕೇಂದ್ರೀಕೃತವಾಗಿದ್ದಿತು. ಕಂಠವು ತನ್ನಷ್ಟಕ್ಕೆ ತಾನೇ ಸುಮ್ಮನಿರಲು ಬೇಸರಪಟ್ಟು ಧ್ವನಿಗೆಯ್ಯುತ್ತಲಿದ್ದಿತು. ಪೂರಾಶಿಯಿಂದ ಪೂವನ್ನಾಯುವದು, ಕೊಂಚ ಅತ್ತಿತ್ತ ತಿರುವಿ ತನಗೆ ಸರಿಯಾಗುವಂತೆ ಜೋಡಿಸುವದು ಇಷ್ಟೇ ಆಕೆಯ ಕಾರ್ಯವಾಗಿದ್ದಿತು.

ಹೀಗೆ ಅದೆಷ್ಟೋ ಸಮಯ ಹಾರಕಟ್ಟುವುದರಲ್ಲಿಯೇ ಮಗ್ನಳಾಗಿ ಕುಳಿತಿದ್ದಳು. ಪಕ್ಷಿಗಳು ಚಿಲಿಬಿಲಿ ನಾದದಿಂದ ಯುವರಾಜ, ಕುಮಾರರು ಬಂದವಾರ್ತೆಯರುಹಿದವು ಎಚ್ಚರಾಗಲಿಲ್ಲ. ಕೋಗಿಲೆಗಳು ಇನಿಗೊರಲಿನಿಂದ ಯುವರಾಜನ ಸ್ವಾಗತ ಗೀತ ಪಾಡಿದುವು. ಆಕೆಗೆ ಕೇಳಬರಲಿಲ್ಲ. ಗಿಳಿವಿಂಡು ಕರ್ನಾಟಕ ಸಾಮ್ರಾಜ್ಯದ ಭಾವೀ ಸಮ್ರಾಟನ ಜಯಘೋಷಮಾಡಿದುವು. ಅದು ಆಕೆಯ ಕಿವಿಗೆ ಮುಟ್ಟಲೇ ಇಲ್ಲ. ಕೆಲಬಲದ ಲತೆಗಳು ಪ್ರಿಯಸಖಿಯರಂತೆ ಹೇಮಾಂಬಿಕೆಯ ಮೈದಡವಿ ಎಚ್ಚರಿಸಲೆತ್ನಿಸಿದುವು. ಆದರೂ ಅರಿವಿಲ್ಲ. ಕೊನೆಗೆ ಕೈ ನಿಂತಿತು. ಹೇಮಾಂಬಿಕೆ ಕಣ್ದೆರೆದಳು. ಕೂಡಲೆ ಅತ್ಯಂತ ಉಲ್ಲಾಸ ಚಿತ್ತಳಾಗಿ ನಲಿಯುತ್ತ, 'ಯುವರಾಜ ಬಂದುದಾವಾಗ' ಎಂದು ಕೇಳಿದಳು.

'ಹೇಮಾ, ಇಂದು ಹಾರರಚನೆಯಲ್ಲಿ ಎಷ್ಟೊಂದು ಏಕಾಗ್ರತೆ ತಳೆದಿರುವಿಯಲ್ಲ? ನಾನು ಬಂದು ನಿಂತೇ ನಿಂತೆನು. ನಿನ್ನ ಕರಚಾತುರ್ಯವನ್ನು ನೋಡುವುದೇ ನನ್ನ ಉದ್ಯೋಗವಾಗಿದ್ದಿತು. ಎಂತಹ ಸುಂದರ ಮಾಲೆ ರಚಿಸಿರುವೆ! ಇದಾರಿಗೆ?' ಯುವರಾಜ ಹೃಷ್ಟಮನಸ್ಕನಾಗಿ ಕೇಳಿದನು.

'ಇನ್ನಾರಿಗೆ?' ಎಂದು ನುಡಿದು ಒಯ್ಯಾರದಿಂದ ಮೇಲಕ್ಕೆದ್ದು ಪ್ರೇಮಪೂರ್ಣ ದೃಷ್ಟಿಯನ್ನು ಯುವರಾಜನ ಮೇಲೆ ಬೀರುತ್ತ ಅತಿಮನೋಹರವಾದಾ ಹಾರವನ್ನು ಯುವರಾಜನ ಕೊರಳಲ್ಲಿ ಹಾಕಿದಳು. ಒಡನೆಯೇ ವಿರೂಪಾಕ್ಷ ನಿಂತುದು ಕಾಣೆ

ಸಿತು. 'ಕುಮಾರ ನಿನ್ನ ಸಲುವಾಗಿ ಇನ್ನೊಂದನ್ನು ಹೆಣೆದಿರುವೆನು.' ಎಂದೆನ್ನುತ್ತ ಬೇರೊಂದು ವಿರೂಪಾಕ್ಷನ ಕೈಗಿತ್ತಳು. ಅದೂ ಸುಂದರ ಹಾರವೇ ಇದ್ದಿತು.; ಆದರೆ ಯುವರಾಜನ ಕಂಠಕ್ಕೈಕ್ಯದ ಹಾರಕ್ಕೆ ಸರಿಹೋಗುವಂತಿರಲಿಲ್ಲ.

ಇನ್ನೊಂದು ಸಲ. ಯುವರಾಜನಿಗೆ ಸಂಗೀತವೆಂದರೆ ಬಲು ಇಷ್ಟ. ಹಾಗೆಯೇ ಹೇಮಾಂಬಿಕೆಗೆ ಸಂಗೀತವೆಂದರೆ ಜನ್ಮತಃ ಪ್ರಾಪ್ತವಾದ ಕಲೆ; ಆದರೆ ವಿರೂಪಾಕ್ಷನ ವಿಷಯ ಹಾಗಲ್ಲ. ಅವನಿಗೂ ಸಂಗೀತ-ನಾಟ್ಯಗಳಲ್ಲಿ ಅಭಿರುಚಿಯಿದ್ದಿತು. ಸಂಗೀತ ಕೂಟಗಳಿಗಾಗಲಿ, ನೃತ್ಯಸಭೆಗಳಿಗಾಗಲಿ, ನಾಟ್ಯಪ್ರಯೋಗಗಳಿಗಾಗಲಿ ಯುವರಾಜನ ಬರಿ ಬಿಡುತ್ತಲಿರಲಿಲ್ಲ; ಆದರೂ ಚತುರಂಗ, ಲೆತ್ತ ಮುಂತಾದ ಆಟಗಳಲ್ಲಿ ಅವನಿಗೆ ಅಭಿರುಚಿ ಹೆಚ್ಚು.

ಒಂದು ದಿನ ಸಾಯಂಕಾಲದ ವೇಳೆಯಲ್ಲಿ ಯುವರಾಜ-ಕುಮಾರರೀರ್ವರಿಗೂ ಬೇರೆ ಕಾರ್ಯವಿರಲಿಲ್ಲ. ಆಗ್ಗೆ ಇಬ್ಬರೂ ಹದಿನೇಳು-ಹದಿನೆಂಟು ವರುಷದವರಾಗಿದ್ದರು. ಹೇಮಾಂಬಿಕೆಗೆ ಹದಿನಾಲ್ಕು-ಹದಿನೈದು ಇದ್ದಿರಬೇಕು. ಅಂದು ಯಾವ ಕಾರ್ಯಕ್ರಮ ಕೈಕೊಳ್ಳಬೇಕು, ಎಂಬ ಬಗ್ಗೆ ಇಬ್ಬರಲ್ಲಿಯೂ ಚರ್ಚೆಯುಂಟಾಯಿತು. ಮೃಗಯೆ, ಪುರವಿಹಾರಗಳಾವೂ ಬೇಕಿರಲಿಲ್ಲ. ಅಂತಃಪುರದಲ್ಲಿಯೇ ವೇಳೆಗಳೆಯ ಬೇಕಿದ್ದಿತು. ಯುವರಾಜ ಸಹಜವಾಗಿ ಸಂಗೀತದ ಕಾರ್ಯಕ್ರಮ ಮುಂದೆ ಮಾಡಿದನು. ವಿರೂಪಾಕ್ಷ ತನ್ನ ಅಭಿರುಚಿಯಂತೆ ಚದುರಂಗದಾಟ ಮುಂದೆ ಮಾಡಿದನು. ಇಬ್ಬರಲ್ಲಿಯೂ ಅದೆಷ್ಟೋ ಚರ್ಚೆಯಾಯಿತು. ಆ ಆ ಕಲೆಗಳ ವಿಷಯಕ್ಕೆ ಬಹಳವಾಗಿ ಚರ್ಚಿಸಿದರು; ಆದರೂ ಬಗೆಹರಿಯಲಿಲ್ಲ. ಯುವರಾಜ ಸಂಗೀತವನ್ನೇ ಎತ್ತಿ ಹಿಡಿದ. ಕುಮಾರಾ ಚದುರಂಗವನ್ನೇ ಮುಂದೂಡಿದ. ಇಬ್ಬರೂ ಹೇಮಾಂಬಿಕೆಯನ್ನು ನ್ಯಾಯನಿರ್ಣಯಕ್ಕೆ ನಿಯಮಿಸಿದರು. ಹೇಮಾಂಬಿಕೆ ಮೊದಲು ಸಂಗೀತ. ಆಮೇಲೆ ಆಟ ಎಂದು ಹೇಳಿದುದಲ್ಲದೆ, ಸಾರಂಗಿ ತೆಗೆದುಕೊಂಡು ಬಂದವಳೇ ಗಾನಕ್ಕಾರಂಭಿಸಿದಳು. ಯುವರಾಜ ಹೇಮಾಂಬಿಕೆಯ ಗಾನಕ್ಕೆ ಗಾರುಡಿಗನ ಪುಂಗಿಗೆ ಸರ್ಪ ತಲೆಹಾಕುವಂತೆ ತಲೆ ಅಲ್ಲಾಡಿಸಹತ್ತಿದ. ಕುಮಾರ ಪಿಳಪಿಳನೆ ಇಬ್ಬರನ್ನೂ ಕಣ್ಣಿಟ್ಟು ನೋಡುತ್ತ ಕುಳಿತು ಬಿಟ್ಟ. ವೇಳೆಗಳೆದಂತೆ ಗಾನದ ಮೊಬ್ಬು, ಹಾಡುವಿಕೆಯ ಉಬ್ಬು ಬೆಳೆಯುತ್ತಲೇ ನಡೆಯಿತು. ಕೊನೆಗೆ ಕುಮಾರನ ಚತುರಂಗ ಚದುರಿ ಹೋಯಿತು.

ಗಾನಾನಂದೆಯ ಸಂಗೀತ ಕಾರ್ಯಕ್ರಮ ಕೊನೆಗಂಡು ಹೇಮಾಂಬಿಕೆ ಬಂದು ಯುವರಾಜನನ್ನೆಬ್ಬಿಸಿದಾಗ್ಗೆ ವಿರೂಪಾಕ್ಷ ತಂದ್ರಿಯಲ್ಲಿದ್ದುದು ಈ ಆಗ ಹೋದ ಚಲನಚಿತ್ರಗಳನ್ನು ನೋಡುವುದರಲ್ಲಿ ಅವುಗಳನ್ನು ಆನಂದವನ್ನನುಭವಿಸಬೇಕೆಂದಲ್ಲ. ಅವುತಮ್ಮಷ್ಟಕ್ಕೆ ತಾವೇ ಬಂದುವು. ಒಲ್ಲೆನೆಂದರೂ ಬಿಡದೆ ಕಣ್ಣೆದುರು ನರ್ತಿಸತೊಡಗಿದುವು. ಅದರಿಂದ ಅವನ ಮನಸ್ಸು ಮತ್ತು ಮತ್ತೂ ವ್ಯಗ್ರವಾಗಹತ್ತಿತು.

ವಿರುಪಾಕ್ಷನು ಹೇಮಾಂಬಿಕೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳ ಬಯಸು

ತ್ತಲಿದ್ದನು. ಶೂರನಿದ್ದನು, ಚತುರನಿದ್ದನು, ಸುಂದರನಿದ್ದನು, ಜಾಣನಿದ್ದನು. ಅಂತಹನು ಹೇಮಾಂಬಿಕೆಯಂತಹ ಪರಿಪೂರ್ಣ ಪತ್ನಿ ತನಗೆ ದೊರೆಯಬೇಕೆಂದು ಕೋರುವದು ಸಹಜವು. ದೊಡ್ಡಪ್ಪನ ಓರ್ವ ಸರದಾರನ ಪುತ್ರಿಯಾದುದರಿಂದ ತನಗೆ ತಕ್ಕ ಮನೆತನದವಳೇ, ಎಂದು ಸ್ವಾಭಾವಿಕವಾಗಿ ನಂಬಿದನು; ಆದರೆ ಹೇಮಾಂಬಿಕೆಯ ಮನಸ್ಸು ಯುವರಾಜನತ್ತ ಧಾವಿಸುತ್ತಲಿದ್ದಿತು. ಯುವರಾಜನನ್ನು ಸಂತುಷ್ಟನನ್ನಾಗಿ ಮಾಡುವದೇ ಆಕೆಯ ಕರ್ತವ್ಯ. ಯುವರಾಜನ ಮನವೊಲಿಸುವದೇ ಆಕೆಯ ಮುಖ್ಯೋದ್ಯೋಗ, ಯುವರಾಜನ ಪ್ರೇಮಸಾಧನೆಯೇ ಆಕೆಯ ಅಂತಿಮೋದ್ದೇಶವಾಗಿದ್ದಿತು.

ಇನ್ನು ಯುವರಾಜನಾದರೋ ಎಲ್ಲದರಿಂದಲೂ ಪರಿಪೂರ್ಣಳಾದ, ಮತ್ತು ತಾನೇ ಒಲಿದು ಬಂದ ಸೌಂದರ್ಯ ಲಕ್ಷ್ಮಿಯನ್ನು ತ್ಯಜಿಸುವನೆ? ಯಾವ ಪುರುಷನಿಂದಲೂ ಕಾಲತ್ರಯದಲ್ಲಿಯೂ ಶಕ್ಯವಿಲ್ಲದ ಸಂಗತಿ. ತಾನಾಗಿ ಒಲಿದು ಬಂದ ಅಂತಹ ರೂಪವತಿಯನ್ನೂ, ಚತುರೆಯನ್ನೂ, ಇನ್ನೂ ಏನು ಬೇಕೋ ಅದೆಲ್ಲದರಿಂದಲೂ ತುಂಬಿ ಹೋಗಿರುವ ಆಕೆಯನ್ನು ಸ್ವಾಗತಿಸುವುದು ಸಹಜವು; ಆದರೆ ಹೇಮಾಂಬಿಕೆಯ ಒಲವು ಅತ್ತವೇ ಏಕೆ ಹರಿಯಬೇಕು? ತಾನು ಆಕೆಗೆ ತಕ್ಕವನಿರಲಿಲ್ಲವೆ? ಬರಿಯ ಶುಷ್ಕ ಆದರ ಬೇಕಾದಷ್ಟಿದ್ದಿತು; ಆದರೆ ಶುಷ್ಕವು ಶುಷ್ಕವೇ ಅಲ್ಲವೆ? ಅದರಲ್ಲಿ ಕೊಂಚವಾದರೂ ಪ್ರೇಮರಸವಿದ್ದರೆ ಏನಾದರೂ ಉಪಯೋಗವಾಗಬಹುದಿತ್ತು. ಯುವರಾಜನ ಮೇಲೆ ಆಶೆ, ಆದರ, ಪ್ರೇಮಗಳಿಂದ ಪರಿಪೂರ್ಣವಾದ ನೋಟವನ್ನೇ ಬೀರುತ್ತಲಿದ್ದಳು. ಅದೇ ನೋಟ ಆಗಲೇ ತನ್ನತ್ತ ಹೊರಳಿದಾಗ್ಗೆ ಪರಕೀಯರನ್ನು ಕಾಣುವಂತೆ ಕಾಣುತ್ತಲಿದ್ದಳು. ಮಾತಿನಲ್ಲಿಯೂ ಹಾಗೆಯೇ, ಧ್ವನಿಯೂ ಅದೆ. ರುಚಿಯಲ್ಲಿ ಯುವರಾಜನ ಹೆಜ್ಜೆಯಲ್ಲಿಯೇ ಹೆಜ್ಜೆ ಯಿಕ್ಕುತ್ತಲಿದ್ದಳು. ತನಗೆ ಸ್ವತಃ ಯಾವದು ಬೇಕು, ಯಾವದು ಬೇಡ ಎಂಬ ತಾರತಮ್ಯವೇ ಇರಲಿಲ್ಲ. ಯುವರಾಜನಿಗೆ ಸೇರಿದರಾಯಿತು. ಅದು ಆಕೆಗೆ ಸೇರಲೇಬೇಕು. ಯುವರಾಜನನ್ನು ಳಿದು ತನ್ನ ಅಸ್ತಿತ್ವವನ್ನೇ ಮರೆತಂತಿದ್ದಳು. ಇದೆಲ್ಲವು ಏಕೆ? ಯುವರಾಜನ ಮನವೊಲಿಸಬೇಕು, ಯುವರಾಜನ ಪ್ರೇಮ ದೊರೆಯಬೇಕು, ಯುವರಾಜನ ಅರ್ಧಾಂಗಿ ತಾನಾಗಬೇಕು, ಎಂಬ ಹವ್ಯಾಸದಿಂದಲೇ ಅಲ್ಲವೆ? ಯುವರಾಜನ ಅರ್ಧಾಂಗಿ ತಾನಾಗಬೇಕೆಂಬ ಬಲವಾದ ಬಯಕೆಯಿಂದಲೇ ಅಲ್ಲವೆ? ಹಾಗಾದರೆ ಆತನ ಸಲುವಾಗಿಯೇ ಅಷ್ಟೇಕೆ ಯತ್ನಿಸಬೇಕು?

ಮಾನವಸ್ವಭಾವ ಬಲು ವಿಚಿತ್ರವಾದುದು ಒಮ್ಮೆ ಮನದಲ್ಲೊಂದು ಕುಳಿತರಾಯಿತು. ನೋಡಿದಲ್ಲೆಲ್ಲ ಅದೇ ಕಾಣುತ್ತದೆ. ಅಕಸ್ಮಾತ್ತಾಗಿ ಒಬ್ಬ ಮನುಷ್ಯನ ಬಗ್ಗೆ ಒಂದು ಭಾವ ನಮ್ಮಲ್ಲಿ ಉಂಟಾದರಾಯಿತು. ಅವನ ಪ್ರತಿಯೊಂದು ಕೃತಿಯೂ ಹಾಗೆಯೇ ಕಾಣುತ್ತದೆ. ಆ ಮನುಷ್ಯ ದುಷ್ಟನು ಎಂದೊಮ್ಮೆ ತಿಳಿದರಾಯಿತು. ಅವನ ಪ್ರತಿಯೊಂದು ಕೃತಿಯೂ ಕೆಟ್ಟದಾಗಿಯೇ ಕಾಣುತ್ತದೆ. ವಿರೂಪಾಕ್ಷನ

ಸ್ಥಿತಿಯೂ ಹಾಗೆಯೇ ಆಯಿತು. ಹೇಮಾಂಬಿಕೆಯ ವಿಷಯಕವಾಗಿ ಆತನಲ್ಲಿ ಒಂದು ಬಗೆಯ ಭಾವ ಜನಿಸಿದ್ದಿತು. ಅದು ಸ್ಥಿರವಾಗುಳಿದು ಹೇಮಾಂಬಿಕೆಯ ಪ್ರತಿಯೊಂದು ಕೃತಿಯೂ ಹಾಗೆಯೇ ಕಾಣುತ್ತಲಿದ್ದಿತು

ಹೇಮಾಂಬಿಕೆಯ ಗಾನಾನಂದೆಯ ನೃತ್ಯಪ್ರಯೋಗ ಒಳ್ಳೇ ಉತ್ಕೃಷ್ಟವಾಗಿ ಪರಿಣಾಮ ಮಾಡುವಂತಾಗಲು, ಯುವರಾಜ ಮೆಚ್ಚಿ ಹೋದನು. ವಿರೂಪಾಕ್ಷನಾದರೂ ಪ್ರಯೋಗದ ಬಗ್ಗೆ ಆಕ್ಷೇಪಣೆಯುಳ್ಳವನಿರಲಿಲ್ಲ. ಆದರಾ ಪ್ರಯೋಗದ ಮೂಲೋದ್ದೇಶ ಯುವರಾಜನ ಪ್ರೇಮ ಸಂಪಾದನೆಯೇ ಆಗಿದ್ದಿತಲ್ಲವೆ? ಆದುದರಿಂದಲೇ ಅವನು ಆ ಪ್ರಯೋಗವನ್ನು ಮನಸಾ ಹೊಗಳಲು ಸಿದ್ಧನಿರಲಿಲ್ಲ; ಆದರೂ ಕೂಡಾ ತನ್ನ ಮನೋಭಾವಗಳನ್ನು ಪ್ರಕಟವಾಗಿ ತೋರಿಸುವಷ್ಟು ಅಸಭ್ಯ ಅವನಿರಲಿಲ್ಲ. ಅಂತೆಯೇ ಅವನು ಹೇಮಾಂಬಿಕೆಯನ್ನು ಬಹಳವಾಗಿ ಹೊಗಳಿದನು.

'ಹೇಮಾ, ನಿನ್ನ ಪ್ರಯೋಗ ನೋಡಿದರೆ, ನಿನ್ನಾ ಮಧುರ ಗಾನ ಕೇಳಿದರೆ ಜನ್ಮತಃನಟಿಯರಾದ ಅಪ್ಸರೆಯರೂ ನಾಚುವರು. ಸಂಗೀತದೇವಿ ಸರಸ್ವತಿಯೂ ಕೂಡಾ ತನ್ನ ಸಿಂಹಾಸನದ ಬಗ್ಗೆ ಸಂದೇಹಿಸುವಳು.' ವಿರೂಪಾಕ್ಷನೆಂದನು.

'ಏಕೆ ಕುಮಾರ, ಒಳ್ಳೇ ಲಹರಿಯಾಗಿರುವೆ. ಇಂದು ಕವಿತ್ವ ಬಹು ಚನ್ನಾಗಿ ಹೊರಸೂಸುವಂತೆ ತೋರುತ್ತದೆ?' ಹೇಮಾಂಬಿಕೆ ನಗುತ್ತ ನುಡಿದಳು.

'ಏನು ಕವಿತ್ವವೆ? ಈ ಮಾತು ಯುವರಾಜನಿಗಂದಿದ್ದರೆ ಸರಿಯಾಗುತ್ತಲಿದ್ದಿತು. ಸ್ವಭಾವತಃ ಅರಸಿಕನಾದ ನನಗೆ ಕವಿತಾ ಸುಂದರಿಯ ಗಂಟುಹಾಕಬೇಕೆಂದಿರುವೆ. ಆದರೆ ನಮಗೂ ಅವರಿಗೂ ಗೋತ್ರವೇ ಕೂಡುವದಿಲ್ಲ. 'ಅರಸೀಕೇಷು ಕವಿತ್ವಂ, ಸಿರಸಿ ಮಾ ಲಿಖ ಮಾ ಲಿಖ' ಕುಮಾರನುತ್ತರವಿತ್ತನು.

'ಅರಸಿಕನೆಂದು ಹೇಳಿಕೊಳ್ಳುವೆ; ರಸಿಕನಿಗೆ ಮಿಗಿಲಾಗಿ ಕಾವ್ಯದಲ್ಲಿ ಪ್ರಾವೀಣ್ಯ ತೋರಿಸುವೆ.' ಕೊಂಚವೇ ಉಪಹಾಸಮಿಶ್ರಿತಸ್ವರದಲ್ಲಿ ಹೇಮಾಂಬಿಕೆಯಂದಳು.

'ಅದು ನಿನ್ನ ಗಾನಾಭಿನಯಗಳ ಪರಿಣಾಮ. ಸೂಜಿಗಲ್ಲು ಕಬ್ಬಿಣಕ್ಕೆ ಹೊಂದಿರುವ ವರೆಗೆ ಕಬ್ಬಿಣದಲ್ಲಿಯೂ ಕಬ್ಬಿಣವನ್ನೆಳೆಯುವ ಗುಣವಿರುತ್ತದೆ.'

'ನಿನ್ನಾ ಅಪ್ರತಿಮ ಪ್ರಯೋಗದ ಸ್ಮರಣೆ ಉಳಿದಿರುವ ವರೆಗೂ ನನ್ನಲ್ಲಿ ಅಲ್ಪ ಸ್ವಲ್ಪ ರಸಿಕತೆಯುಂಟಾಗಿರಬಹುದು; ಆದರೆ ಇಲ್ಲಿ ನೋಡು, ಯುವರಾಜನಂತಹ ಕಲಾವಿದನನ್ನೂ ಗುಂಗುಹಿಡಿಸಿಬಿಟ್ಟಿರುವೆ.' ಹೇಮಾಂಬಿಕೆಯ ಮನಸ್ಸಿಗೆ ನಾಟುವಂತೆ ಒಂದು ಬಾಣಬಿಟ್ಟನು.

ಯುವರಾಜನ ಹೆಸರು ಕಿವಿಗೆ ಬೀಳುತ್ತಲೆ ಮುಖದಲ್ಲಿ ಅದೆಷ್ಟೋ ಮಾರ್ಪಾಟಾಯಿತು. ತನ್ನ ಪ್ರಯೋಗದಿಂದ ಯುವರಾಜ ಸಂತುಷ್ಟನಾದನೆಂಬ ಯೋಚನೆಯೇ ಆಕೆಗೆ ಅತೀವ ಹರ್ಷವನ್ನುಂಟು ಮಾಡಿದ್ದಿತು. ವಿರೂಪಾಕ್ಷನ ಸಂಗಡ ಮಾತನಾಡು ವಾಗ್ಗೆ ವಾದಿಸುವ ಬುದ್ಧಿ ಇರುತ್ತಲಿದ್ದಿತು; ಆದರೆ ಯುವರಾಜ—ಯುವರಾಜನೆಂದರೆ, ಆಕೆಯ ಮನಸ್ಸು ಉದ್ರೇಕಗೊಳ್ಳುವುದು. ಹೃದಯ ಹರುಷದಿಂದುಬ್ಬುವದು,

ಮೋಹಕ ಲಜ್ಜೆಯಿಂದ ಮೊಗ ಬಾಗುವುದು. ಹೇಮಾಂಬಿಕೆಯ ಈ ಸ್ಥಿತಿಯನ್ನು ವಿರೂಪಾಕ್ಷ ಬಲ್ಲನು. ಅಂತೆಯೇ ತನ್ನ ಮೇಲಿದ್ದ ಹೇಮಾಂಬಿಕೆಯ ಪ್ರೇಮರಹಿತ ಚಿತ್ತವನ್ನು ಯುವರಾಜನತ್ತ ಹೊರಳಿಸಿದನು. ಒಡನೆಯೇ ಅದು ಪ್ರೇಮಜಲದಿಂದ ಪರಿಪೂರ್ಣವಾಗಿ ಯುವರಾಜನತ್ತ ಧಾವಿಸಿತು.

'ಕುಮಾರ, ನೀವು ಸುಳ್ಳೇ ಏನಾದರೂ ಹೇಳುವಿರಿ. ಯುವರಾಜರ ಮತಿ ಗುಂಗಾವಂತಹ ಪ್ರಯೋಗವು ಅದೆಂದೂ ಅಲ್ಲ.' ಯುವರಾಜನ ಅಭಿವಂದನೆ ಪುನಃ ಪುನಃ ಪಡೆಯಬೇಕೆಂಬದೇ ಆಕೆಯ ಅಭಿಲಾಷೆ.

'ಇಲ್ಲ, ಹೇಮಾ, ನಿಜವಾಗಿಯೂ ಇಂದು ನನಗೆ ಹುಚ್ಚು ಹಿಡಿಸಿದೆ. ನಿನ್ನಾ ಗಾನಾ ನಂದೆಯ ಗಾನಾಭಿನಯ ಕೌಶಲ್ಯ ಕಣ್ಣಲ್ಲಿ ಕಟ್ಟಿದೆ. ಕಿವಿಯಲ್ಲಿ ನೆಟ್ಟಿದೆ. ಮನದಲ್ಲಿ ಮೂಡಿದೆ. ನಿಜವಾಗಿ ಹೇಮಾ, ಈ ಸಲದ ಕಲೆಯ ಕೆಲಸ ಅತ್ಯುತ್ಕೃಷ್ಟವಾಯಿತು. ನಿನ್ನಂತಹ ಅದ್ವಿತೀಯ ಸ್ತ್ರೀರತ್ನಗಳಿಂದಲೇ ಕನ್ನಡಮ್ಮನ ಹೆಮ್ಮೆ!'

---

# ೪ ಎದೆಯುರಿ

—:✻:—

ಮಧ್ಯರಾತ್ರಿ ಮೀರಿದ್ದಿತು. ಅನೇಕ ವ್ಯವಹಾರೋದ್ಯೋಗಗಳಿಗೆ ತವರೇ ಆದ ಕರ್ನಾಟಕಸಾಮ್ರಾಜ್ಯದ ವೈಭವೀ ರಾಜಧಾನಿ ವಿಜಯನಗರವು ಇದೆಯೇ ಎಂದು ಹೇಳುವಂತಿದ್ದಿತು. ಲಕ್ಷಾವಧಿ ಜನರ ವಾಸಸ್ಥಳ, ದೇಶ ದೇಶಗಳ ನಿವಾಸಿಗಳ ವ್ಯಾಪಾರ ಸ್ಥಳ, ಅನೇಕ ಧರ್ಮದವರ ಆದರಸ್ಥಳ ಇಂತಹ ವಿಜಯನಗರದಲ್ಲಿ ಬೆಳಗಿನ ಅರು ಣೋದಯದಿಂದಲೂ ರಾತ್ರಿಯ ಪ್ರಥಮ ಪ್ರಹರದ ವರೆಗೂ ನಡೆಯುವ ಸಪ್ಪಳ-ಸದ್ದು ಗಳಿಗೆ ಕಿವಿಗಳು ಕಿವುಡುಬಿದ್ದು ಹೋಗುವಂತಾಗುತ್ತಲಿದ್ದಿತು. ಒಂದೇ, ಎರಡೇ ನೂರಾರು ಉದ್ಯೋಗಗಳು, ನೂರಾರು ಬಗೆಯ ವ್ಯವಹಾರ. ಹಗಲಿನಲ್ಲಿ ಇಷ್ಟು ಗದ್ದಲ ದಲ್ಲಿ ಮುಳುಗಿಹೋದ ಆ ಭವ್ಯನಗರಿ ಆ ಸಮಯಕ್ಕೆ ಶಾಂತವಾದ ಸಾಗರದಂತೆ ತೋ ರುತ್ತಲಿದ್ದಿತು. ಹಗಲನ್ನೂ ಕೂಡ ಹಿಂದೆ ಹಾಕುವಷ್ಟು ಸ್ವಚ್ಛವಾದ ಪ್ರಕಾಶವು ಎಲ್ಲೆಡೆಯಲ್ಲೂ ಹರಡಿದ್ದಿತು. ನಗರ ರಕ್ಷಕರು ದಕ್ಷತೆಯಿಂದ ತಿರುಗುತ್ತಲಿದ್ದರು. ಪ್ರಾಮಾಣಿಕತನಕ್ಕೆ ಹುಟ್ಟುಸ್ಥಳವಾದ ಕರ್ನಾಟಕ ಸಾಮ್ರಾಜ್ಯದಲ್ಲಿ ಕಳವು, ಕೊಲೆ, ಸುಲಿಗೆ ಮುಂತಾದ ಅಕೃತ್ಯಗಳ ಸಂಭವವಿರಲಿಲ್ಲ. ಆದರೂ ಬೇರೆ ಬೇರೆ ದೇಶದವರು ಬೇರೆ ಬೇರೆ ಧರ್ಮದವರು ವಾಸಿಸುತ್ತಲಿದ್ದುದರಿಂದ, ಅವರು ದಕ್ಷತೆ ವಹಿಸಲೇಬೇಕಾ ಗುತ್ತಲಿದ್ದಿತು. ಅವರಿಂದೇನಾದರೂ ಅನ್ಯಾಯವಾದೀತೆಂಬ ಭೀತಿಯಿಂದಲ್ಲ; ಅವರಿ ಗೇನಾದರೂ ತೊಂದರೆಯಾಗಬಹುದೆಂಬ ಯೋಚನೆಯಿಂದ. ಕರ್ನಾಟಕ ಸಾಮ್ರಾ ಜ್ಯಕ್ಕೆ ಸಂಬಂಧವಿಲ್ಲದವರು, ಕರ್ನಾಟಕವನ್ನರಿಯದ ಹಲವರು ನಿರ್ಭೀತಿಯಿಂದ ಬಂದು ಅಲ್ಲಿ ವಾಸಿಸುತ್ತಲಿದ್ದರಲ್ಲವೆ? ಕನ್ನಡ ರಾಜ್ಯದಲ್ಲಿ ಯಾವ ಭೀತಿಯೂ ಇಲ್ಲ ವೆಂದು ಅವರ ನಂಬುಗೆಯಿದ್ದಿತಲ್ಲವೆ? ಹಾಗೆ ವಿಶ್ವಾಸದಿಂದ ವಾಸಿಸುತ್ತಲಿದ್ದವರ ರಕ್ಷ

ಣೆಯ ಭಾರವು ಅರಸಿನ ಮೇಲೆಯೇ ಇದ್ದಿತು. ಅಂತೆಯೇ ನಗರ ರಕ್ಷಕರು ಅಷ್ಟು ದಕ್ಷತೆವಹಿಸಬೇಕಾಗಿದ್ದಿತು.

ದ್ವಿತೀಯ ಪ್ರಹರ ಮುಗಿದುದರಿಂದ ಸಕಲರೂ ನಿದ್ರಾವಶರಾಗಿದ್ದರು. ಹಗಲಿನ ಭಿನ್ನ ಭಿನ್ನ ಉದ್ಯೋಗಗಳಲ್ಲಿ ದಣಿದ ಪ್ರಜೆರೆಲ್ಲರೂ ಶಾಂತವಾಗಿ ನಿದ್ರೆಗೆಯ್ಯುತ್ತಲಿದ್ದರು. ಇಂತಹ ಸಮಯದಲ್ಲಿ ಕುಮಾರ ವಿರೂಪಾಕ್ಷನ ಶಯನ ಮಂದಿರದಲ್ಲಿ ಇನ್ನೂ ದೀಪ ಆರಿರಲಿಲ್ಲ; ಏಕೆಂದರೆ ಕುಮಾರನೇ ಮಲಗಿರಲಿಲ್ಲ. ಕುಮಾರನು ಬಹು ನಿಯಮಿತ ಸ್ವಭಾವದವನು. ರಾತ್ರಿಯ ಪ್ರಥಮಪ್ರಹರ ಮುಗಿಯುತ್ತಲೇ ಶಯನಮಂದಿರಕ್ಕೆ ಹೋಗಿ ಒಂದೆರಡು ಗಳಿಗೆ ವ್ಯಾಸಂಗದಲ್ಲಿ ತೊಡಗುವನು. ಒಡನೆಯೇ ಕಣ್ಣುಗಳು ನಿದ್ರೆಯಿಂದ ತೂಗಹತ್ತುವವು. ಅರುಣೋದಯದವರೆಗೂ ಯಾವ ಆತಂಕವೂ ಇಲ್ಲದೆ ನಿದ್ರಿಸುವನು; ಆದರೆ ಇತ್ತಿತ್ತಲಾಗಿ ಅವನ ಈ ಕ್ರಮ ಕೊಂಚ ಕೊಂಚ ತಪ್ಪಿತ್ತು. ಸಿಂಹಲದ್ವೀಪದಿಂದ ಮರಳಿ ಬಂದಾಗಿನಿಂದಂತೂ ಅವನ ನಿದ್ರೆ ಮಾಯವೇ ಆಗಿದ್ದಿತು. ಒಂದೊಂದು ರಾತ್ರಿಯಂತೂ ನಿದ್ರೆಯನ್ನೇ, ಕಾಣುತ್ತಿರಲಿಲ್ಲ. ಮಲಗುವದೂ ಹೊರಳಾಡುವದೂ, ಮತ್ತೆ ಎದ್ದು ಮಂದಿರದಲ್ಲಿಯೇ ತಿರುಗಾಡುವದೂ, ಗವಾಕ್ಷದಲ್ಲಿ ಹೋಗಿ ನಿಂತು ಶೂನ್ಯದೃಷ್ಟಿಯಿಂದ ಅತ್ತಿತ್ತ ನೋಡುತ್ತ ನಿಲ್ಲುವದೂ ಇವೇ ಅವನ ಆಗಿನ ಉದ್ಯೋಗಗಳಾಗುತ್ತಲಿದ್ದುವು.

ಅಂದು ಎರಡನೆಯ ಪ್ರಹರ ಕೊನೆಗಂಡರೂ ಕುಮಾರನಿಗೆ ನಿದ್ರೆಯೇ ಇರಲಿಲ್ಲ; ಮತ್ತು ನಿದ್ರೆ ಮಾಡಬೇಕೆಂಬ ಅರಿವು ಕೂಡಾ ಆತನಿಗಿರಲಿಲ್ಲ. ಹಿಂದೆ ಕೈ ಕಟ್ಟಿಕೊಂಡು ಆ ಗೋಡೆಯಿಂದಿನ್ನೊಂದುಗೋಡೆಗೆ, ಆ ಗವಾಕ್ಷದಿಂದಿನ್ನೊಂದು ಗವಾಕ್ಷಕ್ಕೆ, ಆ ಬಾಗಿಲಿಂದೀಬಾಗಿಲಿಗೆ ತಿರುಗಾಡುತ್ತಲೇ ಇದ್ದನು. ಅವನ ಕಾಲುಗಳು ಒಮ್ಮೊಮ್ಮೆ ವೇಗದಿಂದ, ಒಮ್ಮೊಮ್ಮೆ ಮಂದವಾಗಿ ತಿರುಗುತ್ತಲಿದ್ದುವು; ಆದರೆ ತಲೆಯಲ್ಲಿ ವಿಚಾರ ಚಕ್ರ ಬಹು ವೇಗವಾಗಿ ತಿರುಗುತ್ತಲಿದ್ದಿತು.

'ಇದೆಲ್ಲವೂ ಏತರ ಪರಿಣಾಮ? ಅವನೇನು ಸಗ್ಗದಿಂದಿಳಿದು ಬಂದನೇ? ಎಲ್ಲಿ ನೋಡಿದರೂ ಅವನಿಗೇ ಮನ್ನಣೆ. ಯಾರನ್ನು ನೋಡಿದರೂ ಅವನನ್ನೇ ಸ್ತುತಿಸುವವರೆ. ಇದಕ್ಕೆ ಕಾರಣವೇನು? ಈ ಎಲ್ಲವುಗಳನ್ನು ಸಾಧಿಸಲು ಆತನಲ್ಲಿ ಇರುವ ಅಂತಹ ಅಮೋಘ ಶಕ್ತಿಯಾದರೂ ಯಾವದು? ನಾನೇನರಿಯದ ಯುವರಾಜನೆ? ಚಿಕ್ಕತನದಿಂದಲೂ ನಾವಿರ್ವರೂ ಕೂಡಿಯೇ ಬೆಳೆದಿರುವೆವು. ನಾನಾತನನ್ನು ಚನ್ನಾಗಿ ಬಲ್ಲೆ. ನನ್ನಕಿಂತಲೂ ಯಾವ ವಿಧದಲ್ಲಿ ಶ್ರೇಷ್ಠನಿರುವನೆಂದು ಅವನನ್ನೊಯ್ದು ಅಟ್ಟಕ್ಕೇರಿಸಿ ನನ್ನನ್ನು ಕೂಪಕ್ಕೆ ತಳ್ಳುವರು? ಅವನ ಶೂರತನವನ್ನೂ ನಾನು ಬಲ್ಲೆ. ಅವನ ವಿದ್ವತ್ತೆ ನಾನರಿಯದಿಲ್ಲ. ಅವನ ಚಾತುರ್ಯ ನನಗೆ ಗೊತ್ತಿದೆ. ನಾನು ಯಾವ ವಿಧದಿಂದ, ಎಷ್ಟು ಬಗೆಯಾಗಿ ಯೋಚಿಸಿದರೂ ಯುವರಾಜನೆಂದರೆ, ನನಗೇನೂ ಅತ್ಯಂತ ತೇಜಸ್ವಿಯಾದ ವಿಭೂತಿಯಂತೆ ತೋರುವುದಿಲ್ಲ. ಸುಮ್ಮನೆ ಹೀಗೆ ಅವನೆಂದರೆ ಕರ್ನಾಟಕದ ಉದ್ಧಾರಕ, ಹಾಗೆ ಹೀಗೆ ಮುಂತಾಗಿ ಹೇಳುವುದೇಕೆ? ನನಗೂ ಅವನಿಗೂ

ಬೇಕಾದುದರಲ್ಲಿ ಬಿಡಲಿ. ಒಂದೊಂದು ಸಲ ಅವನಾದರೂ ನನ್ನನ್ನು ಗೆಲ್ಲಬಹುದು. ನಾನೇನು ಇಲ್ಲೆನ್ನುವುದಿಲ್ಲ; ಆದರೆ ಒಂದೊಂದು ಸಲ ಸೋಲುವುದಶಕ್ಯವಿಲ್ಲ. ಹೀಗಿದ್ದು, ಯುವರಾಜನೇ ಏಕೆ ಇಷ್ಟು ಮನ್ನಣೆಗೆ ಪಾತ್ರನಾಗಬೇಕು?' ಇತ್ಯಾದಿಯಾಗಿ ಯುವ ರಾಜನ ವಿಷಯಕವಾಗಿ ಭಿನ್ನ ಭಿನ್ನ ಅಭಿಪ್ರಾಯಗಳುಂಟಾಗುವವು. ಜಗತ್ತಿನಲ್ಲಿ ಹಣ ಪದವಿಗಳ ಮೋಹ ಅತಿ ಬಲವತ್ತರವಾದುದು. ಇವುಗಳಾಸೆಯಿಂದ ಭೀಕರ ಅನರ್ಥಗಳು ನಡೆದು ಹೋಗುತ್ತವೆ. ಎಂತಹ ಸುಶಿಕ್ಷಿತನಿರಲಿ, ಸುವಿಚಾರಿಯಿರಲಿ. ಎಂತಹನಿದ್ದರೂ ಸ್ವಾರ್ಥಬಲೆಗೆ ಸಿಲುಕಿದರಾಯಿತು. ಅವನ ಬುದ್ಧಿಮತ್ತೆಗೆ ಗೆದ್ದಲು ಹತ್ತುತ್ತದೆ. ಅವನ ಚತುರ ಮತಿ ಜಂಗುತ್ತಿನ್ನುತ್ತದೆ. ಇದರಲ್ಲಿ ಸ್ತ್ರೀವಿಷಯವೊಂದು ಬೆರೆತರಾಯಿತು. ಅಗ್ನಿಗೆ ಗಾಳಿಯ ಸಹಾಯವೊದಗಿದಂತಾಗುತ್ತದೆ. ವಿರೂಪಾಕ್ಷನು ಜಾತ್ಯಾ ದುಷ್ಟನಲ್ಲ. ಚಿಕ್ಕತನದಿಂದಲೂ ಯುವರಾಜನನ್ನು ಬಂಧು ಭಾವದಿಂದ ಕಾಣುತ್ತಲಿದ್ದನು. ಆಗ್ಗೆ ಜಗತ್ತಿನ ರೀತಿ-ನೀತಿಗಳ ಪರಿಚಯವಿರಲಿಲ್ಲ. ಮಾನ-ಪದವಿಗಳ ಅರಿವಾಗಿರಲಿಲ್ಲ. ಮೇಲು-ಕೆಳಗುಳಗಳ ತಾರತಮ್ಯವಿರಲಿಲ್ಲ. ಬೆಳೆಯುತ್ತ ಹೋದಂತೆ ಸತ್ಯಸೃಷ್ಟಿಯ ಜ್ಞಾನವೂ ಬೆಳೆಯತೊಡಗಿತು. ಯುವರಾಜ ಮತ್ತು ತಾನು ಸರಿಸಮಾನರು, ಬಂಧು ಗಳು, ಮಿತ್ರರು ಎಂದು ನಂಬಿಕೊಂಡಿದ್ದ ಅವನಿಗೆ ತಮ್ಮಿರ್ವರಲ್ಲಿದ್ದ ಅಂತರದ ಕಲ್ಪನೆ ಬರತೊಡಗಿತು. ಯುವರಾಜನು ತನ್ನಗಿಂತಲೂ ನೂರಾರು ಪಟ್ಟು ಹೆಚ್ಚು ಮನ್ನಣೆ ಪಡೆ ದವನು. ಅವನ ಒಡನಾಡಿ, ಅವನ ಬಂಧು, ಅವನ ಮಿತ್ರನೇ ಆದ ತಾನು ಅವನ ತುಲನೆಯಲ್ಲಿ ನೋಡಿದರೆ, ಅದೆಷ್ಟು ಕೀಳನು! ಯುವರಾಜನೆಂದರೆ ಜನರು ಭಕ್ತಿಭಾವ ದಿಂದ ಕೈ ಮುಗಿವರು. ಸಾಷ್ಟಾಂಗವಾಗಿ ವಂದಿಸುವರು. ಕರ್ನಾಟಕದ ಭಾವೀ ಸಮ್ರಾಟ ನೆಂದು ಹೊಗಳುವರು. ಬೇಕಾದಹಾಗೆ ಮನ್ನಿಸುವರು; ಆದರೆ ತನ್ನ ಪಾಲಿಗೆ? ಯುವ ರಾಜನಿಗೆ ದೊರೆಯುತ್ತಲಿದ್ದ ಮನ್ನಣೆಯಲ್ಲಿ ನೂರರಲ್ಲೊಂದು ಪಾಲು ಕೂಡಾ ಸಿಕ್ಕುತ್ತಲಿರಲಿಲ್ಲ.

ಇಂತಹ ಸನ್ನಿವೇಶಗಳು ನಿತ್ಯವೂ ಸಂಭವಿಸುತ್ತಲಿದ್ದವು. ವಿರೂಪಾಕ್ಷನಿಗೆ ಇಂತಹ ಸಂದರ್ಭಗಳಲ್ಲಿ ಮುಂದೆ ಬಂದು ನಿಲ್ಲುವ ಪ್ರಶ್ನೆಯೆಂದರೆ 'ಹೀಗೇಕೆ?' ಎಂಬದೆ. ಈ ಜನರು ಅವನಲ್ಲಿನ ಯಾವ ಮಹತಿ ಕಂಡರು? ಅವನ ಯೋಗ್ಯತೆ ಹೇಗೆ ಅಳೆದರು? ಮನುಷ್ಯನ ಯೋಗ್ಯತೆಯನ್ನಳೆಯುವ ಮಾಪಾವುದು? ನಿಜವಾಗಿ ನೋಡಿದಲ್ಲಿ ಇಷ್ಟು ಮನ್ನಣೆ ಪಡೆವಂತಹ ಯೋಗ್ಯ ಪುರುಷ ಯುವರಾಜನಲ್ಲವೆಂಬದೇ ಆತನ ನಂಬುಗೆ. ಆದರೂ ಮನ್ನಿಸುವದೇಕೆ? ಕೋಟ್ಯಾವಧಿ ಜನರೂ ಮೂರ್ಖರು ಬೇರೆ ಇರಲಾರರಷ್ಟೆ? ನೂರರಲ್ಲಿ ನೂರಿಲ್ಲದಿದ್ದರೂ, ಹತ್ತು ಜನರಾದರೂ ತಿಳಿದವರಿಲ್ಲವೆ? ಆ ತಿಳಿದವರೂ ಯುವರಾಜನನ್ನೇ ಹೊಗಳಬೇಕಾದರೆ ಬಾಹ್ಯಕಾರಣವೊಂದಿರಬೇಕಲ್ಲವೆ? ಅದಾವುದು?

ಇಂತಹ ಭಿನ್ನ ಭಿನ್ನ ವಿಚಾರಗಳು ಸಿಂಹಳದ್ವೀಪದ ದಂಡಯಾತ್ರೆಯಿಂದ ಮರಳಿ ಬಂದಾಗಿನಿಂದಲೂ ಬರುತ್ತಲಿದ್ದುವು. ಅದರಲ್ಲಿ ಹೇಮಾಂಬಿಕೆಯೊಬ್ಬಳ ಸಂಬಂ ಧವಂತೂ ಅವನ ತಲೆಗೆ ವಿಶ್ರಾಂತಿಯನ್ನೇ ಕೊಡುತ್ತಲಿರಲಿಲ್ಲ.

'ಹೇಮಾಂಬಿಕೆ, ಅದೆಷ್ಟು ಸುಂದರಿಯಿರುವಳು? ಅದೆಂತಹ ಸುಗುಣಿಯು? ಅದೆಷ್ಟು ಚದುರೆ? ನಿಜವಾಗಿಯೂ ಹೇಮಾಂಬಿಕೆಯೆಂದರೆ, ಕನ್ನಡ ಸಾಮ್ರಾಜ್ಯಕ್ಕೊಬ್ಬ ಮಾದರಿಯಾಗಿರುವಳು. ಆಕೆಯ ಮನವ್ಪೊಲಿಸುವ ಮಮತೆಯ ಮಾತುಗಳೇನು? ಸುಹಾಸದಿಂದ ತುಂಬಿ ಹೋದ ಮುಖಮುದ್ರೆಯೇನು? ಭಾಪು! ಭಾಪು! ಬ್ರಹ್ಮದೇವಾ, ನೀನಾಕೆಯನ್ನು ನಿರ್ಮಿಸುವಲ್ಲಿ ನಿನ್ನಾ ಚಾತುರ್ಯವನ್ನೆಲ್ಲ ವೆಚ್ಚ ಮಾಡಿರುವೆ. ಅಂತಹ ಒಂದೊಂದು ಮಾದರಿಯನ್ನು ನೀನು ಸಿದ್ಧಗೊಳಿಸದಿದ್ದರೆ, ನಿನ್ನಾ ಜಾಣ್ಮೆಯ ಅರಿವು ಅನೇಕರಿಗಾಗುವದೆಂತು? ಹೇಮಾಂಬಿಕೆಯನ್ನು ನೋಡಿದರೆ, ಲಕ್ಷಾವಧಿ ಸ್ತ್ರೀಯರು, ತೇಜೋಹೀನರೂ, ಕುರೂಪಿಗಳೂ, ತಿಳಿಗೇಡಿಗಳೂ ಆಗಿ ತೋರುವದರಲ್ಲಿ ಸಂದೇಹವಿಲ್ಲ; ಆದರೆ-ಆದರೆ ಅಂತಹ ಅದ್ವಿತೀಯ ಸ್ತ್ರೀರತ್ನವಾರ ಪಾಲಿಗೆ? ನನಗವಳು ದೊರೆಯದಿರಲು ಕಾರಣವೇನು? ಹೇಮಾಂಬಿಕೆಯಂತಹ ಚತುರೆಯನ್ನು ಲಕ್ಷಾವಧಿ ಪುರುಷಶ್ರೇಷ್ಠರು ತಲೆಯಲ್ಲಿಟ್ಟು ನರ್ತಿಸಲು ಸಿದ್ಧರಿರಲು, ಯುವರಾಜನ ಸಲುವಾಗಿಯೇ ಹಂಬಲಿಸುವದೇಕೆ? ಆತನ ಪ್ರೇಮಸಂಪಾದನೆಗೆ ಹಾತೊರೆಯುವದೇಕೆ? ಯುವರಾಜನಂತಹ-ಆತನಿಗೂ ಮಿಗಿಲಾದ ಪುರುಷರು ಅನೇಕರಿರಲು, ಆತನ ಸಲುವಾಗಿಯೇ ತನ್ನ ತನು-ಮನಗಳನ್ನು ಮೀಸಲಿಡುವುದೇಕೆ? ಹೇಮಾಂಬಿಕೆ ಒಳ್ಳೇ ಚತುರೆಯು. ಕೌಶಲ್ಯ ಕಲಿಯಬೇಕಾದರೆ, ಆಕೆಯಲ್ಲಿಯೇ. ಮನುಷ್ಯರ ಪರೀಕ್ಷೆಯನ್ನಂತು ಯಥಾರ್ಥವಾಗಿ ಮಾಡಬಲ್ಲಳು. ಅನೇಕರ ಯೋಗ್ಯತೆಯನ್ನು ಅರೆನಿಮಿಷದಲ್ಲಿ ಅರಿಯುವಳು. ಇಂತಹ ಬುದ್ಧಿವತಿಯಾದ ಅವಳನ್ನೂ ಆಕರ್ಷಿಸುವಂತಹ ಅತ್ಯುತ್ಕೃಷ್ಟ ಗುಣವಾವುದು ಯುವರಾಜನಲ್ಲಿದೆ? ಒಂದಾವುದೋ ಕಾರಣವಿರಬೇಕಲ್ಲವೆ? ಅದಿಲ್ಲದೆ ಹೇಮಾಂಬಿಕೆಯೆಂದೂ ಮರಳಾಗಲಾರಳು. ಅಂತಹ ಕಾರಣವಾವುದು?''

ಹೀಗೆ ಮತ್ತೆ ಯುವರಾಜ ಮಹತಿಗೆ ಮುಖ್ಯವಾದ ಕಾರಣವನ್ನು ಕಂಡುಹಿಡಿಯಲೆತ್ನಿಸುವನು: ಆದರೆ ಅದನ್ನವನರಿಯದಿರಲಿಲ್ಲ.

'ಈ ಜನರಿಗೆ ಹುಚ್ಚು ಹಿಡಿಸಿದುದೂ, ಹೇಮಾಂಬಿಕೆಗೆ ಮೋಹವನ್ನುಂಟುಮಾಡಿದುದೂ ಯೌವರಾಜ್ಯಪದವೇ ಅಲ್ಲವೆ? ಆತ ಈಗ ಯುವರಾಜ, ಮುಂದೆ ಸಮ್ರಾಟ್ ಎಂದೇ ಅಲ್ಲವೆ ಇವರೆಲ್ಲರೂ ಇಷ್ಟು ಆತನನ್ನು ಹೊಗಳುವುದು? ಯುವರಾಜನಾಗಿರುವನು. ಮುಂದೆ ಕರ್ನಾಟಕದ ಸಾರ್ವಭೌಮನಾಗುವವನು ತಾನು ಕರ್ನಾಟಕದ ಸಮ್ರಾಜ್ಞಿಯಾಗುವೆನು, ಎಂದೇ ಅಲ್ಲವೆ ಹೇಮಾಂಬಿಕೆ ಅವನನ್ನಷ್ಟು ಆದರಿಸುವದು? ಅಯ್ಯೋ! ಪದವಿಯೇ? ಎಂತೆಂತಹರನ್ನು ನಿನ್ನ ವ್ಯಾಮೋಹಕ್ಕೆ ತೊಡಗಿಸಿದೆಯಲ್ಲ! ಹೇಮಾಂಬಿಕೆಯಂತಹಳನ್ನೇ ಮರುಳು ಮಾಡಿದ ನಿನ್ನ ಶಕ್ತಿಯೇ ಶಕ್ತಿ! ನಿನ್ನ ಬಲವೇ ಬಲ! ಭಾಪು! ಭಾಪು! ಯುವರಾಜ, ನೀನೇ ಧನ್ಯನು. ಇನ್ನಾವುದೂ ಅಂತಹ ಶ್ರೇಷ್ಠತೆಯಿಲ್ಲದೆ ಇದ್ದರೂ, ನೀನು ಆಳುವ ದೊರೆಯ ಉದರದಲ್ಲಿ ಜನಿಸಿದೆ. ಅದೊಂದರ ಬಲದಿಂದ ಬೇಕೆಂದುದೆಲ್ಲವೂ ಬೇಡದೆ ಬಂದೊದಗುತ್ತದೆ.

ಕಲಾವಂತರೂ, ಪಂಡಿತರೂ, ಜಾಣರೂ, ವಾಗ್ಮಿಗಳೂ ಎಂದು ಹೇಳಿಕೊಳ್ಳುವಂತಹ ರೆಲ್ಲ ನಿನ್ನೆದುರು ಕೈಜೋಡಿಸಿಕೊಂಡು ನಿಲ್ಲುವರು. ವಿಶಾಲಕರ್ನಾಟಕ ಸಾಮ್ರಾಜ್ಯ ನಿನ್ನ ಶಬ್ದವನ್ನು ಪಾಲಿಸಲು ದಕ್ಷವಾಗಿರುತ್ತದೆ. ಹೇಮಾಂಬಿಕೆಯಂತಹ ಅದ್ವಿತೀಯ ಸ್ತ್ರೀರತ್ನ ಕೂಡ ನಿನ್ನಗೋಸುಗ ತಪಸ್ಸು ಮಾಡಬೇಕಾಯಿತು. ದುರುಳ ವಿಧಿಯೇ-ನಿನ್ನ ದೌಷ್ಟ್ಯವಾದರೂ ಎಷ್ಟು? ಯುವರಾಜನ ಸ್ಥಳದಲ್ಲಿ ನನ್ನನ್ನಿರಿಸಬಾರದಿತ್ತೇ? ಇಲ್ಲವೆ ಆಳುವ ದೊರೆ ನಮ್ಮ ತಂದೆಯಾಗಬಾರದಿತ್ತೆ? ಸಕಲ ಸಾಮ್ರಾಜ್ಯ, ಸಕಲ ಸ್ವರ್ಗಸೌಖ್ಯ-ಮುಖ್ಯವಾಗಿ ಹೇಮಾಂಬಿಕೆ-ನನ್ನ ಸಲುವಾಗಿ ದಾರೀಕಾಯುತ್ತಲಿರುತ್ತ ಲಿದ್ದುವು--ದೇವಾ! ಎಂತಹ ಪಕ್ಷಪಾತಿ ನೀನು? ಯಾವ ಹೆಚ್ಚಿನ ಮಹತಿಯಿಲ್ಲ ದಿದ್ದರೂ, ಯುವರಾಜ ಸ್ವರ್ಗಸೌಖ್ಯ ಸೂರೆಗೊಳ್ಳಬೇಕು; ಆತನ ಜೊತೆಗಾರನೇ ಆದ ನಾನು ನರಕಯಾತನೆ ಭೋಗಿಸಬೇಕು, ಇದೆಯೋ ನಿನ್ನ ಮನೆ ನ್ಯಾಯವು?'

ಹೀಗೆ ಒಂದೇಸವನೆ ಮನಸ್ಸು ಯೋಚನಾಮಗ್ನವಾಗಿದ್ದಿತು. ಒಮ್ಮೆ ದೈವ ವನ್ನು ದೂಷಿಸಿದರೆ ಇನ್ನೊಮ್ಮೆ ದೇವನನ್ನೇ ಹಳಿಯುವ; ಒಮ್ಮೆ ದೈನ್ಯದಿಂದ ಪ್ರಾರ್ಥಿ ಸಿದರೆ ಇನ್ನೊಮ್ಮೆ ದುಃಖದಿಂದ ಮೊರಯಿಡುವ; ಒಮ್ಮೆ ನಿರಾಶೆಯಿಂದ ನಕ್ಕರೆ ಮತ್ತೊಮ್ಮೆ ಆಸೆಯಿಂದೀಕ್ಷಿಸುವ. ಅಂದು ಅವನ ಅವಸ್ಥೆ ಅತ್ಯಂತ ಶೋಚನೀಯವಾಗ ದ್ದಿತು. ಜೀವನವೇ ತುಚ್ಛವಾಗಿ ಕಾಣುತ್ತಲಿದ್ದಿತು.

ಅವನನ್ನು ಇಷ್ಟು ಕಷ್ಟಕ್ಕೆ ನೂಕಲು ಒಂದು ಸಂಗತಿ ಸಂಭವಿಸಿದ್ದಿತು. ಆ ಸಂಗತಿಯು ಅವನ ಹೃದಯದಲ್ಲಿ ಮೂಡಿ ಹೋಗಿದ್ದಿತು.

ಎರಡು ದಿನಗಳಿಗೆ ಮೊದಲು ವಿರೂಪಾಕ್ಷ ತನ್ನ ತಾಯ ಬಳಿಯಲ್ಲಿ ಹೋಗಿ ದ್ದನು. ಆಗ್ಗೆ ಅವನ ತಾಯಿ ದುಃಖಿಸುತ್ತ ಕುಳಿತುದು ಕಾಣಬಂದಿತು. ತಾಯಿಯ ಕಂಬನಿ ಕಾಣುತ್ತಲೆ, ಅವನ ಹೃದಯದಲ್ಲಿ ಕಳವಳವುಂಟಾಯಿತು. ಅವನು ತಾಯಿಯ ಬಳಿಗೆ ಹೋಗಿ ದುಃಖದ ಕಾರಣವನ್ನು ವಿಚಾರಿಸಿದನು.

ತಾಯಿ:-ಮಗು, ಮಾನಹೀನಳಾಗಿ ಬದುಕುವುದಕ್ಕಿಂತ ಮರಣವೇ ಲೇಸಲ್ಲವೆ?

ವಿರೂಪಾಕ್ಷ:—ಅಮ್ಮಾ, ಅಂತಹ ಮಾನಹಾನಿಕರ ಸಂಗತಿಯೇನು ಸಂಭವಿ ಸಿತು?

ತಾಯಿ:-ಮಗು, ಏನು ಸಂಭವಿಸಿದರೇನು? ಸಂಪಾತಿಯಿತ್ತ ಗತಿಯದು. ಆತನೇ ನಾವು ಮಾನಗೇಡಿಗಳಾಗಿ ಬಾಳಬೇಕೆಂದು ನಿಯಮಿಸಿದ್ದರೆ ಬಿಡಿಸುವವರಾರು?

ವಿರೂ:—ಅಮ್ಮಾ, ಹೀಗೇಕನ್ನುವೆ?

ತಾಯಿ:—ಹಾಗಾದರೆ ಏನು ಮಾಡಲಿ? ಈ ವಿಜಯನಗರದ ರಾಜಮನೆತನದ ಸಂಬಂಧವಿಲ್ಲದೆ ಇನ್ನೆಲ್ಲಾದರೂ ಒಂದು ಬಡ ಮನೆತನದಲ್ಲಿ ಹುಟ್ಟಿಸಿದ್ದರೆ, ನಾವು ಎಷ್ಟೋಮಟ್ಟಿಗೆ ನೆಮ್ಮದಿಯಾಗಿರಬಹುದಿತ್ತು. ಈ ರಾಜಸಂಬಂಧದಲ್ಲಿ ಹುಟ್ಟಿಸಿಯೂ ನಮ್ಮನ್ನು ಇಂತಹ ಅಪಮಾನಕ್ಕೆ ಗುರಿಮಾಡಬೇಕೆಂದರೆ, ನಾನಾದರೂ ಏನು ಮಾಡಲಿ?

ವಿರೂ:—ಅಮ್ಮಾ, ಆದ ಸಂಗತಿಯಾದರೂ ಏನು?

ತಾಯಿ:—ವಿರೂಪಾಕ್ಷ, ನೀನು ಪೊನ್ನಲದೇವಿಯ ಹೊಟ್ಟೆಯಲ್ಲಾದರೂ ಹುಟ್ಟ ಬಾರದಿತ್ತೆ? ಶೂರನಿರುವೆ, ಚತುರನಿರುವೆ, ಜಾಣನಿರುವೆ; ಆದರೆ ಅದೆಲ್ಲವೂ ಹೊಳೆ ಯಲ್ಲಿನ ಹೋಮದಂತಾಗಿದೆ. ನನ್ನಂತಹ ಅಧಮಳ ಉದರದಲ್ಲಿ ಏಕೆ ಜನಿಸಿದೆ?

ವಿರೂ:—ಅಮ್ಮಾ, ಸುಮ್ಮನೆ ಹೀಗೇಕೆ ಮನಸ್ಸಿಗೆ ತಾಪಮಾಡಿಕೊಳ್ಳುವೆ? ನಡೆದ ಸಂಗತಿಯಾದರೂ ಏನು ಹೇಳು?

ತಾಯಿ:—ಇಂದು ಪಂಪಾಪತಿಯ ದರುಶನಕ್ಕೆಂದು ಹೋಗಿದ್ದೆನು.

ವಿರೂ:—ಅಗ್ಗೆ ಏನಾಯಿತು?

ತಾಯಿ:—ಅಲ್ಲಿ ಅನೇಕ ಪಟ್ಟಣವಾಸಿಗಳು ನೆರೆದಿದ್ದರು. ಪೊನ್ನಲದೇವಿಯೂ ಅಲ್ಲಿಯೇ ಇದ್ದಳು. ಆಗ್ಗೆ ಅವರೆಲ್ಲರೂ ಯುವರಾಜನ ಸ್ತುತಿಯನ್ನೇ ಮಾಡುತ್ತ ಲಿದ್ದರು. ನೀನಾದರೂ ಅದೆಷ್ಟೋ ಕೆಲಸ ಮಾಡಿದ್ದರೂ ಒಂದು ಸಲವಾದರೂ ನಿನ್ನ ಹೆಸರು ತೆಗೆಯಬೇಡವೆ?

ವಿರೂ:—ತೆಗೆಯದಿದ್ದರಿಲ್ಲ. ಅವರು ಅಂದರೇನಾಗಬೇಕಾಗಿದೆ?

ತಾಯಿ:—ವಿರೂಪಾಕ್ಷ, ನೀನು ತಾಯಿಯ ತಳಮಳವರಿಯೆ. ಮಗನು ದಡ್ಡನೇ ಇದ್ದ ಪಕ್ಷದಲ್ಲಿ ಅಷ್ಟೊಂದು ಯೋಚನೆಗೆ ಕಾರಣವಿರುವದಿಲ್ಲ. ಮಗನು ಮೇಲ್ತರ ಗತಿಯ ಜಾಣನೂ, ಶೂರನೂ, ಚತುರನೂ ಇದ್ದರೂ ಆವನಿಗೆ ಕೀರ್ತಿಯಿಲ್ಲವಾದರೆ, ಅದರಿಂದ ಆ ತಾಯಿಯ ತಳಮಳ ಬಹಳವಾಗುವುದು.

ಆ ತಳಮಳ ವಿರೂಪಾಕ್ಷನಿಗೇನು ಕಡಿಮೆಯಿರಲಿಲ್ಲ. ಹಗಲೂ ಇರುಳೂ ಒಂದೇಸಮನೆ ಯೋಚಿಸುತ್ತಲಿದ್ದನು. ತಾನೆಷ್ಟು ಯತ್ನಿಸಿದರೂ ತನಗೆ ಯಶಸ್ಸಿನ ಅಲ್ಪಾಂಶವಾದರೂ ಸಿಕ್ಕದೆ, ಎಲ್ಲವೂ ಯುವರಾಜನಿಗೇ ಹೋಗುವದನ್ನು ನೋಡಿ, ಅವನಿಗೆ ಬಹಳ ದುಃಖವಾಗುತ್ತಲಿದ್ದಿತು. ಮನಸ್ಸು ಅತ್ತ ಹೋಗುವದನ್ನು ತಡೆ ಗಟ್ಟಲು ಬಹಳವಾಗಿ ಯತ್ನಿಸಿದನು; ಆದರೆ ಅಲ್ಲೊಂದು ಅತ್ಯಾಕರ್ಷಕವಾದ ಶಕ್ತಿ ಯಿದ್ದಿತು. ಆ ಶಕ್ತಿಯು ತನ್ನ ಬಲದಿಂದ ಎಲ್ಲವನ್ನೂ ತನ್ನತ್ತವೇ ಎಳೆಯುತ್ತ ಲಿದ್ದಿತು. ಅದೇ ಯುವರಾಜಪದ. ಆ ಯುವರಾಜ ಪದದ ಬಲದಿಂದ ಯುವರಾಜ ನಿಗೆ ಸಕಲವೂ ಸಾಧಿಸುತ್ತಲಿದ್ದಿತು. ಅವನು ಬೇಕೆಂದು ಬಯಸದಿದ್ದರೂ ಸಕಲ ಸುಖ-ಸಾಧನಗಳು ಅವನೆದುರು ರಾಶಿಗಟ್ಟುತ್ತಲಿದ್ದುವು. ವಿರೂಪಾಕ್ಷನಿಗೆ ತಾಯಿಯ ಮಾತು ಪೂರ ನಾಟಿತು. ತನ್ನಂತಹ ಮಗನನ್ನು ಹೆತ್ತರೂ ತಾಯಿಗೆ ದುಃಖವೇನೂ ತಪ್ಪ ಲಿಲ್ಲವೆಂದು ಅವನಿಗೆ ಬಹಳ ಸಂಕಟವಾಯಿತು. ತನ್ನನ್ನು ಒಂಬತ್ತು ತಿಂಗಳು ಹೊತ್ತ ತಾಯಿಯ ಬಸಿರು ವ್ಯರ್ಥವಾಯಿತೆಂದು ತನ್ನನ್ನೇ ಧಿಃಕರಿಸಿಕೊಂಡನು. ಅವನ ಮನಸ್ಸಿನಲ್ಲಿ ಅತಿಯಾಗಿ ತಾಪವಾಗತೊಡಗಿತು. ಅವನ ಮನದ ತಳಮಳವು ಮೊಗದಲ್ಲಿ ಚನ್ನಾಗಿ ಮೂಡಿತು. ಮೊಗವು ಕಳೆಗುಂದಿತು. ತುಟಿಗಳು ಕಂಪಿಸ ಹತ್ತಿದುವು. ಮೊಗವು ಕೆಂದಾಯಿತು. ಕಣ್ಣಲ್ಲಿ ಕೆಂಗಳೆ ಎರಸಿತು. ಉಸಿರು ದಟ ವಾಯಿತು.

ಮಗನಲ್ಲಾದ ಮಾರ್ಪಾಟು ಆಕೆಗೆ ತಿಳಿಯಿತು. ಅದರಿಂದ ಆಕೆಗಾದರೂ ಬಹಳ ತಳಮಳವಾಯಿತು. ಮಗನು ದುಃಖಿಯಾಗಬೇಕು, ಮಗನ ಮನ ತಳಮಳಗೊಳ್ಳಬೇಕು, ಎಂದು ಯಾವ ತಾಯಿಯಾದರೂ ಬಯಸಬಹುದೆ? ಎಲ್ಲರಂತೆ ಆಕೆಯಾದರೂ ಮಗನ ಸುಖವನ್ನು, ಮಗನ ಕೀರ್ತಿಯನ್ನು, ಮಗನ ಮೇಲ್ಮೆಯನ್ನು ಕಾಣಬೇಕೆಂದು ಬಯಸುತ್ತಲಿದ್ದಳು; ಆದರೆ ಆಕೆಯ ಬಯಕೆ ಮೃಗಜಲದಂತೆ ಮುಂದೆ ಮುಂದೆ ಹೋಗಿ ಮೆಲ್ಲನೆ ಬಯಲಾಗತೊಡಗಿತು. ಅದರಿಂದಲೇ ಆಕೆ ಅಷ್ಟು ಕಷ್ಟಕ್ಕೆ ಗುರಿಯಾದಳು. ಆ ವರೆಗೂ ಮಗನೆದುರು ಒಂದು ಶಬ್ದವನ್ನಾದರೂ ತೆಗೆದಿರಲಿಲ್ಲ; ಆದರೆ ಎಷ್ಟುದಿನ ಮುಚ್ಚುವಳು? ಒಂದೆರಡು ದಿನ, ನಾಲ್ಕಾರುದಿನ ಹೇಗಾದರೂ ಮಾಡಬಹುದು. ಆದರಿದು ಮುಗಿವ ಮಾತಾಗಿರಲಿಲ್ಲ. ಅಂತೆಯೇ ತನ್ನ ದುಃಖಕ್ಕೆ ಅಂದು ದಾರೀ ತೋರಿಸಿದಳು. ಆದರದಿಂದ ವಿರೂಪಾಕ್ಷನಿಗೆ ಬಹಳ ನೋವೆನಿಸಿತು.

ತಾಯಿ:—ಮಗು ವಿರೂಪಾಕ್ಷ, ಇದರಿಂದ ನೀನೇನೂ ನೊಂದುಕೊಳ್ಳಬೇಡ. ಯಾರು ಮಾಡುವದೇನಿದೆ? ಪಂಪಾಪತಿಯ ಇಚ್ಛೆಯಂತೆಯೇ ಎಲ್ಲವೂ ನಡೆಯುತ್ತಲಿದೆ; ಮತ್ತು ಅದು ಹಾಗೆ ನಡೆಯಲೇ ಬೇಕು. ಅದಕ್ಕೆ ಪ್ರತಿಹೇಳಲು ಶಕ್ತರಾರು?

ಆದರೆ ವಿರೂಪಾಕ್ಷನ ಮುಖದಿಂದ ಮಾತುಗಳೇ ಹೊರಡದಾದುವು. ದುಃಖಾತಿರೇಕದಿಂದ ಅವನ ಮನವು ಕಾತರಗೊಂಡಿತು. ಹೃದಯ ಕುದಿಯತೊಡಗಿತು. ಇನ್ನೂ ಇಲ್ಲಿಯೇ ಕುಳಿತರೆ ತಾಯಿಗೆ ಹೆಚ್ಚು ಸಂಕಟವಾಗಬಹುದೆಂದು ತಿಳಿದು ತನ್ನ ಸಂಕಟವನ್ನೆಲ್ಲ ತಾತ್ಕಾಲಿಕವಾಗಿ ತಡೆ ಹಿಡಿದು ತಾಯಿಯ ಅಪ್ಪಣೆ ತೆಗೆದುಕೊಂಡು ಹೊರಟನು.

ತಾಯಿಯ ಬಳಿಯಿಂದ ಹೊರಟವನು ನೇರವಾಗಿ ತನ್ನ ಶಯನಮಂದಿರಕ್ಕೆ ಹೋಗಿ ಪರ್ಯಂಕದ ಮೇಲುರುಳಿದನು. ಏಕಾಂತ ದೊರೆತುದರಿಂದ ಅವನ ದುಃಖ ಬಲವತ್ತರವಾಯಿತು.

'ದೈವಗೇಡಿ ವಿರೂಪಾಕ್ಷ, ಭೂಮಿಗೆ ಭಾರವಾಗಿ ಏಕೆ ಹುಟ್ಟಿದೆ? ನಿನಗೆ ಜನ್ಮವಿತ್ತ, ಮೊಲೆವಾಲುಡಿಸಿ ಪಾಲಿಸಿ ಬೆಳೆಯಿಸಿದ ತಾಯಿ ನೋಯುವಂತೆ ನಿನ್ನ ಬಾಳಾಗಬೇಕಿದ್ದರೆ, ನೀನಿದ್ದು ಫಲವೇನು? ನಾಯಿ-ನರಿಗಳಿಗಿಂತಲೂ ನಿನ್ನ ಬಾಳು ಕೀಳಾಯಿತಲ್ಲವೆ? ವ್ಯರ್ಥನೀನು ಮನುಷ್ಯನಾಗಿ ಹುಟ್ಟಿದೆ! ಯಾವದೊಂದು ಕ್ರಿಮಿಕೀಟಕವಾಗಿಯಾದರೂ ಹುಟ್ಟಿದ್ದರೆ ಎಷ್ಟೋ ಲೇಸಾಗಿತ್ತು. ನಿನ್ನನ್ನು ಹೆರುವುದಕ್ಕಿಂತ ನಿನ್ನ ತಾಯಿ ಬಂಜೆಯಾಗಿದ್ದರೆ ಇನ್ನೂ ಚನ್ನಾಗಿತ್ತು. ಧಿಃಕಾರವು! ನಿನ್ನ ಶೌರ್ಯ ವೀರ್ಯಾದಿಗಳಿಗೆ ಧಿಃಕಾರವು! ನಿನ್ನ ಚಾತುರ್ಯ-ಜಾಣತನಗಳು ಮಣ್ಣು ಮುಕ್ಕಿದುವು. ನಿನ್ನ ಬುದ್ಧಿಮತ್ತೆ-ಕೌಶಲ್ಯಗಳು ಹಾಳಾದುವು. ನಿನ್ನ ಜನ್ಮವ್ಯರ್ಥವಾಯಿತು. ಹೋಗು, ಇಂತಹ ಪರಿಯಿಂದ ರಾಜಧಾನಿಯಲ್ಲಿ, ಹಾಸ್ಯಗೈವ ಶತ್ರುಗಳ ಮಧ್ಯದಲ್ಲಿ, ಮಾನ-ಮನ್ನಣೆಗಳಿಲ್ಲದ ಸ್ಥಳದಲ್ಲಿ ಅಪಮಾನಿತನಾಗಿ, ಉಪಹಸಿತನಾಗಿ ಬಾಳುವದಕ್ಕಿಂತ, ಮೃಗಗಳ ಜೊತೆಯಲ್ಲಿ ವನಚರನಾಗಿರು ಹೋಗು. ಹೇಡಿಯೇ, ನೀನಿದ್ದರೂ ಅಷ್ಟೆ ಇಲ್ಲವಾದರೂ

ಅಷ್ಟೇ. ಸತ್ತರೆ ಇನ್ನೂ ಒಳಿತೆ. ಪ್ರತ್ಯಕ್ಷವಾಗಿ ಮಗನಿದ್ದು ಅಪಮಾನಕ್ಕೆ ಗುರಿಯಾಗುವುದಕ್ಕಿಂತ 'ಮಗನಿದ್ದರೆ ಮಾನ ತರುತ್ತಿದ್ದ'ನೆಂಬ ಭಾವದಿಂದಲೇ ನಿನ್ನ ತಾಯಿಗೆ ಎಷ್ಟೋ ಸುಖವೆನಿಸಬಹುದು........'ಇತ್ಯಾದಿಯಾಗಿ ಬಡಬಡಿಸುತ್ತ ಉರುಳಾಡಿದನು. ಕೆಲ ಸಮಯ ಕಳೆಯಲು, ಅವನ ದುಃಖದಾವೇಗ ಕಡಿಮೆಯಾಯಿತು. ಬಡಬಡಿಸುವುದೂ ಶೋಕಿಸುವುದೂ ಕಡಿಮೆಯಾಯಿತು. ಅದರೊಡನೆಯೇ ಮನದಲ್ಲಿ ಬೇರೊಂದು ಕಲ್ಪನೆ ಮೂಡಹತ್ತಿತು.

'ವಿರೂಪಾಕ್ಷ, ನೀನೇನು ಹೇಡಿಯೆ? ಹೆಣ್ಣಿನಂತೆ ಕೈಗಳಲ್ಲಿ ಬಳೆಗಳಿಟ್ಟಿರುವೆಯಾ? ತೊಟ್ಟುದು ವೀರಚಲ್ಲಣವಲ್ಲದೆ ಸೀರೆಯೆ? ಹೇಡಿಯೇ! ಹೇಡಿಯೇ! ಹೆಣ್ಣಿನಂತೆ ಅಳುವದನ್ನೆಲ್ಲಿ ಕಲಿತೆ? ಥೂ! ಹೇಡಿಯೇ, ಏಳು. ಮೈಯ್ಯಲ್ಲಿ ಶಕ್ತಿಯಿಲ್ಲವೆ? ತೋಳಲ್ಲಿ ಬಲವಿಲ್ಲವೆ? ಒಮ್ಮೆ ಗಟ್ಟಿಮನಸ್ಸು ಮಾಡಿ ಏಳು. ವೀರ ಪುರುಷನೀನಿರುವೆ; ತರುಣನೀನಿರುವೆ; ಗಂಡಸು ನೀನಿರುವೆ. ನಿರ್ಧರ ಮನದಿಂದ ಹೆಜ್ಜೆಯಿಕ್ಕಿದರೆ ಭೂಮಿ ನಡುಗುವುದು. ಸಾಗರಗಳು ಕಲಕಾಡುವುವು. ಇಂತಹ ಒಂದೇಕೆ ಹತ್ತು ವಿಜಯನಗರಗಳನ್ನು ಕಟ್ಟುವ ಶಕ್ತಿ ನಿನ್ನಲ್ಲಿರಲು ಹೆಣ್ಣಿನಂತೆ ಹಾಸಿಗೆಯಲ್ಲಿ ಅಳುತ್ತ ಉರುಳಾಡುವೆ....' ಎಂಬ ವಿಚಾರಗಳುಂಟಾದುವು.

ಮನುಷ್ಯ ಸ್ವಭಾವವೇ ಬಲು ವಿಚಿತ್ರವಾದುದು. ಯಾವದೊಂದು ಸಂಗತಿಯ ವಿಷಯಕವಾಗಿ ನಿರಾಶೆಯುಂಟಾಗಲು ಕೈಕಾಲು ಕಳಚಿಯೇ ಹೋಗುತ್ತವೆ. ಧೈರ್ಯ ಮರೆಯೇ ಆಗುತ್ತದೆ. ಹಿಂದು ಮುಂದಿನ ಸುಖದ ಸಮಯಗಳನ್ನೆಲ್ಲ ಮರೆತುಬಿಟ್ಟು ಅನಾದಿಕಾಲದಿಂದ ಅನಂತ ಕಾಲದ ವರೆಗೂ ದುಃಖಕೂಪದ ತಳದಲ್ಲಿ ಮುಳುಗಿರುವವನಂತೆ ನರಳುತ್ತಾನೆ, ಗಡಗಡನೆ ಉರುಳುತ್ತಾನೆ, ಮತ್ತೆ ಮತ್ತೆ ನಿಟ್ಟುಸಿರು ಬಿಡುತ್ತ ಹೊರಳುತ್ತಾನೆ. ಅದೇ ಒಂದೇ ಒಂದು ಎತ್ತಕಡೆಯಿಂದಾದರೂ ಆಶಾಕಿರಣ ಕಾಣಿಸಿದರಾಯಿತು. ಆ ಅನಂತ ದುಃಖವನ್ನೂ ಮರೆತು ಹೊಸ ಹುರುಪಿನಿಂದ ಏಳುತ್ತಾನೆ. ಕ್ಷಣದ ಪೂರ್ವದಲ್ಲಿ ದುಃಖಕೂಪವೇ ಆಶ್ರಯ ಸ್ಥಾನವೆಂದು ಬಗೆದವನು ಸುಖದ ಶಿಖರ ತಲುಪಲು ಟೊಂಕಕಟ್ಟುತ್ತಾನೆ. ಮುಂಪೆ ಹೆಜ್ಜೆಯಿಕ್ಕುತ್ತಾನೆ. ಮತ್ತೆ ಸಂಸಾರದ ಸುಖದ ಸಿಹಿ ಹಣ್ಣು ಸವಿಯಲು ಯತ್ನಿಸುತ್ತಾನೆ.

ತನ್ನ ಶೂರತನಕ್ಕೆ ತಕ್ಕ ಮನ್ನಣೆಯಿಲ್ಲದೆ ಅವನು ಮೊದಲೇ ಕೊರಗಿ ಹೋಗಿದ್ದನು. ಹೇಮಾಂಬಿಕೆಯ ವಿಷಯ ಅವನಿಗೆ ಇನ್ನೂ ನೋವನ್ನುಂಟು ಮಾಡಿದ್ದಿತು. ಇಂತಹದರಲ್ಲಿ ತಾಯಿಯ ದುಃಖವೊಂದು ಕೂಡಲು ಅವನು ಹತಾಶನೇ ಆದನು; ದುಃಖದಿಂದ ಕಂಗೆಟ್ಟು ಮುಂಗಾಣದೆ ಮೂಢನಾದನು; ಕಟುತಮ ಶಬ್ದಗಳಿಂದ ತನ್ನನ್ನು ತಾನೇ ನಿಂದಿಸಿಕೊಂಡನು; ಆರ್ತಸ್ವರದಿಂದ ಪಂಪಾಪತಿಗೆ ಮೊರೆಯಿಟ್ಟನು. ಈ ಸ್ಥಿತಿಯು ಒಂದೆರಡು ತಾಸು ಇರುತ್ತಲೆ ಹೊಸ ಹುರುಪು ಹೊರಹೊಮ್ಮಿತು. ಮತ್ತೆ ಉತ್ತೇಜಿತನಾದನು. ಬಂದ ಎಡರುಗಳನ್ನೆಲ್ಲ ಹೊಡೆದು ಹಾಕಿ ಯಶೋಮಂದಿರವನ್ನು ಕಂಡೇ ತೀರುವೆನೆಂದು ನಿರ್ಧರ ಮಾಡಿದನು. ಕೀರ್ತಿ, ಪದವಿಗಳನ್ನೆಲ್ಲ

ಸಾಧಿಸಿಯೇ ಬಿಡುವೆನೆಂದು ಮೇಲೆದ್ದನು.

ಆಗ್ಗೆ ಸಾಯಂಕಾಲದ ಸಮಯವಾಗಿದ್ದಿತು. ವಿಜಯನಗರದ ಭವ್ಯ ಮಂದಿರ ಗಳ ಮೇಲೆಲ್ಲವೂ ಸೂರ್ಯನ ಹೊಂಗಿರಣಗಳು ಬಿದ್ದುದರಿಂದ ಸೂರ್ಯನಾರಾಯಣ ಕನ್ನಡ ರಾಜದೌದಾರ್ಯಕ್ಕೆ ಸಂತಸಪಟ್ಟು ಪಟ್ಟಣಕ್ಕೆಲ್ಲ ಬಂಗಾರದ ಮರಗು ಹಾಕುವ ಕಾರ್ಯ ಕೈಕೊಂಡಂತೆ ಕಾಣುತ್ತಲಿದ್ದಿತು. ಸಾಯಂಕಾಲದ ಸಮಯವಾದುದರಿಂದ ಅನೇಕರು ತಮ್ಮ ಸಾಯಾಹ್ನಿಕಗಳನ್ನು ಪೂರಯಿಸಲು ನದೀತೀರಕ್ಕೆ ಹೊರಟಿದ್ದರು. 'ಗಂಗಾ ಸ್ನಾನ ತುಂಗಾ ಪಾನ'ವೆಂಬ ಹೇಳಿಕೆ ಪ್ರಸಿದ್ಧವಿದೆ. ತುಂಗಾ ನದಿಯು ನೀರಿನ ಮಾಧುರ್ಯದಲ್ಲಿ ಹೆಸರಾದುದು. ಅಂತಹ ತುಂಗೆಯೇ ವಿಜಯನಗರದ ಜನತೆಗೆಲ್ಲ ನೀರು ಪೂರೈಯಿಸುವ ಕಾರ್ಯವಹಿಸಿದ್ದಳು. ಸಕಲ ಕಲಾಮಂದಿರಗಳೂ ವ್ಯಾಪಾರದ ಸ್ಥಳಗಳೂ ಜನಭರಿತವಾಗಿ ಹೋಗಿದ್ದವು. ಅಲ್ಲಲ್ಲಿಯ ಹೂದೋಟ ಹಣ್ಣು ದೋಟಗಳ ಸೊಬಗನ್ನಂತೂ ಒಂದು ಸಲ ನೋಡಿದರೆ ಕಣ್ಣು ಕಿತ್ತುವಂತಿರಲಿಲ್ಲ. ವಿರೂಪಾಕ್ಷ ಈ ಸುಂದರನಾದ ಇನಿನೋಟವನ್ನು ಮಹಡಿಯ ಮೇಲಿನ ಗವಾಕ್ಷದಿಂದ ನೋಡಿದನು. ಒಂದೆರಡು ಗಳಿಗೆ ಮೊದಲಾಗಿದ್ದರೆ ಆ ನೋಟ ಅವನ ಮನಕ್ಕೆ ನಾಟುತ್ತಲೇ ಇರಲಿಲ್ಲ; ಆದರೆ ಈಗ ಅವನ ಮನ ಉತ್ತೇಜಿತವಾಯಿತು. ಅದು ವರೆಗೆ ಸಿಕ್ಕದಿದ್ದ ಕೀರ್ತಿ-ಮಾನಗಳನ್ನೆಲ್ಲ ವಿಶ್ವಪ್ರಯತ್ನದಿಂದ ದೊರಕಿಸಲೇಬೇಕೆಂದು ನಿರ್ಧರ ಮಾಡಿದ್ದನು. ಅದರಂತೆ ಒಂದಿಲ್ಲೊಂದು ವಿಧವಾಗಿ ಕಾರ್ಯ ಕೈಕೊಳ್ಳುವ ಬಗ್ಗೆಯೂ ನಿರ್ಧರಿಸಿದ್ದನು. ಅಂತೆಯೇ ಅವನ ಮನಸ್ಸು ಅದೆಷ್ಟೋಮಟ್ಟಿಗೆ ಉಲ್ಲ ಸಿತವಾದಂತಾಗಿದ್ದಿತು. ಅವನು ಒಂದು ಬಗೆಯ ಸಂತೋಷದಿಂದ ಹೊರ ಹೊರಡ ಲೆದ್ದನು.

ವಿರೂಪಾಕ್ಷ ಪಟ್ಟಣದ ಬೀದಿಗಳಲ್ಲಿ ಹೊರಟನು. ವಿರೂಪಾಕ್ಷನಿಗೆ ಜನರ ಮನ್ನಣೆ ಅಷ್ಟು ಬಹಳವಾಗಿ-ಸಿಕ್ಕತಕ್ಕಷ್ಟು ಸಿಕ್ಕಲಿಲ್ಲವೆನಿಸಿತು. ಆಗಾಗ್ಗೆ ಜನರು ವಂದಿ ಸುತ್ತಲಿದ್ದರು; ಆದರೆ ಅದರಲ್ಲಿ ಒಂದು ಬಗೆಯ ಉಪಹಾಸ ತುಂಬಿದ್ದಂತೆ ತೋರುತ್ತ ಲಿದ್ದಿತು. ಎಷ್ಟೋ ಅಧಿಕಾರಿಗಳು-ಸರದಾರರು-ಸೆಟ್ಟಿಸಾವುಕಾರರು ಮುಂತಾದವರು ಅಲ್ಲಿ ಹಾಯುತ್ತಲಿದ್ದರು. ಅವರೆಲ್ಲರೂ ವಿರೂಪಾಕ್ಷನನ್ನು ನೋಡಿಯೂ ನೋಡ ದವರಂತೆ ಹೋಗುತ್ತಲಿದ್ದರು. ಅವರನ್ನು ವಿರೂಪಾಕ್ಷನು ಚನ್ನಾಗಿ ನೋಡಿದನು. ಅವರಾ ಹಾಸ್ಯವನ್ನಾಗಲಿ, ಗರ್ವವನ್ನಾಗಲಿ ಅವನರಿತನು. 'ಹೋಗಿರಿ, ಈಗ ನಿಮ ಕಾಲವಿದೆ. ಅಂತೆಯೇ ವಿರೂಪಾಕ್ಷ ನಿಮ್ಮ ಕಣ್ಣಲ್ಲಿ ಕಾಣುವದಿಲ್ಲ. ವಿರೂಪಾಕ್ಷನೆಂದರೆ ಕಸಕ್ಕಿಂತಲೂ ಕಡೆಯೆಂದೆಣಿಸಿರುವಿರಲ್ಲವೆ? ವಿರೂಪಾಕ್ಷನೆಂದರೆ ಕೈಲಾಗದ ಹೇಡಿ ಯೆಂದು ಭಾವಿಸಿರುವಿರಲ್ಲವೆ?-ಇರಲಿ. ನೋಡುವೆ, ಈ ನಿಮ್ಮ ಉದ್ಧಟತನವೆಷ್ಟು ದಿನ ಉಳಿಯುವದೆಂಬದನ್ನರಿಯುವೆನು. ವಿರೂಪಾಕ್ಷ ಕರ್ತೃತ್ವಶಾಲಿಯಿರುವನೆಂದು ಸಿದ್ಧಮಾಡಿಕೊಡುವೆನು. ಅಂಧತನದಿಂದ ಕಣ್ಮುಚ್ಚಿಕೊಂಡಿರುವ ನಿಮ್ಮ ಕಣ್ಣು ಗಳನ್ನು ನಿಚ್ಚಳವಾಗಿ ತೆರೆಯುವೆನು.....' ಮುಂತಾಗಿ ವಟವಟಸುತ್ತ ಸಾಗಿದ್ದನು.

ಹಾಗೆಯೇ ವಿರೂಪಾಕ್ಷ ಮೆಲ್ಲನೆ ಬೇರೆ ಬೇರೆ ಸಂಗತಿಗಳನ್ನು ವಿಚಾರಿಸುತ್ತ ಹೊರಟಿರಲು ಅವನ ಕಾಲುಗಳು ಅವನನ್ನು ಅಂತಃಪುರೋದ್ಯಾನಕ್ಕೆ ಕರೆದೊಯ್ದುವು. ಅಂತಃಪುರೋದ್ಯಾನದ ಶೋಭೆ ಅವರ್ಣನೀಯವಾಗಿದ್ದಿತು. ಚನ್ನಾಗಿ ಪಾಲಿಸಿ, ಪೋಷಿಸಿ, ಬೆಳೆಯಿಸಿದ ಹೂಗಿಡಗಳು ರಮಣೀಯವಾಗಿ ಕಂಗೊಳಿಸುತ್ತಲಿದ್ದುವು. ವಿರೂಪಾಕ್ಷನಿಗಾದರೂ ಉದ್ಯಾನ ಅತೀವ ರಮಣೀಯವಾಗಿ ತೋರಿತು. ಅದರೊಡನೆಯೇ ಆ ಉದ್ಯಾನದ ವಿಷಯಕವಾದ ಪರಕೀಯ ಭಾವವೂ ಉಂಟಾಯಿತು. ಅಲ್ಲಿ ತನಗೆ ಯಾವ ಅಧಿಕಾರವೂ ಇಲ್ಲ. ತನ್ನ ಒಡೆತನದೊಳಗಿನ ಉದ್ಯಾನವು ಅದಲ್ಲವೆಂದಲ್ಲ. ತಾನು ಅಲ್ಲಿ ಪ್ರವೇಶವನ್ನಾದರೂ ಏಕೆ ಮಾಡಬೇಕು? ಆದರೆ ಅಲ್ಪಾವಕಾಶದಲ್ಲಿಯೇ ಸಕಲ ಸಾಮ್ರಾಜ್ಯದ ಒಡೆತನವೇ ಅಸ್ಥಿರವಿದ್ದುದರಿಂದ ಆ ಒಂದು ಚಿಕ್ಕ ಉದ್ಯಾನದ ವಿಷಯಕವಾಗಿ ತಾನೇಕೆ ಯೋಚಿಸಬೇಕು? ಒಂದಿಲ್ಲೊಂದು ವಿಧದಿಂದ ತಾನು ಕಳೆದುಕೊಂಡಿದ್ದ ಕೀರ್ತಿ-ಗೌರವಗಳನ್ನೇ ಮರಳಿ ಪಡೆಯಬೇಕೆಂದಿರುವಾಗ್ಗೆ ಆ ಒಂದು ಉದ್ಯಾನ ತನ್ನದಾಗಲಾರದೇ, ಎಂಬ ಯೋಚನೆ ಬರಲು, ಮೊದಲು ಕಳ್ಳನಂತೆ ಮೆಲ್ಲನೆ ಹೆಜ್ಜೆಯಿಕ್ಕುತ್ತ ಹೊರಟ. ಅವನು ಚನ್ನಾಗಿ ಎದೆ ಸೆಟೆಸಿ ಒಳಹೊಕ್ಕನು. ಮೊದಲು ಹೂ ಕೊಯ್ಯಲು ಅಂಜುತ್ತಲಿದ್ದ ಅವನ ಕೈ ಬೇಗ ಬೇಗ ಹೂ ಕೊಯ್ಯಲಾರಂಭಿಸಿತು. ಹೀಗೆ ಬೇರೆಬೇರೆ ಯೋಚನೆ-ಕಾರ್ಯಕ್ರಮಗಳಲ್ಲಿ ಮಗ್ನನಾಗಿದ್ದ ವಿರೂಪಾಕ್ಷನು ಮತ್ತನಂತೆ ಮುಂದು ವರಿದಿರಲು ಒಂದೆಡೆಯಲ್ಲಿ ಹೇಮಾಂಬಿಕೆ ಕುಳಿತುದು ಕಾಣಿಸಿತು.

ಹೇಮಾಂಬಿಕೆಯನ್ನು ಕಾಣುತ್ತಲೇ ಮೊಗದಲ್ಲಿ ಕ್ರೌರ್ಯ ತಲೆದೋರಿತು. ಆಕೆಯ ಸೌಂದರ್ಯ, ಜಾಣತನಗಳಿಗೆ ತಲೆದೂಗುತ್ತಲಿದ್ದ ಅವನಿಗೆ ಆಗ್ಗೆ ಆಕೆಯ ಬಗ್ಗೆ ಬಹಳ ಸಿಟ್ಟು ಬಂದಿತು. ಯುವರಾಜ ಅಲ್ಲಿರಬಹುದೆಂದು ಅತ್ತಿತ್ತ ಶೋಧಕ ದೃಷ್ಟಿಯಿಂದ ನೋಡಿದನು; ಆದರೆ ಅವನೆಲ್ಲಿಯೂ ಕಾಣಲಿಲ್ಲ. 'ಒಬ್ಬಳೇ ಕುಳಿತು ಇಲ್ಲಿ ಏನು ಮಾಡುತ್ತಲಿರಬಹುದೆ'ಂದು ಯೋಚಿಸಿದನು. ಆಕೆಯ ಮನದಲ್ಲಿ ವಿಚಾರ ನಡೆದಿತು. ಮೊಗದಲ್ಲಿ ಬೇರೆ ಬೇರೆ ಭಾವಗಳು ಮೂಡಿದ್ದಂತೆ ಕಾಣುತ್ತಲಿದ್ದಿತು. ತಿರಸ್ಕಾರ, ಕ್ರೋಧ, ಪ್ರೀತಿಗಳೆಲ್ಲ ಹೇಮಾಂಬಿಕೆಯ ಮೊಗದಲ್ಲಿ ಮೂಡಿ ಮಾಯವಾಗಹತ್ತಿದುವು. ಅದನ್ನು ನೋಡಿ ವಿರೂಪಾಕ್ಷನಿಗೆ ಅಚ್ಚರಿಯೆನಿಸಿತು. 'ಈಕೆಯೇನು ಇಲ್ಲಿ ಅಭಿನಯದ ಅಭ್ಯಾಸಕ್ಕೆ ಕುಳಿತಿರುವಳೋ' ಎಂದು ಇನ್ನೂ ಸೂಕ್ಷ್ಮವಾಗಿ ನಿರೀಕ್ಷಿಸಿದನು. ಹೇಮಾಂಬಿಕೆಯ ಮೊಗಮುದ್ರೆಯಲ್ಲಿನ ಮಾರ್ಪಾಟು ಇನ್ನೂ ಸ್ವಚ್ಛವಾಗಿ ಕಾಣಹತ್ತಿತು. ತನ್ನ ಮತ್ತು ಯುವರಾಜರ ಬಗ್ಗೆ ಆಕೆಯ ಮನದಲ್ಲಿ ವಿಚಾರ ನಡೆದಿರಬೇಕು. ತನ್ನ ಬಗ್ಗೆ ತಿರಸ್ಕಾರ, ಕೋಪಗಳು ಪ್ರಕಟವಾಗುತ್ತಲಿದ್ದು ಯುವರಾಜನ ವಿಷಯಕವಾಗಿ ಪ್ರೇಮಾದರಗಳು ವ್ಯಕ್ತವಾಗುತ್ತಲಿದ್ದುವೆಂದು ನಿರ್ಧರಿಸಿದನು. ಈ ವಿಚಾರದಿಂದ ಅವನ ಮನಸ್ಸು ಇನ್ನೂ ಗಟ್ಟಿಯಾಯಿತು. ನಿಮ್ಮೆಲ್ಲರ ಉದ್ಧಟತನ, ಗರ್ವಗಳಿಗೆ ತಕ್ಕ ಹಂಚಿಕೆ ಬೇಗನೇ ಯೋಜಿಸದಿರೆನೆ'ಂದು ನಿಶ್ಚಯಿಸಿದನು. ತನ್ನ ವಿಷಯಕವಾಗಿ ಆದರವಿಲ್ಲದ ಹೇಮಾಂಬಿಕೆಯ ಬಳಿಗೆ ಹೋಗಲೇ

ಕೂಡದೆಂದು ಯೋಚಿಸಿದನು. ಮರುಕ್ಷಣವೇ ತಾನಾವರೆಗೆ ಹೇಮಾಂಬಿಕೆಯ ವಿಷಯಕವಾಗಿ ತಳೆದ ಭಾವ ಸರಿಯಾಗಿದ್ದಿತೋ ಹೇಗೆ? ಎಂಬದನ್ನು ಪೂರ್ಣ ಮನಗಾಣಬೇಕೆಂದು ಮುಂದೊರೆದನು.

ಮುಂದೆ ಹೋಗಿ 'ಏನು ಹೇಮಾ, ತಪಸ್ಸು ಬಲವಾಗಿದೆ?' ಎಂದು ಕೇಳಿದನು. ಹೇಮಾಂಬಿಕೆ ವಿಚಾರಗಳಲ್ಲಿ ಮುಳುಗಿ ಹೋದವಳು ವಿರೂಪಾಕ್ಷನ ಸ್ವರ ಕೇಳುತ್ತಲೇ ಎಚ್ಚತ್ತಳು. ಹೇಮಾಂಬಿಕೆ ಸುಂದರಿಯೂ, ಚದುರೆಯೂ ಇದ್ದಂತೆ ಕುಶಲಳೂ ಇದ್ದಳು. ಜನರ ಮನೋಭಾವಗಳನ್ನಾದರೂ ಬಹುಬೇಗ ಅರಿಯುತ್ತಲಿದ್ದಳು. ಮೊದಲಿನಿಂದಲೂ ಆಕೆಯ ಸಂಗಡಿಗರೆಂದರೆ ಯುವರಾಜ ಮತ್ತು ವಿರೂಪಾಕ್ಷರು. ಇಬ್ಬರನ್ನೂ ಆಕೆ ಪೂರ್ಣವಾಗರಿತಿದ್ದಳು. ಯುವರಾಜನ ಧೀರ, ಶಾಂತವೃತ್ತಿಯನ್ನು ತಿಳಿದಂತೆ ವಿರೂಪಾಕ್ಷನ ದುರ್ಬಲ ಕ್ಷುಬ್ಧ ಮನೋವೃತ್ತಿಯನ್ನೂ ಅರಿತಿದ್ದಳು. ದಿವಸ ಕಳೆದಂತೆ ಯುವ-ಯುವತಿಯರಿಗೆ ಸಹಜವಾದ ಪ್ರೇಮಭಾವ ಅವರಲ್ಲಿ ವ್ಯಕ್ತವಾಗಹತ್ತಿತು. ಈರ್ವರೂ ಹೇಮಾಂಬಿಕೆಯಲ್ಲಿ ಪ್ರೇಮವುಳ್ಳವರಾದರು; ಆದರೆ ಹೇಮಾಂಬಿಕೆ ಈರ್ವರನ್ನೂ ವಿವಾಹವಾಗಲಾರಳಷ್ಟೆ? ಇಬ್ಬರಲ್ಲೊಬ್ಬರನ್ನು ಆರಿಸಲೇ ಬೇಕಾಗಿದ್ದಿತು. ಸ್ವಾಭಾವಿಕವಾಗಿ ಆಕೆಯ ಮನ ಯುವರಾಜನಲ್ಲಿ ತೊಡಗಿತು. ಅದರಿಂದ ವಿರೂಪಾಕ್ಷನಿಗೆ ಮತ್ಸರವೆನಿಸತೊಡಗಿತು. ಯುವರಾಜನ ಮೈನೆಳಲಾಗಿ ನಡೆಯುತ್ತಲಿದ್ದರೂ ಅವನ ಅಂತರಂಗ ಅಷ್ಟು ಶುದ್ಧವಾಗಿರಲಿಲ್ಲ. ಹೇಮಾಂಬಿಕೆಯಾದರೂ ವಿರೂಪಾಕ್ಷನ ಈ ಸ್ವಭಾವವರಿತಿದ್ದಳು. ವಿರೂಪಾಕ್ಷನ ವಿಷಯಕವಾಗಿ ಪ್ರೇಮವುಂಟಾಗುವದರ ಬದಲು ಆಕೆಯ ಮನದಲ್ಲಿ ತಿರಸ್ಕಾರವುಂಟಾಗತೊಡಗಿತು. ಹೇಮಾಂಬಿಕೆ ವಿರೂಪಾಕ್ಷನ ಸ್ವರ ಕೇಳಿದಳು. ಅವನ ಶಬ್ದಗಳಲ್ಲಿನ ಗೂಢಾರ್ಥವನ್ನೂ ತಿಳಿದಳು. ಮನದಲ್ಲಿ ತಿರಸ್ಕಾರವಿದ್ದರೂ ಮೇಲೆ ಬಾಂಧವ್ಯ ಪ್ರೇಮವನ್ನೇ ವ್ಯಕ್ತಪಡಿಸುತ್ತ ಅಂದಳು: 'ತಪವೆಲ್ಲಿಯದು ಕುಮಾರ, ಹಾಗೆಯೇ ಸುಮ್ಮನೆ ಕುಳಿತಿದ್ದೆನು.'

'ಒಬ್ಬಳೇ ಕುಳಿತಿರುವೆಯಲ್ಲ?'

'ಅಹುದು. ಇಲ್ಲಿ ಯಾರೂ ಇಲ್ಲವೆಂದ ಮೇಲೆ ಒಬ್ಬಳೇ ಸರಿ.'

'ಇಲ್ಲಿ ಯಾರೂ ಏಕೆ ಇಲ್ಲ?'

'ಬಂದಿಲ್ಲವೆಂದು.'

'ಏಕೆ ಬಂದಿಲ್ಲ?'

'ಕೆಲಸವಿರಲಿಕ್ಕಿಲ್ಲ, ಎಲ್ಲರೂ ತಮ್ಮ ತಮ್ಮ ಉದ್ಯೋಗದಲ್ಲಿರಬಹುದು.'

'ಯುವರಾಜನೆಲ್ಲಿ?

'ನಾನರಿಯೆ.'

'ಅಂದರೆ?'

'ಅಂದರೇನು ಕುಮಾರ, ಯುವರಾಜರೇನು ನಾನು ಹೇಳಿದಂತೆ ಕೇಳುವರೆ? ಇಲ್ಲವೆ ಏನನ್ನಾದರೂ ನನ್ನನ್ನು ಕೇಳಿಯೇ ಮಾಡುತ್ತಾರೆಯೆ?'

'ಓಹೋ! ನಾನೆಲ್ಲ ಬಲ್ಲೆ. ಯಾವ ಸಮಯಕ್ಕೆ ನೋಡಿದರೂ ಯುವರಾಜ ಮತ್ತು ಹೇಮಾಂಬಿಕೆಯು ಜತೆ ತಪ್ಪಿರುವದೇ ಇಲ್ಲ.'

'ಹಾಗೇನೂ ಇಲ್ಲ.'

'ನಿಜವಾಗಿ ಹೇಳು, ಹೇಮಾ. ಯುವರಾಜ ಮೇಲಿಂದ ಮೇಲೆ ನಿನ್ನ ಬಳಿಗೆ ಬರುತ್ತಲಿರುವದಿಲ್ಲವೆ?'

'ಬರುತ್ತಲಿರಬಹುದು. ಏಕೆ? ಅದರಲ್ಲೇನಾದರೂ ಅಪರಾಧವಿದೆಯೆ?'

'ಛೆ! ನಾನೆಲ್ಲಿ ಹಾಗೆಂದೆನು; ಆದರೆ ಯಾವಾಗಲೂ ನೀವೀರ್ವರೂ ಅಗಲದಿರುವಿ ರೆಂದರೆ ಸುಳ್ಳೆನ್ನಲಿಲ್ಲವೆ? ಅದಕ್ಕೆಂದು ಕೇಳಬೇಕಾಯಿತು. ಅಷ್ಟೆ?'

'ಅದಕ್ಕೊಂದು ಕಾರಣವುಂಟು. ಯುವರಾಜರಿಗೆ ಸಂಗೀತವೆಂದರೆ ಇಷ್ಟ. ನನಗಾದರೂ ಸಂಗೀತವೆಂದರೆ ಇಷ್ಟವೇ—'

'ಯುವರಾಜನಿಗೆ ಇಷ್ಟವೆಂದು ನಿನಗೂ ಇಷ್ಟವಷ್ಟೆ.'

'ಅಂದರೇನು?'

'ಇನ್ನೇನೂ ಇಲ್ಲ. ಯುವರಾಜನಿಗೆ ಯಾವ ಯಾವ ವಿಷಯಗಳಲ್ಲಿ ಇಷ್ಟ ವುಂಟೋ ಆ ಆ ವಿಷಯಗಳಲ್ಲಿ ನಿನಗೂ ಇಷ್ಟ. ಯುವರಾಜನಿಗೆ ಸಂಗೀತ ಬೇಕು. ನಿನ ಗಾದರೂ ಸಂಗೀತವೇ ಬೇಕು. ಯುವರಾಜನಿಗೆ ಸಾಹಿತ್ಯದಲ್ಲಿ ಅಭಿರುಚಿ ಹೆಚ್ಚು. ನನಗಾದರೂ ಸಾಹಿತ್ಯವೇ ಬಹಳವಾಗಿ ಸೇರುವದುಂಟು.'

'ಅಂದರೇನು? ಕುಮಾರ, ನಿಮ್ಮ ವಿಚಾರ ಒಳ್ಳೇ ವಿಚಿತ್ರವಾಗಿ ತೋರುತ್ತದೆ. ಬೇರೊಬ್ಬರ ಸ್ವಭಾವ, ಚಟಗಳಂತೆ ಯಾರಿಗಾದರೂ ತಮ್ಮ ಸ್ವಭಾವ ಚಟಗಳ ಮಾರ್ಪಾಟು ಮಾಡಲು ಬರುತ್ತದೆಯೆ? ಸ್ವಭಾವತಃ ಪ್ರಾಪ್ತವಾದ ರುಚಿಗಳಾಗಲಿ ಚಟಗಳಾಗಲಿ ಬದಲಿಸಲು ಬರುತ್ತಿದೆಯೇ'

'ಬಾರದೇನು? ತಾತ್ಪೂರ್ತಿಕವಾದರೂ ಬಂದೇ ಬರುತ್ತದೆ.'

'ಅಂದರೆ?'

'ಅಂದರೇನು? ಕಾರ್ಯಸಾಧನೆ'

'ಅದೇನು? ಇಂದೇಕೋ ನಿಮ್ಮ ಮಾತುಗಳು ವಿಚಿತ್ರವಾಗಿ ತೋರುತ್ತವೆ ಕುಮಾರ, ಸ್ಪಷ್ಟವಾಗಿಯಾದರೂ ಕೇಳಿರಿ ನೋಡುವಾ!'

'ಸಹಜವಾಗಿ ಅಂದೆನಲ್ಲದೆ ಇನ್ನೇನೂ ಇಲ್ಲ.'

'ಸಹಜವಾಗಿಯೇ ಆದರಾಗಲಿ; ಆದರೆ ಸ್ವಭಾವ ಹೇಗೆ ಬದಲಿಸ ಬರುತ್ತದೆ? ನೀವೇ ಹೇಳಿರಿ.'

'ಈಗ ಹೀಗೆ ತಿಳಿದುಕೊಳ್ಳು, ಯುವರಾಜನಿಗೆ ಲೆತ್ತದಾಟದ ಮೇಲೆ ಪ್ರೀತಿ ಬಹಳ. ಅಂತಹ ಸಮಯದಲ್ಲಿ, ಅವನ ಮನವಲಿಸಬೇಕೆನ್ನುವವರು, ಪ್ರೀತಿ ಸಂಪಾ ದಿಸಬೇಕೆನ್ನುವರು. ಅವನಿಂದೇನಾದರೂ ಸ್ವಾರ್ಥ ಸಾಧಿಸಿಕೊಳ್ಳಬೇಕೆನ್ನುವರು. ಎಲ್ಲರೂ ಯುವರಾಜನ ಮನಸ್ಸಂತೋಷಾರ್ಥವಾಗಿ ಲೆತ್ತದಾಟದಲ್ಲಿ ತಮ್ಮ ಪ್ರೀತಿ

ತೋರಿಸಬೇಕಾಗುತ್ತದೆ. ಇದು ಜಗತ್ತಿನ ರೀತಿಯೇ ಆಗಿದೆ.'

'ಒಂದು ವೇಳೆ ಜಗತ್ತಿನ ರೂಢಿ ಹಾಗಿರಬಹುದು. ಆದರೆ ನನಗೆ ಯುವರಾಜನ ರುಚಿ-ಸ್ವಭಾವಗಳಂತೆ ನನ್ನ ರುಚಿ-ಸ್ವಭಾವಗಳಲ್ಲಿ ಮಾರ್ಪಾಟು ಮಾಡುವಂತಹ ಸಂದರ್ಭವೇನಿದೆ?'

'ನೀನಾದರೂ ಜಗತ್ತಿನ ಹೊರಗೆ ಇರದೆ ಜಗತ್ತಿನವರಲ್ಲಿಯೇ ಒಬ್ಬಳಾಗಿರುವೆ ಯೆಂದು?'

'ಯುವರಾಜನಿಂದ ನನ್ನ ಅಂತಹ ಯಾವ ಸ್ವಾರ್ಥಸಾಧಿಸಿಕೊಳ್ಳಬೇಕಾಗಿದೆ?'

'ಯುವರಾಜ್ಞಿಪದ.'

'ಹೀಗೋ, ಈಗ ತಾನೇ ನಿಮ್ಮ ಆರಂಭದ ಮಾತಿನ ದಿಶೆ ತಿಳಿಯಿತು.'

'ಮತ್ತು ನಾನು ಅಂದುದರ ಮನವರಿಕೆಯಾಯಿತು.'

'ಅದು ಮಾತ್ರ ಸುಳ್ಳು. ನಾನು ನನ್ನ ಸೇರಿಕೆ-ಚಟಗಳನ್ನೆಲ್ಲ ಯುವರಾಜರ ಚಟ ಅಭಿರುಚಿಗಳಿಗೆ ತಕ್ಕಂತೆ ಮಾರ್ಪಗೊಳಿಸಿರುವೆನೆಂಬದು ಮಾತ್ರ ತೀರ ಸುಳ್ಳು. ಇದುವರೆಗೂ ನನ್ನ ಅಭಿಪ್ರಾಯದಲ್ಲಾಗಲಿ, ಚಟದಲ್ಲಾಗಲಿ, ಅಭಿರುಚಿಯಲ್ಲಾಗಲಿ ಮಾರ್ಪಾಟು ಮಾಡುವ ಸಮಯವಂತೂ ಬಂದಿಲ್ಲ. ಮುಂದಾದರೂ ಬರಲಿಕ್ಕಿಲ್ಲ.'

'ಅದೇನಿದ್ದರೂ ಯುವರಾಜನ ಪ್ರೇಮಕ್ಕೆಂದು ನೀನು ಹಗಲಿರುಳು ಹಾತೊರೆ ಯುತ್ತಲಿರುವುದಾದರೂ ಸರಿಯಷ್ಟೆ?'

'ಯುವರಾಜರಂತಹ, ಧೀರೋದಾತ್ತ, ಕಲಾಪ್ರೇಮಿ, ವಿದ್ವತ್ಪೂರ್ಣ ಪುರುಷನ ಪ್ರೇಮದೊರಕಿಸಲು ಯಾವ ತರುಣಿಯಾದರೂ ಯಾವಾಗಲಾದರೂ ಯತ್ನಿಸುವದು ತೀರ ಸ್ವಾಭಾವಿಕವು. ಶೂರರಿರುವರು, ಚತುರರಿರುವರು, ಧೀರರಿರುವರು, ಕಲಾ ಪ್ರೇಮಿಗಳು-ಒಂದೇ-ಎರಡೇ. ಯಾವಳೊಬ್ಬ ಸುಸಂಸ್ಕೃತ ಸುಂದರಿಯು ಬಯಸುವ ಎಲ್ಲ ಸದ್ಗುಣಗಳೂ ಯುವರಾಜರಲ್ಲಿ ನೆಲೆಗೊಂಡಿವೆ.'

'ಇವೆಲ್ಲವುಗಳಿಗಿಂತಲೂ ಮಹತ್ವವಾದ, ಮತ್ತು ಇವುಗಳಲ್ಲಿ ಒಂದಾಗಲಿ ಎಲ್ಲವೂ ಆಗಲಿ ಇಲ್ಲವಾಗಿದ್ದರೂ ಎಲ್ಲದರಿಂದಲೂ ತುಂಬಿತೋರುವ ಇನ್ನೊಂದು ಅತ್ಯಂತ ಮಹತ್ವ ಆತನಲ್ಲಿದೆ.'

'ಅದಾವುದು?'

'ಅದನ್ನು ನೀನರಿತಿರುವೆ; ಮತ್ತು ನೀನು ಯುವರಾಜನಲ್ಲನ ಈ ಎಲ್ಲ ಸದ್ಗುಣ ಗಳನ್ನು ಕಂಡುಕೊಂಡುದು ಆ ಮಾರ್ಗದಿಂದಲೆ.'

'ಅಂತಹದಾವುದು ಹೇಳಿರಿ ನೋಡುವಾ.'

'ಯುವರಾಜಪದ.'

'ಇದೆಯೋ ನಿಮ್ಮ ಹೇತುವು. ತಿಳಿಯಿತು ತಿಳಿಯಿತು.'

'ಮತ್ತು ನನ್ನ ಮಾತಿನ ಮಥಿತಾರ್ಥ ಹೊಳೆಯಿತು.'

'ಅಹುದು. ಪೂರ್ಣವಾಗಿ ಹೊಳೆಯಿತು. ಕುಮಾರ, ಒಂದು ವೇಳೆ ನೀವು

ಹೇಳುತ್ತಲಿರುವ ಸಂಗತಿ ಸತ್ಯವಿರಬಹುದು. ನೂರಕ್ಕೆ ತೊಂಬತ್ತರಷ್ಟು ಅಥವಾ ಇನ್ನೂ ಹೆಚ್ಚೇ ಜನರು ನೀವು ವಿವರಿಸಿದಂತಹರಿರಬಹುದು; ಆದರೆ ನನ್ನ ವಿಷಯದಲ್ಲಿ ಮಾತ್ರ ನೀವು ತೀರಾ ಮೋಸಹೋಗಿರುವಿರಿ.'

'ಅಂದರೆ ನೀನಾತನ ಯುವರಾಜಪದಕ್ಕೆ ಮೋಹಿಸಿಲ್ಲವೆ?'

'ಇಲ್ಲ, ಎಂದಿಗೂ ಇಲ್ಲ. ನಾನು ಯುವರಾಜರ ಯುವರಾಜಪದಕ್ಕಾಗಿ ಅವರ ಪ್ರೇಮ ಬಯಸುತ್ತಲಿರುವೆನೆಂಬ ನಿಮ್ಮ ಕಲ್ಪನೆ ತೀರ ಸಟಿಯಾಗಿದೆ. ನಾನವರ ಯುವ ರಾಜ ಪದಕ್ಕೆ ಲುಬ್ಧವಾಗಿಲ್ಲವಿಷ್ಟೇ ಅಲ್ಲ; ಆ ಯುವರಾಜಪದಕ್ಕೆ ನನಗೆ ಬೇಸರುಂಟು ಮಾಡುತ್ತದೆ.'

"ಅದೇಕೆ?"

'ಆ ಯುವರಾಜ ಪದದ ತೊಡಕಿನ ಮೂಲಕವಾಗಿಯೇ ನಮಗೆಷ್ಟೋ ಆನಂದ ವನ್ನನುಭವಿಸಲು ಬಾರದಂತಾಗಿದೆ. ಆ ಯುವರಾಜ ಪದವಿಲ್ಲವಾಗಿದ್ದರೆ ನಾವೆಷ್ಟೋ ವಿಷಯಗಳನ್ನು ಚರ್ಚಿಸಬರುತ್ತಲಿದ್ದಿತು; ಸಂಗೀತ ಸೇವಿಸಬರುತ್ತಲಿದ್ದಿತು. ಆ ಒಂದು ಯುವರಾಜ ಪದದ ಮೂಲಕವಾಗಿಯೇ ಯುವರಾಜರ ತಮ್ಮ ಅಭಿರುಚಿಗಳ ನ್ನಾಗಲಿ, ಸೇರಿಕೆಗಳನ್ನಾಗಲಿ ಸರಿಸಿಡಬೇಕಾಗಿದೆ. ನನಗಾದರೋ ಒಂದೊಂದು ಸಲ ಯುವರಾಜ ಬರುವದಾದರೆ ಎಲ್ಲಾದರೊಂದು ಏಕಾಂತ ಗುಹೆಯಲ್ಲಿ, ಅರಣ್ಯಗಳ ಮಧ್ಯದಲ್ಲಿ, ಮೃಗಗಳ ಹಿಂಡಿನಲ್ಲಿ, ನಿಸರ್ಗದಡಿಯಲ್ಲಿ ಕಾಲಕಳೆಯ ಬೇಕೆಂದೆನಿ ಸುತ್ತಲಿದೆ.'

'ಯುವರಾಜಪದವನ್ನು ಬಿಟ್ಟರೆ ಆತನಲ್ಲಿ ನೀನು ಹೇಳುವ ಎಲ್ಲ ಗುಣಗಳೂ ಕೂಡಿದ್ದಂತೆ ನನಗೇನೂ ಕಾಣುವದಿಲ್ಲ.'

'ನಿಜ. ನಿಮಗೆ ಹಾಗೆ ತೋರುವದು ಸಹಜ.'

'ಅಂದರೆ?'

'ಇನ್ನೇನೂ ಇಲ್ಲ, ನಿಮ್ಮ ದೃಷ್ಟಿಗೂ ನಮ್ಮ ದೃಷ್ಟಿಗೂ ಭೇದವಿದೆ.'

'ಅದು ಹೇಗೆ?'

'ನೀವು ನೋಡುವ ದೃಷ್ಟಿಯಲ್ಲಿ ಬೇರೊಂದು ಭಾವ ಅಡಕವಾಗಿರುತ್ತದೆ. ಅದನ್ನು ಬಿಟ್ಟರೂ ನೀವು ನಮ್ಮ ಹಾಗೆ ಎಂದೂ ನೋಡಲಾರಿರಿ.'

'ಅದೇಕೆ?'

'ನಾವು ಪುರುಷರ ಗುಣಗಳ ಪರೀಕ್ಷೆಯಲ್ಲಿಯೇ ಇರುತ್ತೇವೆ. ಅದು ಸ್ತ್ರೀಯರ ಸಹವಾಸದ ಕಲೆ. ಯಾವನೊಬ್ಬ ನಮ್ಮತ್ತ ನೋಡಿದರೆ ಸಾಕು, ಆ ಒಂದು ನೋಟ ದಿಂದಲೇ ನಾವಾತನ ಅಂತರಂಗವರಿಯಬಹುದು; ಮತ್ತು ಹಾಗೆಯೇ ಅವನ ಎಲ್ಲ ವನ್ನೂ ಅರಿಯುತ್ತೇವೆ.'

'ನಾವಾದರೂ ನೋಡುತ್ತೇವೆ.'

'ನೀವು ಸ್ತ್ರೀಯನ್ನು ನೋಡುತ್ತಲಿರಬಹುದು. ಹಾಗೆ ನೀವಾದರೂ ಯತ್ನ

ಮಾಡಿದಲ್ಲಿ ಒಂದೇ ಒಂದು ನೋಟದಿಂದ ಸ್ತ್ರೀಯ ಸ್ವಭಾವವನ್ನೆಲ್ಲ ಅರಿತುಕೊಳ್ಳಬಹುದು.'

'ಹಾಗಾದರೆ ಯುವರಾಜನು ಪೂರ್ಣತ್ವಪಡೆದ ಮಾನವನೆನ್ನುವೆಯಾ?'

'ಅಷ್ಟರ ಗೊಡವೆ ನನಗೇಕೆ? ಅಗಲೆ ಹೇಳಲಿಲ್ಲವೆ? ಯಾವಳೊಬ್ಬ ಸುಸಂಸ್ಕೃತ ಸುಂದರಿಗೆ ಏನು ಬೇಕೋ ಅದೆಲ್ಲವೂ ಯುವರಾಜರ ಹೃದಯ ಭಾಂಡಾರದಲ್ಲಿ ದೊರೆಯುತ್ತದೆಯೆಂದು ಮಾತ್ರ ನಾನು ನಿರ್ಭರ ಪೂರ್ವಕವಾಗಿ ಹೇಳಬಲ್ಲೆ."

'ಯುವರಾಜ ಮತ್ತು ನಾನು ಹೀಗೆ ಈರ್ವರೂ ಒಮ್ಮೆಲೇ ಪರಿಚಿತರಾದವರು. ಆದ್ದರಿಂದ ನನ್ನ ವಿಷಯವಾಗಿ ನಿನ್ನ ಅನುಭವವೇನಿದೆ?'

'ಅದೆಲ್ಲ ಈಗೇಕೆ ಬೇಕಾಗಿದೆ?'

'ಮತ್ತೆ ಇದೆಲ್ಲ ಏಕೆ ಬೇಕಾಗಿದ್ದಿತು?'

'ಅಂದರೆ?'

'ಅಂದರೇನು? ಯುವರಾಜನ ವಿಷಯಕವಾದ ಅಭಿಪ್ರಾಯವೇಕೆ ಬೇಕಾಗಿದ್ದಿತು?'

'ನೀವು ಕೇಳಿದಿರೆಂದು?'

'ಇದನ್ನಾದರೂ ನಾನೇ ಕೇಳುತ್ತಲಿರುವೆನು.'

'ಛೆ! ನಿಮ್ಮ ಮಾತಿಗೆ ಮಾತನಾಡುವುದರಲ್ಲಿ ಸೂರ್ಯಾಸ್ತವಾಗಿ ಹೋಯಿತು. ಪಂಪಾಪತಿಯ ದರುಶನಕ್ಕೆ ಹೋಗಬೇಕು.'

ಹೇಮಾಂಬಿಕೆ ನೆವ ತೆಗೆದು ಹೊರಟಳು. ವಿರೂಪಾಕ್ಷ ತಿರಸ್ಕೃತನಾದಂತಾಗಿ ಕೋಪಿಸಿದನು. ಹೇಮಾಂಬಿಕೆಯ ಮಾತುಗಳೆಲ್ಲವೂ ಸಟೆಯೋ ಎಂದು ತೋರಿತು. ಅವನು ಕೆಲವೇಳೆ ಏನೋ ಯೋಚಿಸುತ್ತ ಅಲ್ಲಿಯೇ ಕುಳಿತನು.

---

# ೫ ಯುವರಾಜ ಮಲ್ಲಿಕಾರ್ಜುನ

ರಾತ್ರಿಯ ಮೊದಲಿನ ಪ್ರಹರ ಕಳೆದಿರಲಿಲ್ಲ. ನಿಶಾದೇವಿ ಎಲ್ಲೆಡೆಯಲ್ಲಿಯೂ ತನ್ನ ಸಾಮ್ರಾಜ್ಯ ಹಬ್ಬಿಸುತ್ತಲಿದ್ದಳು. ಆದರಾಕೆಗೆ ವಿಜಯನಗರದಲ್ಲಿ ಕಾಲಿಕ್ಕುವ ಎಡೆಯಾಗಲಿಲ್ಲ. ಕೊನೆಗೆ ಬಹಳ ಪ್ರಯತ್ನ ಮಾಡಿ, ಎದೆ ಗಟ್ಟಿಮಾಡಿಕೊಂಡಳು; ಆದರೆ ಎಷ್ಟು ಶೋಧಿಸಿದರೂ ಆಕೆಗೆ ಅಲ್ಲಿ ಅಲ್ಪವಾದರೂ ಅವಕಾಶ ಸಿಕ್ಕದಾಯಿತು. ವಿಜಯನಗರದ ವಿಜಯೀ ಸಮ್ರಾಟರ ಶುಭ್ರ ಕೀರ್ತಿಯ ಪ್ರಭೆಯಲ್ಲಿ ಆಕೆಗೆ ಮುಂದಾಗುವ ಧೈರ್ಯವಾಗಲಿಲ್ಲ. ರಾಜಬೀದಿಗಳಲ್ಲಿ ತಿರುಗಾಡುವ ಧೈರ್ಯವಾಗಲಿಲ್ಲ. ಅರಮನೆಯತ್ತ ಹೆಜ್ಜೆಯಿಡಲು ಆಗಲಿಲ್ಲ. ಸುಮ್ಮನೆ ಬಂದ ದಾರಿಯಿಂದ ಮರಳಬೇಕೆಂದರೆ ನಗರರಕ್ಷಕರ ದಕ್ಷತೆಯಲ್ಲಿ ಬರುವಾಗ ಹೇಗೋ ನುಸುಳಿಕೊಂಡು ಬಂದವಳಿಗೆ ಹೋಗುವಾಗ್ಗೆ ಅವಕಾಶ ಸಿಕ್ಕದಾಯಿತು. ಕೊನೆಗೆ ಬೆಳಗಿನ ವರೆಗೆ ಹೇಗಾದರೂ ಉಳಿದರಾಯಿತು.' ಎಂದು ಸಂದು ಮೂಲೆಗಳಲ್ಲಿ ಅಡಗಿ ಕುಳಿತಿದ್ದಳು.

ಪ್ರತಿ ಹಗಲಿನಂತೆ ತೋರುವ ಆ ವಿಜಯನಗರದಲ್ಲಿ ವ್ಯವಹಾರಗಳೆಲ್ಲ ಇನ್ನೂ ಹಾಗೆಯೇ ನಡೆದಿದ್ದವು. ಇಂತಹ ಸಮಯದಲ್ಲಿ ಹೇಮಾಂಬಿಕೆ ಖಿನ್ನಮನಸ್ಸಿನಿಂದ ಯುವರಾಜನ ಅರಮನೆಯತ್ತ ಸಾಗಿದ್ದಳು. ಹೇಮಾಂಬಿಕೆಯ ಮನಸ್ಸು ಇಂದು ಉದ್ವಿಗ್ನವಾಗಿದ್ದಿತು. ಅಂತಿಂತಹದಕ್ಕೆಲ್ಲ ಅಳುಕುವಂತಹ ದುರ್ಬಲ ಹೃದಯ ಅವಳದಿರಲಿಲ್ಲ; ಮತ್ತು ವಿರೂಪಾಕ್ಷನನ್ನಾದರೂ ಆಕೆ ಚನ್ನಾಗಿ ತಿಳಿದಿದ್ದಳು. ವಿರೂಪಾಕ್ಷ ತನ್ನಲ್ಲಿ ಪ್ರೇಮವುಳ್ಳವನಿದ್ದನೆಂಬದನ್ನಾದರೂ ತಿಳಿದಿದ್ದಳು. ಆದರಾತನಿಗೆ ನೀಡಲು ಪ್ರೇಮವುಳಿದಿರಲಿಲ್ಲ. ಪ್ರೇಮದ ಪ್ರತಿಯೊಂದು ಸೂಕ್ಷ್ಮ ಅಣುವೂ ಯುವರಾಜನಿಗರ್ಪಿತವಾಗಿದ್ದಿತು. ಹೇಮಾಂಬಿಕೆಯ ಪ್ರೇಮಕ್ಕೆ ಬದಲು ಯುವರಾಜನು ಪ್ರೇಮವನ್ನು ಅದುವರೆಗೆ ತೋರಿದಂತಿರಲಿಲ್ಲ; ಮತ್ತು ನಿಶ್ಚಯವಾಗಿಯೂ ತೋರುವನೆಂಬ ಭರವಸೆಯೂ ಇರಲಿಲ್ಲ; ಆದರೂ ನಿರಾಶಕ್ಕೆ ಅವಕಾಶವಿರಲಿಲ್ಲ.

ಹೇಮಾಂಬಿಕೆ ಯುವರಾಜನ ಪ್ರೇಮ ದೊರಕಿಸಲು-ತನ್ನ ವಿಷಯಕವಾದ ಪ್ರೇಮಜಲ ಯುವರಾಜನ ಮನದಲ್ಲಿ ಮೂಡಿಸಲು-ಬಹಳವಾಗಿ ಯತ್ನಿಸುತ್ತಿದ್ದಳು. ವಿರೂಪಾಕ್ಷ ತಿಳಿದಂತೆ ಯುವರಾಜನ ಪ್ರೇಮ ಸಾಧನೆಯೇ ಆಕೆಯ ಅಂತಿಮೋದ್ದೇಶವಾಗಿದ್ದಿತೆಂದರೂ ಸಲ್ಲುವಂತಿದೆ. ಅದಕ್ಕಾಗಿಯೇ ಆಕೆ ಹಗಲಿರುಳು ಯತ್ನಿಸುತ್ತಿದ್ದಳು. ಪಂಪಾಪತಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದಳು. ಆಕೆ ತಿಳಿದಮಟ್ಟಿಗೆ ಯುವರಾಜನ ಮನಸ್ಸು ಶಾಂತವಾದ ಸಾಗರದಂತಿದ್ದಿತು. ಒಂದಾದರೂ ತೆರೆಗಳೇಳುತ್ತಿರಲಿಲ್ಲ. ಕಾಮರಾಯನ ಗಾಳಿಯೇ ಸೋಂಕಿರಲಿಲ್ಲ. ಹೇಮಾಂಬಿಕೆಯಲ್ಲಿ ಯುವರಾಜನಿಗೆ ಆದರವಿದ್ದಿತು. ಆಕೆಯ ಕಲಾನೈಪುಣ್ಯಕ್ಕೆ ಅವನಿಗೆ ಅಭಿಮಾನವೆನಿಸುತ್ತಿದ್ದಿತು. ಇದನ್ನೆಲ್ಲ ಹೇಮಾಂಬಿಕೆ ಅರಿತಿದ್ದಳು; ಆದರೆ ಆಕೆ ಎಷ್ಟು ಶೋಧಿಸಿದರೂ ಇದರಲ್ಲಿ ತನಗೆ ಬೇಕಾಗುವಂತಹ ಪ್ರೇಮವು ಒಂದು ಅಣುವಾದರೂ ಕಾಣುತ್ತಿರಲಿಲ್ಲ. ಅಂತಹ ವಿಚಾರಗಳೇ ಆತನಲ್ಲಿ ಉಂಟಾಗುತ್ತಿರಲಿಲ್ಲ; ಆದರೂ ಆಕೆ ಯತ್ನಿಸುತ್ತಲೇ ಇದ್ದಳು. ಒಂದೊಂದು ಸಲ ತನ್ನ ಪ್ರೇಮಕಟಾಕ್ಷ, ಮುಗುಳುನಗೆಗಳಿಂದ ಯುವರಾಜನ ಮನದಲ್ಲೊಂದು ಬಿರುಗಾಳಿ ಎಬ್ಬಿಸಬೇಕೆಂದು ಹೊರಡುತ್ತಲಿದ್ದಳು; ಆದರೆ ಯುವರಾಜನ ಬಳಿಗೆ ಹೋಗಲು, ಸೂರ್ಯೋದಯದಿಂದ ಮಾಯವಾಗುವ ಮಂಜಿನಂತೆ ಎಲ್ಲವೂ ಮರೆತು ಹೋಗಿ, ಸಾತ್ವಿಕಭಾವದಿಂದ ಗುರುವಿನ ಬಳಿಯಲ್ಲಿರುವ ಶಿಷ್ಯನಂತೆ ಕೂರುವಳು. ಯುವರಾಜನ ಬಳಿಯಲ್ಲಿರುವವರೆಗೆ ಆಕೆಯ ಮನದಲ್ಲಿ ಅನ್ಯವಿಚಾರಗಳು ಬಾರದೇ, ಆತನಾ ಮೋಹಕ ಮಾತುಗಳನ್ನೂ ಉಚ್ಚವಿಚಾರಗಳನ್ನೂ ಸುಲಭವಾದ ವಾಗ್ಝರಿಯನ್ನೂ ಕೇಳುತ್ತ ಕುಳಿತುಬಿಡುತ್ತಲಿದ್ದಳು. ಆತನನ್ನಗಲುತ್ತಲೇ ಆಕೆಯ ಹೃದಯ ಯುವರಾಜನ ವಿಷಯಕವಾದ ವಿಚಾರಗಳಿಂದಲೇ ತುಂಬಿಹೋಗುವದು. ಯುವರಾಜನ ಹೃದಯದಲ್ಲಿ ಹೇಗಾದರೂ ತಾನು ಸ್ಥಳವನ್ನು ಸಂಪಾದಿಸಬೇಕೆಂದು ಯತ್ನಿಸುವಳು. ಆಕೆಗೆ

ಅದನ್ನು ಹೊಂದುವ ಆಶೆಯೂ ಬಹಳವಾಗಿದ್ದಿತು. ಆಗಲೇ ಸಿಕ್ಕದಿದ್ದರೂ ಮುಂದೆ ಸಿಕ್ಕಬಹುದೆಂಬ ಆಶೆಯಿದ್ದಿತು. ಅಂತಹ ಸಮಯದಲ್ಲಿ ವಿರೂಪಾಕ್ಷನ ಮರ್ಮಾಹತವಾಗುವಂಹ ಮಾತುಗಳಿಂದ ಆಕೆಗೆ ವ್ಯಥೆಯೆನಿಸಿತು. ಪೂರ್ಣವಾಗರಿತಿದ್ದರೂ ಆಕೆ ಮತ್ತೆ ಸಂದೇಹಕ್ಕೊಳಗಾಗಿದ್ದಳು. ತಾನು ಯುವರಾಜನ ಯುವರಾಜ್ಞಿಪದಕ್ಕಾಶಿಸಿಲ್ಲವೆಂದು ಚನ್ನಾಗಿ ಬಲ್ಲಳು. ಆದರೂ ವಿರೂಪಾಕ್ಷ ಅದೇ ಆರೋಪವೆತ್ತಲು, ಮತ್ತೆ ಮತ್ತೆ ತನ್ನ ಹೃದಯವಲ್ಲಿ ಹೊಕ್ಕು ಹುಡುಕಹತ್ತಿದಳು. ಆ ಹೃದಯದಲ್ಲಿ ನೋಡಿದೆಡೆಯಲ್ಲೆಲ್ಲ ಯುವರಾಜನ ಆ ಮೋಹಕ ರೂಪು, ಮುಗುಳುನಗೆಯಿಂದ ಕೂಡಿದ್ದ ಸಾತ್ವಿಕ ಕಳಾಯುಕ್ತ ಮೊಗಮುದ್ರೆ, ಹಸುಗೂಸಿನಂತಹ ಮುಗ್ಧಭಾವ, ವಿಚಾರಪರಿಪ್ಲುತವಾದ ಭಾಷಣ ಇವೇ ತುಂಬಿಹೋಗಿದ್ದವಲ್ಲದೆ, ಒಂದು ಮೂಲೆಯುಲ್ಲಾದರೂ ಆ ಯುವರಾಜ್ಞಿಪದದ ಯೋಚನೆಯೇ ಇರಲಿಲ್ಲ; ಆದರೂ ಬಿಡಲಿಲ್ಲ. ಆ ಹೃದಯಸಾಗರವನ್ನೆಲ್ಲ ಮತ್ತೊಮ್ಮೆ ಚನ್ನಾಗಿ ಕಲುಕಿದಳು.

ಯುವರಾಜನ ಸದ್ಗುಣ ಕಮಲಗಳೇ ಅಲುಗಾಡಿದುವಲ್ಲದೆ ಅಲ್ಲಿ ಬೇರೊಂದೊಡವೆ ಕಾಣಬರಲಿಲ್ಲ. ಯುವರಾಜನಲ್ಲಿ ತನ್ನ ಮನ ನೆಟ್ಟಿದರ ಪೂರ್ಣಕಾರಣವನ್ನರಿತಿದ್ದರೂ—ಯುವರಾಜ್ಞಿಪದದಾಶೆ ಅತ್ಯಲ್ಪವಾದರೂ ಇರಲಿಲ್ಲವೆಂದು ಮನವರಿಕೆಯಾಗಿದ್ದರೂ—ಆಕೆ ಮತ್ತೆ ಮತ್ತೆ ಮನವನ್ನು ಶೋಧಿಸುತ್ತಲಿದ್ದಳು. ಹೀಗೆ ಬಹಿರಂಗದ ಭಾನವೇ ಇಲ್ಲದಂತಾಗಿ ಅಂತರ್ಮುಖಳಾಗಿ ಮುಂದೊರೆದಿದ್ದ ಆಕೆಯ ಕಿವಿ, ಮನ, ಹೃದಯಗಳೆಲ್ಲವೂ ಆಕೆಯನ್ನೆಳೆದೊಯ್ದು ಬೇರೊಂದು ಲೋಕಕ್ಕೆ ಬಿಟ್ಟುವು. ಕಣ್ದೆರದು ನೋಡುತ್ತಾಳೆ! ಗಂಧರ್ವರಾಜನಂತೆ ಯುವರಾಜ ಸಂಗೀತಮಗ್ನನಾಗಿ ಕುಳಿತಿದ್ದನು. ಹೇಮಾಂಬಿಕೆ ತನ್ನ ಅಗಲವಾದ ಕಣ್ಣುಗಳನ್ನು ಚನ್ನಾಗಿ ತೆರೆದು ನೆಟ್ಟ ದಿಟ್ಟಿಯಿಂದ ನೋಡುತ್ತ ನಿಂತುಬಿಟ್ಟಳು. ರಾಜತೇಜದಿಂದೊಪ್ಪುವ ಆ ಮೊಗ, ವಿಶಾಲವಾದ ಫಣೆ, ಹರವಾದ ಎದೆ, ದುಂಡನ್ನ ಉಕ್ಕಿನಂತಹ ತೋಳುಗಳು ಎಲ್ಲವೂ ಅತ್ಯಂತ ಆಕರ್ಷಕವಾಗಿದ್ದವು. ಯುವರಾಜ ತನ್ನ ಸುಂದರವಾದ ಕರಗಳಿಂದ ವೀಣೆ ಮೀಟುತ್ತಲಿದ್ದನು. ನಿರ್ಜೀವವಾದ ಆ ವೀಣೆಗೆ ಯುವರಾಜನ ಅಮೃತ ಹಸ್ತ ತಗಲುತ್ತಲೆ ಚೇತನಗೊಂಡು ಚೀತ್ಕರಿಸುತ್ತಲಿದ್ದಿತು. ವೀಣೆಯ ಮಧುರಧ್ವನಿಗೆ ಮಾರುತ್ತರವೆಂದು ಯುವರಾಜ ತನ್ನ ಮಧುರ ಕಂಠದಿಂದ ಆಲಾಪಿಸುತ್ತಲಿದ್ದನು. ಹೇಮಾಂಬಿಕೆಗೆ ಮೈ ಮೇಲೆ ಎಚ್ಚರು ಉಳಿಯಲಿಲ್ಲ. ಕುಳ್ಳಿರಬೇಕೆಂಬ ಭಾವವು ಮೂಡಲಿಲ್ಲ. ಎವೆಯಿಕ್ಕದೆ ಆ ಸುಮಧುರ ನೋಟ ನೋಡುವುದರಲ್ಲಿಯೇ ಮಗ್ನಳಾಗಿ ನಿಂತುಬಿಟ್ಟಳು.

ಯುವರಾಜ ತನ್ನ ಆ ರಾಗಾಲಾಪ ಕೊನೆಗೊಳ್ಳುತ್ತಲೆ-ತನ್ನ ವೀಣೆ ಸರಿಪಡಿಸಲೆಂದೋ ಇಲ್ಲವೆ ಅಲ್ಲಿಗೆ ಸಾಕುಮಾಡಲೆಂದೋ ಕಣ್ದೆರೆದನು. ಎದುರಲ್ಲಿ ಸಂಗೀತಕ್ಕೆ ಪ್ರಸನ್ನಳಾಗಿ ಬಂದು ನಿಂತ ಸರಸತಿಯಂತೆ ಹೇಮಾಂಬಿಕೆ ಅಚಲಳಾಗಿ ನಿಂತಿದ್ದಳು. ಒಳ್ಳೇ ಜಾಣ ಶಿಲ್ಪಿ ಸಂಗಮರವರೀ ಶಿಲೆಯಲ್ಲಿ ತನ್ನ ಒಳ್ಳೇ ಕೌಶಲ್ಯದಿಂದ

ಕಟೆದ ಮೂರ್ತಿಯಂತೆ ತೋರುತ್ತಲಿದ್ದಳು. ಒಂದೆರಡು ಕ್ಷಣ ಯುವರಾಜ ದಿಟ್ಟಿಸಿ ನೋಡುತ್ತ ಕುಳಿತು, ಆ ಮೇಲೆ ಹರ್ಷದಿಂದ 'ಹೇಮಾ'ಎಂದನು.

ಯುವರಾಜ ಕೂಗುತ್ತಲೆ ಹೇಮಾಂಬಿಕೆಗೆ ಎಚ್ಚರು ಬಂದಿತು. ಆಕೆ ಆತ್ಯಾನಂದದಿಂದ 'ಯುವರಾಜ' ಎಂದಳು.

'ಹೇಮಾ ಬಂದುದಾವಾಗ?'

'ನನಗೇ ತಿಳಿಯದು.'

'ಅಂದರೆ?'

'ಅಂದರೇನು? ನಾನಾವಾಗ ಬಂದೆ, ಏಕೆ ಬಂದೆ, ಅಥವಾ ಅದೆಷ್ಟು ಸಮಯ ಇಲ್ಲಿ ನಿಂತಿರುವೆನು? ಮುಂತಾಗಿ ನನಗೆ ಯಾವ ಸಂಗತಿಯೂ ತಿಳಿಯದು.'

'ಒಗಟು ಬಿಚ್ಚುವೆಯಾ?"

'ಒಗಟು ಎಲ್ಲಿದೆ ಯುವರಾಜ.'

'ಹಾಗಾದರಿನ್ನೇನು? ಬಂದವಳು ನೀನೇ, ಇಲ್ಲಿ ನಿಂತವಳು ನೀನೇ; ಹೀಗಿದ್ದು, ನಿನಗೇ ತಿಳಿಯದೆಂದರೆ ಇನ್ನಾರಿಗೆ ತಿಳಿಯಬೇಕು?''

''ನಾನೇ ಬಂದುದಾಗಿದ್ದರೆ ನನಗೆ ಸ್ಮರಣೆಯಿರುತ್ತಿರಲಿಲ್ಲವೆ?"

''ಹಾಗಾದರೆ ಇಂದ್ರಜಾಲ ವಿದ್ಯೆಯಿಂದ ಕರೆದು ತಂದಿರಬೇಕು"

''ನಿಶ್ಚಯ; ಹಾಗೆಯೇ ಆಗಿರಬೇಕು"

''ಅಂತಹ ಇಂದ್ರಜಾಲ ವಿದ್ಯೆಯಾವದು?''

''ನಿಮ್ಮ ಈ ಸಂಗೀತ ಮಾಧುರ್ಯ."

''ಓಹೋ! ಬಲು ಚನ್ನಾಗಿ ಹೇಳಿದೆ."

''ಅದೇಕೆ?"

''ಕುರುಡನಿಗೆ ನಿನ್ನ ಕಣ್ಣು ಬಹು ಚನ್ನಾಗಿ ಕಾಣುತ್ತವೆಯೆಂದು ಹೇಳಿದಲ್ಲಿ ಚನ್ನಾಗಿಯೇ ಪರೀಕ್ಷೆ ಮಾಡಿದಂತಾಗಲಿಲ್ಲವೆ?"

''ನಾನು ಕುರುಡನಿಗೆ ಹೇಳಲಿಲ್ಲ."

''ಕಣ್ಣು ಕಾಣುವದಿಲ್ಲವೆಂದಲ್ಲಿ ಕುರುಡನಲ್ಲವೆ.''

''ಕಣ್ಣು ಬಹು ಚನ್ನಾಗಿ, ಸರಿಯಾಗಿ ಕಾಣುತ್ತಲಿದ್ದರೂ ಕುರುಡನೆ?''

''ಇದೆಲ್ಲವೂ ದಾಕ್ಷಿಣ್ಯದ ಮಾತು. ಹೇಮಾ, ನನ್ನ ವಿದ್ಯೆ ನಾನರಿಯನೆ? ಸಂಗೀತ ದೇವತೆ ನೀನು. ಅಂದು ನಿಜವಾಗಿಯೂ ನಿನ್ನ ಗಾನಾನಂದದ ಗಾನಾಭಿನಯಗಳ ಕೌಶಲ್ಯ ಯಾರಾದರೂ ನೋಡಿದ್ದರೆ ನಿನ್ನ ನಿಜವಾದ ಯೋಗ್ಯತೆ ತಿಳಿಯುತ್ತಲಿದ್ದಿತು."

''ಯಾರಾದರೇತಕ್ಕೆಬೇಕು? ನೀವು ನೋಡಿಲಿಲ್ಲವೆ ಯುವರಾಜ,''

''ನೋಡದಿದ್ದರೆ ನಾನೀ ಮಾತು ಆಡುತ್ತಲೇ ಇರಲಿಲ್ಲ. ನಿಜವಾಗಿಯೂ ಹೇಮಾ, ನಿನ್ನ ಕಲಾಜ್ಞಾನವು ಮೇಲ್ತರಗತಿಯದಿದೆ."

"ಇರಲಿ. ನಾಳೆ ಇರಾಣದ ರಾಯಭಾರಿ ಬರಲಿರುವನಂತೆ, ಅಹುದೆ?"

"ಅಹುದು. ಹೇಮಾ, ನಾವವನಿಗೆ ಯೋಗ್ಯ ಮನ್ನಣೆ ಕೊಡಬೇಕು."

"ಅವನು ಮಹಮ್ಮದೀಯನಲ್ಲವೆ?"

"ಅಹುದು."

"ಹಿಂದುಗಳ ವೈರಿಗಳಿಗೇಕೆ ಈ ಮನ್ನಣೆ?"

"ಹೇಮಾ, ನೀನು ತಂದೆಯವರ ಆಳಿಕೆಯಲ್ಲಿದ್ದೂ ಈ ಪ್ರಶ್ನೆ ಕೇಳುತ್ತೀಯಾ? ಮಹಮ್ಮದೀಯರೆಂದರೆ ಅವಾಗಲೂ ಹಿಂದುಗಳ ವೈರಿಗಳೇ ಎಂದು ಕಲ್ಪಿಸಬೇಡ. ಹಿಂದು ರಾಜ್ಯಗಳಿಗೆ ಹಿಂದೂ ರಾಜರೇ ಅರಿಗಳಾಗಿರುವದು ಸಹಜವಿದೆ"

"ಅಹುದು; ಆದರೂ ಮಹಮ್ಮದೀಯರೆಂದರೆ ಮಹಾ ತಾಮಸಿಗಳು; ಪರ ಧರ್ಮ ಪೀಡಿತರು; ಮೂರ್ತಿ ಭಂಜಕರು!"

'ಹೇಮಾ, ಅದು ಬರಿಯ ಮಹಮ್ಮದೀಯರಲ್ಲಿಯೇ ಕಾಣಬರುತ್ತದೆಂದು ತಿಳಿಯದಿರು. ಜೇತೃಗಳೆಲ್ಲರ ಸ್ವಭಾವವೇ ಹಾಗಾಗಿರುತ್ತದೆ. ಗೆಲುವು ದೊರೆ ಯುತ್ತಲೆ ಮನುಷ್ಯನು ಮತ್ತನಾಗುತ್ತಾನೆ. ಆಗ್ಗೆ ಅವನಲ್ಲಿ ಸಾರಾಸಾರ ವಿಚಾ ರವೇ ಉಳಿಯುವದಿಲ್ಲ. ತಾನಂದುದೇ ಸರಿ; ತಾನು ಹೇಳಿದಂತೆಯೆ ಅವರು ವರ್ತಿಸಬೇಕು. ಇಲ್ಲದಿದ್ದರೆ ಅತ್ಯಾಚಾರಕ್ಕಾರಂಭವಾಗುತ್ತದೆ. ಮಹಮ್ಮದೀಯ ರಲ್ಲಿಯೇನು ಸಜ್ಜನರು ಇಲ್ಲವೆಂದು ಭಾವಿಸದಿರು. ಮಹಾತ್ಮಾ ಪೈಗಂಬರರ ಪವಿತ್ರ ಜೀವನಕ್ರಮ ಅವರ್ಣನೀಯವಾಗಿದೆ. ಮಹಮ್ಮದೀಯರ ಪವಿತ್ರಗ್ರಂಥ ಎಷ್ಟು ಉದಾತ್ತ ವಿಚಾರಗಳಿಂದ ಪರಿಪೂರ್ಣವಾಗಿದೆ!'

ಇಮ್ಮಡಿ ದೇವರಾಯನ ಆಳಿಕೆಯೆಂದರೆ, ಒಂದು ಕ್ರಾಂತಿಯುಗವೇ ಎನ್ನ ಬಹುದು. ಹನ್ನೊಂದನೇ ಶತಮಾನದಿಂದ--ಮಹಮ್ಮದೀಯರ ದಾಳಿಗಾರಂಭ ವಾದಗಿನಿಂದ-ಲೂ ಹಿಂದೂ ರಾಜ್ಯಗಳು ಕ್ಷೀಣವಾಗುತ್ತಲೇ ನಡೆದವು. ೧೪ನೇ ಶತಮಾನದಾರಂಭಕ್ಕೆ ದಕ್ಷಿಣದ ಎಲ್ಲ ಹಿಂದೂ ರಾಜ್ಯಗಳು ನಾಮಶೇಷವಾದವು. ೧೪ನೇ ಶತಮಾನ ಕೊಂಚ ಕಾಲು ಚಾಚುತ್ತಲೆ ವಿಜಯನಗರದ ರಾಜ್ಯಾಲುದಯಿ ಸಿತು. ೧೫ನೇ ಶತಮಾನದರ್ಧದ ವರೆಗೂ ಒಂದೇಸವನೆ ಮಹಮ್ಮದೀಯ ರೊಡನೆ ಕಾದಾಡುತ್ತಲೇ ತನ್ನ ಅಸ್ತಿತ್ವ ಕಾಯ್ದುಕೊಂಡಿದ್ದಿತು. ಈ ಎಲ್ಲ ಸಮಯ ದಲ್ಲಿ ಹಿಂದು-ಮುಸಲ್ಮಾನ ಈ ಎರಡ ಹೆಸರು ಒಂದಕ್ಕೊಂದು ತ್ವೇಷದಿಂದ ಕೂಡಿ ದ್ದಂತೆ ಕಾಣುತ್ತಲಿದ್ದಿತು. ಹಿಂದುವೆಂದರೆ, ಮಹಮ್ಮದೀಯನ ಹುಟ್ಟು ಹಗೆ; ಮಹಮ್ಮದೀಯನೆಂದರೆ, ಹಿಂದುವಿನ ಕಡು ವೈರಿ; ಎಂದೇ ಒಬ್ಬರೊಬ್ಬರ ಭಾವನೆ ಗಳಿದ್ದುವು.

ಈಗ ಇಪ್ಪತ್ತನೆಯ ಶತಮಾನ ಒಳ್ಳೇ ಭರದಿಂದ ಮುಂದೊರೆದಿದೆ. ಧರ್ಮ ಬಹಳ ಶಿಥಿಲವಾಗಿದೆ. ದೃಷ್ಟಿ ವಿಶಾಲವಾಗುತ್ತಲಿದೆ. ನವನಾಗರಿಕತೆ ಒಬ್ಬರ ನ್ನೊಬ್ಬರು ಕೂಡುವಂತೆ ಮಾಡಿದೆ. 'ಜಾತಪಾತ ತೋಡಕ ಸಂಘ' 'ಝುಣುಕಾ

ಭ್ರಾತರ ಸಹಭೋಜನ ಸಂಘ' ಮುಂತಾದ ವಿಶ್ವಬಂಧುತ್ವ ಬೆಳೆಯಿಸುವ ಅನೇಕ ಯತ್ನಗಳು ಮುಂದೊರೆದಿವೆ. ಭೂಮಂಡಲದ ಎಲ್ಲ ರಾಷ್ಟ್ರಗಳಲ್ಲಿಯೂ ಸಹಕಾರ್ಯ-ಸಹಚರ್ಯೆಗಳು ಸಾಗುತ್ತಲಿವೆ. ಇಂತಹ ಸಮಯದಲ್ಲಿ ಕೂಡ ಹಿಂದು-ಮುಸಲ್ಮಾನರ ದೊಂಬಿ, ಕಲಹಗಳು ಆಗಾಗ್ಗೆ ಏಳುತ್ತಲೇ ಇವೆ. ಅಂತಹರು ಈಗ ಐದಾರು ನೂರು ವರ್ಷಗಳಿಗೆ ಮೊದಲೆಂದರೆ, ಆಗಿನವರ ಭಾವನೆ ಹೇಗಿರಬಹುದೆಂಬದನ್ನು ನೀವೇ ಊಹಿಸಬಹುದು. ಅವರವರ ಧರ್ಮಾಭಿಮಾನ, ಜಾತ್ಯಾಭಿಮಾನಗಳು ತೀವ್ರವಾಗಿದ್ದುವು. ಸ್ವಾಭಾವಿಕವಾಗಿ ಆ ಆ ರಾಜ್ಯಗಳೊಡೆಯರು ತಮ್ಮ ತಮ್ಮ ಧರ್ಮಗಳನ್ನು ಎತ್ತಿಹಿಡಿಯುತ್ತಲಿದ್ದರು. ಮಹಮ್ಮದೀಯ ರಾಜ್ಯದಲ್ಲಿ ಹಿಂದುಗಳಿಗೆ ಸ್ಥಾನವಿರಲಿಲ್ಲ; ಅದೇ ಸ್ಥಿತಿ ಹಿಂದು ರಾಜ್ಯದಲ್ಲಿ!

ವಿಜಯನಗರ ಜನ್ಮಿಸಿದುದು ಮಹಮ್ಮದೀಯರ ಪ್ರಾಬಲ್ಯದಲ್ಲಿಯೇ; ಬೆಳೆದುದೂ ಮಹಮ್ಮದೀಯರ ಎದುರಲ್ಲಿಯೇ; ಉಳಿದುದೂ ಮಹಮ್ಮದೀಯರ ಮನೆಯಲ್ಲಿಯೇ. ಕೊನೆಗೆ ಅಳಿದುದೂ ಮಹಮ್ಮದೀಯರ ಹೊಡತಗಳಲ್ಲಿಯೇ! ಹೀಗೆ ಮಹಮ್ಮದೀಯರು ವಿಜಯನಗರದ ಹುಟ್ಟು ಹಗೆಗಳೇ ಆಗಿದ್ದರು. ಎಷ್ಟೋ ಸ್ವಧರ್ಮೀಯ ಅರಸರೇ ವೈರಿಗಳಾಗಿರುವಾಗ ಪರಧರ್ಮೀಯರಾದ ಮಹಮ್ಮದೀಯರು ಅರಿಗಳಾದುದರಲ್ಲಿ ಆಶ್ಚರ್ಯವೇನೂ ಇಲ್ಲ. ಇರಲಿ. ತನ್ಮೂಲಕ ಬಹಳ ಜನ ವಿಜಯನಗರದ ಅರಸರು ಮಹಮ್ಮದೀಯರನ್ನು ಕ್ರೂರವಾಗಿ ನಡೆಸಿಕೊಂಡಿರುವದೂ ಸ್ವಾಭಾವಿಕವೆ; ಆದರೆ ವಿಜಯನಗರದ ಅರಸರಲ್ಲಿ ಹಲಕೆಲವರಾದರೂ ಮಹಮ್ಮದೀಯರನ್ನು ತಮ್ಮ ಸ್ವಂತ ಪ್ರಜೆಗಳಂತೆ ಪ್ರೇಮದಿಂದ ಆದರಪೂರ್ವಕವಾಗಿ ನಡೆಸಿಕೊಂಡ ಅರಸರುಂಟೆಂದು ಹೆಮ್ಮೆಯಿಂದ ಹೇಳಬಹುದು. ಮಹಮ್ಮದೀಯರು ತಮ್ಮ ರಾಜ್ಯಗಳಲ್ಲಿ ಸುಖಸಂತೋಷದಿಂದ ವಾಸಿಸಲು ಅನುವಿತ್ತುದಲ್ಲದೆ, ಅನೇಕ ಅನುಕೂಲತೆಗಳನ್ನು ಮಾಡಿಕೊಟ್ಟಿರುವರು. ಅಂತಹ ಪರಧರ್ಮ ಸಹಿಷ್ಣುಗಳಾದ ಅರಸರಲ್ಲಿ ಇಮ್ಮಡಿ ದೇವರಾಯನೊಬ್ಬನಾಗಿದ್ದನು.

ಇಮ್ಮಡಿ ದೇವರಾಯನ ಪ್ರಜೆರಲ್ಲಿ ಎಲ್ಲ ಪಂಥ ಪಂಗಡಗಳ ಜನರೂ ಇದ್ದರು. ವಿಜಯನಗರದ ಹುಟ್ಟು ಹಗೆಗಳಾದ ಮಹಮ್ಮದೀಯರನ್ನು ಕೂಡಾ ಆತನು ಆದರದಿಂದ ಕಾಣುತ್ತಲಿದ್ದನು. ಅವರಿಗೆ ತನ್ನ ರಾಜ್ಯದಲ್ಲಿ ಯಾವ ತೊಂದರೆಯೂ ತಟ್ಟದಂತೆ ದಕ್ಷನಾಗಿರುತ್ತಿದ್ದನು. ಅವರಿಗೋಸುಗ ಪಟ್ಟಣದಲ್ಲಿ ಒಂದು ಮಸೀದೆ ಕಟ್ಟಿಸಿದ್ದನು. ದರ್ಬಾರದಲ್ಲಿ ವಿಧರ್ಮೀಯನಾದ ಅರಸನಿಗೆ ಬೊಗ್ಗಿ ನಮಸ್ಕರಿಸುವಾಗ್ಗೆ ಮಹಮ್ಮದೀಯ ಪ್ರಜೆಗಳ ಮನನೋಯಬಾರದೆಂದು ತನ್ನ ದರ್ಬಾರದಲ್ಲೊಂದು ಉಚ್ಚಸ್ಥಳದಲ್ಲಿ ಕುರಾಣವಿರಿಸಿದ್ದನು. ಇಮ್ಮಡಿದೇವರಾಯನಾಳಿಕೆಯೆಂದರೆ ಮೊಗಲ ಬಾದಶಹ ಅಕಬರನಾಳಿಕೆಗೆ ಸರಿಯೆನ್ನಬಹುದು.

ಅಂತಹ ಸಜ್ಜನ ಇಮ್ಮಡಿದೇವರಾಯನ ಮಗನೇ ಯುವರಾಜ ಮಲ್ಲಿಕಾರ್ಜುನನು. ತಂದೆಯ ಸದ್ಗುಣಗಳೆಲ್ಲ ಯುವರಾಜನ ಹೃದಯದಲ್ಲಿ ವಿಕಾಸ ಹೊಂದಿ ರಾಜ

ಸುತ್ತಲಿದ್ದುವು. ಅವನಲ್ಲಿ ಪ್ರಜಾನಿಷ್ಠೆ ಬೇರೂರಿಬಿಟ್ಟಿದ್ದಿತು. ಆವಾಗಲೂ ಪ್ರಜಾ ಜನರ ಹಿತಚಿಂತನೆಯಲ್ಲಿಯೇ ಅವನ ಕಾಲ ವ್ಯಯವಾಗುತ್ತಲಿದ್ದಿತು. ಯಾರಾದರೂ ಅಧಿಕಾರಿಗಳು ಜನತೆಗೆ ತೊಂದರೆಕೊಡುವದು ತಿಳಿದರೆ ಇಲ್ಲವೆ ನೋಡಿದರೆ ಬೇಗನೆ ಹೋಗಿ ಅದನ್ನು ಕೂಡಲೆ ತಡೆಯುತ್ತಲಿದ್ದನು. ಅಂತೆಯೇ ಎಲ್ಲ ಪ್ರಜೆಗಳಲ್ಲಿಯೂ ಯುವರಾಜನ ವಿಷಯುಕವಾದ ಪ್ರೇಮ ಮನೆಮಾಡಿದ್ದಿತು. ಎಲ್ಲರೂ ಯುವರಾಜ ನನ್ನು ಅತ್ಯಂತ ಆದರದಿಂದ ಕಾಣುತ್ತಲಿದ್ದರು. ಹೇಮಾಂಬಿಕೆಯಾದರೂ ಯುವ ರಾಜನ ಈ ಪವಿತ್ರ ಭಾವವನ್ನು ಪೂರ್ಣವಾಗರಿತಿದ್ದಳು. ಯುವರಾಜನ ಸ್ವೀಕರಣದಿಂದ ಆಕೆಯ ಮನಸ್ಸು ಅತೀವ ಸಂತುಷ್ಟವಾಯಿತು; ಆದರೆ ಅಷ್ಟರಿಂದ ಆಕೆಗೆ ಪೂರ್ಣ ತೃಪ್ತಿಯಿರಲಿಲ್ಲ. ಆಕೆ ತನ್ನ ವಿಷಯಕವಾಗಿ ಆತನಲ್ಲಿದ್ದ ಭಾವನೆಗಳನ್ನರಿಯಬೇಕಿದ್ದಿತು. ಹೇಮಾಂಬಿಕೆಯ ಬಗ್ಗೆ ಯುವರಾಜ ಸದಭಿಪ್ರಾಯವುಳ್ಳವನಾಗಿದ್ದನು. ಆಕೆಯ ವಿದ್ಯೆಗೆ ಮನ್ನಣೆ ಕೊಡುತ್ತಲಿದ್ದನು. ಚಾತುರ್ಯ ಅಭಿನಂದಿಸುತ್ತಲಿದ್ದನು. ಗಾಯನ ಕೌಶಲ್ಯಕ್ಕೆ ತಲೆದೂಗುತ್ತಲಿದ್ದನು. ಅಭಿನಯ ನೈಪುಣ್ಯಕ್ಕೆ ಮೆಚ್ಚಿದ್ದನು. ಇದೆಲ್ಲವೂ ನಿಜವೇ. ಯುವರಾಜನ ಈ ಸತ್ಕಾರದಿಂದ ಹೇಮಾಂಬಿಕೆಗೆ ಸಂತೋಷವಾಗುತ್ತಲಿದ್ದಿತು. ಆದರೆ ಆಕೆಗೆ ಬೇಕಾದ-ಮುಖ್ಯವಾಗಿ ಬೇಕೆನಿಸುತ್ತಲಿದ್ದ-ವಿಷಯ ಬೇರೊಂದಿದ್ದಿತು. ಅದಾವುದೆಂದರೆ, ಯುವರಾಜನ ಪ್ರೇಮ. ಯುವರಾಜ ತನ್ನ ವಿಷಯಕವಾಗಿ ಪ್ರೇಮವುಳ್ಳವನಾಗಿದ್ದರೆ ತಿಳಿಯಬೇಕೆಂಬದೇ ಆಕೆಯ ಅಪೇಕ್ಷೆಯಾಗಿದ್ದಿತು. ಯುವರಾಜ ತನ್ನನ್ನು ಸ್ವೀಕರಿಸಬೇಕು. ಅರ್ಧಾಂಗಿಯ ಮನ್ನಣೆ ಕೊಡಬೇಕು. ತನ್ನ ವಿಷಯಕವಾಗಿ ಪ್ರೇಮ ವ್ಯಕ್ತಪಡಿಸಬೇಕು, ಎಂಬ ಬಯಕೆ ಬಲವಾಗಿದ್ದಿತು. ಆದುವರೆಗೂ ಯುವರಾಜನ ಹೃದಯದಲ್ಲಿ ಇನ್ನಾವ ಸ್ತ್ರೀಗೂ ಸ್ಥಳ ಸಿಕ್ಕಿಲ್ಲವೆಂದು ಆಕೆ ಪೂರ್ಣವಾಗಿ ಬಲ್ಲಳು. ಅಂತಿಂತಹರಿಗೆ ಪ್ರವೇಶಿಸಲು ಸುಲಭವಾದ ಸ್ಥಳ ಅದಾಗಿರಲಿಲ್ಲವೆಂದು ಹೇಮಾಂಬಿಕೆಯರಿತಿದ್ದಳು; ಆದರೆ ಅಲ್ಲಿ ಪ್ರವೇಶ ಪಡೆಯುವ ಭಾಗ್ಯವಂತರಾರು? ಅಲ್ಲಿ ಚಕ್ಕಂದದಿಂದ ಸೌಖ್ಯಸಾಗರದಲ್ಲಿ ವಿಹರಿಸುವ ಪುಣ್ಯವಂತೆ ಯಾರು? ಅಂತಹ ಭಾಗ್ಯ ತನಗೆ ದೊರೆಯಬಹುದೇ? ಎಂಬುದೇ ಆಕೆಯ ಹಾರೈಕೆ. ಅನೇಕ ಸಲ ಯುವರಾಜ ತನ್ನ ವಿಷಯಕ್ಕೆ ತೋರುತ್ತಲಿದ್ದ ಆದರ-ಸ್ನೇಹಗಳನ್ನಾಕೆ ತಿಳಿದಿದ್ದಳು; ಯಾರ ಪ್ರವೇಶವೂ ಇಲ್ಲದ ಯುವರಾಜನ ಹೃದಯದಲ್ಲಿ ತನಗೆ ಪ್ರವೇಶ ಸಿಕ್ಕಬಹುದೆಂದೆಣಿಸಿದ್ದಳು. ಪೂರ್ಣ ಸಿಕ್ಕುವವರೆಗೆ ಹೀಗೆಯೇ ಎಂದು ಯಾರೂ ಹೇಳಲಾರರು. ಅಂತೆಯೇ ಆಕೆಯ ಮನವು ಸಾಶಂಕವಾಗಿದ್ದಿತು. ಯುವರಾಜನ ಮುಖದಿಂದಲೇ ಕೇಳಿ ತಿಳಿಯಬೇಕೆಂದು ಅನೇಕ ಸಲ ಯತ್ನಿಸಿದ್ದಳು; ಆದರೆ ಯುವರಾಜನ ಆ ಕಪಟವಿಲ್ಲದ ಮಗುವಿನಂತಹ ಮೊಗ ನೋಡುತ್ತಲೇ, ಆತನ ಸಾದರದ ಶಬ್ದಗಳನ್ನು ಕೇಳುತ್ತಲೇ, ವಿಚಾರಪೂರ್ಣ ಭಾಷಣಗಳು ಕಿವಿಗೆ ಬೀಳುತ್ತಲೇ ಹೃದಯದೊಳಗೆ ಹುದುಗಿದ್ದ ವಿಚಾರ ಅಲ್ಲಿಯೇ ಉಳಿಯುತ್ತಲಿದ್ದಿತು. ಅವನೊಡನೆ ಅನೇಕ ವಿಷಯಗಳ ಚರ್ಚೆ ಮಾಡುವುದರಲ್ಲಿಯೇ ಮಗ್ನಳಾಗುತ್ತಲಿದ್ದಳು.

ಅಂದು ಅವರು ಮಹಮ್ಮದೀಯರ ವಿಷಯಕವಾಗಿ ಚರ್ಚಿಸುತ್ತಲಿರಲು, ವಿರೂಪಾಕ್ಷ ಅಲ್ಲಿಗೇನೇ ಬಂದನು. ಹೇಮಾಂಬಿಕೆ ತನ್ನೆದುರು ಪಂಪಾಪತಿಯ ದರುಶನದ ನೆವ ಸೂಚಿಸಿದ್ದರೂ ಆಕೆ ಯುವರಾಜನ ಬಳಿಯಲ್ಲಿಯೇ ಇರಬೇಕೆಂದು ಅವನ ಕಲ್ಪನೆಯಿದ್ದಿತು. ಹೇಮಾಂಬಿಕೆ ಹೊರಡುತ್ತಲೆ ಕೊಂಚ ಸಮಯ ಕುಳಿತನು. ಅವನ ಮನಸ್ಸಿನಲ್ಲಿ ಭೀಕರ ಕದನವೇ ಆರಂಭವಾಗಿದ್ದಿತು. ಹೇಮಾಂಬಿಕೆ ಯುವರಾಜನನ್ನು ಪ್ರೀತಿಸುವದು ನಿಶ್ಚಯ. ಯುವರಾಜನಾದರೂ ಹೇಮಾಂಬಿಕೆಯಂತಹ ಸಕಲ ಕಲಾಪರಿಪೂರ್ಣ ಸ್ತ್ರೀಯನ್ನೆಂದೂ ನಿರಾಕರಿಸಲಾರ. ಹಾಗೆ ನಿರಾಕರಿಸಿದ್ದಾದರೆ, ಅವನಂತಹ ಮೂರ್ಖನು ಅವನೇ ಸರಿ; ಛೆ! ಅದೆಂದೂ ಸಾಧ್ಯವಿಲ್ಲ. ಹೇಮಾಂಬಿಕೆ ಯುವರಾಜನಿಗೆ ಯುವರಾಜ್ಞಿಯಾಗುವದೇ ನಿಶ್ಚಯ. ಹಾಗಿದ್ದರೆ ಹೇಮಾಂಬಿಕೆಯ ಹಂಬಲ ನನಗೇಕೆ? ದುಷ್ಟ ಮನವೇ ನನ್ನನ್ನೇಕೆ ಪೀಡಿಸುತ್ತಿರುವೆ? ಈ ಜಗತ್ತಿನಲ್ಲಿ ಹೇಮಾಂಬಿಕೆಯೊಬ್ಬಳೇ ಸ್ತ್ರೀಯಳೇ? ಬೇರೆ ಸ್ತ್ರೀಯರಿಲ್ಲವೆ? ಆಕೆಯೊಬ್ಬಳೇ ಜಾಣಳೇ—ಆಕೆಯೊಬ್ಬಳೇ ಸುಂದರಿಯೇ? ಮೋಹದಿಂದ ಮೂಢನಾಗಿರುವೆ. ಕೊಂಚ ಕಣ್ದೆರೆದು ನೋಡು. ಅನೇಕರು ಸಿಕ್ಕಬಹುದು-ಅಹುದು, ಸಿಕ್ಕಬಹುದು; ಆದರೆ ಅನೇಕರಾದರೂ ಅನ್ಯರೇ ಅಲ್ಲವೆ? ಅಂತಹ ನೂರಾರು ಜನ ಕೂಡಿದರೂ ಹೇಮಾಂಬಿಕೆಯಾಗಬಲ್ಲರೆ? ಹೇಮಾಂಬಿಕೆಯು ಹೇಮಾಂಬಿಕೆಯೇ. ಆಕೆಯ ಆ ಸುಂದರ ಸುಕುಮಾರ ಶರೀರ ಯಷ್ಟಿ, ಮೋಹಕವಾದ ಮೊಗ, ತೇಜಃಪುಂಜ ಕಣ್ಗಳು, ಅತುಲವಾದ ರೂಪರಾಶಿ, ಅನುಪಮ ಕಲಾನೈಪುಣ್ಯ—ಒಂದೇ-ಎರಡೇ? ಸಕಲ ಸದ್ಗುಣಗಳ ಸಾರವೇ ಹೇಮಾಂಬಿಕೆಯಿರುವಳು. ದೊರೆಯಬಹುದು, ಸಾವಿರಾರು ಲಕ್ಷಾವಧಿ ಸುಕುಮಾರಿಯರು ಸಿಕ್ಕಬಹುದು; ಆದರೆ ಹೇಮಾಂಬಿಕೆ ಸಿಕ್ಕುವದಿಲ್ಲವಷ್ಟೆ? ಹಾಗಿದ್ದರೆ ನಿನ್ನ ಜೀವನವೇ ವ್ಯರ್ಥ. ಏನಿದ್ದರೂ ಹೇಮಾಂಬಿಕೆಯಿಲ್ಲವಾದರೆ ಅದಿದ್ದೂ ಇಲ್ಲದಂತೆಯೇ ಸರಿ!—ಹೇಮಾಂಬಿಕೆಯನ್ನು ಆಕರ್ಷಿಸಿದುದು ಯುವರಾಜನ ಯುವರಾಜಪದವೊಂದೇ ಅಲ್ಲವೆ? ಅದೊಂದನ್ನುಳಿದರೆ ಅವನಲ್ಲಿ ಅಂತಹ ಶ್ರೇಷ್ಠತೆ ಇರುವದಾದರೂ ಏನು? ನಿಶ್ಚಯವಾಗಿ ಹೇಮಾಂಬಿಕೆಯನ್ನೆಳೆದುದು ಯುವರಾಜಪದವು. ದೇವರೇ, ನನ್ನನ್ನಾದರೂ ಯುವರಾಜನನ್ನಾಗಿ ಹುಟ್ಟಿಸಬಾರದಿತ್ತೆ? ಈ ಸಂಕಟಗಳ ಸಂಕೋಲೆಯಲ್ಲಿ ಬಾಳಲು ನನಗೆ ಬೇಡ—ಆಂ, ಅಹುದು. ಆ ಯುವರಾಜನ ಯುವರಾಜಪದವನ್ನು ನಸಿಸಿ, ಅದನ್ನು ನಾನು ಸೆಳೆದುಕೊಂಡರೆ-ಆಗ್ಗೆ ಸ್ವಾಭಾವಿಕವಾಗಿ ಹೇಮಾಂಬಿಕೆ ನನ್ನ ಬಳಿಗೇ ಬರುವಳು-ಆಗ್ಗೆ? ಆಹಾ! ಅದೆಂತಹ ಸ್ವರ್ಗಸೌಖ್ಯ? ನಿಜ, ನಿಜ; ಹಾಗೆಯೇ ಮಾಡಬೇಕು. ಈ ವಿಚಾರ ಹತ್ತಿಪ್ಪತ್ತು ಸಲ ಬಂದುಹೋಗಿದೆ. ಸುಮ್ಮನೆ ಬಿಟ್ಟರಾಗದು. ಮೈಯಲ್ಲಿ ಬಲವಿದ್ದರೂ ನನ್ನ ಹೇಮಾಂಬಿಕೆ ಅನ್ಯರ ವಶದಲ್ಲಿದ್ದುದನ್ನು ನಾನು ಸಹಿಸಬೇಕೆ? ಆಗದು, ಅದಾಗದು. ಹೇಮಾಂಬಿಕೆ ನನಗೆ ಬೇಕೇಬೇಕು. ಅದಕ್ಕೆ ದಾರಿಯೊಂದೇ. ಪಾಪವಂತೆ, ಪಾಪ! ಆ ಮೇಲೆ ನೋಡುವಾ. ಆ ಪಾಪ-ಪುಣ್ಯ

ಗಳನ್ನು. ಮೊದಲು ಬೇಕಾದವಳು ಹೇಮಾಂಬಿಕೆ.'

ವಿರೂಪಾಕ್ಷನ ಶರೀರದಲ್ಲಿ ಶಕ್ತಿ ತುಂಬಿದಂತಾಯಿತು. ಉತ್ಸಾಹದಿಂದೆದ್ದನು. ಸುತ್ತಲೂ ನೋಡುವಲ್ಲಿ ಸಕಲ ಪ್ರಾಣಿ ಸಸ್ಯವರ್ಗವೂ ತನ್ನ ಉದ್ಯೋಗಕ್ಕೆ ಪುಷ್ಟಿಯನ್ನೇ ಕೊಡುತ್ತಲಿರುವಂತೆ ತೋರಿತು. ಯುವರಾಜಪದ ದೊರಕಿಸುವ ಹಂಚಿಕೆಯಲ್ಲಿಯೇ ತಲೆ ತೊಡಗಿದ್ದಿತು. ಹಾಗೆಯೇ ಹೊರಟು ಯುವರಾಜನ ಸ್ವಂತದ ಸಂಗೀತಶಾಲೆಗೆ ಬಂದನು. ಅಲ್ಲಿ ಯುವರಾಜ-ಹೇಮಾಂಬಿಕೆಯರು ಕುಳಿತುದನ್ನು ನೋಡಿದರು. ತನ್ನ ತರ್ಕದಂತೆ ಹೇಮಾಂಬಿಕೆ ಯುವರಾಜನ ಬಳಿಯಲ್ಲಿಯೇ ಇದ್ದುದನ್ನರಿತು ಆಕೆಯ ವಿಷಯವಾಗಿ ಕೋಪ ಬಂತು.

ಹೇಮಾಂಬಿಕೆ ವಿರೂಪಾಕ್ಷ ಬಂದುದನ್ನರಿತಳು. ಒಂದು ಸಲ ನೋಡುತ್ತಲೇ ಅವನ ಹೃದಯವನ್ನೆಲ್ಲ ಅರಿತಳು. ವಿರೂಪಾಕ್ಷನ ಹೃದಯ ದ್ವೇಷ-ಮತ್ಸರಗಳಿಂದ ತುಂಬಿ ಹೋಗಿದ್ದಿತು. ಅದರ ಪ್ರತಿಬಿಂಬ ಮುಖದಲ್ಲಿ ಚೆನ್ನಾಗಿ ಮೂಡಿದ್ದಿತು. ಕೂಡಲೆ ಹೇಮಾಂಬಿಕೆ ಅದನ್ನರಿತಳು. ಆ ವರೆಗೆ ವಿರೂಪಾಕ್ಷನ ಬಗ್ಗೆ ಆಕೆಗೆ ಒಂದು ವಿಧವಾಗಿ ಕನಿಕರವೆನಿಸುತ್ತಲಿದ್ದಿತು. ವಿರೂಪಾಕ್ಷನಾದರೂ ಅಯೋಗ್ಯ ಪುರುಷನಿರಲಿಲ್ಲವೆಂದು ಆಕೆ ಬಲ್ಲಳು; ಆದರೆ ತನ್ನ ಮಟ್ಟಿಗೆ ಆಕೆ ಸ್ವತಂತ್ರಳೂ ಇರಲಿಲ್ಲ. ಸಂಪೂರ್ಣವಾಗಿ ಯುವರಾಜನಲ್ಲಿ ಸಿಕ್ಕುಬಿದ್ದಿದ್ದಳು. ಅಂತೆಯೇ ಆಕೆ ವಿರೂಪಾಕ್ಷನ ವಿಷಯಕವಾಗಿ ಕನಿಕರ ತೋರುತ್ತಿದ್ದಳು; ಆದರೆ ಅಂದೇಕೋ ಆಕೆಯ ಮನದಲ್ಲಿ ಅವನ ವಿಷಯಕವಾಗಿ ಭೀತಿ ಮೂಡಿತು. ಅವನಾ ಕೆವ್ಮೊಗ, ಕೆಂಡ ಕಾರುವ ಕಣ್ಣುಗಳು, ಸ್ಫುರಿಸುತ್ತಲಿದ್ದ ಮೂಗು, ಕಠೋರವಾದ ಸ್ವರ ಇವುಗಳೆಲ್ಲವುಗಳನ್ನು ನೋಡುತ್ತಲೆ ಅವನಾ ವಿಷಪೂರ್ಣ ನಡತೆ ತಿಳಿದು, ಯುವರಾಜನ ಕುಶಲದ ಬಗ್ಗೆ ಸಂಶಯ ಬಂದಿತು. ರಾಜಮನೆತನಕ್ಕೆ ಅಪಾಯ ಸಂಭವಿಸಬಹುದೇನೋ, ಎಂಬ ಮೊಳಕೆಯೊಂದು ನಾಟಿತು. ಆಕೆ ವಿರೂಪಾಕ್ಷನಿಗೆ ತಿಳಿಯದಂತೆ ಅವನ ಮುಖವನ್ನೇ ನಿರೀಕ್ಷಿಸಲಾರಂಭಿಸಿದಳು.

ಯುವರಾಜನನ್ನು ಕಾಣುತ್ತಲೇ ವಿರೂಪಾಕ್ಷ ಮುಗುಳು ನಗೆ ನಕ್ಕನು. ಅವನಾ ನಗುವಿನಲ್ಲಿ ಭೀಕರ ಕಾಲಕೂಟವಡಗಿದ್ದಿತು. ಅದು ಯುವರಾಜನಿಗೆ ಅಲ್ಪವಾದರೂ ತೋರಲಿಲ್ಲ. ಯುವರಾಜನಂತಹರ ಸ್ಥಿತಿಯೇ ಹಾಗೆ. ಜನರ ಮನವರಿಯುವ ಕೌಶಲ್ಯ ಅವರಲ್ಲಿರುವದೇ ಇಲ್ಲ. ಅದಕ್ಕೆ ಕಾರಣವೇನೆಂದರೆ, ಅವರಿಗೆ ಅನ್ಯರ ಬಗ್ಗೆ ಸಂದೇಹವೆನಿಸುವದೇ ಇಲ್ಲ. ಅವರಾವಾಗಲೂ ಜನರ ಬಹಿರಂಗ ವರ್ತನೆ ನೋಡಿ ಅದನ್ನೇ ನಂಬುವರು. ಯುವರಾಜ ಪ್ರೇಮಪೂರ್ಣ ಸ್ವರದಿಂದ 'ವಿರೂಪಾಕ್ಷ, ಬಾ. ಕುಳ್ಳಿರು' ಎಂದು ನುಡಿದನು.

ವಿರೂಪಾಕ್ಷ ನಗುತ್ತಲೆ ಯುವರಾಜನ ಬದಿಯಲ್ಲಿನ ಆಸನವನ್ನಲಂಕರಿಸಿದನು. ಹೇಮಾಂಬಿಕೆ ಅವನ ಹೃದ್ಗತವನ್ನರಿಯುವ ಉದ್ಯೋಗದಲ್ಲಿದ್ದುದರಿಂದ ಮಾತನಾಡಲಿಲ್ಲ.

'ಏನು ಹೇಮಾ, ಪಂಪಾಪತಿಯ ದರುಶನವಾಯಿತೇ?' ವಿರೂಪಾಕ್ಷ ಬೇಕೆಂದೇ ಕೇಳಿದನು. ಹೇಮಾಂಬಿಕೆ ಪಂಪಾಪತಿಯ ದರುಶನಕ್ಕೆ ಹೋಗದೆ ನೇರವಾಗಿ ಯುವ ರಾಜನಲ್ಲಿ ಬಂದಿರಬೇಕೆಂದು ಅವನ ತರ್ಕವಿದ್ದಿತು; ಮತ್ತು ನಡೆದ ಸಂಗತಿಯಾದರೂ ಅವೇ ಇದ್ದಿತು. ಆದರೂ ವ್ಯಂಗ್ಯವಾಗಿ ಕೇಳಿದನು.

ಹೇಮಾಂಬಿಕೆಯೇನೂ ಕಡಿಮೆಯವಳಿರಲಿಲ್ಲ. ತಾನು ಪಂಪಾಪತಿಯ ದರುಶನಕ್ಕೆ ಹೋಗದೆ ಇದ್ದುದನ್ನು ವಿರೂಪಾಕ್ಷನರಿತಿರಬೇಕೆಂದು ಅವಳು ಬಲ್ಲಳು. ವ್ಯಂಗ್ಯವಾಗಿ ಕೇಳಿದ ಪ್ರಶ್ನೆಗೆ ವ್ಯಂಗ್ಯವಾಗಿಯೇ ಉತ್ತರ ಕೊಡಬೇಕೆಂದು 'ವಿರೂಪಾಕ್ಷನ ದರುಶನವಾಗುತ್ತಲೆ ಯುವರಾಜನ ಬಳಿಗೆ ಬಂದೆನು.' ಎಂದುತ್ತರವಿತ್ತಳು.

'ಎಷ್ಟು ಬೇಗ ಬಂದು ಬಿಟ್ಟೆ?' ವಿರೂಪಾಕ್ಷ ಆಕೆಯ ಮಾತಿನ ಭಾವ ತಿಳಿದರೂ ತಿಳಿಯದವನಂತೆ ನಟಿಸುತ್ತ ಪ್ರಶ್ನೆ ಮಾಡಿದನು.

ಅವನ ಪ್ರಶ್ನೆಗೆ ತಕ್ಕ ಉತ್ತರ ಕೊಡುತ್ತ 'ವಿರೂಪಾಕ್ಷನ ಬಳಿಯಲ್ಲಿ ಹೆಚ್ಚಿನ ಕೆಲಸವೇನು?' ಎಂದು ಮರು ಪ್ರಶ್ನೆ ಮಾಡಿದಳು.

ವಿರೂಪಾಕ್ಷ ಸೋಲನ್ನೊಪ್ಪಬೇಕಾಯಿತು. ಇನ್ನೇನಾದರೂ ಕೊಂಕು ಉತ್ತರ ಕೊಡಬೇಕೆಂಬ ಯೋಚನೆ ಬಂದಿತು. ಸುಮ್ಮನೆ ವಾದ ಬೆಳೆಸುವದು ತನ್ನ ಮುಂದಿನ ಕಾರ್ಯಕ್ಕೆ ನಷ್ಟವೇ ಎಂದು ಭಾವಿಸಿ, ವಿಷಯವನ್ನೇ ಬದಲಿಸಿದನು. ವಿರೂಪಾಕ್ಷ ಹೇಮಾಂಬಿಕೆಯ ಬಳಿಯಲ್ಲಿ ಎತ್ತಿದ ಆಕ್ಷೇಪವನ್ನೇ ಯುವರಾಜನ ಬಳಿಯಲ್ಲಿ ಹೇಮಾಂಬಿಕೆ ಎತ್ತಿದಳು.

'ಹೇಮಾ, ಪದವಿ, ಅಧಿಕಾರಗಳೆಂದರೆ ಸುಖದ ಶಯ್ಯೆಯಲ್ಲ; ಅದು ಕಂಟಕಗಳ ಕೋಟೆಯಿರುತ್ತದೆ. ಜನರ ಮನ್ನಣೆ ದೊರೆಯುತ್ತದೆ. ಉಚ್ಚಾಸನದಲ್ಲಿ ಮಂಡಿಸುತ್ತಾನೆ. ಸೇವಕ-ಸೇವಿಕೆಯರಿಂದ ಸೇವೆಗೊಳ್ಳುತ್ತಾನೆ. ಇದೆಲ್ಲವೂ ನಿಜವೇ, ಕೆಳಗೆ ಮುಳ್ಳು ಹರವಿ, ಮೇಲೆ ಅಂದವಾಗಿ ಮುಚ್ಚಿದ ಹಾಸಿನಂತಿದೆ. ಮೇಲಿನ ಹೊದಿಕೆ ಸುಂದರವಾಗಿದೆ. ನೋಟಕರಿಗೆ ಎಂತಹ ಸುಖವಪ್ಪಾ ಎನಿಸುತ್ತದೆ; ಆದರೆ ಅಲ್ಲಿ ಕುಳಿತುಕೊಳ್ಳುವವನ ಅವಸ್ಥೆ ದೇವರೇ ಅರಿಯಬೇಕು. ಚಿಕ್ಕದೊಂದು ಅಧಿಕಾರವಲ್ಲಿದ್ದರೂ ಆ ಅಧಿಕಾರಿಗೆ ಅದೆಷ್ಟು ಹೊಣೆಯಿರುತ್ತದೆ ಬಲ್ಲೆಯಾ? ತನ್ನ ಅಧಿಕಾರದಲ್ಲಿನ ಕಾರ್ಯ ದಕ್ಷತೆಯಿಂದ ಪೂರಯಿಸಬೇಕು. ಜನತೆಯ ಸುಖಸ್ವಾಸ್ಥ್ಯಗಳಿಗೆ ಮನ ಮುಟ್ಟಿ ಯತ್ನಿಸಬೇಕು. ಈ ಹೊಣೆ ಅಧಿಕಾರ ಬೆಳೆದಂತೆ ಬೆಳೆಯುತ್ತಲೆ ನಡೆಯುವುದು. ಸಮ್ರಾಟನೆಂದರೆ, ಸಕಲ ಸಾಮ್ರಾಜ್ಯದ ದೀನ ಸೇವಕ. ತಲೆಯಲ್ಲಿರುವುದು ರನ್ನದ ಕಿರೀಟದಂತೆ ತೋರಿದರೂ, ಅದರಲ್ಲಿ ಸಕಲ ಸಾಮ್ರಾಜ್ಯದ ಹೊಣೆಯಿರುತ್ತದೆ. ತೊಟ್ಟಿರುವದು ಸುಂದರ ವಸನವಾದರೂ ಅದರಲ್ಲಿ ಸಕಲ ಪ್ರಜಾದಕ್ಷತೆಯ ಕರ್ತವ್ಯ ಅಡಕವಾಗಿರುತ್ತದೆ. ಕುಳಿತುದು ನವರತ್ನಖಚಿತ ಸಿಂಹಾಸನವಾಗಿದ್ದರೂ ಪ್ರಜೆಗಳ ಮನ ನೋಯಿಸುವ, ಅಧಿಕಾರಿಗಳ ಮನ ನೋಯಿಸುವ, ವೈರಿಗಳಾಕ್ರಮಿಸುವ ಹೀಗೆ ಹಲವು ಭೀತಿಗಳ ಕಂಟಕಗಳು ತುಂಬಾ ಹರಡಿರುತ್ತವೆ.' ಯುವರಾಜ ತಿಳಿಮನದಿಂದ ಮಾತನಾಡಿದನು.

ಹೇಮಾಂಬಿಕೆಗೆ ಯುವರಾಜನ ಪ್ರತಿ ಅಕ್ಷರದ ಸತ್ಯವೂ ಹೊಳೆಯಿತು. ಕೊಂಚವೇ ವಿರೂಪಾಕ್ಷನ ಮೊಗದತ್ತ ಇಣುಕಿದಳು. ಅಲ್ಲಿ ಬೇರೊಂದು ಪ್ರಶ್ನೆ ಮನೆ ಮಾಡಿದ್ದಂತೆ ಕಾಣಬರಲು, ಯುವರಾಜನಿಂದ ಅದನ್ನೂ ಸ್ಪಷ್ಟಮಾಡಿಸುವ ಉದ್ದೇಶದಿಂದ 'ಇಷ್ಟು ಸಂಕಟಮಯ ಭಾರವನ್ನು ಹೊರುವದಾದರೂ ಏಕೆ?' ಎಂದು ಪ್ರಶ್ನೆ ಮಾಡಿದಳು.

'ಹೇಮಾ, ನಿಜವಾಗಿಯೂ ಇದು ನೀನು ಕೇಳತಕ್ಕ ಪ್ರಶ್ನೆಯಲ್ಲ' ಯುವರಾಜ ಹೇಮಾಂಬಿಕೆಯ ಹೊಳೆವ ಮೊಗ ನೋಡುತ್ತ ನುಡಿದನು.

'ಯಾರೇ ಕೇಳತಕ್ಕುದಾದರೂ ಇದೊಂದು ಪ್ರಶ್ನೆಯಿದೆಯಲ್ಲವೆ?' ಹೇಮಾಂಬಿಕೆ ವಿರೂಪಾಕ್ಷನ ಮೊಗ ನೋಡುತ್ತ ಕೇಳಿದಳು.

ಹೇಮಾಂಬಿಕೆಯ ನೋಟದ ಮತ್ತು ಪ್ರಶ್ನೆಯ ಭಾವ ವಿರೂಪಾಕ್ಷನಿಗೆ ತಿಳಿಯಿತು. 'ಈ ಪ್ರಶ್ನೆ ನನ್ನದಿರದೆ ನಿನ್ನದಿದೆ. ನೀನು ದುರ್ಬಲ ಹೃದಯದವನು. ಕೀಳು ಮನದವನು. ಕ್ಷುಲ್ಲಕ ವಿಚಾರದವನು. ನಿನ್ನಂತಹರಿಗೆ ಶೋಭಿಸುವ ಈ ಪ್ರಶ್ನೆ ನಾನು ಕೇಳಿರುತ್ತೇನೆ—' ಮುಂತಾಗಿ ಆ ನೋಟದ ಅರ್ಥಗ್ರಹಿಸಿದನು. ಅದರಿಂದ ಅವನ ಮನಸ್ಸು ಇನ್ನೂ ಕ್ಷೋಭೆಗೊಂಡಿತು.

'ನಿಜ-ನಿಜ; ಹೇಮಾ, ನೀನಾಗದಿದ್ದರೂ ಇನ್ನಾರಾದರೂ ಕೇಳುವದು ಸಹಜವಿದೆ. ಕೇಳುವವನ ಮನವಾದರೂ ಇದರಿಂದ ಸ್ಪಷ್ಟವೇ ಆಗುತ್ತಲಿದೆ. ಕೇವಲ ಐಂದ್ರಿಯ ಭೋಗಾಸಕ್ತನೂ ಕರ್ತವ್ಯದ ತಿಳಿವಿಲ್ಲದವನೂ-ಮುಖ್ಯವಾಗಿ ರಾಜ್ಯದ ಯಾವ ಹೊಣೆಗೂ ಅಪಾತ್ರನೂ ಇರಬೇಕೆಂಬದು ಇದರಿಂದ ವ್ಯಕ್ತವಾಗುತ್ತದೆ. ಹೇಮಾ, ಮರಣದ ಭೀತಿಯಿದ್ದರೂ ಸೈನಿಕರು ಯುದ್ಧಕ್ಕೆ ಏಕೆ ತೊಡಗುತ್ತಾರೆ? ಹಾನಿಯ ಭಯವಿದ್ದರೂ ಶ್ರೇಷ್ಠಿಗಳು ಏಕೆ ವ್ಯಾಪಾರ ಮಾಡುತ್ತಾರೆ? ಎಲ್ಲೆಡೆಯಲ್ಲೂ ಒಂದಿಲ್ಲೊಂದು ಭೀತಿಯಿದ್ದೇ ಇದೆ. ಹಾಗಿದ್ದರೂ ಅವರು ಆ ಆ ಕಾರ್ಯ ಕೈಕೊಳ್ಳುವ ಕಾರಣವೇನು?'

ಯುವರಾಜ ತಿಳಿಮನದಿಂದ ನುಡಿದು, ಒಂದು ಸಲ ಹೇಮಾಂಬಿಕೆಯ ಮೊಗವನ್ನೂ ವಿರೂಪಾಕ್ಷನ ಮೊಗವನ್ನೂ ನೋಡಿದನು.

ಯುವರಾಜನ ನೋಟದಲ್ಲಿ ಕರ್ತವ್ಯ ಬುದ್ಧಿ ಜಾಗ್ರತವಾಗಿದ್ದು ಆ ಭಾವವೇ ತುಂಬಿದ್ದಿತಲ್ಲದೆ ಇನ್ನೇನೂ ಇರಲಿಲ್ಲ. ಅವನೇನು ಅನ್ಯರನ್ನು ಹೀಯಾಳಿಸಬೇಕು, ನೋಯಿಸಬೇಕು ಎಂಬ ಭಾವದಿಂದ ಮಾತನಾಡಿರಲಿಲ್ಲ. ಆದರೂ ವಿರೂಪಾಕ್ಷ ಬೇರೊಂದರ್ಥವನ್ನೇ ಗ್ರಹಿಸಿದನು. ಕೊಂಚ ಮೊದಲು ಹೇಮಾಂಬಿಕೆ ನೋಡಿದ್ದಳು. ಅದರಲ್ಲೊಂದರ್ಥ ಕಂಡು ಕೊಂಡಿದ್ದನು. ಅದೇ ಅರ್ಥ ಮುಂದೆ ಸಾಗಿಸಿದನು. 'ಯುವರಾಜ, ನೀನು ಯುವರಾಜನಿರುವ ಹೆಮ್ಮೆಯಿಂದ ಮನಬಂದಂತೆ ಮಾತನಾಡುವೆಯಲ್ಲವೆ? ನಾನು ಯಾವ ಅಧಿಕಾರಕ್ಕೂ ಅಪಾತ್ರನೆಂದೇ ಸೂಚಿಸಿದೆಯಲ್ಲವೆ? ನೀನು ಇಷ್ಟು ದೂರ ಹೋಗಬಹುದೆಂದು ನನ್ನ ಕಲ್ಪನೆಯಿರಲಿಲ್ಲ. ನೀನಾದರೂ ಏನು ಮಾಡುವೆ? ರಾಜ್ಯಮದವೇ ಮಾಡಿಸುತ್ತಲಿದೆ. ಆಗಲಿ, ನೋಡುವೆ. ಈ ಕಾಲ ಎಷ್ಟು

ದಿನ ಉಳಿಯುವದೊ? ನೀವೆಲ್ಲರೂ ವಿರೂಪಾಕ್ಷನ ಹತ್ತಿರ ಭಿಕ್ಷೆ ಬೇಡಲು ಬರುವಂತೆ ಮಾಡದಿದ್ದರೆ ನನ್ನ ಹೆಸರು ವಿರೂಪಾಕ್ಷನೇ ಅಲ್ಲ' ಎಂದು ಮುಂತಾಗಿ ಯೋಚನಾಮಗ್ನನಾದನು.

'ಆ ಆ ಕಾರ್ಯಗಳಲ್ಲಿ ಒಂದೊಂದು ಲಾಭವಿದೆ. ಸಾಹಸೇ ಶ್ರೀಃ ಎಂಬಂತೆ ಸಾಹಸವಿಲ್ಲದೆ........'

'ತಿಳಿಯಿತು; ಹೇಮಾ, ಹಾಗೆ ರಾಜ್ಯಪರಿಪಾಲಕರು ರಾಜ್ಯಸುಖೋಪಭೋಗದಾಶೆಯಿಂದ, ಮನ್ನಣೆಪಡೆವಾಶೆಯಿಂದ ರಾಜ್ಯಕಾರಭಾರ ಕೈಕೊಳ್ಳುತ್ತಾರೆಂದು ಭಾವಿಸದಿರು. ಅಂತಹ ಹಲಕೆಲವರಿರಬಹುದು; ಆದರೆ ಅವರು ಅಧಮ ತರಗತಿಯವರೆಂದು ನಾನು ಸ್ಪಷ್ಟವಾಗಿ ಸಾರಿ ಹೇಳುತ್ತೇನೆ. ಅಂತಹ ನೀಚರಿಂದ ಯಾವ ಪ್ರಜಾಹಿತವೂ ಸಾಧಿಸಲಾರದು—ಹೇಮಾ, ರಾಜನೆಂದರೆ ಪರಮಾತ್ಮ ನಿಯಮಿಸಿ ಕಳುಹಿದ ಸಾ-ಮ್ರಾಜ್ಯಸೇವಕನು. ಸಾಮ್ರಾಜ್ಯದ ಕಾವಲುಗಾರನು. ಪ್ರಜೆಗಳ ಪಾದ ಪೂಜಕನು. ಅವನಿಗೆ ದೊರೆಯುವ ಲಾಭವೆಂದರೆ, ಕರ್ತವ್ಯಪಾಲನೆಯಾನಂದ! ಸಕಲ ಸೌಖ್ಯ ಭೋಗಗಳಿಗೂ ಮಿಗಿಲಾದ ಆನಂದವು ಅದಾಗಿರುತ್ತದೆ. ಅಂತಹ ಆನಂದ ತಮ್ಮ ತಮ್ಮ ಕರ್ತವ್ಯ ಯೋಗ್ಯರೀತಿಯಿಂದ ಪೂರಯಿಸಿದವರಿಗೆ ಮಾತ್ರ ಸಿಕ್ಕುತ್ತದೆ.'

---

# ೬ ಅಬ್ದುಲ್ ರಜಾಕ್

ಹಗಲಿನ ಪ್ರಥಮ ಪ್ರಹರದ ಸಮಯ. ವಿಜಯ ನಗರದ ಭವ್ಯ ಒಲಗಶಾಲೆ ಜನಭರಿತವಾಗಿದ್ದಿತು. ಕರ್ನಾಟಕ ಸಾಮ್ರಾಜ್ಯಾಧೀಶ ಇಮ್ಮಡಿ ದೇವರಾಯದೊರೆ ನವರತ್ನ ನಿರ್ಮಿತ ಸುಂದರ ಸಿಂಹಾಸನದಲ್ಲಿ ವಿರಾಜಿಸುತ್ತಲಿದ್ದನು. ಆ ಮಂದಿರದ ಶೋಭೆಯನ್ನು ಹೆಚ್ಚಿಸುವಂತೆ ಸಿಂಹಾಸನ. ಸಿಂಹಾಸನಕ್ಕೆ ಆಭರಣಪ್ರಾಯನಾಗಿದ್ದ ರಾಯ. ಅತ್ಯಂತ ವೈಭವಪೂರ್ಣವಾದ ಆಸ್ಥಾನ ನೋಡಿದವರೇ ಧನ್ಯರು. ರಾಯನ ಬಲಗಡೆಯಲ್ಲಿಯೇ ವಿಜಯನಗರ ಸಾಮ್ರಾಜ್ಯದ ಮುಖ್ಯ ಮಂತ್ರಿಗಳಲ್ಲೊಬ್ಬನಾದ ಸಂಗಣ್ಣ ದಣ್ಣಾಯಕ ಕುಳಿತಿದ್ದನು. ಅಲ್ಲಿಯೇ ಯುವರಾಜ ಮಲ್ಲಿಕಾರ್ಜುನ ಯುವರಾಜ ಪದದಲ್ಲಿ ರಾಜಿಸುತ್ತಲಿದ್ದನು. ಕೆಳಗೆ ಇರ್ಕಡೆಗಳಲ್ಲಿಯೂ ಸಾಮಂತರೂ ಸರದಾರರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತಿದ್ದರು. ರಾಯನೆಂದರೆ ಪ್ರಸನ್ನತೆಗೆ ತವರೇ ತಾನಾಗಿದ್ದನು. ಅವನಾ ಪ್ರಸಾದಪೂರ್ಣ ದೃಷ್ಟಿ, ರಾಜ್ಯಶ್ರೀಪೂರ್ಣ ಮೊಗಗಳು ಸಭೆಗೆ ಶೋಭೆಯನ್ನಿತ್ತಿದ್ದವು.

ಅಂದಿನ ಮುಖ್ಯ ಕಾರ್ಯವೆಂದರೆ, ಇರಾಣದಿಂದ ಬರಲಿದ್ದ ರಾಯಭಾರಿಯನ್ನು ಸ್ವಾಗತಿಸುವದಿತ್ತು. ನಿತ್ಯದಂತೆ ಬೇರೆ ಬೇರೆ ಓಲಗದ ಕೆಲಸಗಳು ಸಾಗಿದುವು. ರಾಜ-ಮಂತ್ರಿಗಳೆಲ್ಲರೂ ಒಮ್ಮೊಗರಾಗಿ ಕೆಲಸ ಮಾಡುತ್ತಲಿದ್ದರು. ಅವರೆಲ್ಲರಲ್ಲಿ

ಭಿನ್ನಾಭಿಪ್ರಾಯ ಬರುತ್ತಲೇ ಇರಲಿಲ್ಲ. ಸಂಗಣ್ಣ ದಣ್ಣಾಯಕನು ಚತುರನು, ನೀತಿವಂತನು, ಪಕ್ಷ-ಪರಪಕ್ಷ ಭೇದರಹಿತನು.

ಸಾಮ್ರಾಜ್ಯದ ಮುಖ್ಯ ಮುಖ್ಯ ಕಾರ್ಯ ನಡೆದಿದ್ದುವು; ಆದರೂ ಸಕಲರ ಚಿತ್ತವೂ ರಾಯಭಾರಿಯಾಗಮನದತ್ತವೇ ಇದ್ದಿತು. ಮೊದಲೇ ರಾಯಭಾರಿ ಬರುವ ಸಂಗತಿ ತಿಳಿದಿದ್ದಿತು. ನಿತ್ಯವೂ ಒಳ್ಳೇ ದಕ್ಷತೆಯಿಂದಲೆ ನಡೆಯುತ್ತಲಿದ್ದ ರಾಜ್ಯಕಾರಭಾರದಲ್ಲಿ ಇನ್ನೂ ಹೆಚ್ಚು ಗಾಂಭೀರ್ಯ ತೋರುತ್ತಲಿದ್ದಿತು. ಪ್ರಥಮ ಪ್ರಹರ ಕೊನೆಗಂಡು ದ್ವಿತೀಯ ಪ್ರಹರಕ್ಕಾರಂಭವಾಗುತ್ತಲೇ ರಾಯಭಾರಿ ಬಂದ ಸೂಚನೆ ತಿಳಿಯಿತು. ಒಡನೆಯೇ ಸಂಗಣ್ಣ ಮಂತ್ರಿ ಎದ್ದು ದ್ವಾರದ ವರೆಗೆ ಹೋದನು. ನಾಲ್ಕಾರು ಜನ ಮುಖ್ಯ ಸರದಾರರೂ ಅವನನ್ನು ಹಿಂಬಾಲಿಸಿದರು. ಹತ್ತು ನಿಮಿಷಗಳಲ್ಲಿಯೇ ರಾಯಭಾರಿಯೊಡಗೊಂಡು ಮರಳಿ ಬಂದನು. ಸರದಾರರೆಲ್ಲರೂ ಎದ್ದು ನಿಂತರು ಯುವರಾಜ ಮುಂದೆ ಹೋಗಿ ಹಸ್ತಲಾಘವವಿತ್ತು, ಆದರದಿಂದ ಕರೆತಂದು ಮನ್ನಣೆಯಾಸನದಲ್ಲಿ ಕುಳ್ಳಿರಿಸಿದನು.

ಅಬ್ದುಲ್ ರಜಾಕನ ಹೆಸರು ವಿಜಯನಗರದಿತಿಹಾಸಿನಲ್ಲಿ ಪ್ರಸಿದ್ಧವಿದೆ. ನಮ್ಮಗಳ ದುರ್ದೈವದ ಮೂಲಕವಾಗಿ ಸಾಮ್ರಾಜ್ಯದಿತಿಹಾಸು ಚನ್ನಾಗಿ ಬರೆದಿಡುವ ಬುದ್ಧಿ ಆಗ್ಗೆ ಯಾವ ಕನ್ನಡಿಗನಿಗೂ ಹುಟ್ಟಲಿಲ್ಲ. ಪರಕೀಯ ಪ್ರವಾಸಿಗರು ಮಾತ್ರ ಅಂತಹ ಕಾರ್ಯದಲ್ಲಿ ಕೆಲವಂಶ ಮಾಡಿದ್ದಾರೆ. ಅವರ ಉಪಕಾರವನ್ನೇ ನಾವೆಲ್ಲರೂ ಸ್ಮರಿಸಬೇಕಾಗಿದೆ. ಇಮ್ಮಡಿದೇವರಾಯನಾಳುತ್ತಿರುವಾಗ್ಗೆಯೂ ಒಬ್ಬ ಪ್ರವಾಸಿಗ ಬಂದಿದ್ದನು. ಆತ ಬರಿಯ ಪ್ರವಾಸಿಗನಿರದೆ, ರಾಯನಾಸ್ಥಾನಕ್ಕೆ ರಾಯಭಾರಿಯಾಗಿ ನಿಯಮಿಸಲ್ಪಟ್ಟು ಬಂದಿದ್ದಾನೆ. ಆತನೇ ಆ ಅಬ್ದುಲ್ ರಜಾಕನು.

ರಾಯಭಾರಿಯು ಮುಹಮ್ಮದೀಯನಾದರೂ ಸಂಕೋಚ ತೆಗೆದುಕೊಳ್ಳದೆ ಸಿಂಹಾಸನಕ್ಕೆ ಬಾಗಿ ನಮಿಸಿದನು. ಅಲ್ಲಿಯೇ ತಮ್ಮ ಪವಿತ್ರ ಗ್ರಂಥವಾದ ಕುರಾನವಿದ್ದುದರಿಂದ ಅವನಿಗೆ ಸಂಕೋಚವೇನೂ ಅನಿಸಲಿಲ್ಲ. ಆ ಮೇಲೆ ಬೆಲೆಯುಳ್ಳ ರೇಷ್ಮೆಯ ಚೀಲವೊಂದನ್ನು ತೆಗೆದು ರಾಯನ ಕೈಗಿತ್ತನು.

ರಾಯ ಅದನ್ನು ತೆಗೆದುಕೊಂಡು ಸಂಗಣ್ಣಮಂತ್ರಿಗೀಯಲು, ಮಂತ್ರಿ ಮುದ್ರೆಯೊಡೆದು ಅದರಲ್ಲಿ ಸುಂದರವಾದ ಜರದರವೆಯಲ್ಲಿ ಕುಶಲರಾದ ಕಲಾವಂತರು ಕಸೂತಿ ತೆಗೆದಂತೆ ಅಂದವಾಗಿ ಭಿನ್ನ ಭಿನ್ನ ಬಣ್ಣದಿಂದ ರಾಜಿಸುವ ಪತ್ರ ಓದಲಾರಂಭಿಸಿದನು. ಪತ್ರವು ಸ್ಪಷ್ಟವಾಗಿದ್ದು, ಪರ್ಶಿಯನ್ ಭಾಷೆಯಲ್ಲಿದ್ದಿತು. ಮಂತ್ರಿಗೆ ಪರ್ಶಿಯನ್ ಭಾಷೆಯಲ್ಲಿ ಪಾಂಡಿತ್ಯವಿದ್ದಿತು.

"ಶ್ರೀಮತ್ಕರ್ನಾಟಕ ಸಿಂಹಾಸನಾಧಿಷ್ಠಿತ ಸಕಲ ಸಂಪತ್ಪರಿಪೂರ್ಣ ವಿಜಯನಗರ ಸಾಮ್ರಾಜ್ಯಾಧೀಶ್ವರ ನರಪತಿ ಶ್ರೀ ಇಮ್ಮಡಿದೇವರಾಯ ಸಮ್ರಾಟರ ಸನಿಧಿಗೆ-

ಇರಾಣವನ್ನಾಳುವ ಅನೇಕ ಬಿರುದಾಂಕಿತ ಶಹರವರ ಸಲಾಮುಗಳು.

ಮಾನ್ಯವರರೇ, ತಾವು ಸದ್ಯ ದಕ್ಷಿಣ ಭಾರತದಲ್ಲಿಯ ಬಲವಂತ ಅರಸರಲ್ಲಿ ಅಗ್ರ

ಗಣ್ಯರೆಂಬದು ಆನಂದದ ಸಂಗತಿಯು. ಇದಕ್ಕಿಂತಲೂ ಆನಂದದ ಸಂಗತಿಯೆಂದರೆ, ತಾವು ಮುಹಮ್ಮದೀಯರ ವಿಷಯಕ್ಕೆ ತಿಳಿದ ಆತ್ಮೀಯತೆಯು! ತಾವು ಹಿಂದುಗಳಿದ್ದು ವಿಧರ್ಮೀಯರಾದ ಮುಹಮ್ಮದೀಯ ಪ್ರಜೆಗಳನ್ನು ಅತ್ಯಂತ ಉದಾರತನದಿಂದ ನಡೆಯಿಸಿಕೊಳ್ಳುತ್ತಲಿರುವ ಬಗ್ಗೆ ನಮಗೆ ಮೇಲಿಂದ ಮೇಲೆ ವಾರ್ತೆ ಬರುತ್ತಲಿದೆ. ತಮ್ಮ ಈ ಪಾಲಕಲಿಸುವ ಗುಣವು ತಮ್ಮ ಕೀರ್ತಿಯನ್ನು ದಶ ದಿಸೆಗಳಲ್ಲಿ ಹರಡಿದೆ. ಹಿಂದು-ಮುಹಮ್ಮದೀಯರ ದೇಶಗಳು ಬೇರೆ ಬೇರೆಯಾದರೂ ಒಬ್ಬರೊಬ್ಬರು ತೀರಾ ಸಮೀಪಕ್ಕಿರುವ ಮೂಲಕ ಒಬ್ಬರೊಬ್ಬರು ಬಂಧು ಭಾವದಿಂದಲೇ ವರ್ತಿಸಬೇಕೆಂಬ ತಮ್ಮ ಈ ವರ್ತನವು ನಮಗೆ ಅತ್ಯಂತ ಆನಂದವನ್ನುಂಟುಮಾಡಿದೆ. ತಮ್ಮ ಈ ಮೇಲು ಪಂಕ್ತಿಯನ್ನು ತಮ್ಮ ಮುಂದಿನವರೂ, ಸಮಕಾಲೀನ ಇತರ ಅರಸರೂ ಅನು ಸರಿಸುವರೆಂದು ನಂಬುತ್ತೇವೆ. ತಮ್ಮ ಈ ಉದಾರ ವರ್ತನಕ್ಕೆ ಸರಿಯಾಗಿ ನಾವಾ ದರೂ ವರ್ತಿಸುವ ಬಗ್ಗೆ ಆಶ್ವಾಸನೆ ಕೊಡುತ್ತೇವೆ.

ಮಾನ್ಯರೆ, ಸದ್ಗುಣಿಗಳೂ, ಶೂರರೂ, ಪಂಡಿತರೂ ಆದ ತಮ್ಮಂತಹರ ಸಖ್ಯ ದೊರೆಯುವುದು ಭೂಷಣಾಸ್ಪದವೇ ಸರಿ. ಅಂತಹ ಮೈತ್ರಿಯನ್ನಾಶಿಸಿ ಈಗ ನಮ್ಮ ರಾಯಭಾರಿ 'ಅಬ್ದುಲ್ ರಜಾಕ್'ರನ್ನು ಕಳುಹಿರುತ್ತೇವೆ. ತಮ್ಮ ದರಬಾರದಲ್ಲಿ ನಮ್ಮ ರಾಯಭಾರಿಗಳಿಗೆ ಯೋಗ್ಯ ಮನ್ನಣೆ ದೊರೆಯುವ ಬಗ್ಗೆ ನಮಗೆ ಪೂರ್ಣ ವಿಶ್ವಾಸ ಏದೆ. ತಾವಾದರೂ ತಮ್ಮ ರಾಯಭಾರಿಯನ್ನು ಕಳುಹಿದರೆ ಅತ್ಯಂತ ಆನಂದದಿಂದ ಸ್ವೀಕರಿಸುವೆವು.

ನಮ್ಮ ಈ ಮೈತ್ರಿ ಹೀಗೆಯೇ ಬೆಳೆಯುತ್ತಲೇ ಹೋಗಲೆಂದು ಅಲ್ಲಾನನ್ನು ಕುರಿತು ಪ್ರಾರ್ಥಿಸುತ್ತೇವೆ."

ಸಂಗಣ್ಣ ಮಂತ್ರಿ ಪತ್ರ ಮುಗಿಸುತ್ತಲೇ ಸಭಾಸದರಲ್ಲಿ ಆನಂದವು ತುಂಬಿ ಹೋಯಿತು. ರಾಯನು ರಾಯಭಾರಿಗೆ ಇರಾಣದ ವಿಷಯಕವಾಗಿ ಹಲವು ಪ್ರಶ್ನೆ ಗಳನ್ನು ಕೇಳಿದನು. ಅಲ್ಲಿನ ರಾಜ್ಯವ್ಯವಸ್ಥೆ, ಹುಟ್ಟುವಳಿ, ನಾಗರಿಕತೆಗಳಿಗೆ ಸಂಬಂಧಿ ಸಿದ ಆ ಪ್ರಶ್ನೆಗಳಿಗೆ ಆ ರಾಯಭಾರಿ ಯೋಗ್ಯವೇ ಆದ ಉತ್ತರಗಳನ್ನಿತ್ತನು. ಅದನ್ನು ಕೇಳಿ ಕನ್ನಡ ರಾಜ-ಪ್ರಜಗಳೀರ್ವರಲ್ಲೂ ಆನಂದವುಂಟಾಯಿತು.

ರಾಯಭಾರಿಯನ್ನು ಕಳುಹಿದ್ದಕ್ಕೆ, ಕನ್ನಡ ದೊರೆಯ ಮೈತ್ರಿ ಆಶಿಸಿದುವಕ್ಕೆ ಉತ್ತರ ರೂಪವಾಗಿ ರಾಯನೇ ನಾಲ್ಕು ಮಾತು ಹೇಳಿದನು. ಅವುಗಳನ್ನು ಕೇಳು ತ್ತಲೆ ರಾಯನ ಔದಾರ್ಯವನ್ನರಿತ ಕನ್ನಡಿಗರು ಇನ್ನೂ ಆನಂದವನ್ನು ಹೊಂದಿ ದರು. ರಾಯಭಾರಿಯಾದರೂ ಬಹಳ ಆನಂದ ಹೊಂದಿದನು.

ಸಭೆ ಮುಗಿಯುವ ವೇಳೆಯಾದುದರಿಂದ ರಾಯಭಾರಿಯ ಊಟೋಪಚಾರ ಗಳ ಬಗ್ಗೆ ಮಂತ್ರಿಗೆ ಸೂಚನೆಯಿತ್ತು ದೊರೆ ಎದ್ದನು; ಎಲ್ಲರೂ ಎದ್ದು ಹೊರಟರು.

ಅಂದು ನಾಲ್ಕನೆಯ ಪ್ರಹರವಾರಂಭವಾಗುತ್ತಲೆ ಯುವರಾಜ ಇರಾಣದ ರಾ-ಯಭಾರಿಯನ್ನು ಕಾಣಲು ಹೊರಟನು. ಒಡನೆಯೇ ವಿರೂಪಾಕ್ಷನೂ ಹಿಂಬಾಲಿಸಿ

ದನು. ರಾಯಭಾರಿಯಿಳಿದಿದ್ದ ಮನೆಗೆ ಇಬ್ಬರೂ ತಲುಪುತ್ತಲೆ ರಜಾಕ್‌ಸಾಹೇಬನಿಗೆ ಸೇವಕರು ವರದಿ ತಲುಪಿಸಿದರು. ಅವನು ಲಗುಬಗೆಯಿಂದ ಬಾಗಿಲಿಗೆ ಬಂದು ಹಸ್ತಾಂದೋಲನವಿತ್ತು ಒಳಗೆ ಕರೆದೊಯ್ದನು. ಮೂವರೂ ಕುಳಿತಿರಲು, ಮಾತಿಗಾರಂಭವಾಯಿತು:

ರಜಾಕ್:—ಯುವರಾಜ, ಕರೆಕಳುಹಿದ್ದಾದರೆ ನಾನೇ ಬರುತ್ತಲಿದ್ದೆನು. ತಾವೇಕೆ ಇಲ್ಲಿಯ ವರೆಗೆ ಬರುವ ತೊಂದರೆ ತೆಗೆದುಕೊಳ್ಳಬೇಕಾಗಿದ್ದಿತು?

ಯುವರಾಜ:—ರಾಯಭಾರಿಗಳೇ, ಈಗ ನೀವು ನಮ್ಮ ಅತಿಥಿಗಳಿರುವಿರಿ. ಅತಿಥಿಗಳ ಯೋಗ ಕ್ಷೇಮ ವಿಚಾರಿಸುವದು ಒಡೆಯನ ಕರ್ತವ್ಯವಲ್ಲವೆ? ಆ ಒಡೆಯರ ಪ್ರತಿನಿಧಿಯಾಗಿ ನಾನು ಬಂದಿರುವೆನು. ನಾನು ಕರ್ತವ್ಯಪಾಲನೆ ಮಾಡಿದೆನು. ಅಷ್ಟೇ ಅಲ್ಲದೆ, ಇನ್ನೇನೂ ಇಲ್ಲ.

ವಿರೂಪಾಕ್ಷ:—ರಾಯಭಾರಿಗಳೇ, ಅತಿಥಿ ಸತ್ಕಾರಕ್ಕೆ ನಮ್ಮ ಭಾರತವು ಮಾದರಿಯಾಗಿದೆ.

ರಜಾಕ್:—ಅಹುದಹುದು. ನಾನದನ್ನು ಕೇಳಿರುವೆನು. ಈಗ ಪ್ರತ್ಯಕ್ಷವಾಗಿ ಕನ್ನಡದರಸುಗಳ ಮತ್ತು ಯುವರಾಜರ ಸತ್ಕಾರ ಸ್ವೀಕರಿಸುತ್ತಲಿರುವೆನು.

ಯುವರಾಜ:—ರಾಯಭಾರಿಗಳೇ, ನೀವು ನಮ್ಮ ನಾಡಿಗೆ ಹೊಸಬರು. ಎಲ್ಲವೂ ಚನ್ನಾಗಿರಲಿಕ್ಕಿಲ್ಲ; ಆದರೂ ಕುಂದು-ಕೊರತೆಗಳನ್ನು ಮರೆತು, ಇದ್ದುದರಲ್ಲಿಯೇ ಸಂತುಷ್ಟರಾಗಬೇಕೆಂದು ಬೇಡಿಕೊಳ್ಳುವೆನು.

ರಜಾಕ್:—ಯುವರಾಜ, ಆ ಬಗ್ಗೆ ನಿಮ್ಮ ವರ್ಣನೆ ಎಷ್ಟು ಮಾಡಿದರೂ ಸ್ವಲ್ಪೇ ಇದೆ. ನನಗೆ ನನ್ನ ಮನೆಗಿಂತಲೂ ಹೆಚ್ಚೇ ಪ್ರೇಮಾದರಗಳು ದೊರೆತಿವೆ. ಯುವರಾಜ, ನಾನು ನಮ್ಮ ದೇಶದಿಂದ ಹೊರಟಾಗಿನಿಂದಲೂ ಕರ್ನಾಟಕ ಸಾಮ್ರಾಜ್ಯದ ಕೀರ್ತಿ ಕೇಳುತ್ತಲೇ ಇರುವೆನು. ಅದರಲ್ಲಿಯೂ ನಿಮ್ಮ ಹೆಸರಂತೂ ಪ್ರತಿಯೊಬ್ಬನ ಮುಖದಲ್ಲಿ. ಕೊಂಚವೇ ಮೊದಲು ನಡೆದ ಯುದ್ಧದಲ್ಲಿ ನೀವು ತೋರಿದ ಶೌರ್ಯ, ಚಾತುರ್ಯಗಳಿಗೆ ಜನವು ಬೆರಳು ಕಚ್ಚಿದೆ. ಅದ್ವಿತೀಯ ಶೂರರು, ಅತಿ ಚತುರರು, ಮೇಲ್ತರದ ರಾಜಕಾರಣಿಗಳು—ಇಂತಹ ನಿಮ್ಮನ್ನು ಹೆತ್ತ ಮಾತೆಯೇ ಧನ್ಯ! ನಿಮ್ಮನ್ನು ಯುವರಾಜರಾಗಿ, ಭಾವೀ ಸಮ್ರಾಟರಾಗಿ ಪಡೆದ ಕನ್ನಡಿಗರೇ ಧನ್ಯರು! ಏಕೆ ಕುಮಾರರೇ?'

ಕುಮಾರನ ಅವಸ್ಥೆ ಆತನಿಗೇ ತಿಳಿಯಬೇಕು. ಕಳೆದ ವಿಜಯದಶಮಿಯಿಂದ ಅವನಲ್ಲೊಂದು ಅತಿ ಮಹತ್ವದ ಮಾರ್ಪಾಟಾಗಿದ್ದಿತು. ಅದುವರೆಗೆ ಯುವರಾಜನ ವಿಷಯವಾಗಿ ಬಂಧುಪ್ರೇಮವಿದ್ದಿತು; ಆದರೆ ಅಂದು ಬದಲಾಗುತ್ತ ಬಂದುದು 'ಯುವರಾಜ' ಎಂಬ ಶಬ್ದ ಕೇಳುತ್ತಲೇ ಅವನ ಮನಸ್ಸು ಕೋಪದಿಂದ ತಪ್ತವಾಗುತ್ತಲಿದ್ದಿತು. ಅದರಲ್ಲಿ ಯುವರಾಜನ ಸ್ತುತಿಪರ ಶಬ್ದಗಳಿಂದ ಅವನ ಮಿದುಳು ಹಾರಿ ಹೋಗುವದು. ಆದರೂ ಯುವರಾಜನ ಬೆನ್ನು ಬಿಟ್ಟಿರಲಿಲ್ಲ. ತನ್ನ ಬಗ್ಗೆ ಭಿನ್ನ

ವಿಚಾರಗಳು ಯಾರಲ್ಲಿಯೂ ಉಂಟಾಗಕೂಡದು; ಇಲ್ಲವೆ ಯುವರಾಜನ ಎಲ್ಲ ಕಾರ್ಯ ಕ್ರಮ ತಾನು ತಿಳಿಯುತ್ತಲೇ ಇರಬೇಕು; ಅಥವಾ ಯುವರಾಜನೊಡನೆ ಇದ್ದರೇನೇ ಅಷ್ಟು ಮನ್ನಣೆ, ಆತನನ್ನು ಳಿದು ಒಬ್ಬನೇ ಜನರಲ್ಲಿ ಹೋದರೆ, ಯಾರೂ ಮಾತು ಗಳನ್ನು ಕೂಡಾ ಆಡಲಿಕ್ಕಿಲ್ಲವೆಂಬ ಭೀತಿಯಿಂದಲೋ ಏನೋ ಅವನು ಯುವರಾಜನ ಸಂಗಡಲೇ ಇರುತ್ತಲಿದ್ದನು.

ಅಬ್ದುಲ್ ರಜಾಕನ ಮಾತಿಗೆ ಆತನು ಉತ್ತರ ಕೊಡಲೇಬೇಕಾಯಿತು.

'ಅಹುದು; ರಾಯಭಾರಿಗಳೇ, ಯುವರಾಜರಿಂದ ನಮ್ಮ ಕರ್ನಾಟಕವು ಅತ್ಯಂತ ಉನ್ನತ ಶಿಖರಕ್ಕೆ ತಲುಪುತ್ತಲಿದೆ.'

ಇಷ್ಟು ಹೇಳಬೇಕಾದರೆ ಅವನ ಮನಸ್ಸು ಅತೀವವಾಗಿ ಆಕರ್ಷಿಸಬೇಕಾಯಿತು.

ಹೀಗೆಯೇ ಕೆಲವು ವೇಳೆ ಮಾತನಾಡುತ್ತಲೇ ಕುಳಿತರು. ಸಾಯಂಕಾಲವಾಗಲು ಸೂರ್ಯನು ವಿಶ್ರಮಿಸಲು ಅಸ್ತಾಚಲಕ್ಕೆ ಸಮೀಪಿಸಹತ್ತಿದನು. ಬಹಳ ದಣಿದು ಹೋದುದರಿಂದ ಸೂರ್ಯನ ತೇಜಃಪುಂಜ ಮುಖವು ಕಿಂಚಿತ್ತು ಮ್ಲಾನವಾಗಿದ್ದಿತು. ಅಂತೆಯೇ ಅವನ ಬಿಸಿಲಿನ ಪ್ರಖರತೆಯೂ ಕೊಂಚ ಕಡಿಮೆಯಾಗಿದ್ದಿತು. ಬಣ್ಣವೂ ಬದಲಾಗಿದ್ದಿತು. ಆದರೇನು? ಸುಂದರವಾದುದು ಎಲ್ಲ ಸಮಯದಲ್ಲಿಯೂ ಸುಂದರ ವಾಗಿಯೇ ಉಳಿವುದಿಲ್ಲವೆ? ವೈಭವೀ ಅರಸರಾದ ಕನ್ನಡ ದೊರೆಗಳ ರಾಜಧಾನಿ ವಿಜಯ ನಗರದ ಸೌಂದರ್ಯ ಕೇಳಬೇಕೇ? ನಾಲ್ಕು ಶತಮಾನಗಳು ಕಳೆದು ತೀರಾ ಹಾಳಾಗಿ ರುವ ಆ ಪಟ್ಟಣವನ್ನು ಈಗ ನೋಡಿದರೂ ಆ ಅವಶಿಷ್ಟ ಸೌಂದರ್ಯಕ್ಕೇನೇ ತಲೆ ದೂಗುವಂತಿದೆ. ಅಂತಹದು ಉನ್ನತಾವಸ್ಥೆಯಲ್ಲಿದ್ದ ಆ ಸಮಯದಲ್ಲಿ ಸೌಂದರ್ಯ ಪ್ರಭೆಯಿಂದ ಅದೆಷ್ಟು ರಾಜಿಸುತ್ತಲಿದ್ದೀತು? ಬಿಸಿಲಿನ ಬಣ್ಣ ಬದಲಾದಂತೆ ವಿಜಯ ನಗರದ ಸೌಂದರ್ಯದಲ್ಲಿ ಭರತಿ ಬಿದ್ದಿತು. ನಗರಸುಂದರಿ ಪೂಬಣ್ಣದ ವಸನವುಟ್ಟು ಮೆಲುಮೆಲನೆ ನಗುತ್ತಲಿರುವಂತೆ ತೋರುತ್ತಲಿದ್ದಳು.

ಆ ಸುಂದರ ನಗರ ಕಣ್ದಣೀ ನೋಡಬೇಕೆಂದೆಣಿಸಿ, ರಾಯಭಾರಿ ಯುವರಾಜ ನಿಗೆ 'ಯುವರಾಜ, ಇಂದು ನಾನು ಪಟ್ಟಣದ ಶೋಭೆ ನೋಡಬಯಸುವೆನು.' ಎಂದನು.

'ರಾಯಭಾರಿಗಳೇ, ಇಂದೇ ಬಂದಿರುವಿರಿ. ದಾರಿಯ ದಣುವಿನಿಂದ ನೊಂದಿರು ವಿರಿ. ನಾಳೆ ನೋಡಿದರಾಗದೆ?' ಯುವರಾಜನಂದನು.

'ದಾರಿಯ ದಣುವು ಆದುದೂ ನಿಜವೆ; ಮತ್ತು ನಾನು ಇಂದೇ ಬಂದುದೂ ನಿಜವೆ; ಆದರೆ ಆ ದಣುವಿನಲ್ಲಿ ಬಹಳ ಭಾಗ ವಿಜಯನಗರದ ದರುಶನದಿಂದಲೆ ನಷ್ಟ ವಾಯಿತು. ಉಳಿದುದೆಲ್ಲವೂ ನಿಮ್ಮ ಆದರದ ನಡತೆಯಿಂದ ನಿಶ್ಶೇಷವಾಗಿದೆ. ಈಗ ನಾನು ನವಯುವಕನ ಹುರುಪಿನಿಂದ ಸಿದ್ಧನಾಗಿರುವೆನು.' ಅಬ್ದುಲ್‌ರಜಾಕ್ ಆನಂದ ದಿಂದ ನುಡಿದನು.

'ಹಾಗಿದ್ದರೆ ಹೋಗುವಾ. ನಮ್ಮ ಸುಂದರ ಪಟ್ಟಣದ ಶೋಭೆ ನಾನು ನೋಡು ತ್ತಲೆ ಇರುವೆನು. ನಿತ್ಯವೂ ನವೀನವಾಗಿಯೇ ತೋರುತ್ತದೆ. ಎಷ್ಟು ಸಲ ನೋಡಿ

ದರೂ ಮನಸ್ಸು ತಣಿಯದಾಗಿದೆ. ನಿಜವಾಗಿಯೂ ನಮ್ಮ ನಗರವೆಂದರೆ ನಮಗೆ ಬಲು ಹೆಮ್ಮೆ.'

'ಇಂತಹ ಸುಂದರ ನಗರವಿದ್ದಲ್ಲಿ ಯಾರಿಗೆ ತಾನೇ ಹೆಮ್ಮೆಯೆನಿಸಲಿಕ್ಕಿಲ್ಲ!'

'ಆಗಲಿ. ಈಗ ಕುದುರೆಗಳ ಮೇಲೆಯೇ ಹೋಗುವಾ. ಅಂದರೇನೇ ನಗರದ ನಿಜವಾದ ಸೌಂದರ್ಯ ತೋರಿಬರುವದು.'

ಮೂವರೂ ಮೇಲ್ತರಗತಿಯ ತೇಜಿಗಳನ್ನೇರಿದರು. ನಾಲ್ಕಾರು ಜನ ರಾಜ ಸೇವಕರು ಮುಂದಾದರು. ನಗರದ ಎಲ್ಲ ಬೀದಿಗಳಲ್ಲಿ ಹಾಯುವದು ಅವರ ಉದ್ದೇಶ ವಿದ್ದಿತು.

ಅತ್ಯಂತ ವೈಭವದಿಂದ ಮೆರೆಯುತ್ತಲಿದ್ದ ಕನ್ನಡ ಸಾಮ್ರಾಜ್ಯಕ್ಕೆ ಕಣ್ಣಿನೋಪಾದಿಯಲ್ಲಿದ್ದ ವಿಜಯನಗರ. ಕಲಾವಿದ ಕನ್ನಡ ದೊರೆಗಳು ಅತ್ಯಂತ ದಕ್ಷತೆಯಿಂದ ರಚಿಸುತ್ತಲಿದ್ದ ವಿಜಯನಗರ. ರಕ್ಕಸತಂಗಡಿಯ ಯುದ್ಧಾನಂತರ ಆನೆ-ಒಂಟೆಗಳ ಮೇಲೆ ಹೇರಿಕೊಂಡೊಯ್ದರೂ ತೀರದಷ್ಟು ಸಂಪತ್ತಿಯಿಂದ ಸುಸಂಪನ್ನವಾದ ವಿಜಯನಗರ. ವೀರ ಯತಿ ವಿದ್ಯಾರಣ್ಯರ ತಪಃಪದದಲ್ಲಿ ಸುಮನೋಹರವಾಗಿ ಹುಟ್ಟಿಬೆಳೆದ ಕಮಲಕುಸುಮ ನಗರ. ವಿದ್ಯಾರಣ್ಯರ ತಪೋಜಲದಿಂದ ಬೆಳೆಯುತ್ತಲಿದ್ದ ಬಾಲ ಮಂದಾರವೃಕ್ಷ ವಿಜಯನಗರ. ವಿದ್ಯಾರಣ್ಯರ ತಪೋ ಮಹಿಮೆಯಿಂದ ಬಂಗಾರದ ಮಳೆಯನ್ನಾಂತ ವಿಜಯನಗರ. ಸಕಲಭೂಮಂಡಲದ ಚಕ್ರವರ್ತಿಗಳ ಕಣ್ಣು ಕುಕ್ಕಿಸೆಳೆದ ವಿಜಯನಗರ—ವಿಜಯನಗರದ ಮಹಿಮೆ, ಅಲ್ಲಿಯ ಸೌಂದರ್ಯ, ಅಲ್ಲಿಯ ಸಂಸ್ಕೃತಿ ವರ್ಣನೆಯ ಅಳವಿನೊಳಗಿನವಲ್ಲ. ಅಂತಹ ಪ್ರತಿಭಾಶಾಲಿ ವಿಜಯನಗರವನ್ನು ಕಣ್ಣಾರೆ ನೋಡಲು ಆ ಇರಾಣದ ರಾಯಭಾರಿ ಹೊರಟಿದ್ದನು.

ವಿಜಯನಗರದಲ್ಲಿ ಆ ರಾಯಭಾರಿ ನೋಡಿದುದೇನು? ವಿಜಯನಗರವನ್ನೇ ನೋಡಿದನು. ಎಲ್ಲ ದೃಷ್ಟಿಯಿಂದ ವಿಜಯಶ್ರೀಯು ಅಲ್ಲಿ ನಲಿದಾಡುತ್ತಲಿದ್ದಳು. ಅಂತಹ ವಿಜಯಲಕ್ಷ್ಮಿಯಿಂದೊಡಗೂಡಿದ ವಿಜಯನಗರವನ್ನೇ ನೋಡಿದನು. ಅದನ್ನು ಅವನು ಬಣ್ಣಿಸಿದಂತೆಯೇ ತಮ್ಮೆದುರು ಇಡುವೆನು:

'ಬಿಜನಗರ ರಾಜ್ಯವು ಸರಂದೀಪ (ಸಿಂಹಲದ್ವೀಪ)ದಿಂದ ಕಲಬುರ್ಗಿಯವರೆಗೂ ಬಂಗಾಲದಿಂದ ಮಲಬಾರದ ವರೆಗೂ ಹಬ್ಬಿದೆ. ಈ ರಾಜ್ಯದಲ್ಲಿ ಮೂರು ನೂರು ಉತ್ತಮ ಬಂದರಗಳಿವೆ. ಬೆಟ್ಟದಂತಹ ಸಾವಿರ ಆನೆಗಳಿವೆ. ಹನ್ನೊಂದು ಲಕ್ಷ ವೀರ ಭಟರಿರುವರು. ಇಡೀ ಹಿಂದುಸ್ಥಾನದಲ್ಲಿ ಈ ರಾಜನಿಗಿಂತ ಹೆಚ್ಚು ಬಲಿಷ್ಠನಾದ ರಾಜನಿಲ್ಲ.

ಆಹ! ಬಿಜನಗರ ಪಟ್ಟಣವನ್ನು ಏನೆಂದು ಬಣ್ಣಿಸಲಿ! ಭೂಮಂಡಲದ ಮೇಲೆ ಇಂತಹ ಇನ್ನೊಂದು ನಗರಿಯನ್ನು ಕಣ್ಣುಗಳು ನೋಡಿಲ್ಲ. ಕಿವಿಗಳು ಕೇಳಿಲ್ಲ. ಇದರ ಸುತ್ತಲೂ ವರ್ತುಲಾಕಾರವಾಗಿ, ಒಂದರೊಳಗೊಂದು ವರ್ತುಲಾಕಾರವಾಗಿ ಏಳು ಕೋಟೆಗಳಿವೆ. ಇವುಗಳೊಳಗೆ ಬಗೆಬಗೆಯ ಪೇಟೆಗಳೂ ಅಂಗಡಿಯ ಸಾಲುಗಳೂ

ಇಟ್ಟುಕೊಂಡಿರುವವು. ಒಂದೊಂದು ಪೇಟೆಯ ನಡುವೆ ಎತ್ತರವಾದೊಂದು ಉಪ್ಪರಿಗೆಯ ಮನೆಯಿದೆ. ಇವೆಲ್ಲವುಗಳಿಗಿಂತ ಉತ್ತುಂಗವಾಗಿ ರಾಯನ ಅರಮನೆಯು ಮೆರೆಯುತ್ತಲಿರುವದು.

ಇಲ್ಲಿ ಬೇರೆ ಬೇರೆ ವರ್ತಕ ಸಂಘಗಳಿರುವುವು. ಇಲ್ಲಿಯ ಜನರು ಶೃಂಗಾರ ಪ್ರಿಯರು. ಇಲ್ಲಿ ನೋಡಿದತ್ತ ಸಂಪತ್ತು, ಸುಗಂಧ ಸಮೃದ್ಧಿ. ಸುವಾಸನೆಯುಳ್ಳ ಹೂಗಳು ಇಲ್ಲಿ ಹನ್ನೆರಡೂ ಕಾಲ ದೊರೆವುವು. ಬಯಲು ಬೀದಿಗಳಲ್ಲಿ ಮುತ್ತು, ಮಾಣಿಕ, ಪಚ್ಚ, ರತ್ನಗಳ ವ್ಯಾಪಾರ ನಡೆವುದು. ಹಣವಂತರ ಮಾತಂತಿರಲಿ; ಬೇಸಾಯಗಾರರೂ ಸಾಮಾನ್ಯ ಜನರೂ ಚಿನ್ನ-ರನ್ನದ ಆಭರಣಗಳನ್ನು ಧರಿಸುವರು. (ವಿಜಯನಗರ ಸಾಮ್ರಾಜ್ಯ ಪುಟ ೬೩) ಇದೀಗ ಇರಾಣದ ರಾಯಭಾರಿ ಅಬ್ದುಲ್ ರಜಾಕನು ನೋಡಿ, ನಲಿದಾಡಿ ಸಂಪೂರ್ಣ ತೃಪ್ತಿಹೊಂದಿ ಅತ್ಯಾನಂದದಿಂದ ಬಣ್ಣಿಸಿದ ಸುಂದರವಾದ ವಿಜಯನಗರವು 'ಭೂಮಂಡಲದ ಮೇಲೆ ಇಂತಹ ಇನ್ನೊಂದು ನಗರಿಯನ್ನು ಕಣ್ಣುಗಳು ನೋಡಲಿಲ್ಲ; ಕಿವಿಗಳು ಕೇಳಲಿಲ್ಲ.' ವಿಜಯನಗರದ ಸೌಂದರ್ಯಕ್ಕೆ ಸರಿಯಾದ ಅಲಂಕಾರವಿದು. ಕನ್ನಡಿಗರನ್ನು ಹೆಮ್ಮೆಯ ಶಿಖರಕ್ಕೆ ತಲುಪಿಸುವ ಉಚ್ಚ ವಿಚಾರವಿದು, ಆತ ಮುಹಮ್ಮದೀಯನು. ಸದ್ಯಕ್ಕಲ್ಲದಿದ್ದರೂ ಆಗಿನ ಕಾಲಕ್ಕೆ ಹಿಂದೀಯರ ವೈರಿಯಾಗಿದ್ದನು. ಈ ಸಂಗತಿಯನ್ನಾವ ಆಳುವರಸಿನ ದಾಕ್ಷಿಣ್ಯಕ್ಕೊಳಗಾಗಿ ಹೇಳಲಿಲ್ಲ. ತನ್ನ ನಗರಕ್ಕೆ ಮರಳುವಾಗ್ಗೆ ವಿಜಯನಗರದ ಅತ್ಯಂತ ಮಧುರವಾದ ಸ್ಮೃತಿಯುಳಿಯೆ ಬರೆದಿಟ್ಟ ಬಣ್ಣನೆಯಿದು. ಇಂತಹ ಸಂಭಾವನೆ ಪಡೆದ ಆ ಕನ್ನಡಿಗರೇ ಧನ್ಯರು!

ಸೌಂದರ್ಯ ಶಿಖರದಲ್ಲಿ ರಂಜಿಸುತ್ತಲಿದ್ದ ಆ ವಿಜಯನಗರದ ವಿಜಯೀ ದಿವ್ಯ ಪ್ರಭೆಯನ್ನವಲೋಕಿಸುತ್ತ ಮೂವರೂ ಹೊರಟಿದ್ದರು. ಯುವರಾಜ ಅಲ್ಲಲ್ಲಿ ರಾಯಭಾರಿಗೆ ಅನೇಕ ವಿಷಯಗಳನ್ನು ತಿಳಿಸುತ್ತಲಿದ್ದನು. ರಾಯಭಾರಿ ಬಾಯಿ ತೆರೆದು ನೋಡುತ್ತಲಿದ್ದನು. ಒಂದಕ್ಕಿಂತಲೂ ಒಂದು ಸುಂದರ ನವರತ್ನಗಳಿಂದ ತುಂಬಿ ಹೊಳೆಯುತ್ತಲಿದ್ದ ಪೇಟೆಯ ಸೌಂದರ್ಯ ನೋಡುವಷ್ಟರಲ್ಲಿಯೇ ಅತ್ಯಂತ ರಮಣೀಯವಾಗಿ ಕಟ್ಟಲ್ಪಟ್ಟ ಶಿಲ್ಪಕಲೆಯುಳ್ಳ ದೇವಾಲಯಗಳ ಸೌಂದರ್ಯದಲ್ಲಿ ಮನಸ್ಸು ತೊಡಗಿ ಹೋಗುವುದು. ಅಷ್ಟರಲ್ಲಿಯೇ ಸುಂದರವಾದ ವಸನಾಲಂಕಾರಗಳಿಂದ ಸುಶೋಭಿತರಾಗಿ ದೇವದರುಶನಕ್ಕೆ ಹೊರಟ ಸುಂದರಾಂಗನೆಯರ ತಂಡ ಕಣ್ಸೆಳೆಯುವುದು. ಹೀಗೆ ಅನೇಕ ಭಿನ್ನ ಭಿನ್ನ ಕಲಾಪೂರ್ಣ ನೋಟಗಳನ್ನು ನೋಡುತ್ತ ನಡೆದಿದ್ದರು.

ದಾರಿಯಲ್ಲಿ ಅನೇಕರು ಯುವರಾಜನನ್ನು ಕಾಣುತ್ತಲೆ ತಲೆಬಾಗಿ ನಮಸ್ಕರಿಸುತ್ತಲಿದ್ದರು. ಅವರ ನಮಸ್ಕಾರ ಸ್ವೀಕರಿಸಿ ,ಅವರಿಗೆ ರಾಯಭಾರಿಯ ಪರಿಚಯ ಮಾಡಿಕೊಡುತ್ತಲಿದ್ದನು. ಆಗ ಆ ಕನ್ನಡ ಪ್ರಜೆಗಳು ತಮ್ಮ ಹೆಮ್ಮೆಯ ವಿಜಯನಗರ, ತಂದೆಯಂತಿದ್ದ ದೊರೆ, ಬಂಧುವಿನಂತಿದ್ದ ಯುವರಾಜನ ಈ ಬಗ್ಗೆ ಮುಕ್ತ ಕಂಠದಿಂದ ಸ್ತುತಿಸುವರು. ಆ ಸಮಯಕ್ಕೆ ರಾಯಭಾರಿಗೆ ಅತೀವ ಹರ್ಷವಾಗುವದು.

ಅಲ್ಲಲ್ಲಿ ಅನೇಕ ಮಹಮ್ಮದೀಯರು ಭೀತಿಯಿಲ್ಲದೆ ಹಿಂದೀಯರೊಡನೆ ಒಂದಾಗಿ ವ್ಯವಹಾರ-ವ್ಯಾಪಾರ ಸಾಗಿಸುತ್ತಲಿದ್ದರು. ಈ ನೋಟದಿಂದಂತೂ ರಾಯಭಾರಿ ಆನಂದ ತುಂದಿಲನಾಗಿ ಯುವರಾಜನನ್ನು ಬಹಳವಾಗಿ ಹೊಗಳಿದನು.

ವಿರೂಪಾಕ್ಷ ಅವೆಲ್ಲವನ್ನೂ ನೋಡುತ್ತಲಿದ್ದನು. ಪ್ರತಿದಿನವೂ ನೋಡುತ್ತಲಿದ್ದನು. ದಿನವೂ ಅನೇಕ ಸಂಗತಿ-ಸನ್ನಿವೇಶಗಳನ್ನು ನಿರಕಿಸುತ್ತಲಿದ್ದನು. ಅನೇಕ ಸಲ ಮತ್ತೆ ಮತ್ತೆ ವಿಚಾರಿಸುವನು; ಆದರೆ ಪ್ರತಿಕ್ಷಣವೂ ಅವನ ಮನೋವ್ಯಗ್ರತೆ-ದ್ವೇಷಬುದ್ಧಿಗಳು ಏರುತ್ತಲೇ ಇದ್ದುವಲ್ಲದೆ ಇಳಿಯಲಿಲ್ಲ. ಎಲ್ಲಿ ನೋಡಿದರೂ ಯುವರಾಜನ ಹೆಸರೇ ಮುಂದೆ ಬರುತ್ತಿದೆಯಲ್ಲ! ಈ ಪರಕೀಯ ಪ್ರವಾಸಿ ಬಂದಿರುವನು. ಈತನಿಗೆ ಕರ್ನಾಟಕ ರಾಜ್ಯದಲ್ಲಿ ಯುವರಾಜನನ್ನುಳಿದು ಬೇರೆ ಜನರಿರುವ ಅರಿವಾದರೂ ಇದೆಯೋ? ಕಳೆದ ಯುದ್ಧದಲ್ಲಿ ಆತನೇ ವಿಜಯ ಸಂಪಾದಿಸಿದನಂತೆ. ಯಾವ ಸರದಾರ-ಸಾಮಂತ ಕೂಡಿದರೂ ಯುವರಾಜನನ್ನೇ ಬಣ್ಣಿಸುವ. ಯಾವ ಪ್ರಜೆ ಮುಂಬಂದರೂ ಯುವರಾಜನ ಹೆಸರು ತೆಗೆದುಕೊಂಡೇ-ಎಲ್ಲಿ ನೋಡಿದಲ್ಲಿ ಯುವರಾಜನೇ ಯುವರಾಜನು. ಭಾಪು! ಭಾಪು! 'ಸರ್ವೇಗುಣಾಃ ಕಾಂಚನಮಾಶ್ರಯಂತಿ' ಎಂಬ ಕವಿವಚನ ತೀರಾ ಸತ್ಯವಾಗಿದೆ. ಕರ್ನಾಟಕ ಸಾಮ್ರಾಜ್ಯದ ಯುವರಾಜನಿರುವನು; ಭಾವೀ ಸಮ್ರಾಟನಿರುವನು. ಮುಗಿಯಿತು. ಹೀಗಿದ್ದ ಆತ ಮಾನವನೇ? ಅಲ್ಲವೇ ಅಲ್ಲ. ಸಕಲ ಸದ್ಗುಣ ಪರಿಪೂರ್ಣ ಸತ್ಪುರುಷನೇ- ಪೂರ್ಣತ್ವ ಪಡೆದವನೆಂದರೆ ಅವನೇ. ಇವೆಲ್ಲಕ್ಕೂ ಕಾರಣವು ಆ ಯುವರಾಜಪದವಲ್ಲವೆ........? ಆತ ತನ್ನ ಕುದುರೆಯ ಮೇಲೆ ಕುಳಿತಿದ್ದನು. ಕುದುರೆ ಮುಂದುವರೆದಿದ್ದಿತು. ಆದರವನಾ ಚಿತ್ತ ಕಡಿವಾಣವಿಲ್ಲದ ಕುದುರೆಯಂತೆ ಅವೆಲ್ಲಿಯೋ ಹೋಗಿಬಿಟ್ಟಿದ್ದಿತು.

ವಿರೂಪಾಕ್ಷ ತನ್ನ ಕಾರ್ಯಚಾತುರ್ಯಗಳ ಪರಿಣಾಮವಾಗಿ ಕರ್ನಾಟಕ ಸಿಂಹಾಸನವನ್ನೇ ಸೆಳೆದುಕೊಂಡಿರುತ್ತಾನೆ. ಈಗ ಆತನೇ ಕರ್ನಾಟಕದ ಭಾವೀ ಸಾರ್ವಭೌಮ. ಎಲ್ಲಿ ನೋಡಿದಲ್ಲಿ ವಿರೂಪಾಕ್ಷನ ಜಯಜಯಕಾರವೇ ನಡೆದಿದೆ. ಪ್ರತಿಯೊಬ್ಬನೂ ವಿರೂಪಾಕ್ಷನನ್ನು ಮನಃಪೂರ್ವಕವಾಗಿ ಹೊಗಳುತ್ತಲಿದ್ದಾರೆ. ಯುವರಾಜನ ಹೆಸರು ಕೂಡ ಕೇಳಬರುವದಿಲ್ಲ. ವಿರೂಪಾಕ್ಷ ಹೃಷ್ಟಮನಸ್ಕನಾಗಿ ಹೆಮ್ಮೆಯಿಂದ ನಿಂತಿರುವಾಗಲೇ ಚಾರುಮುಖಿ, ಸುರಸುಂದರಿ, ಹೇಮಾಂಬಿಕೆ ಮುಗುಳು ನಗೆಯಿಂದ ಮುಂಬಂದು ವಿರೂಪಾಕ್ಷನನ್ನು ಸ್ವಾಗತಿಸುತ್ತಾಳೆ.

'ಏಕೆ ಹೇಮಾ, ಹೇಗಿದೆ ವಿರೂಪಾಕ್ಷನ ಪ್ರತಾಪ?'

'ಕುಮಾರ, ನಿಮ್ಮ ಕೌಶಲ್ಯ ನನಗೆ ತಿಳಿಯಲಿಲ್ಲ. ಇಲ್ಲವಾಗಿದ್ದರೆ ಮೊದಲಿನಿಂದಲೂ ನಿಮ್ಮನ್ನೇ ಆದರಿಸುತ್ತಲಿದ್ದೆ ಕುಮಾರ........'

'ಈಗ ವಿರೂಪಾಕ್ಷ ಯುವರಾಜನಾಗಿರುವನು.'

'ಅಹುದು; ಅದನ್ನು ನಾನು ಬಲ್ಲೆ. ಆದರೂ ನನಗೆ ಕುಮಾರ ಶಬ್ದದಲ್ಲಿಯೇ ಆನಂದವೆನಿಸುತ್ತದೆ. ನಾನು ಕುಮಾರ ಎಂದು ಕರೆಯಬಹುದೆ?'

'ಹೇಮಾ, ನಿನಗೆ ಹೇಗೆ ಆನಂದವೆನಿಸುತ್ತಲಿದೆಯೋ ಹಾಗೆ ಮಾಡು. ನಿನ್ನ ಸಲುವಾಗಿಯೇ ನಾನಿಷ್ಟೆಲ್ಲ ಕಷ್ಟ ಸಹಿಸಬೇಕಾಯಿತು.'

'ಅಂ, ನನ್ನ ಸಲುವಾಗಿಯೇ? ಅದೇಕೆ?'

'ಏಕೆಂದರೇನು? ಹೇಮಾ, ನಾನಿಷ್ಟು ಕರ್ತೃತ್ವಶಕ್ತಿ ತೋರದಿದ್ದರೆ, ನೀನು ನನ್ನ ಅರ್ಧಾಂಗಿಯಾಗಲು ಸಮ್ಮತಿಸುತ್ತಲಿದ್ದೆಯಾ?'

'ಇಲ್ಲ; ಏಕೆಂದರೆ ಆ ವರೆಗೆ ನಿಮ್ಮ ಯೋಗ್ಯತೆಯೇ ತಿಳಿಯುತ್ತಲಿರಲಿಲ್ಲ.'

'ಅಂತೆಯೇ ನಾನೀಗ ನನ್ನ ಶೌರ್ಯ-ಚಾತುರ್ಯಗಳನ್ನು ತೋರಿಸಬೇಕಾಯಿತು.'

'ನಾನೊಂದು ಉಪಕಾರವನ್ನೇ ಮಾಡಿದಂತಾಯಿತು. ನನ್ನ ಮೂಲಕ ಕುಮಾರರ ನಿಜವಾದ ಶಕ್ತಿ ಜನತೆಗೆ ತಿಳಿಯಬಂದಿತು.'

'ನಿಜ; ಹೇಮಾ, ನನ್ನ ಈ ಪ್ರಯತ್ನ ಸಾರ್ಥಕವಾಗ—'

'ಮತ್ತೆ ಬಂದುದೇ ಅದಕ್ಕೆ'

ಹೀಗೆ ನುಡಿದು, ಹೇಮಾಂಬಿಕಾ ತನ್ನ ಕೋಮಲ ಕರಪಲ್ಲವಗಳಿಂದ ಸುಮನಸಗಳ ಹಾರವೊಂದನ್ನು ಹಾಕಿದಳು.

ವಿರೂಪಾಕ್ಷ ಕಣ್ದೆರೆದು ನೋಡುತ್ತಾನೆ; ಕೊರಳಲ್ಲಿ ಹಾರವಿದ್ದಿತು. ಎದುರಿನಲ್ಲಿ ಹೇಮಾಂಬಿಕೆಯ ಬದಲು ನಗರದ ಮುಖ್ಯ ಶ್ರೇಷ್ಠಿ ನಿಂತಿದ್ದನು.

ರಾಯಭಾರಿಯನ್ನು ಮನ್ನಿಸಲು ಆತ ಮೂವರಿಗೂ ಮಾಲೆ ಹಾಕಿದ್ದನು.

---

## ೭ ಗುಪ್ತ ಕಟ.

ಮನುಷ್ಯ ಸ್ವಭಾವವೇ ಬಲು ವಿಚಿತ್ರವಾದುದು. ಯಾವನಾದರೂ ಬರಿಯ ತನ್ನ ಕಲ್ಪನೆಯ ಕಾಲಮೇಲೆಯೇ ನಿಲ್ಲದೆ ಬೇರೆ ಬೇರೆ ಸಾಧನದ ಶೋಧ ಮಾಡುತ್ತಿರುತ್ತಾನೆ. ಅಂತೆಯೇ ವಿಚಾರ-ವಿನಿಮಯ, ಗ್ರಂಥಾವಲೋಕನ, ಉಪದೇಶ-ಶ್ರವಣ ಮುಂತಾದ ಸಾಧನಗಳಿಗೆ ಮಹತ್ವ ಬಂದಿದೆ. ಅನೇಕ ಸಲ ನಮ್ಮ ವಿಚಾರಗಳಲ್ಲಿ, ಅಭಿಪ್ರಾಯಗಳಲ್ಲಿ, ಒಂದೊಂದು ಸಲ ಸ್ವಭಾವದಲ್ಲಿ ಕೂಡಾ ಮಾರ್ಪಾಟು ಮಾಡಬೇಕಾಗುತ್ತದೆ. ಬೇರೆಯವರ ವಿಚಾರ ತಿಳಿದು, ತನ್ನ ಯೋಚನೆ ಅಳೆದು ನಡೆಯುವವನೇ ವಿವೇಕಿಯು; ಆದರೆ ಇಂತಹ ವಿವೇಕಿಯೂ ಒಂದೊಂದು ಸಲ ವಿವೇಕವನ್ನೇ ಮರೆಯುತ್ತಾನೆ. ಒಂದೊಂದು ಸಲ ಬೇರೆಯವರಲ್ಲಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ತನಗಿಂತಲೂ ಬಲ್ಲಿದರು, ಹಿರಿಯರು ಏನು ಹೇಳಿದರೂ ಕೇಳದೆ, ತನ್ನ ಅಭಿಪ್ರಾಯಕ್ಕೇನೇ ಅಂಟಿಕೊಳ್ಳುತ್ತಾನೆ. ಅದನ್ನೇ ಆಚರಣೆಯಲ್ಲಿ ತರುತ್ತಾನೆ. ಆದೇಕೆ? ಎಂದು ಯಾರಾದರೂ ಕೇಳಿದರೆ, ಮನುಷ್ಯ ಸ್ವಭಾವ ಎಂದೊಂದೇ ಉತ್ತರ ಹೊರಡುತ್ತದೆ.

ತಪ್ಪುತ್ತಾನೆಂದೇ ಆತನು ಮನುಷ್ಯ; ಇಲ್ಲವಾದರೆ ಆತ ಭೂಲೋಕದಲ್ಲಿರುವ ಅಗತ್ಯವೇ ಇರಲಿಲ್ಲ; ಆದರೆ ಒಂದು ವಿಶೇಷವೆಂದರೆ, ಅವನೇನೋ ತನ್ನ ಮಟ್ಟಿಗೆ ತಪ್ಪುತ್ತಾನೆ. ಅದು ಅವನ ಸ್ವಭಾವ. ತಪ್ಪಿಗೆ ತಕ್ಕಂತೆ ಅವನಿಗೆ ಫಲವೂ ಸಿಕ್ಕುವದು. ಆವಾಗಲೂ ನಡೆಯುವ ಸಂಗತಿಯಿದು; ಆದರೆ ಒಂದೊಂದು ಸಲ ಒಬ್ಬನ ಒಂದು ತಪ್ಪಿಗಾಗಿ ಅನೇಕರು ತಮ್ಮ ಯಾವ ದುಷ್ಟಹೇತುವಿಲ್ಲದೆ ನಷ್ಟಕ್ಕೊಳಗಾಗುತ್ತಾರೆ;-ಕಷ್ಟಪಡುತ್ತಾರೆ.

ವಿಶ್ವಪ್ರಯತ್ನದಿಂದ ಸಿಂಹಾಸನ ಪಡೆದೇ ತೀರಬೇಕೆಂಬ ವಿರೂಪಾಕ್ಷನ ಆಶೆ ಬಲವಾಗುತ್ತಲೇ ನಡೆಯಿತು. ಕೆಲವು ಕಾಲ ಅದು ಅವನ ವಿಚಾರಪ್ರಪಂಚದಲ್ಲಿಯೇ ಬೆಳೆಯುತ್ತಲಿದ್ದಿತು. ಬಾಡುವಂತೆ ಅದಕ್ಕೆ ಅಲ್ಲಿ ಯಾವ ಕ್ರಿಮಿ-ಕೀಡಿಗಳೂ ಹತ್ತಲಿಲ್ಲ. ತದ್ವಿರುದ್ಧವಾಗಿ ನಿತ್ಯವೂ ನೀರು-ಗೊಬ್ಬರಗಳು ವಿಶೇಷವಾಗಿಯೇ ದೊರೆಯಹತ್ತಲು ಅದು ಚನ್ನಾಗಿ ಬೆಳೆಯಿತು. ಮುಂದೆ ಬೇಗನೆ ವಿಚಾರ ಪ್ರಪಂಚದಿಂದ ಆಚಾರಪ್ರಪಂಚಕ್ಕಿಳಿಯಿತು. ಅಲ್ಲಿಯಾದರೂ ಅದಕ್ಕೆ ಆತಂಕವೇನೂ ಬರುವಂತೆ ತೋರಲಿಲ್ಲ. ಬೇಗನೆ ಬೆಳೆದು ದೊಡ್ಡದಾಗಿ ಒಡೆಯನಿಗೆ ಫಲಗಳನ್ನುಣಿಸುವಂತೆ ತೋರುತ್ತಲಿದ್ದಿತು.

ವಿರೂಪಾಕ್ಷನಿಗೆ ಪ್ರಧಾನ ಸಹಾಯಕ ಆತನ ತಂದೆ; ಅಥವಾ ಆ ತಂದೆಗೇನೇ ವಿರೂಪಾಕ್ಷ ಸಹಾಯಕನಾಗಿದ್ದಾನೇದರೆ ಸಲ್ಲಬಹುದು. ಯಾರಿಗೆ ಯಾರು ಸಹಾಯಕರೆಂದು ಹೇಳಲು ಬರುವಂತಿಲ್ಲವಾದರೂ ಇಬ್ಬರೂ ಸಿಂಹಾಸನ ಪಡೆಯುವ ಹೊಂಚು ಹಾಕುತ್ತಲಿದ್ದುದು ಮಾತ್ರ ಸತ್ಯ. ಇವರೀರ್ವರಿಗೆ ಪೂರ್ಣ ಸಹಾಯಕಳು ಮಾತ್ರ ವಿರೂಪಾಕ್ಷನ ತಾಯಿಯಾಗಿದ್ದಳು. ಮೂವರು ಅವೆಷ್ಟೋ ಸಲ ಒಂದುಗೂಡಿ ಬಹಳಪಾಗಿ ವಿಚಾರಿಸುತ್ತಲಿದ್ದರು; ಚರ್ಚಿಸುತ್ತ ಲಿದ್ದರು.

ಒಂದು ದಿನ ಇರುಳ ಸಮಯ. ಪ್ರತಾಪದೇವರಾಯ ತನ್ನ ಮನೆಯ ಏಕಾಂತ ಕೋಣೆಯಲ್ಲಿ ಸಚಿಂತ ಮುದ್ರೆಯಿಂದ ಕುಳಿತಿದ್ದನು. ಅವನ ಮುಖದಿಂದ ಅಕ್ಷರಗಳು ಹೊರಡುತ್ತಲಿರಲಿಲ್ಲ; ಆದರೆ ಹೃದಯದಲ್ಲಿ ಭೀಕರ ಬಿರುಗಾಳಿ ಬೀಸುತ್ತಲಿದ್ದಿತು. ಅದೆಂತಹ ಬಲವುಳ್ಳ ಬಿರುಗಾಳಿಯದು! ಬೀಸುತ್ತಲೇ ಎಷ್ಟೋ ಆಶಾಮಂದಿರಗಳನ್ನೆಲ್ಲ ನಷ್ಟಗೊಳಿಸಿಬಿಟ್ಟಿತು. ಅದೆಷ್ಟೋ ಆಶಾವೃಕ್ಷಗಳು ಬೇರು ಸಹಿತ ಕಿತ್ತುಬಿದ್ದುವು. ಅದೆಷ್ಟೋ ಸುಂದರ ಆಶಾಜಲಪೂರಿತ ಕಾಸಾರಗಳು ಶುಷ್ಕವಾದುವು. ಅದೆಷ್ಟೋ ಪ್ರಖರ ಆಶಾಜ್ಯೋತಿಗಳು ನಂದಿಹೋದುವು. ಅಂತರ್ಜಗವೆಲ್ಲವೂ ಸಹರಾದ ಮರುಭೂಮಿಗಿಂತಲೂ ಭೀಕರವಾದ ಮರಳು ದೇಶವಾಯಿತು. ಅಲ್ಪಾವಕಾಶದಲ್ಲಿ ಪ್ರತಾಪದೇವರಾಯನ ತಲೆತಿರುಗಹತ್ತಿತು—'ನಾನು ಜೀವಿಸುವುದೇಕೆ? ನನ್ನ ಜನ್ಮದ ಇತಿಕರ್ತವ್ಯವೇನು? ನಾನು ಹುಟ್ಟಿ ಬೆಳೆದು ಯಾವ ಕಾರ್ಯ ಕೈಗೂಡಿಸಿದೆನು? ನನ್ನಿಂದ ಯಾರಿಗೆ ಸುಖ ದೊರಕಿತು? ನನ್ನ ಹೊಟ್ಟೆಯ ಮಗನಿಗೆ ಏನಾದರೂ ಸನ್ಮಾನ ಸಿಕ್ಕುವಂತಾಚರಿಸಿದೆನೆ? ನನ್ನ ಪತ್ನಿಗೆ ಮನ್ನಣೆ ದೊರೆಯುವಂತೆ ಮಾಡಿದೆನೆ? ಸ್ವತಃ ನನ್ನಷ್ಟಕ್ಕೆ ನಾನು ಮನ್ನಣೆ ದೊರಕಿಸಿದೆನೆ?........ಒಂದೂ ಇಲ್ಲ. ಈ ಎಲ್ಲ ಸಂಗತಿ

ಗಳಲ್ಲಿ ನಾನು ಒಂದನ್ನೂ ಸಾಧಿಸಲಿಲ್ಲ. ಮನುಷ್ಯನಾಗಿ ಹುಟ್ಟಿ ಕ್ರಿಮಿ-ಕೀಟಕಕ್ಕಿಂತಲೂ ಕೀಳಾದ ಬಾಳು ನನ್ನದಿರುವದು........'

ಇಂತಹ ವಿಚಾರಗಳು ಅವನನ್ನು ಅನೇಕ ಸಲ ಸಂಕಟಕ್ಕೆ ಗುರಿಪಡಿಸಿದ್ದುವು. ಅದರ ಮೂಲಕ ಅವನು ಅನೇಕ ಸಲ ತನ್ನನ್ನು ತಾನೇ ದೂಷಿಸಿಕೊಂಡಿದ್ದನು. ಮತ್ತೆ ಮತ್ತೆ ಅವನ ಮನವೇ ಅವನನ್ನು ತಿನ್ನ ಹತ್ತಿದ್ದಿತು. ಮತ್ತೆ ಮತ್ತೆ ಆ ಒಂದೇ ಒಂದು ಪ್ರಶ್ನೆಯನ್ನೇ ಯೋಚಿಸುತ್ತಿದ್ದನು. ಮಗನು ಶೂರನಿದ್ದನು. ಜಾಣನಿದ್ದನು. ಚತುರನಿದ್ದನು. ಆದರೂ ಅವನಿಗೆ ಅಲ್ಪವಾದರೂ ಮನ್ನಣೆ ಕೂಡದೇ? 'ಗುಣಾಃಪೂಜಾಸ್ಥಾನಂ' ಎಂಬದು ಸಟಿಯಾಗಿ ಹೋಯಿತೇ? ಮಹದನ್ಯಾಯವು. ಇಂತಹ ಅನ್ಯಾಯಕ್ಕೆ ಪ್ರತಿಫಲ ಕೂಡದೇ?—

ಇತ್ತ ವಿರೂಪಾಕ್ಷನ ಸ್ಥಿತಿಯಾದರೂ ಹಾಗೆಯೇ ಆಗಿದ್ದಿತು. ತನ್ನ ತಾರುಣ್ಯ, ಶೌರ್ಯ, ವೀರ್ಯಾದಿಗಳೆಲ್ಲವೂ ವ್ಯರ್ಥವೆಂದು ಬಗೆದನು. ತನ್ನ ಜೀವನವೆಂದರೆ ತಿಪ್ಪಿಯಲ್ಲಿ ತಪ್ಪಿ ಬಿದ್ದ, ಯಾರ ಕೈಗೂ ಸಿಕ್ಕದ ಮಾಣಿಕವೆಂದು ಬಗೆದನು. ತನ್ನ ದುರವಸ್ಥೆಗೆ ಕಾರಣವೇನೆಂದು ಬಹಳವಾಗಿ ಯೋಚಿಸಿದನು. "ಆಸ್ತೇ ಭಗ ಆಸೀನಸ್ಯ ಊರ್ಧ್ವಸ್ತಿಷ್ಠತಿ ತಿಷ್ಠತಃ। ಶೇತೇನಿಪದ್ಯ ಮಾನಸ್ಯ ಚರತಿ ಚರತೋಭಗಃ।" ಎಂಬ ಸುಭಾಷಿತವು ಅವನ ಸ್ಮರಣೆಗೆ ಮೇಲಿಂದ ಮೇಲೆ ಬರಹತ್ತಿದ್ದಿತು. 'ವಿರೂಪಾಕ್ಷ, ಜನರು ನಿನಗೆ ಮನ್ನಣೆ ಕೊಡುವದಿಲ್ಲ. ಯಾರೂ ನಿನ್ನನ್ನು ಕೇಳುವುದಿಲ್ಲ. ಕಿಂಕರನಿಗಿಂತಲೂ ಕಿಂಕರ ನೀನಾಗಿರುವೆ—ಇದಕ್ಕೆಲ್ಲ ಕಾರಣವೇನೆಂದು ಬಲ್ಲೆಯಾ? ಒಂದುಸಲವಾದರೂ ವಿಚಾರಿಸಿರುವೆಯಾ? ಒಮ್ಮೆಯಾದರೂ ತಿಳಿದು ನೋಡಿರುವೆಯಾ? ತಿಳಿಗೇಡಿ. ಅನ್ಯರು ಮನ್ನಿಸದಿದ್ದರೆ ಅದು ಅವರ ದೋಷವೆ? ಎಂದೂ ಅಲ್ಲ. ಇದ್ದಲಿಯಲ್ಲಿ ಕಾಲಿಟ್ಟರೆ ತಪ್ಪಾರದು? ಜನರದೆ! ಅಲ್ಲ-ಅಲ್ಲ! ಎಂದೂ ಅಲ್ಲ. ಅದು ಇದ್ದಲಿಯ ದೋಷವೇ? ಇದ್ದಲಿಯಲ್ಲಿ ಕಾಲಿಟ್ಟರೆ ನಷ್ಟವೇನು? ಇದ್ದಲಿ ಕಾಲಿಗೇನಾದರೂ ಮಾಡಬಲ್ಲದೆ? ನಿರ್ಬಲ, ನಿಸ್ಸಹಾಯ, ನಿರುಪಯೋಗಿ ಇದ್ದಲಿ! ಅದೇ ಆ ಇದ್ದಲಿ ಬರಿಯ ಇದ್ದಲಿಯಾಗಿರದೆ, ಅಗ್ನಿಯುಳ್ಳ ಕೆಂಡವಾಗಿದ್ದರೆ, ಒಬ್ಬನಿಗಾದರೂ ಕಾಲಿಕ್ಕುವ ಎದೆಯಾದೀತೆ? ಅಪ್ಪಿತಪ್ಪಿ ಇಟ್ಟರೆ, ಆ ಕೆಂಡವಾದರೂ ಸಹಿಸಬಹುದೆ? ಇಟ್ಟವನ ಕಾಲು ಸುಟ್ಟು ಸೂರೆಗೊಳ್ಳಲಿಕ್ಕಿಲ್ಲವೆ? ರಾಶಿ ಇದ್ದಲಿಯಿದ್ದರೂ ಆಗದ ಕೆಲಸ, ಒಂದು ಕಿಡಿ ಬೆಂಕಿಯಿಂದಾಗುತ್ತದಲ್ಲವೆ? ಏಳು, ವಿರೂಪಾಕ್ಷ, ಈಗ ಇದ್ದಲಿಯೆಂದು ತಿಳಿದು ನಿನ್ನ ಮೇಲಿಕ್ಕಿದವರ ಕಾಲಿಗೆ ನಿನ್ನಲ್ಲಿ ಬೆಂಕಿಯ ಅಸ್ತಿತ್ವವಿರುವಂತೆ ತೋರಿಸಿಕೊಡು. ಒಮ್ಮೆ ಒಬ್ಬನಿಗೆ ನಿನ್ನ ಝಳ ಬಡಿದರೆ, ಮುಂದೆ ಯಾರೂ ಸಮೀಪಕ್ಕೆ ಸಹ ಸುಳಿಯರು—'

ಹೀಗೆ ತಂದೆ ಮಕ್ಕಳೀರ್ವರಲ್ಲಿಯೂ ಒಂದು ಭೀಕರ ಚಳವಳಿಯುತ್ಪನ್ನವಾಗಿದ್ದಿತು. ಒಂದೇಸವನೆ ನಡೆದ ಬಲವಾದ ಚಳವಳಿಯು ಸುಮ್ಮನೆ ಕೂರಗೊಟ್ಟೀತೇ? ಇಬ್ಬರೂ ಹಲವು ಸಲ ಒಂದೆಡೆ ಕಲೆತು ಚರ್ಚಿಸಿದರು. ಮತ್ತೂ ಮತ್ತೂ ಚರ್ಚೆ ನಡೆಯುತ್ತಲೇ ಇದ್ದಿತು.

ತಂದೆ:—ವಿರೂಪಾಕ್ಷ, ಏನು ಮಾಡಬೇಕೆಂದು ನಿನ್ನ ಯೋಚನೆಯಿದೆ?

ಮಗ:—ಪಿತಾಜಿಯವರೇ, ನನ್ನ ಮತಿ ಗುಂಗಾಗಿಹೋಗಿದೆ. ಅನ್ಯಾಯವನ್ನು ತಾಳಿ, ಅಪಮಾನವನ್ನು ಸಹಿಸಿ, ಔದ್ಧತ್ಯವನ್ನು ನೋಡಿ ನನ್ನ ಬುದ್ಧಿಭ್ರಂಶವಾಗಿದೆ. ಅದರಲ್ಲಿ ಒಂದೇಸವನೆ ವಿಚಾರ ಮಾಡಿ ಮಾಡಿ ತಲೆಯೇ ಕೆಟ್ಟು ಹೋಗುತ್ತಲಿದೆ.

ತಂದೆ:—ಅಹುದು; ಮಗು, ನಾನೇನದನ್ನರಿಯದಿರುವೆನೆ? ನನ್ನಕ್ಕಿಂತಲೂ ಒಂದೆರಡು ವರ್ಷಕ್ಕೆ ಮೊದಲು ಹುಟ್ಟಿದ ಅವನು ರಾಜನಾದ. ಎರಡು-ಮೂರು ವರ್ಷ ತಡೆದು ಜನಿಸಿದ ನಾನು ರಂಕನಾದೆ.

ಮಗ:—ಪಿತಾಜಿ, ಕೇವಲ ಜನ್ಮಕ್ಕೇನೇ ಪ್ರಾಧಾನ್ಯ ಕೊಟ್ಟು ಕರ್ತೃತ್ವಶಕ್ತಿ, ಚಾತುರ್ಯ, ಶೌರ್ಯಾದಿಗಳಿಗೆ ಏನೂ ಅವಕಾಶವೀಯದಿರುವದು ಪರಮ ಅನ್ಯಾಯವಲ್ಲವೆ?

ತಂದೆ:—ವಿರೂಪಾಕ್ಷ, ಮಾನವನ ಕರ್ತೃತ್ವಶಕ್ತಿಗೆ, ಆತನಲ್ಲಡಕವಾಗಿರುವ ಚಾತುರ್ಯಕ್ಕೆ, ಆತನಲ್ಲಿ ಹೊರಹೊಮ್ಮುತ್ತಲಿರುವ ಶೌರ್ಯಾದಿ ಗುಣಗಳಿಗೆ ಸರ್ವತ್ರ ಅವಕಾಶವುಂಟು; ಸರ್ವ ಕಾಲದಲ್ಲಿಯೂ ಉಂಟು.

ಮಗ:—ಮನುಷ್ಯನ ವೈಯಕ್ತಿಕ ಗುಣಗಳಿಗೆ ಅವಕಾಶವುಂಟೆ?

ತಂದೆ:—ಅಹುದು; ನಿಶ್ಚಯವಾಗಿಯೂ ಉಂಟು. ಅಂತೆಯೇ ಇಷ್ಟು ಜನ ಶೂರರು ಹೆಸರು ಪಡೆದು ಮಡಿದಿರುವರು; ಆದರೆ ಅದಕ್ಕೆ ಒಂದು ಮಾತ್ರ ಅವಶ್ಯವಾಗಿ ಬೇಕು.

ಮಗ:—ಆ ಒಂದಾವುದು?

ತಂದೆ:—ಚಾಲನ. ಆ ಎಲ್ಲ ಕರ್ತೃತ್ವಶಕ್ತಿಗೂ ಒಂದು ಚಾಲನ ಬೇಕು. ಒಮ್ಮೆ ಚಲಿಸಿ ತನ್ನ ಪ್ರಭಾವ ತೋರಿದರೆ, ಅವಕಾಶವಿಲ್ಲದಲ್ಲಿ ಕೂಡಾ ಅವಕಾಶ ತಪ್ಪದೇ ಸಿಕ್ಕುತ್ತದೆ.

ಮಗ:—ಹಾಗಾದರೆ........

ತಂದೆ:—ವಿರೂಪಾಕ್ಷ, ನೀನನ್ನುವುದು ತಿಳಿಯಿತು. ನಿನ್ನ ವಯಸ್ಸಿನಲ್ಲಿರುವಾಗ್ಗೆ ನಿನ್ನಲ್ಲಿರುವ ಈ ಎಲ್ಲ ಗುಣಗಳೂ ನನ್ನಲ್ಲಿದ್ದುವು; ಆದರೆ ಅವುಗಳಿಗೆ ಬೇಕಾದ ಚಾಲನೆ ದೊರೆಯಲಿಲ್ಲ. ತಂದೆ, ತಾಯಿ, ಅಣ್ಣ ಮೊದಲಾದ ಬಾಂಧವ್ಯ ಪ್ರೇಮದಲ್ಲಿ ಅವು ತೇಜೋವಿಹೀನವಾದುವು. ಅಂತೆಯೇ ನಾನು ಏನೂ ಮಾಡಲಾರದಾದೆನು; ಆದರೆ ನೀನು ಹಾಗಲ್ಲ. ನಿನ್ನಲ್ಲಿರುವ ಆ ಹುಮ್ಮನೆಗೆ ಚಾಲನೆ ದೊರೆತಿದೆ. ನೀನು ಪ್ರಯತ್ನಪಟ್ಟರೆ ನಿನ್ನ ಯೋಗ್ಯತೆಗೆ ತಕ್ಕ ಸ್ಥಾನ ಸಿಕ್ಕಬಹುದು.

ಮಗ—ನಾನು ಹೇಗೆ ಪ್ರಯತ್ನಿಸಬೇಕು?

ತಂದೆ—ಅದು ನಿನ್ನ ವಿಚಾರವೊಳಗಿನದು.

ಮಗ—ನಿಮ್ಮ ವಿಚಾರವೇನಿದೆ?

ತಂದೆ—ನನ್ನ ವಿಚಾರವೆ? ಹಾಗಾದರೆ ನಾನು ಸ್ಪಷ್ಟವಾಗಿಯೇ ಮಾತನಾಡು

ವೆನು ಕೇಳು. ವಿರೂಪಾಕ್ಷ, ನಾನು ಜಗತ್ತಿನ ರೀತಿ-ನೀತಿಗಳನ್ನೂ ಸ್ಥಿತಿ-ಗತಿಗಳನ್ನೂ ಬಹಳವಾಗಿ ನೋಡುತ್ತ ಬಂದಿರುವೆನು. ನಿಸರ್ಗದಲ್ಲಿ ನಿನಗೆ ಯಾವ ತತ್ವ ಒಡೆದು ಕಾಣುತ್ತದೆ? ಬಲವಂತನೇ ಜಯುವಂತನಲ್ಲವೆ? ಪ್ರಾಣಿಗಳನ್ನು ನೋಡಿದರೆ ಹೆಚ್ಚು ಹೆಚ್ಚು ಬಲಿಷ್ಠವಿದ್ದಂತೆ ಹೆಚ್ಚು ಹೆಚ್ಚು ಕ್ರೂರವಿರುತ್ತವೆ. ಇಲಿಗಳನ್ನು ಕಂಡರೆ ಬೆಕ್ಕು ನೆಗೆಯುತ್ತ ಹೋಗಿ ತಿನ್ನುವದು. ಅವೇ ಬೆಕ್ಕನ್ನು ನಾಯಿ ಓಡಿಸಿಬಿಡುವದು. ಆ ನಾಯಿ ಇನ್ನಿತರ ಕ್ರೂರ ಪ್ರಾಣಿಗಳ ಆಹಾರವಾಗುವದು. ಇದೇ ತತ್ವ ಮಾನವರಲ್ಲಿ ಯೂ ಒಡೆದು ಕಾಣುತ್ತದೆ. ಒಬ್ಬ ಸಿರಿವಂತನಾಗಬೇಕಾದರೆ ಹತ್ತು ಮನೆತನಗಳು ಮೂಲೆಗುಂಪಾಗಬೇಕಾಗುತ್ತವೆ. ಒಬ್ಬ ಮುಂದಕ್ಕೆ ಬರಬೇಕಾದರೆ ಅವನ ಸರಿ ಯುವರು ಅವನಿಗೋಸುಗ ಅನೇಕ ಸಂಕಟಗಳನ್ನನುಭವಿಸಬೇಕಾಗುತ್ತದೆ. ಒಬ್ಬ ಸಮ್ರಾಟ ಗಾದಿಯನ್ನೇರಬೇಕಾದರೆ ಲಕ್ಷಾವಧಿ ಸೈನಿಕರು ತಮ್ಮ ನೆತ್ತರು ಸುರಿಸಬೇಕಾ ಗುತ್ತದೆ. ಹೀಗೆ ಒಂದೇ, ಎರಡೇ? ಎಲ್ಲಿ ನೋಡಿದರೂ ಇದೇ ವಿಷಯ. ಪುಣ್ಯ-ಪಾಪಗಳ ಅವಸ್ಥೆಯಾದರೂ ಇದೇ. ಪುಣ್ಯವೆಂದಲ್ಲಿ ಪಾಪದ ಅಂಶವಿದ್ದೇ ಇದೆ. ಒಂದು ದೇವಾ ಲಯ ಕಟ್ಟಿಸುವಲ್ಲಿ ಎಷ್ಟು ಜನರ ಧನಹಾನಿಯಾಗುತ್ತದೆಯೋ, ಎಷ್ಟು ಜನರ ಪ್ರಾಣ ಹಾನಿಯಾಗುತ್ತದೆಯೋ ಎಲ್ಲವೂ ತಿಳಿಯದೇ ಹೋಗುತ್ತದೆ. ಮುಖ್ಯವಾದ ಇನ್ನೊಂದು ವಿಷಯವೆಂದರೆ, ಯಾವದೊಂದು ಕಾರ್ಯ ಆರಂಭಕ್ಕೆ ಕಠಿಣವೆನ್ನಿಸುವಷ್ಟು ಆ ಮೇಲೆ ಕಠಿಣವೆನ್ನಿಸುವದಿಲ್ಲ. ಇದು ಸರ್ವಸಾಧಾರಣ ನಿಯಮ. ಇದರಂತೆಯೇ ಪಾಪ ಪಾಪವೆಂದು ನಾವು ದೂರವಿರುವಷ್ಟರವರೆಗೂ ಅದರಭೀತಿಯೆಂದೂ ಬಯಲಾಗುವದಿಲ್ಲ. ಅದೇ ಒಮ್ಮೆ ಒಳ ಹೊಕ್ಕರೆ ಆ ಪಾಪದ ಭೀತಿಯೇಕೆ, ಯೋಚನೆ ಕೂಡಾ ಉಳಿಯುವ ದಿಲ್ಲ; ಏಕೆಂದರೆ, ಪಾಪ-ಪುಣ್ಯಗಳೆಲ್ಲ ದೃಷ್ಟಿಕೋನದ ಮೇಲೆ ಅವಲಂಬಿಸಿರುತ್ತವೆ. ಒಂದು ವಿಷಯ ಒಂದು ಬದಿಯಿಂದ ಪಾಪವೆಂದು ಕಾಣುತ್ತಲಿದ್ದರೆ, ಅದೇ ಇನ್ನೊಂದು ಬದಿಯಿಂದ ಪುಣ್ಯವೆಂದು ತೋರುವುದು.

ಮಗ:—ತಂದೆಯವರೇ, ಈ ಎಂಟು-ಹತ್ತು ದಿನಗಳಿಂದ ನಾನಾದರೂ ಇದೇ ಬಗೆಯ ಯೋಚನೆ ಮಾಡುತ್ತಲಿರುವೆನು. ಯಾವಾಗಲೂ ಒಂದೇ ಒಂದು ವಿಚಾರ ತಲೆಯಲ್ಲಿ ಸುತ್ತುತ್ತಲಿದೆ.

ತಂದೆ:—ಅದಾವುದು?

ಮಗ:—ಯಾವದೊಂದು ವಿಧದಿಂದ ಕರ್ನಾಟಕ ಸಿಂಹಾಸನವನ್ನು ನಾನೇಕೆ ದೊರಕಿಸಬಾರದು? ಬಲವಂತನಾಗಿ ನಾನೇಕೆ ಸೆಳೆದುಕೊಳ್ಳಬಾರದು?

ತಂದೆ:—ಹೇಗೆ ಸೆಳೆದುಕೊಳ್ಳುವೆ? ನಿನ್ನಲ್ಲಿ ಸೈನ್ಯಬಲವಿದೆಯೇ? ಜನಬಲ ವಿದೆಯೆ? ಧನಬಲವಿದೆಯೇ? ಮೂರರಲ್ಲಿ ಒಂದಾದರೂ ಇದ್ದುದಾಗಿದ್ದರೆ, ಪೂರ್ಣ ಸಾಧಿಸದಿದ್ದರೂ ಪ್ರಯತ್ನಕ್ಕಾದರೂ ಅವಕಾಶವಿರುತ್ತಲಿದ್ದಿತು.

ಮಗ:—ಅಹುದು; ಈ ಮೂರೂ ನನ್ನಲಿಲ್ಲವೆಂದು ನಾನರಿತಿರುವೆ. ಆದರೂ ಕೂಡ ನಾನು ಯತ್ನ ಮಾಡಬೇಕೆನಿಸುತ್ತದೆ.

ತಂದೆ:—ಹೇಗೆ ಯತ್ನಿಸುವೆ?

ಹೀಗೆ ತಂದೆ-ಮಕ್ಕಳೀರ್ವರೂ ಎಷ್ಟೋ ಸಲ ಚರ್ಚಿಸುತ್ತಲಿದ್ದರು. ವಿರೂಪಾಕ್ಷನು ನಿತ್ಯವೂ ಪಾಪ-ಪುಣ್ಯ, ನ್ಯಾಯಾನ್ಯಾಯ, ನೀತಿ-ಅನೀತಿಗಳ ವಿಚಾರದಿಂದ ದೂರ ಸರಿಯಹತ್ತಿದನು. ತಾರುಣ್ಯವೇ ಅಂತಹದು. ಅದರಲ್ಲಿಯೂ ತಂದೆಯ ಉಪದೇಶ. ತಂದೆಯ ಮನವಾದರೋ ಮಗನ ಅಪಮಾನದಿಂದ ನೊಂದು ನೊಂದು ಏನನ್ನೂ ಕಾಣಿಸದಂತಾಗಿದ್ದಿತು. 'ಹೇಗಾದರೂ ತನ್ನ ಮಗ ಮುಂದೆ ಬಂದರೆ ಸಾಕು.' ಎಂಬ ಭಾವ ಸ್ಪಷ್ಟವಾಗಿ ಮೂಡಹತ್ತಿತು. ಪುತ್ರಪ್ರೇಮ ಅವನ ಮನವನ್ನು ತಿರುಗಿಸಿತು. 'ಏನಕೇನ ಪ್ರಕಾರೇಣ' ತನ್ನ ಮಗ ಮುಂದೆ ಬಂದರಾಯಿತು, ಎಂದು ಅವನೂ ಮಗನಿಗೆ ಪುಷ್ಟಿಯನ್ನೇ ಕೊಡುತ್ತಲಿದ್ದನು.

ಇಬ್ಬರೂ ನಿರ್ಧರಿಸಿದರು. ತಾಯಿಯ ಸಹಾಯವೂ ಚನ್ನಾಗಿಯೇ ದೊರೆತಿತು. ಅದರ ಪರಿಣಾಮವಾಗಿ ಹತ್ತು-ಹನ್ನೆರಡು ದಿನಗಳ ತರುವಾಯ ಒಂದು ಗುಪ್ತ ಸಭೆ ಪ್ರತಾಪದೇವರಾಯನ ಏಕಾಂತ ಗುಹೆಯಲ್ಲಿ ಬಹಳ ಗುಪ್ತವಾಗಿಯೇ ನೆರೆಯಿತು.

ಕೃಷ್ಣಪಕ್ಷದ ರಾತ್ರಿಯ ದ್ವಿತೀಯ ಪ್ರಹರದ ಸಮಯ. ಅಂದು ಆ ಏಕಾಂತ ಗುಹೆಯ ವಾತಾವರಣ ಅತೀವ ಗಂಭೀರವಾಗಿದ್ದಿತು. ಹೆಸರೇ ಏಕಾಂತ ಗುಹೆ. ಅದರಲ್ಲಿ ಅಂದವರು ನಡೆಸಿದ ಚರ್ಚೆಯೂ ಬಹಳ ಗೌಪ್ಯವಾಗಿಯೇ ಇದ್ದಿತು. ಯಾರಿಗೂ ಪ್ರವೇಶ ಸಿಕ್ಕದಂತೆ ಅತ್ಯಂತ ದಕ್ಷತೆ ವಹಿಸಿದ್ದರು. ಪ್ರತಾಪದೇವರಾಯನೊಂದು ಆಸನದಲ್ಲಿ ಗಂಭೀರ ಮುದ್ರೆಯಿಂದ ಕುಳಿತಿದ್ದನು. ಇನ್ನೊಂದೆಡೆ ವಿರೂಪಾಕ್ಷ ಅನೇಕ ಗಾಳಿಗುಹೆಗಳ ರಚನೆಯಲ್ಲಿ ಒಳಮುಖನಾಗಿ ಕುಳಿತಿದ್ದನು.

ಒಬ್ಬನೂ ಮಾತಾಡುತ್ತಿರಲಿಲ್ಲ. ಇಬ್ಬರಿಗೂ ತಮ್ಮ ತಮ್ಮ ಕಾರ್ಯಗಳೇ ಸಾಕಷ್ಟಕ್ಕಿಂತ ಮಿಕ್ಕಿ ಹೋಗಿದ್ದುವು. ಇಬ್ಬರೂ ಅನಿಶ್ಚಿತ ಭವಿಷ್ಯದ ವಿಷಯಕವಾಗಿ ಯೋಚನಾಮಗ್ನರಾಗಿದ್ದರು. ತಾವು ಮಾಡಲಿದ್ದ ಕಾರ್ಯ ಯೋಗ್ಯವೋ ಅಯೋಗ್ಯವೋ, ತಮಗೆ ಸಿಕ್ಕುವುದು ಜಯವೋ ಅಪಜಯವೋ ಮುಂತಾದ ಒಂದಕ್ಕೊಂದು ವಿರುದ್ಧ ವಿಚಾರಗಳು ಅವರೀರ್ವರಲ್ಲಿಯೂ ತಾಕಲಾಡುತ್ತಲಿದ್ದುವು. ಬಲವಾದ ಸಂಶಯ, ಬಹಳವಾದ ಭೀತಿ, ಹೆಚ್ಚಾದ ಕಪಟಗಳು ಅವರ ಮನದಲ್ಲಿ ನಾಟಿದ್ದುವು. ಇಬ್ಬರೂ ಭಿನ್ನ ಭಿನ್ನ ಭಾವನೆಗಳಲ್ಲಿ ಮುಳುಗಿಹೋಗಿದ್ದರು.

ಒಬ್ಬ ಸೇವಕ ಪ್ರವೇಶಿಸಿದನು. ಕಾಲಸಪ್ಪಳದಿಂದ ಇಬ್ಬರ ಸಮಾಧಿಗಳೂ ಭಗ್ನವಾದುವು. ಸೇವಕ ಒಂದು ಚೀಟಿಯಿತ್ತನು. ಅದನ್ನು ನೋಡಿ ಸೇವಕನಿಗೆ ಸಮ್ಮತಿ ವ್ಯಕ್ತಪಡಿಸಲು, ಸೇವಕ ಹೊರಟು ಹೋದನು. ಇಬ್ಬರೂ ದ್ವಾರದತ್ತವೇ ನೋಡುತ್ತ ಕುಳಿತಿದ್ದರು. ಅಲ್ಪಾವಕಾಶದಲ್ಲಿಯೇ ಕೃಷ್ಣವಸ್ತ್ರಾಚ್ಛಾದಿತ ವ್ಯಕ್ತಿಯೊಂದು ಬಂದಿತು. ಪ್ರತಾಪದೇವರಾಯ ಎದ್ದು, ಅವನನ್ನು ಸ್ವಾಗತಿಸಿ ಆಸನದಲ್ಲಿ ಕುಳ್ಳಿರಿಸಿದನು.

ಇಬ್ಬರ ಬದಲು ಮೂವರಾದರೂ ಶಾಂತತಾಭಂಗವಾಗಲಿಲ್ಲ. ಮೂವರೂ ಇನ್ನಾರನ್ನೋ ನಿರೀಕ್ಷಿಸುತ್ತಲಿದ್ದಂತೆ ತೋರುತ್ತಲಿದ್ದಿತು. ನಾಲ್ವರಾದರು; ಐವರಾದರು.

ಏವರಾಗುತ್ತಲೆ ಶಾಂತತಾಗುಪೆಯೊಳಗೆ ಪ್ರವೇಶ ಮಾಡಿ ಶಾಂತತೆಯನ್ನು ಭಂಗಗೊಳಿಸುವ ಉದ್ಯಮಕ್ಕುದ್ಯುಕ್ತರಾದರು. ಆದರೂ ಅವೆಷ್ಟು ಅಲ್ಪ? ಅತಿ ಸ್ವಲ್ಪ. ಮೂವರೂ ಪಿಸುಮಾತುಗಳಲ್ಲಿಯೇ ಅತೀವ ಮಂದವಾಗಿಯೇ ಮಾತನಾಡುತ್ತಲಿದ್ದರು. ಮೂ-ವರೂ ಕೈಕೊಂಡ ಕಾರ್ಯವು ಬಹಳ ಗೌಪ್ಯವಾದದ್ದೂ ಮತ್ತು ಬಹಳ ಮಹತ್ವದ್ದೂ ಇರಬೇಕೆಂದು ತೋರಿತು. ಏಕೆಂದರೆ ಮನುಷ್ಯನ ಸ್ವರವೂ ಅಂತಹ ಒಂದು ವಿಚಿತ್ರ ವಿಷಯವೇ ಇದೆಯೆಂದು ನಿರಾತಂಕವಾಗಿ ಹೇಳಬಹುದು. ಅದೊಂದು ವಿಷಯವೂ ಅಭ್ಯಾಸಿಸ ತಕ್ಕಂತಹದೇ ಇರುತ್ತದೆ. ಅದನ್ನು ಅಭ್ಯಾಸಿಸಲು ಬೇರೆ ಶಿಕ್ಷಣ ಶಾಲೆಗಳ ಅವಶ್ಯಕತೆಯಿಲ್ಲ. ವಿಶ್ವ ವಿದ್ಯಾಲಯಗಳು ಬೇಕಿಲ್ಲ. ನಾವು ನಿತ್ಯವೂ ಅದರ ಅನುಭವ ಹೊಂದಿಯೇ ಹೊಂದುತ್ತೇವೆ. ಕೊಂಚವೇ ನಿರೀಕ್ಷಿಸಿದರೆ ತಿಳಿದು ಬರುವಂತಿದೆ. ಯಾವನೊಬ್ಬ ಮೇಲ್ತರಗತಿಯ ಭಾಷಣಕಾರನ ಭಾಷಣ ಕೇಳಲು ಸ್ವರದಲ್ಲಿ ಆವಶ್ಯಕ ಮಾರ್ಪಾಟನ್ನುಂಟು ಮಾಡುವದೊಂದು ಒಳ್ಳೇ ಕಲೆಯಿರುತ್ತದೆಂಬ ತಿಳಿದು ಬರುತ್ತದೆ. ನುರಿತ ಭಾಷಣಕಾರನಿಗೂ ಹೊಸಬನಿಗೂ ಇರುವ ಅಂತರವಾದರೂ ಇದೇ. 'ಭೀಕರ' ಎಂಬೊಂದು ಶಬ್ದವನ್ನು ಇಬ್ಬರ ಮುಖದಿಂದಲೂ ಕೇಳಬಹುದು. ಶಬ್ದವೊಂದೇ; ಆದರೂ ಅದರ ಉಚ್ಚಾರದಲ್ಲಿ ಅದೆಷ್ಟು ಅಂತರವಿರುತ್ತದೆ. ಕಲೆಯರಿಯದವ ಹೇಗಾದರೂ ಉಚ್ಚರಿಸಿ ಬಿಡುವ; ಆದರೆ ನುರಿತ ಕಲೆಗಾರ ಅದನ್ನೆಷ್ಟು ಗಂಭೀರವಾದ ಸ್ವರದಲ್ಲಿ, ಒಂದೊಂದೇ ಅಕ್ಷರಕ್ಕೆ ಆವಶ್ಯವಿದ್ದ ಜೋರು ಕೊಟ್ಟು ಅನ್ನುವನು. ಅವನು 'ಭೀಕರ' ಎಂದರೆ ಸಾಕು. ಕೇಳುವವರ ಹೃದಯ ಕಂಪಿಸುವುದು. ಈ ಮೂರೇ ಅಕ್ಷರಗಳಲ್ಲಿ ಮೂಲೋಕದ ಭೀಕರತೆಯೆಲ್ಲವೂ ಮೈಗೊಂಡು ನಿಂತಂತೆ ತೋರುತ್ತದೆ. ನಾಲ್ಕು ಜನ ಕೂಡಿ ಹರಟೆ ಕೊಚ್ಚುತ್ತಲಿರುವ ಸ್ವರದ ಏರಿಕೆ ಮಧ್ಯಮ ತರಗತಿಯದಾಗಿರುತ್ತದೆ. ಅದು 'ಮೋಜಿನ ಹರಟೆ'ಯೆಂದು ಪ್ರತಿಯೊಬ್ಬನೂ ಗ್ರಹಿಸುತ್ತಾನೆ. ಅವೇ ಶಬ್ದಗಳು, ಅವೇ ಮಾತುಗಳು ಕೊಂಚ ಏರಿಕೆಯಲ್ಲಿದ್ದರೆ ನಾರದರ ಸ್ವಾರಿಯೆಂದು ಗೊತ್ತೇ. 'ಏಕೋ ಬಾಯಿಯಾಗುತ್ತದೆ ನೋಡಪ್ಪಾ' ಎಂದು ಕೇಳುವ ಸಮಯ ಬರುತ್ತದೆ. ಅಷ್ಟು ಏರಿಕೆಯ ಸ್ವರದಲ್ಲಿ ಮಾತನಾಡುವವನ ಉದ್ದೇಶವು ತನ್ನದನ್ನೇ ಸಾಧಿಸುವದಿರುತ್ತದೆ. ತಾನಂದುದೇ ಸತ್ಯ, ತನ್ನದೇ ನಿಜವಾದ ಸಂಗತಿ, ಎಂದು ಅವನು ಸ್ಪಷ್ಟವಾಗಿ ಸಾಧಿಸಬೇಕಾಗಿರುತ್ತದಂತೂ ಸರಿಯೆ. ಅದರೊಡನೆ ಇನ್ನೊಬ್ಬನ ವಿಚಾರಗಳನ್ನು ಕೇಳಿಕೊಳ್ಳುವ ಸಿದ್ಧತೆಯೂ ಅವನವಿರುವದಿಲ್ಲ. ಆದೇಕೆ ಕೇಳಕೂಡದೆಂದೇ ಅವನ ಹಟವಿರುತ್ತದೆ. ಅಂತೆಯೇ ಆತನ ಮಾತುಗಳು, ಶಬ್ದಗಳು ತನ್ನ ಕಿವಿಗೆ ಬಡಿಯದೆ, ಅರ್ಧದಾರಿಯಲ್ಲಿಯೇ ಮರಳುವಂತೆ ಮಾಡುವ ಉದ್ದೇಶದಿಂದ ಆತ ಅಷ್ಟು ಗಟ್ಟಿಯಾಗಿಯೇ ಮಾತನಾಡುತ್ತಲಿರುತ್ತಾನೆ. ಸ್ವರದ ಏರಿಕೆ ಹೆಚ್ಚಿದ್ದಷ್ಟು ಒಬ್ಬರೊಬ್ಬರ ಮನಸ್ಸು ತಾಳ್ಮೆಗೆಟ್ಟಿದೆಯೆಂದು ತಿಳಿಯಬಹುದು. ಅವರ ಪರಿಣಾಮ ಗೊತ್ತೇ ಇವೆ ಲತ್ತಾ ಪ್ರಹಾರ. ಅನೇಕ ಸಲ ಮಧ್ಯಸ್ಥರಾಗ ಹೋದವರೂ ಏಟು ತಿಂದುದನ್ನು ಎಲ್ಲರೂ ಬಲ್ಲರು. ಸ್ವರವು ಮಧ್ಯಮ ತರದ್ದಾಗಲಿ, ಇಲ್ಲವೆ ಏರಿಕೆ

ಯಲ್ಲಾಗಲಿ ಇದ್ದಾಗ ವಿಷಯದ ಸುಸಂಬದ್ಧತೆ, ಕಾರ್ಯಗಳ ಮಹತ್ವಗಳತ್ತ ಅಷ್ಟು ಲಕ್ಷ್ಯವಿರುವದಿಲ್ಲ. ಅನೇಕ ಸಲ ವಿಷಯಾಂತರವಾಗಬಹುದು. ವೇಳೆಯ ಕೊರತೆಯೂ ಅವರಿಗನಿಸುವದಿಲ್ಲ; ಆದರೆ ಅವೇ ಸ್ವರವು ಇಳಿಕೆಯಲ್ಲಿದ್ದರೆ?....ಏನಿರುವದೆಲ್ಲವೂ ಇಳಿಕೆಯ ಸ್ವರದಲ್ಲಿಯೇ ಕಾರ್ಯದ ಮಹತ್ವ, ವಿಷಯಗಳ ಜೋಡಣೆ ಹೃದಯಗಳ ಅಲೆದಾಟ, ವೇಳೆಯ ಅಭಾವಗಳು ಸ್ವರ ಕೆಳಗಿಳಿದಂತೆ ಬೆಳೆಯುತ್ತವೆ. ಅತ್ಯಂತ ಮಹತ್ವದ ವಿಷಯವಿದ್ದುದಾದರೆ ಅಂತಹ ವಿಷಯಕ್ಕೆ ಗೌಪ್ಯವಂತೂ ಬೇಕೇ ಬೇಕು. ಗೌಪ್ಯವೆಂದಲ್ಲಿ ಶಕ್ಯವಿದ್ದಷ್ಟು ಬೇಗ ಮುಗಿಸಬೇಕೆಂದು ತ್ವರೆ ಬಂದೇ ಬರುತ್ತದೆ. ಅನ್ಯರು ಕೇಳಬಹುವೆಂಬ ಭೀತಿಯಂತೂ ಪ್ರತಿಕ್ಷಣ ಭೂತದೋಪಾದಿಯಲ್ಲಿ ಬಂದು ನಿಲ್ಲುತ್ತದೆ. ಇಂತಹ ಸನ್ನಿವೇಶಗಳಲ್ಲಿ ವಿಷಯಾಂತರಕ್ಕೆ ಪ್ರವೇಶ ಕೂಡಾ ಸಿಕ್ಕುವದಿಲ್ಲ. ಸ್ವರದ ಏರಿಳಿತ ಇಷ್ಟು ಅಥವಾ ಇನ್ನೂ ಹೆಚ್ಚೇ ಮಹತ್ವದ್ದಾಗಿರುತ್ತದೆ.

ಅಗೋ ನೋಡಿ, ಓದುಗ ಮಹಾಶಯ, ಏಕಾಂತ ಗುಹೆಯ ಏಕಾಂತ ಚರ್ಚೆ ಕೊನೆಗಂಡಿತು. ಅಹುದು. ಅದು ಏಕಾಂತ ಚರ್ಚೆಯಿದ್ದ ಮೂಲಕವೂ ಬಹು ಮೆಲ್ಲನೆ ಪಿಸುಮಾತಿನಲ್ಲಿಯೇ ಚರ್ಚಿಸುತ್ತಲಿದ್ದ ಮೂಲಕವೂ ಅನಾಹೂತವಾಗಿ ಬಂದ ನಮ್ಮ ನಿಮ್ಮಗಳಿಗೆ ಚರ್ಚೆಯಲ್ಲಿ ಭಾಗವಹಿಸಲಷ್ಟೇ ಏಕೆ, ಅವರ ಸಮೀಪಕ್ಕೆ ಸುಳಿಯಲು ಸಹ ಅವಕಾಶವಿಲ್ಲದ್ದರಿಂದ, ನಾವುಗಳೆಲ್ಲ ದೂರವಾಗಿಯೇ ಉಳಿಯಬೇಕಾಗಿದ್ದ ಮೂಲಕವೂ ನಮಗೆ ಅವರ ಏಕಾಂತ ಚರ್ಚೆ ಕೇಳಲವಕಾಶ ದೊರೆಯಲಿಲ್ಲ. ಆದರೂ ನಿಮಗೆ ಬೇಸರಬರಬಹುದೆಂದು ಬಗೆದು ಅವರ ಚರ್ಚೆ ಕೊನೆಗಾಣುವ ವರೆಗೆ ಒಂದು ರಗಳೆಯ ರಾಮಾಯಣವನ್ನಾರಂಭಿಸಬೇಕಾಯಿತು.

ಅವರ ಚರ್ಚೆ ಕೊನೆಗಂಡಿತು. ಎಲ್ಲರೂ ಕಲೆತು ಒಂದೇನೋ ನಿರ್ಧರ ಮಾಡಿದಂತೆ ಅವರ ಮುಖದಿಂದ ಸ್ಪಷ್ಟವಾಗುವಂತಿದ್ದಿತು. ಅವರೆಲ್ಲರೂ ಏಳುತ್ತಲೇ ಅವರಲ್ಲೊಬ್ಬನು 'ಕುಮಾರರೇ, ನೀವಾಗಲೀ ಇನ್ನಾರೇ ಆಗಲಿ ನಮ್ಮ ಹೆಸರನ್ನು ಕೊಂಚವಾದರೂ ಬಯಲಿಗೆ ಹಾಕತಕ್ಕುವಲ್ಲ. ಹಾಗಲ್ಲದೆ ವಿಶ್ವಾಸಘಾತವಾದುದಾದರೆ, ನಾವು ಬಹಿರಂಗವಾಗಿ ನಿಮ್ಮ ವಿರುದ್ಧ ನಿಲ್ಲಬೇಕಾದೀತು. ಮಹತ್ಕ್ರಾಂತಿಯ ಸಂಬಂಧವಿದೆ. ಪುಣ್ಯ-ಪಾಪಗಳ ಯೋಚನೆ ಬಿಟ್ಟೇ ನಾವು ನಿಮ್ಮ ಪಕ್ಷ ಕೈಗೊಂಡಿರುವೆವು. ಮೊದಲು ನೀವು ಹೇಳಿದಂತೆ ಸಹ್ಯದ ಅರಸು ಮನೆತನ ನಾಮಶೇಷವಾಗಬೇಕು. ಆ ಮೇಲೆಯೇ ನಾವು ಮುಂದೆ ಬರುವದು. ಆ ಮೇಲಾದರೂ ನಮಗೆ ನಮ್ಮ ಪ್ರತಿಫಲ ಬೇಕೇ ಬೇಕು. ಅದಾಗದಿದ್ದರೆ ಆ ಮೇಲೆಯೇ ಆದರೂ ನಾವು ನಿಮ್ಮಗಳ ವಿರುದ್ಧ ನಿಲ್ಲಲು ಭಯಪಡಲಿಕ್ಕಿಲ್ಲ. ಜೋಕೆ!' ಎಂದನು.

ಪ್ರತಾಪದೇವರಾಯ ಅವರೆಂದುದೆಲ್ಲಕ್ಕೂ ಸಮ್ಮತಿ ತೋರಿಸಲು, ಸಭೆ ಮುಗಿಯಿತು. ಸಭೆಯಲ್ಲಿ ನಿರ್ಧರವಾದ ವಿಷಯಗಳನ್ನು ಕಾರ್ಯರೂಪದಲ್ಲಿಯೇ ತಾವೆಲ್ಲರೂ ಅರಿಯಲಿರುವ ಮೂಲಕ, ಈಗಲೇ ಉತ್ಕಂಠಿತರಾಗಬಾರದೆಂದು ಬಿನ್ನಹ.

——

# ೮ ಗೌಪ್ಯಸ್ಫೋಟ!

'ಅಂ, ಹೀಗೆಂದಳೇ ಆ ಗೌರಿ?'

'ಅಹುದು ಸಖೀ. ಇಂದೇ ಮುಂಜಾವಿನಲ್ಲಿ ಪಂಪಾಪತಿಯ ದರುಶನದಿಂದ ಮರಳಿ ಬರುತ್ತಲಿರುವಾಗ್ಗೆ ನನಗೂ ಅವಳಿಗೂ ಕೊಂಚ ವಾದಾಟವಾಯಿತು.'

'ವಾದಾಟವೆ? ಏತಕ್ಕೆಂದು?'

'ನಾನಾ ಗೌರಿಯ ಸಂಗಡ ಮಾತು ಕೂಡ ಆಡಿರಲಿಲ್ಲ. ನನ್ನಷ್ಟಕ್ಕೆ ನಾನೇ ಬರುತ್ತಲಿದ್ದೆನು. ಹಿಂದಿನಿಂದ 'ಚಿನ್ನಾ' ಎಂಬ ಕೂಗು ಕೇಳಿತು. ನಾನು ಮರಳಿ ನೋಡಲು, ಗೌರಿ ಬರುತ್ತಲಿದ್ದಳು.'

'ಮುಂದೆ ಏನಾಯಿತು?'

'ನಾನು ನಿಂತು ಕೊಂಚ ತಡೆಯುತ್ತಲೆ ಆಕೆಯು ಬಂದು ಕೂಡಿದಳು.'

'ಹುಂ, ಮುಂದೆ?'

'ಬಂದವಳು ಸುಮ್ಮನೆ ದಾರಿಯಿಂದ ಸಾಗಬಾರದೆ? ಏನೇ ಚಿನ್ನಾ, ನಿನ್ನದಾದರೂ ಎಷ್ಟು ಸೊಕ್ಕೇ?' ಎಂದು ಕೇಳಿದಳು.

'ಅದೇಕೆ?'

'ಅದು ಅವಳಿಗೇ ಗೊತ್ತು. ನಾನವಳಿಗೆ ಏನೂ ಅಂದಿರಲಿಲ್ಲ. 'ಹೀಗೇಕೆ?' ಎಂದು ಕೂಡ ಕೇಳಿರಲಿಲ್ಲ. ಬರುತ್ತಲೇ ಹೀಗೆ ಅಂದು ಬಿಟ್ಟಳು.'

'ನೀನೇನಂದೆ?'

'ನಾನು ಏನೂ ಅನ್ನಲಿಲ್ಲ. ಒಮ್ಮೆಲೆ ಹೀಗೆ ಆಕ್ಷೇಪಿಸಿದಳೆಂದು ನನಗೆ ಕೊಂಚ ಯೋಚನೆಯೇ ಹತ್ತಿತು. ನಾನು ವಿಚಾರದಲ್ಲಿರುವಾಗಲೇ 'ಆಳುವರಸಿನ ಆಳಾಗಿರುವೆನೆಂದು ಇಷ್ಟು ಹೆಮ್ಮೆಯೆ?' ಎಂದು ಮತ್ತೆ ಕೇಳಿದಳು.'

'ಅಂ, ಇಷ್ಟೇಕೆ ಉದ್ಧಟಳಾಗಿರಬೇಕು?'

'ಅದೇನೂ ತಿಳಿಯದು.'

'ಆ ಮೇಲೇನಾಯಿತು?'

'ಅದೇಕೆ ಗೌರಾ? ಈಗ ನಾನೇನು ಸೊಕ್ಕು ಮಾಡಿರುವೆನೇ? ಆಳುವರಸಿನ ಆಳಾದರೂ ಆಳೇ ಅಲ್ಲದೆ ಅರಸು ಬೇರೆ ಅಲ್ಲವಲ್ಲ?' ಎಂದು ನಾನು ಕೇಳಿದೆನು.'

'ಯೋಗ್ಯವೇ ಸರಿ. ಅದಕ್ಕೆ ಅವಳೇನೆಂದಳು?'

'ನಾನೆಲ್ಲ ಬಲ್ಲೆ. ಆಳುವರಸನ ಆಳೆಂದರೆ ನಿಮಗೆ ಅರಸಿಗಿಂತಲೂ ಹೆಚ್ಚಾದ ಗರ್ವ ಬಂದಿದೆ. ತಡೆಯಿರಿ. ನಿಮ್ಮೆಲ್ಲರ ಗರ್ವ ಹರಣವಾಗದೆ ಉಳಿಯದು. ಅತ್ತೆಗೊಂದು ಕಾಲವಾದರೆ ಸೊಸೆಗೊಂದು ಕಾಲವೆಂಬಂತೆ, ಈಗ ನಿಮ್ಮ ಚಕ್ಕಂದ ನಡೆದಿದೆ. ಬೇಗನೆ ಅಧಿಕಾರ ಬದಲಿಸದೆ ಹೋಗದು.'

'ಅಂ, ಅದರ ಗೂಢಾರ್ಥವೇನಿರಬೇಕು?'

'ಏನೋ ನಮ್ಮಮ್ಮಾ, ನನಗೇನೂ ತಿಳಿಯಲಿಲ್ಲ. ಆಕೆಯ ಆ ಮಾತುಗಳನ್ನು ಕೇಳಿ ನಾನು ಮೂಢಳೇ ಆದೆನು. 'ಏನೇ ಗೌರಾ, ನೀನನ್ನುವದಾದರೂ ಏನು? ಈಗಿದ್ದ ದೊರೆಗಳೇನು ಅಂತಿಂತಹರೇ? ದೇವರಂತಹ ಪ್ರಭುಗಳು ಆಳುತ್ತಲಿರುವರು. ಅವರ ದೀರ್ಘವಾದ ಆಳಿಕೆ ಮುಗಿದರೂ ಪ್ರಭು ರಾಮಚಂದ್ರನಂತೆ ಪ್ರಜಾಹಿತ ದಕ್ಷ ರಾದ ಯುವರಾಜರು ಇರುವರು. ಹೀಗಿದ್ದರೂ, ಅಧಿಕಾರ ಬದಲಾಗುವದೆಂದರೇನು? ನೀವು ಹೇಗೆ ಅರಸುತನ ಪಡೆಯುವಿರಿ'' ಎಂದು ಕೇಳಿದೆನು.

'ಅದಕ್ಕೆ ಆ ಗೌರಿಯೇನೆಂದಳು?'

''ಅಹುದಹುದು. ನಾನಿದನ್ನು ಬಲ್ಲೆ. ನಿಮ್ಮ ಆ ದೇವರಂತಹ ದೊರೆ, ರಾಮ ಚಂದ್ರನಂತಹ ಯುವರಾಜ—ಅಲ್ಲವೆ? ಅಂತೆಯೇ ನೀವಿಷ್ಟು ಸೊಕ್ಕಿಗೇರಿರುವಿರಿ. ನಿಮ್ಮೆಲ್ಲರ ಸೊಕ್ಕು ಬಹಳ ದಿವಸ ನಡೆಯಲಾರದೆಂಬದನ್ನು ಮಾತ್ರ ಲಕ್ಷ್ಯದಲ್ಲಿಡಿರಿ ಎಂದು ಅಬ್ಬರಿಸಿದಳು.''

'ಆಂ, ಆಕೆಯ ವಿಚಾರವೇ ತಿಳಿಯಲಿಲ್ಲವಲ್ಲ!'

'ಊಂ ಹುಂ, ಕಿಂಚಿತ್ತಾದರೂ ತಿಳಿಯಲಿಲ್ಲ. ನಾನೇನೂ ಆಕೆಯನ್ನು ಮಾತು ಕೂಡಾ ಆಡಿಸಲಿಲ್ಲ. ತಾನೇ ಬಂದು ಹೀಗೆಲ್ಲ ಅಂದಳು. ಇದರ ಅರ್ಥವೇನೋ ನನ ಗೇನೂ ತಿಳಿಯದು ನಮ್ಮಮ್ಮಾ'

ಮನುಷ್ಯನ ಅಂತರಂಗವೆಂಬದು ಎಷ್ಟು ಭದ್ರವಾದ ಸ್ಥಾನವಾಗಿರುತ್ತದೆ ಅಮೇರಿಕಾ-ಫ್ರಾನ್ಸು ದೇಶಗಳಲ್ಲಿ ಹಣವನ್ನಿಡಲು ಅತಿ ಭದ್ರವಾದ ಕಟ್ಟಡಗಳನ್ನು ಕಟ್ಟಿರುವರಂತೆ; ಆದರೆ ಮಾನವನ ಅಂತರಂಗವು ಅವುಗಳಿಗಿಂತಲೂ ಅತಿ ಭದ್ರವಾದ ಸ್ಥಾನವಾಗಿರುತ್ತದೆ. ಈ ಅಂತರಂಗದ ನಿಜತ್ವವರಿಯಬೇಕೆನ್ನುವವರು ಶ್ರೀಮಾನ್ ದೇವುಡೂರವರ ಶ್ರೇಷ್ಠತರಗತಿಯದಾದ 'ಅಂತರಂಗ' ಕಾದಂಬರಿಯನ್ನೋದಬೇಕು. ನಿಜವಾಗಿಯೂ ನಮ್ಮ ಅಂತರಂಗದಲ್ಲಿನ ಸಂಗತಿಗಳೆಲ್ಲವೂ ಗಾಜಿನ ಸಂದುಕದಲ್ಲಿದ್ದಂತೆ ಹೊರಗೆ ಕಾಣುತ್ತಿದ್ದರೆ,-ಪರರಿಗೆ ತಿಳಿದು ಹೋಗುವಂತಿದ್ದರೆ—ಅಬ್ಬಾ! ಆಗ್ಗೆ ಎಷ್ಟು ಭೀಕರ ಸ್ಥಿತಿಯುಂಟಾಗಬಹುದಿತ್ತಲ್ಲ! ಜನ್ಮತಃ ದುಷ್ಟನಿದ್ದರೂ ಶಿಷ್ಟನ ಸೋಗು ಹಾಕಿರುವ ದುಷ್ಟನ ದೌಷ್ಟ್ಯವೆಲ್ಲವೂ ಅಂತರಂಗದಲ್ಲಡಕವಾಗಿರುತ್ತದೆ. ಸಾದಾ ಮನು ಷ್ಯನಂತಿದ್ದರೂ ಚಾಣಾಕ್ಷ ಗುಪ್ತಚಾರನ ಹಂಚಿಕೆಗಳೆಲ್ಲವೂ ಅಂತರಂಗದ ಭದ್ರವಾದ ಮಂದಿರದಲ್ಲಿ ಭದ್ರವಾಗಿರುತ್ತವೆ. ರಾಜಕಾರ್ಯ ನಿಪುಣನ ಭಾವೀ ಯೋಜನೆಗಳೆಲ್ಲ ಹೃದಯ 'ಕಪಾಟಿ'ನಲ್ಲಿ ಇನ್ನಾರಿಗೂ ತಿಳಿಯದಂತಿರುತ್ತವೆ. ಭವಿಷ್ಯವನ್ನೇ ಅಲ್ಲಾಡಿ ಸುವ ಮುತ್ಸದ್ದಿಗಳ ಮುತ್ಸದ್ದಿತನ, ಭೂಮಂಡಲವನ್ನೇ ಬೆರಗುಗೊಳಿಸುವ ಚತು ರನ ಚಾತುರ್ಯ, ವಿದ್ಯಾರ್ಥಿಗಳ ಜೀವನ ಸೂತ್ರವಾದ ಪರೀಕ್ಷಕರ ಪ್ರಶ್ನೋತ್ತರಗಳು-- ಹೀಗೆ ಒಂದೇ, ಎರಡೇ? ಜಗತ್ತಿನಲ್ಲೆಲ್ಲ ಅಲ್ಲೋಲ ಕಲ್ಲೋಲವನ್ನುಂಟು ಮಾಡುವ ಅನೇಕ ಅತಿ ಮಹತ್ವದ ಸಂಗತಿಗಳು ಬಲು ಭದ್ರವಾಗಿವೆ. ಇನ್ನಾರಿಗೂ ಅಲ್ಲಿ ಪ್ರವೇಶ ಕೂಡ ಸಿಕ್ಕುವಂತಿಲ್ಲ. ಅಂತೆಯೇ ಇಂತಹ ಮಾರ್ಪಾಟುಗಳು ನಡೆದಿವೆ; ನಡೆಯುತ್ತ

ಲಿವೆ. ಆ ಎಲ್ಲ ಸಂಗತಿಗಳೂ ಜನರಿಗೆ ತಿಳಿದು ಹೋಗುವಂತಿದ್ದರೆ—ಆಗ್ಗೆ ಸ್ಥಿತಿ ಹೇಗಾಗುತ್ತಲಿದ್ದಿತು? ಜಗತ್ತಿನ ಇರುವಿಕೆಯೇ ಬದಲಾಗುತ್ತಲಿದ್ದಿತು. ಅಂತೆಯೇ 'ಚಿತ್ತೇವಾಚಾ ಕ್ರಿಯಾಯಾಂಚ ಮಹತಾಮೇಕರೂಪತಾ' ಎಂದು ಮಹಾತ್ಮರನ್ನು ಹೊಗಳಬೇಕಾಗಿದೆ. ಇಲ್ಲವಾದರೆ ಎಲ್ಲರೂ ಮಹಾತ್ಮರೇ ಆಗುತ್ತಿದ್ದರೋ ಏನೊ?

ಇದೆಲ್ಲವೂ ನಿಜವೇ. ಇಷ್ಟರಿಂದಲೇ ಹೃನ್ಮಂದಿರದೊಳಗಿನ ಸಂಗತಿಗಳೆಲ್ಲವೂ ಯಾವಾಗಲೂ, ಕೊನೆ ಪಕ್ಷಕ್ಕೆ ಆ ಆ ಜನರ ಅಪೇಕ್ಷೆಯಿರುವಷ್ಟರ ಮಟ್ಟಿಗಾದರೂ ಭದ್ರವಾಗಿಯೇ ಉಳಿಯುತ್ತವೆಂದು ಹೇಳಲು ಬರುವಂತಿಲ್ಲ. ಆ ಹೃನ್ಮಂದಿರಕ್ಕೆ ಎರಡು ಬಾಗಿಲುಗಳು. ಒಂದು ಒಳಹೋಗಲು, ಇನ್ನೊಂದು ಹೊರಹೊರಡಲು. ಬೇಕಾದಷ್ಟೇ ಸಂಗತಿಗಳನ್ನು ಹೊರಬಿಡುತ್ತಲಿದ್ದರೂ ಒಂದೊಂದು ಸಲ ಒಳಗೇ ಇರಿಸಬೇಕಾದ ಸಂಗತಿಗಳೂ ನುಸುಳಿಕೊಂಡು ಹೊರಹೋಗುತ್ತವೆ. ಅಂತಹ ಸಮಯ ಭಾವೀ ಭೀಕರ ಅನರ್ಥಗಳಿಗೆ ತಡೆಯನ್ನಾದರೂ ಉಂಟು ಮಾಡುತ್ತವೆ; ಇಲ್ಲವೆ ಚಾಲನೆಯನ್ನಾದರೂ ಕೊಡುತ್ತವೆ. ಇದು ಸರ್ವಸಾಧಾರಣ ನಿಯಮವಿರುತ್ತದೆ.

ವಿರೂಪಾಕ್ಷನಿಗೆ ತಮ್ಮ ಪ್ರಯತ್ನಕ್ಕೆ ಅಷ್ಟು ಮಟ್ಟಿಗೆ ಯಶ ದೊರೆತಂತಾಗಿದ್ದ ಮೂಲಕ ಅತ್ಯಾನಂದವಾಗಿದ್ದಿತು. ಬೇಗನೆ ಯಶೋಮಂದಿರ ತಲುಪುವ ಆಶೆ ಜನಿಸಿ, ಆತನನ್ನು ಅತೀವ ಉತ್ತೇಜಿತನನ್ನಾಗಿ ಮಾಡಿದ್ದಿತು. ಅಂದು ಕಡು ದುಃಖದಿಂದ ನೊಂದ ತಾಯಿಯನ್ನು ಅತಿ ಹರುಷ ಬಡಿಸುವ ಆಸೆ ಸಫಲವಾಗುವ ಚಿಹ್ನ ತೋರಹತ್ತಿ ಅವನು ಬಹಳ ಹರುಷ ಬಡುತ್ತಿದ್ದನು. ಒಂದು ಸಲ ತಾಯಿಯ ಬಳಿಯಲ್ಲಿ ಕುಳಿತಿರುವಾಗ್ಗೆ ಮಾತಿಗೆ ಮಾತು ಹೊರಟಿತು.

'ಅಮ್ಮಾ, ಅವರೆಲ್ಲರೂ ನಿನ್ನ ಅಪಮಾನ ಮಾಡುತ್ತಾರಲ್ಲವೆ? ಮಾಡಲಿ, ಇನ್ನೆಷ್ಟುದಿನ ಮಾಡುತ್ತಾರೋ ನೋಡುವೆ?'

'ಅದು ಜನ್ಮದಿಂದ ಬಂದುದಪ್ಪಾ ಮಗು. ಮರಣದಿಂದಲೇ ಕೊನೆಗಾಣತಕ್ಕದ್ದು'

'ಆ ಮೊದಲೇ ಕೊನೆಗಾಣಿಸಿ ತೋರಿಸುವೆನು.'

'ಸುಮ್ಮನೆ ಏನಾದರೂ ಅಂದರೆ ಹೇಗೆ ಸಾಧ್ಯವಿದೆ ಮಗು? ಅದು ಪಂಪಾಪತಿಯಿತ್ತ ಎಡೆಯು.'

'ನೋಡುವೆನು. ಆ ಪಂಪಾಪತಿಯೇ ನಮ್ಮ ಎಡೆಯನ್ನು ಹೇಗೆ ಬದಲಿಸುವದಿಲ್ಲವೆಂಬದನ್ನು?'

'ಅಂದರೇನೋ ಮಗು?'

'ಮಾರ್ಕಾಂಡೇಯ ಚಿರಂಜೀವಿಯಾಗಲಿಲ್ಲವೆ?'

'ಅಹುದು; ಅವನು ಮಹಾತಪಸ್ವಿಯು. ಪಂಪಾಪತಿಯ ಪ್ರಸಾದದಿಂದ ಅವನು ಚಿರಂಜೀವಿಯಾದನು. ನೀನೇನು ಅವನಂತೆ ತಪಸ್ಸು ಮಾಡಬೇಕೆನ್ನುವೆಯಾ?'

'ಅಮ್ಮಾ, ಇದು ಕಲಿಯುಗವು. ಜಪ-ತಪಗಳಿಗೆ ಫಲ ದೊರಕುವುದಿಲ್ಲ.'

'ಅದೇಕೆ? ಶ್ರೀ ವಿದ್ಯಾರಣ್ಯ ಯತಿವರರು ಜಗತ್ತನ್ನೇ ಬೆರಗುಗೊಳಿಸಲಿಲ್ಲವೆ?

ಇರಲಿ. ಈಗ ನಿನ್ನ ಎಡೆ ಬದಲಿಸುವ ಯಾವ ಶಕ್ತಿ ನಿನ್ನಲ್ಲಿದೆ?'

'ಶಕ್ತಿಯಿಲ್ಲದಿದ್ದರೆ ಯುಕ್ತಿಯಿಲ್ಲವೆ?'

'ಆಂ, ಅದು ಹೇಗೆ ಮಗು?'

'ಅಮ್ಮಾ, ಅದೇನನ್ನೂ ಕೇಳಬೇಡ. ನಿನ್ನ ವಿರೂಪಾಕ್ಷನು ಬೇಗನೆ ನಿನಗೆ ರಾಜ್ಞೀಪದದ ಮಾನ ತಂದು ಕೊಡುವದರಲ್ಲಿ ಸಂಶಯವಿಲ್ಲ.'

ಆ ತಾಯಿಗೆ ವಿರೂಪಾಕ್ಷ ಮೊದಲಾದವರ ಗುಪ್ತಕಟವೇನೂ ತಿಳಿದಿರಲಿಲ್ಲ. ಆದರೂ ಏನೊಂದು ಯುಕ್ತಿಯಿಂದ ತನ್ನ ಭಾಗಾದಿಗಳನ್ನು ಬಗ್ಗು ಬಡಿಯುತ್ತಾನೆಂದು ಮಾತ್ರ ತಿಳಿಯಿತು. ಅದರಿಂದ ಆ ಹೆಣ್ಣುಮಗಳಿಗೆ ಬಹಳೇ ಆನಂದವಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಮುಂದೆ ನಾಲ್ಕಾರು ದಿನಗಳ ತರುವಾಯ ಒಂದು ದಿನ ಆಕೆಯ ದಾಸಿ ಗೌರಾಂಬೆ ಆಕೆಯ ಬಳಿಗೆ ಬಂದು ಪೊನ್ನಲದೇವಿಯ ದಾಸಿಯರನ್ನು ದೂರಿದಳು. ಆಗ್ಗೆ ಆ ಹೆಣ್ಣುಮಗಳು: 'ಗೌರಾ, ಸ್ವಲ್ಪ ದಿವಸ ತಡೆ. ಅವರ ಉರವಣಿಗೆ-ಉಪದ್ರವಗಳನ್ನೆಲ್ಲ ಇನ್ನೇನೂ ಬಹಳ ದಿವಸ ತಾಳಬೇಕಾಗುವದಿಲ್ಲ. ಇಷ್ಟು ದಿನ ಸಹಿಸಿದಂತೆ ಇನ್ನೂ ಕೊಂಚ ದಿನ ತಡೆ. ಆ ಮೇಲೆ ಈಗ ನಿನ್ನ ಅಪಮಾನ ಮಾಡಿದವರ ಸೇಡು ಚನ್ನಾಗಿ ತೀರಿಸಿಕೊಳ್ಳುವೆಯಂತೆ' ಎಂದು ಹೇಳಿದಳು.

ಆ ಹೇಳಿಕೆಯ ಪರಿಣಾಮವೇ ಈ ಪ್ರಕರಣದ ಆರಂಭಕ್ಕೆ ಕೊಟ್ಟ ಸಂಭಾಷಣವು. ಹೇಮಾಂಬಿಕೆ ಅಲ್ಲಿಯೇ ಸಮೀಪದಲ್ಲಿದ್ದಳು. ದಾಸಿಯರೀರ್ವರ ಸಂಭಾಷಣದ ಕೆಲವಂಶ ಆಕೆಗೂ ಕೇಳ ಬಂದಿತು. ನಿತ್ಯವೂ ಅಂತಹ ದೂರುಗಳು ಬರುತ್ತಲಿದ್ದುವು; ಆದರೆ ಅವುಗಳಿಗೆಂದೂ ಹೇಮಾಂಬಿಕೆ ಲಕ್ಷ್ಯಗೊಡುತ್ತಲಿರಲಿಲ್ಲ; ಆದರೆ ಅಂದಿನ ದೂರು ಹೊಸ ಬಗೆಯದಿದ್ದಿತು. ಅಲ್ಪವೇ ಭಾಗ ಆದರೂ ಆಕೆಯ ಮನ ಸೆಳೆಯಿತು. ಕೂಡಲೆ ಆಕೆ ಇಬ್ಬರನ್ನೂ ಕರೆದು ಕೇಳಿದಳು. ಮೊದಲಿನ ಸಂಗತಿಯು ಪುನರುಚ್ಚಾರವಾಯಿತು. ಹೇಮಾಂಬಿಕೆಗೆ ಗೂಢವೇ ಬಿದ್ದಿತು. ಆದರೂ ತೋರಗೊಡದೆ, ತನ್ನ ದಾಸಿಯರನ್ನೇ ಬೆದರಿಸಿ ಕಳುಹಿದಳು; ಆದರೆ ಮನಸ್ಸು ಮಾತ್ರ ಪೂರ್ಣ ಸಂಶಯಗ್ರಸ್ತವಾಯಿತು. ಏನೋ ಒಂದು ಭೀಕರ ಒಳಸಂಚು ನಡೆಯುತ್ತಲಿದ್ದಂತೆ ಆಕೆಗೆ ಅನಿಸತೊಡಗಿತು. ವಿರೂಪಾಕ್ಷನ ವರ್ತನೆಯಲ್ಲಿ ಬಹಳ ಮಾರ್ಪಾಟಾದುದನ್ನು ಹೇಮಾಂಬಿಕೆಯರಿತಿದ್ದಳು. ಸೇಡು ತೀರಿಸಿಕೊಳ್ಳುವ ನೀಚ ವಿಚಾರಗಳು ಅವನ ಮನದಲ್ಲಿ ತಾಕಲಾಡುತ್ತಲಿದ್ದ ಬಗ್ಗೆ ಆಕೆಗೆ ಅನುಭವ ಬಂದಂತಾಗಿದ್ದಿತು. ಯುವರಾಜಪದ ಮತ್ತು ತಾನು ಈ ಎರಡರ ಸಲುವಾಗಿ ವಿರೂಪಾಕ್ಷ ತೀರಾ ಉತಾವಳಿಯಾದುದನ್ನು ಆಕೆ ಬಲ್ಲಳು. ನಿರಾಶೆಯಿಂದ ವಿರೂಪಾಕ್ಷನ ವಿವೇಕ ಹಿಂದೆ ಬಿದ್ದ ಬಗೆ ಆಕೆಗೆ ಮನವರಿಕೆಯಾಗಿದ್ದಿತು. ಈ ಎಲ್ಲದರ ಪರಿಣಾಮವೇನೋ ಎಂದು ಆಕೆ ಅನೇಕ ಸಲ ಯೋಚಿಸಿದ್ದಳು. ಬಲುಮೆ ಮಾಡುವ ಎದೆ ಅವನದಾಗದಿದ್ದರೂ, ತಾನು ಮೈಮರೆಯುವದು ಹಾನಿಕಾರಕವೆಂದು ಆಕೆ ಯಾವಾಗಲೂ ಜಾಗೃತಳಾಗಿಯೇ ಇರುತ್ತಲಿದ್ದಳು. ವಿರೂಪಾಕ್ಷನ ಹೊರ ಒಳಗುಗಳನ್ನೆಲ್ಲ ಅರಿಯಲು ಯತ್ನಿಸುತ್ತಲಿದ್ದಳು.

ಅವನ ಪ್ರತಿಯೊಂದು ಚಟುವಟಿಕೆಯ ಮೇಲೆಯೂ ಕಣ್ಣಿಟ್ಟಿದ್ದಳು. ಅನರ್ಥವೇನೋ ಸಂಭವಿಸಬಹುದೆಂದು ನಿತ್ಯವೂ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನಿರೀಕ್ಷಣೆ ಮಾಡುತ್ತಲೇ ಇದ್ದಳು. ಆಕೆಯ ಸಂಶಯ ನಿಜವಾಗಿ ಪರಿಣಮಿಸಿದಂತೆ ತೋರಿತು. ಅವರ ಸಂಚು ಎಂತಹದಿರಬಹುದೆಂಬ ಊಹೆಯಲ್ಲಿಯೇ ಅವಳು ಕುಳಿತುಬಿಟ್ಟಳು.

ವಿರೂಪಾಕ್ಷನಾಗಲಿ ಪ್ರತಾಪದೇವರಾಯನಾಗಲಿ ತಾವು ಕೈಕೊಂಡಿದ್ದ ಕಾರ್ಯದ ಬಗ್ಗೆ 'ಚ'ಕಾರ ಶಬ್ದವನ್ನಾದರೂ ಉಚ್ಚರಿಸಲಿಲ್ಲ. ಆ ಸಂಗತಿಯನ್ನೆಲ್ಲ ತಮ್ಮ ಅಂತ ರಂಗದಲ್ಲಿಟ್ಟು ಬಹಳ ದಕ್ಷತೆಯಿಂದ ಕಾಯುತ್ತಲಿದ್ದರು. ಆದರೂ ಅದರದೊಂದು ತೀರ ಚಿಕ್ಕದಾದ ಭಾಗವು ನುಸುಳಿ ಹೊರಬಿದ್ದಿತು. ಅವರ ಕಲ್ಪನೆಯಿಲ್ಲದೆ ಬೇರೆಯವರ ಕರ್ಣದ್ವಾರದಿಂದ ಅವರ ಅಂತರಂಗದಲ್ಲಿ ಪ್ರವೇಶಿಸಿ ಮುಖದಿಂದ ಹೊರಬಿದ್ದು ಮತ್ತೆ ಮುಂದೊರೆಯಿತು. ಹಾಗೆಯೇ ಅದು ಹೇಮಾಂಬಿಕೆಯ ವರೆಗೂ ಬಂದಿತು.

ಹೇಮಾಂಬಿಕೆ ಸುಂದರಿಯೂ ಸುಗುಣಿಯೂ ಇದ್ದಂತೆ ಚಾಣಾಕ್ಷಳೂ ಇದ್ದಳು. ಇಮ್ಮಡಿ ದೇವರಾಯ ಮತ್ತು ಮಲ್ಲಿಕಾರ್ಜುನರ ವಿಷಯಕವಾಗಿ ಬಹಳ ಹೆಮ್ಮೆ ಪಡು ವಳು. ಅವಳಾ ಹೆಮ್ಮೆಯೇನೂ ಅಯಥಾರ್ಥವಾಗಿರದೆ, ಅವರು ಅದಕ್ಕೆ ತೀರಾ ತಕ್ಕವ ರಾಗಿದ್ದರೆಂಬದಕ್ಕೆ ಇತಿಹಾಸೇ ಸಾಕ್ಷಿಯಾಗಿದೆ. ಮೊದಲೇ ಸಂಶಯಗ್ರಸ್ತಳಾದ ಆಕೆಯ ಮನಸ್ಸು ಬಹಳ ಭೀತಿಗೊಂಡಿತು. ರಾಜಕುಟುಂಬ ಘಾತದ ಬಗ್ಗೆ ಭೀಕರ ಸಂಚೊಂ ದು ಸಂದೇಹವಿಲ್ಲದೆ ನಡೆಯುತ್ತಲಿದ್ದ ಬಗ್ಗೆ ಆಕೆಗೆ ನಿಶ್ಚಯವೆನಿಸತೊಡಗಿತು. ರಾಜ ಕುಟುಂಬದ ಭದ್ರತೆಯ ವಿಷಯಕವಾಗಿ ಆಕೆ ಬಹಳ ಯೋಚಿಸತೊಡಗಿದಳು. ಎಲ್ಲವೂ ಪಂಪಾಪತಿಯ ಆಜ್ಞೆಯಂತೆ ನಡೆಯುವದೆಂದು ಆಕೆಯ ನಂಬುಗೆಯಿದ್ದರೂ ಮನಸ್ಸು ಚಡಪಡಿಸತೊಡಗಿತು. 'ಧಿಕ್ಕಾರ! ಇಂತಹ ಕೀಳರ ಜೀವನಕ್ಕೇನೇ ಧಿಕ್ಕಾರ! ಎಂತಹ ಸುಗುಣಿ ರಾಯ. ಯುವರಾಜನಂತೂ ಧರ್ಮರಾಜನಂತಹ ಮನುಷ್ಯ! ಇಂತಹರ ಬಗ್ಗೆ ಜ್ಞಾನವಿದ್ದ ಪ್ರತಿಯೊಬ್ಬ ಕನ್ನಡಿಗರೂ ಅಭಿಮಾನ ತಾಳಬೇಕು. ಮನ್ನಣೆ ನೀಡಬೇಕು. ಅಂತಹದರಲ್ಲಿ ಅವರನ್ನು ದ್ವೇಷಿಸುವದೆಂದರೆ, ಅಧಮತೆಯ ಕೊನೆ ದುದಿಯು. ಅದರಲ್ಲಿ ಅಂತಹ ಮಹಾತ್ಮರ ಪ್ರಾಣಘಾತಕ್ಕುದ್ಯುಕ್ತರಾದ ಈ ಮೂರ್ಖ ರಿಗೆ ಏನೆನ್ನಬೇಕು? ದೇವರು ಈ ನೀಚರಿಗೆ ಎಂತಹ ಶಿಕ್ಷೆ ವಿಧಿಸಬೇಕು? ಈ ದುಷ್ಟ ರಿಗೆ ಪಾಪ-ಪುಣ್ಯಗಳ ಪರಿವೆಯಿಲ್ಲವೆ? ದೇವರು-ಧರ್ಮಗಳ ಭೀತಿಯಿಲ್ಲವೆ? ಒಳಿತು-ಹೀನಗಳ ಕಲ್ಪನೆಯಿಲ್ಲವೆ? ಹಾಯ! ಹಾಯ! ದೇವಾ! ಈ ಲೋಕದಲ್ಲಿ ಎಂತೆಂತಹ ಜನರಿರುವರಲ್ಲ!........' ಇತ್ಯಾದಿಯಾದ ವಿಚಾರಗಳಿಂದ ಆಕೆಯ ಮನಸ್ಸು ಉದ್ವಿಗ್ನ ವಾಯಿತು ಖಿನ್ನಮನದಿಂದ ಕುಳಿತಿರಲು, ಭಿನ್ನ ಭಿನ್ನ ವಿಚಾರಗಳು ತಾಕಲಾಡಲಾ ರಂಭಿಸಿದವು. ಬೇರೊಂದು ಯೋಚನೆ ಆಕೆಯ ಮನದಲ್ಲಿ ಮೂಡಿತು. 'ನಿಜ-ನಿಜ, ಅದು ಅವರ ತಪ್ಪಲ್ಲ. ರಾಜ್ಯಪದದ ಮೋಹ ಅಷ್ಟು ಅನಿವಾರವಾದುದಿದೆ. ಅದರಲ್ಲಿ ಯಾದರೋ ಎಳ್ಳಷ್ಟಾದರೂ ಸುಖವಿಲ್ಲ; ಆದರೂ ಅದೆಂತಹ ಅನಿವಾರ ಆಕರ್ಷಣೆ ಅದರಲ್ಲಡಕವಾಗಿದೆಯಲ್ಲ! ಇವರು ಆ ರಾಜ್ಯಪದಕ್ಕೆ ಮೋಹಿಸಿರುವರು—ಇದು

ವರೆಗೂ ಜಗತ್ತಿನ ಇತಿಹಾಸಿನಲ್ಲಿ ಈ ರಾಜ್ಯಪದದ ಸಲುವಾಗಿ ಎಂತೆಂತಹ ಅನರ್ಥ ಗಳು ಸಂಭವಿಸಿರುವವಲ್ಲ! ಕೈಕೇಯಿಯಂತಹ ಪತಿಭಕ್ತಿಪರಾಯಣೆ, ಸುಗುಣೆ ಹೆಣ್ಣು ಮಗಳೂ ಈ ರಾಜ್ಯಸದದ ವ್ಯಾಮೋಹದಿಂದ ಪ್ರಭು ಶ್ರೀರಾಮಚಂದ್ರನನ್ನು ಅರಣ್ಯಾ ಕ್ಕಟ್ಟಿದಳು. ಸುಯೋಧನ ದುರ್ಯೋಧನನಾದುದೂ ಇದಕ್ಕೇನೇ ಅಲ್ಲವೆ? ಅಂದಲ್ಲಿ ವಿರೂಪಾಕ್ಷ ರಾಜ್ಯಪದಕ್ಕಾಶಿಸುವುದು ಸಹಜವೇ ಸರಿ-ಆಗಲಿ. ಪಂಪಾಪತಿ, ನಿನ್ನ ಇಚ್ಛೆ ಯಿದ್ದಂತಾಗಲಿ—' ಎಂದು ಶೂನ್ಯದೃಷ್ಟಿಯಿಂದ ಒಳಮುಖಳಾಗಿ ಕುಳಿತುಕೊಂಡಳು. ಅದೇ ಸಮಯಕ್ಕೆ ಯುವರಾಜ ಅಲ್ಲಿಗೆ ಬಂದನು.

'ಏನು ಹೇಮಾ, ಬಹಳವಾಗಿ ವಿಚಾರಕ್ಕೊಳಗಾದಂತೆ ಕಾಣುತ್ತದೆ?"

ಯುವರಾಜನ ಸ್ವರ ಕೇಳುತ್ತಲೆ ಹೇಮಾಂಬಿಕೆ ಎಚ್ಚರಾದಳು.

'ಅಹುದು ಯುವರಾಜ, ಇಂದು ಬಹಳ ವಿಚಾರಕ್ಕೊಳಗಾಗಿರುವೆನು.'

'ಅದನ್ನು ನಿನ್ನ ಮುಖಮುದ್ರೆಯೇ ಹೇಳುತ್ತದೆ. ಮೆಲುನಗೆ ಮಾಯವಾಗಿದೆ. ಚಂಚಲ ದೃಷ್ಟಿ ಸ್ಥಿರವಾಗಿದೆ. ಇನಿಗೊರಲು ಸ್ತಬ್ಧವಾಗಿದೆ. ಬ್ರಹ್ಮನಿಷ್ಠ ಯೋಗಿಯಂತೆ ಅಚಲವಾಗಿ ಕುಳಿತಿರುವೆ. ನಿನ್ನನ್ನು ಮೈಮರೆಯುವಂತೆ ಮಾಡಿದ ವಿಷಯವಾವುದು?

'ಯುವರಾಜ, ಅಂತಹ ಭೀಕರ ವಾರ್ತೆಯೊಂದು ತಲುಪಿದೆ.'

'ಭೀಕರ ವಾರ್ತೆಯೇ? ಅದೇನು?'

'ನಮ್ಮೀ ಕನ್ನಡ ರಾಜ್ಯದಲ್ಲೊಂದು ಭಯಂಕರ ಸಂಚು ನಡೆಯುತ್ತಲಿದ್ದಂತೆ ನನಗೆ ಸಂಶಯ ಬರಹತ್ತಿದೆ.'

'ನಮ್ಮೀ ಕನ್ನಡ ಸಾಮ್ರಾಜ್ಯದಲ್ಲಿಯೇ! ಪ್ರಭು ರಾಮಚಂದ್ರನಂತೆ ನಮ್ಮ ತಂದೆಯವರು ಆಳುತ್ತಲಿರುವ ಈ ವಿಜಯನಗರ ಸಾಮ್ರಾಜ್ಯದಲ್ಲಿಯೇ? ಸಂಸ್ಕೃ ತಿಯ ಶಿಖರಕ್ಕೆ ತಲುಪಿ, ಪರಕೀಯರು ಕೂಡಾ ಬೆರಳು ಕಚ್ಚುವಂತೆ—'

'ಅಹುದು. ಯುವರಾಜ, ನಿಮ್ಮಾ ಹೆಮ್ಮೆಯ ರಾಜ್ಯದಲ್ಲಿಯೇ.'

'ಛೆ! ಹೇಮಾ, ಸುಮ್ಮನೆ ಏನೊಂದು ಕಲ್ಪನೆ ತಲೆಯಲ್ಲಿ ತುಂಬಿಕೊಂಡಿರುವೆ.'

'ಆ ಬಗ್ಗೆ ನನಗೆ ಪ್ರಬಲವಾದ ಸಂಶಯ ಬರುತ್ತಲಿದೆ.'

'ಸಂಶಯ ತೆಗೆದುಕೊಳ್ಳುವುದು ಹೆಣ್ಣುಮಕ್ಕಳಾದ ನಿಮ್ಮ ಸ್ವಭಾವವೇ.'

'ನೀವೇನಾದರೂ ಅನ್ನಿರಿ; ಆದರೆ ನನಗೆ ಮಾತ್ರ ಬಲವಾದ ಸಂದೇಹಬಂದಿದೆ.'

'ಹೇಮಾ, ಒಳಸಂಚು ಏತರ ಸಲುವಾಗಿ ನಡೆಯಬೇಕು? ಪ್ರಜೆಗಳಿಗೆ ಯಾವ ವಿಧದಲ್ಲಿ ತೊಂದರೆಯಿದೆ? ನಮ್ಮ ಅಧಿಕಾರಿಗಳು ಪ್ರಜೆಗಳನ್ನು ಪೀಡಿಸುತ್ತಾರೆಯೇ? ಅವರ ಮೇಲೆ ಭಾರವಾದ ಕರ ಹೇರಿದೆಯೇ? ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲಿ ಡೆಯೇ? ಪರರಾಜರ ಉಪಟಳ ಬಹಳವಾಗಿದೆಯೆ? ಅವರವರ ಧಾರ್ಮಿಕ-ಸಾಮಾಜಿಕ ಕಾರ್ಯಗಳಿಗೆ ಆತಂಕವುಂಟಾಗಿದೆಯೆ?'

'ಇಲ್ಲ; ಯುವರಾಜ, ಇವುಗಳಲ್ಲಿ ಒಂದರ ಕೊರತೆಯೂ ಇಲ್ಲ. ಕನ್ನಡ ಪ್ರಜೆಗಳು ಬಹು ನೆಮ್ಮದಿಯನಾಗಿದ್ದಾರೆ. ಪರಧರ್ಮೀಯರೂ ಕೂಡಾ ನಿರ್ಭೀತರಾಗಿರುವಾಗ

ಸ್ವಧರ್ಮೀಯರಿಗೆ ತೊಂದರೆಯೆಲ್ಲಿಯದು? ಆಳುವ ದೊರೆಗಳ ದಕ್ಷತೆಯ ಪರಿಣಾಮ ವಾಗಿ ನಮ್ಮ ಕನ್ನಡ ಪ್ರಜೆಗಳು ಸುಖಸಂತೋಷಗಳಲ್ಲಿ ಕಾಲಕಳೆಯುತ್ತಲಿದ್ದಾರೆ!'

'ಹಾಗಾದರೆ ನಮ್ಮ ಪ್ರಜೆಗಳು ಸಂಚು ಏಕೆ ಮಾಡಬೇಕು?'

'ಪ್ರಜೆಗಳೆಲ್ಲಿ ಮಾತಾಡುತ್ತಲಿರುವರು?'

'ಹಾಗಾದರಿನ್ನಾರು?'

'ಪ್ರಜೆಗಳು ಪರುಷಗದ್ದಲಿನಲ್ಲಿ ಈಜಾಡುತ್ತಲಿರುವಾಗ್ಗೆ ಅವರು ಸಂಚು ಮಾಡು ವರೆ? ಆಳುವರಸಿನ ಯಶಃಪ್ರಾರ್ಥನೆಯನ್ನುಳಿದು ಅವರಿಗೆ ಬೇರೆ ಉದ್ಯೋಗವೇ ಇಲ್ಲ. ದೊರೆಗಳಿಗೆ ಆಯುರಾರೋಗ್ಯವನ್ನು ದಯಪಾಲಿಸಲು ಪಂಪಾಪತಿಯನ್ನು ನಿರಂತರವೂ ಬೇಡಿಕೊಳ್ಳುತ್ತಲಿರಲು, ಆ ರಾಜನಿಷ್ಠ ಪ್ರಜೆಗಳ ಮನದಲ್ಲಿ ದೊರೆಗಳ ವಿಷಯಕ್ಕೆ ಅನ್ಯಥಾ ಭಾವನೆ ಬರಬಹುದೆ?"

'ಏನು ಹೇಮಾ, ನಿನ್ನ ಮಾತೇ ವಿಚಿತ್ರವಾಗಿದೆ. ಭೀಕರ ಸಂಚು ನಡೆದಿದೆ ಯೆನ್ನುವೆ. ಪ್ರಜೆಗಳಿಗೆ ಸಂಚಿನ ಕಲ್ಪನೆ ಕೂಡಾ ಬರಲು ಸಾಧ್ಯವಿಲ್ಲವೆನ್ನುವೆ. ಒಂದ ಕ್ಕೊಂದು ವಿಪರೀತವೇ ಆಗಿದೆಯಲ್ಲ!'

''ಪಾಪ! ಪ್ರಜೆಗಳ ವಿಷಯಕ್ಕೆ ನಾನೆಂದಾದರೂ ಹೀಗನ್ನಲು ಸಾಧ್ಯವಿದೆಯೆ?"

'ಇರಲಿ. ಹಾಗಾದರೆ ಹೇಳು ನೋಡುವಾ, ಈ ಸಂಚಿನ ಮೂಲ ಕರ್ತರಾರು? ಅದರಲ್ಲಿ ಭಾಗ ವಹಿಸಿರುವ ಜನರಾರು? ಅವರ ಉದ್ದೇಶವೇನು? ಸಂಚಿನ ಪರಿಣಾಮ ವೇನಾಗಬಹುದು?'

'ಇಷ್ಟೆಲ್ಲ ಸಂಗತಿ ನನಗೆ ತಿಳಿಮುದಾಗಿದ್ದರೆ 'ಇಕ್ಕೊ, ಇವನೇ ಜಯದ್ರಥ; ಇಲ್ಲಿಯೆ ಸೂರ್ಯ' ಎಂದು ಸ್ಪಷ್ಟಮಾಡುತ್ತಲಿದ್ದೆನು.'

'ಹಾಗಾದರೆ ನಿನಗೆ ತಿಳಿದ ಸಂಗತಿಯಾದರೂ ಏನು?'

'ಒಂದು ಭೀಕರ, ಅತ್ಯಂತ ಭಯಂಕರ, ಅತಿ ಹೇಯ ಅಧಮಾಧಮ ಸಂ- ಚೊಂದು ನಡೆಯುತ್ತಲಿದೆ.'

'ನಿನಗೆ ಹೇಗೆ ಗೊತ್ತಾಯಿತು?'

'ಬರಿಯ ನಿರೀಕ್ಷಣೆಯಿಂದ.'

'ಹಾಗಾಗಿದ್ದರೆ ತಪ್ಪು ಕಲ್ಪನೆಯಾಗಿರಬಹುದು. ಸುಮ್ಮನೆ ಏನನ್ನಾದರೂ ವಿಪರೀತವಾಗಿ ಭಾವಿಸಿಕೊಂಡಿರಬಹುದು.'

'ಇದುವರೆಗೂ ಹಾಗೆ ಕಲ್ಪನೆ ಮಾಡಿಕೊಂಡು ಮತ್ತೆ ಮತ್ತೆ ನಿರೀಕ್ಷಿಸಿದ್ದಾ ಯಿತು. ಆದರೂ ನಿತ್ಯವೂ ನವೀನ ಸಂಗತಿಗಳು ತಿಳಿದು, ನನ್ನ ಸಂದೇಹಕ್ಕೆ ಪುಷ್ಟಿ ಯನ್ನೇ ಕೊಡುತ್ತಲಿವೆ.'

'ಒಳ್ಳೇದು. ಹೇಮಾ, ಈ ಸಂಚುಗಾರರ ವಿಷಯಕ್ಕೆ ಏನಾದರೂ ತಿಳಿದಿದೆಯೆ?'

'ಅಹುದು; ಮತ್ತೂ ಅದೇ ನನ್ನ ಇಷ್ಟು ಭಯಕ್ಕೆ ಕಾರಣವಾಗಿದೆ.'

'ಅವರಾರು? ಹೇಳು ನೋಡುವಾ.'

'ಅವರೇ—ಇನ್ನಿತರರ ವಿಷಯು ನನಗೆ ಪೂರ್ಣ ಪರಿಚಯುವಿಲ್ಲ. ಒಬ್ಬನನ್ನು—ಮುಖ್ಯ ಪಾತ್ರವಹಿಸಿದವನ ಹೆಸರು ಮಾತ್ರ ಹೇಳಬಲ್ಲೆ.'

'ಅವನಾರು?'

'ಅವನೇ ನಿಮ್ಮ ಮೈನೆಳಲಾಗಿರುವ ವಿರೂಪಾಕ್ಷ.'

'ಏನು, ವಿರೂಪಾಕ್ಷನೆ?'

'ಅಹುದು; ಅವನೇ.'

'ಛೆ! ತಪ್ಪಿರಬಹುದು ನೋಡು.'

'ಇಲ್ಲ ಯುವರಾಜ, ನಾನು ಎಷ್ಟೋ ಸಲ ನಿರೀಕ್ಷಿಸಿರುವೆನು. ಆ ಸಂಚಿಗೆ ಮೂಲ ಕಾರಣನೇ ಆತನಿರಬೇಕೆಂದು ನನಗೆ ದೃಢವಾಗಹತ್ತಿದೆ.'

'ವಿರೂಪಾಕ್ಷ ಸಂಚುಗಾರನಿರಬೇಕೇ?'

'ಅಹುದು; ನನಗಂತೂ ಹಾಗೆ ತೋರುತ್ತದೆ. ನೀವಾದರೂ ಅವನನ್ನು ಕೊಂಚ ಸೂಕ್ಷ್ಮವಾಗಿ ನಿರೀಕ್ಷಿಸಿದಲ್ಲಿ ಅವನಲ್ಲೊಂದು ಬಗೆಯು ಮಾರ್ಪಾಟಾಗಿದೆ ಯೆಂಬದು ತಿಳಿದು ಬರದಿರದು.'

'ಅವನಲ್ಲೊಂದು ಬಗೆಯು ಮಾರ್ಪಾಟಾಗಿದೆಯೆಂಬದು ಎಂತಹನಿಗಾದರೂ ತಿಳಿದು ಬರುವಂತಿದೆ; ಮತ್ತು ಯಾವನಿಗಾದರೂ ಹಾಗೆನಿಸುವದು ಸಹಜವೇ? ಕೀರ್ತಿ-ಪದವಿಗಳ ವ್ಯಾಮೋಹ ಯಾರಿಗೆ ತಾನೆ ಬಿಟ್ಟದೆ? ಎಲ್ಲಿ ನೋಡಿದರೂ ದೊರೆಗಳ ಮತ್ತು ನನ್ನ ಗೌರವವೇ ನಡೆದಿರುವ ಮೂಲಕ, ಆತನಿಗೆ ಕೊಂಚ ಕೆಡಕೆನಿಸುವುದು ಸಹಜವೇ. ಅದೇ ಅವನಲ್ಲುಂಟಾದ ಮಾರ್ಪಾಟಿಗೆ ಕಾರಣವಾಗಿರಬೇಕು. ನಾನಾದರೂ ಏನು ಮಾಡಲಿ? ಅವನ ಈ ಮನಃಸ್ಥಿತಿಗೆ ಮರೆಹಾಕಬೇಕೆಂದು, ಅವನಿಗೂ ಗೌರವ ದೊರೆವಂತೆ ಮಾಡಬೇಕೆಂದು ಎಲ್ಲೆಡೆಯಲ್ಲೂ ಯತ್ನಿಸುತ್ತೇನೆ. ನಾನೆಲ್ಲಿ ಹೋದರೂ ಅವನನ್ನು ಬಿಡದೇ ಕರೆದೊಯ್ಯುವೆ. ಆದರೂ ಜನರು ಅವನತ್ತ ಹೊರಳುವುದೇ ಇಲ್ಲ. ಆದಕ್ಕೆ ಅವನಲ್ಲಿ ಗುಣವಿಲ್ಲವೆಂದಲ್ಲ. ಅವನೂ ಶೂರನಿರುವನು, ಚತುರನಿರುವನು; ಆದರೆ ಯುವರಾಜಪದವಿಲ್ಲವಲ್ಲ! ಅಂತೆಯೇ ಅವನತ್ತ ಯಾರೂ ಹೊರಳುವುದಿಲ್ಲ. ನನಗಾದರೋ ಈ ಕೀರ್ತಿ-ಪದವಿ ಒಂದೂ ಬೇಡವೆನ್ನಿಸುತ್ತವೆ. ಗೌತುಮನಂತೆ ವನಕ್ಕಾದರೂ ಹೋಗಿ ಕಾಲಕಳೆಯಬೇಕೆನಿಸುತ್ತದೆ; ಆದರೆ ಬಂಧುಗಳಂತಿದ್ದ ಪ್ರಜಾಪ್ರೇಮ ಕಟ್ಟಿಹಾಕಿದೆ. ಅಂತೆಯೇ ಯುವರಾಜಪದದಲ್ಲಿರುವೆನು. ಆದ್ದರಿಂದಲೇ ಜನರು ನನಗೆ ಗೌರವ-ಮನ್ನಣೆಗಳನ್ನು ಸಲ್ಲಿಸುವರು. ವಿರೂಪಾಕ್ಷನೆಂದರೆ ಮೂಗು ಮುರಿಯುವರು. ಈಗ ನೀನಾದರೂ ಆ ಮೂಲಕವಾಗಿಯೇ ಅವನಲ್ಲಿ ಸಂಶಯ ವ್ಯಕ್ತಮಾಡಿರಬಹುದು.'

'ಛೆ, ನಾನಷ್ಟು ಕೀಳಳಿರುವೆನೆ?'

'ಅಲ್ಲ ಹೇಮಾ, ಸುಮ್ಮನೆ ಚೇಷ್ಟೆಗೆಂದೆನು. ಒಳ್ಳೇದು. ಹೇಮಾ, ಒಂದು ವೇಳೆ ವಿರೂಪಾಕ್ಷ ನನ್ನ ಮಾನ-ಮನ್ನಣೆಗಳಿಗೆ ಕೊಂಚ ಮತ್ಸರ ತಾಳಿರಬಹುದೆಂದು ತಿಳಿ

ಯುವಾ; ಏಕೆಂದರೆ, ಅದು ಮನುಷ್ಯಸ್ವಭಾವವೇ. ಎಂತಹ ಸಂಯಮಿಯಿದ್ದರೂ ಚಂಚಲ ಮನಸ್ಸು ಕೊಂಚವಾದರೂ ಅಲ್ಲಾಡದಿಲ್ಲ. ಅದರಲ್ಲಿ ವಿರೂಪಾಕ್ಷನಂತೂ ತರುಣ. ಅಂದಲ್ಲಿ ನನ್ನ ಬಗ್ಗೆ ಕೊಂಚ ಮಾತ್ಸರ್ಯ ತಾಳಿದ್ದರೂ ತಳೆದಿರಬಹುದು; ಆದರೆ ಅಷ್ಟು ಭೀಕರ ಸಂಚಿಗೆ ಕೈಗೊಡುವಷ್ಟು ದುಷ್ಟ ಮನ ಅವನದಿದೆಯೆಂದು ನೀನು ಭಾವಿಸುತ್ತೀಯಾ?'

'ರಾಜ್ಯಪದದ ಮೋಹವೇನು ಚಿಕ್ಕತರದ್ದೆನ್ನು ವಿರಾ?'

'ಛೆ, ಅತೀವ ಮಹತ್ತರವಾದುದು. ರಾಜ್ಯದ ಸಲುವಾಗಿಯೇ ಎಂತೆಂತಹ ಭೀಕರ ಅನರ್ಥಗಳು ನಡೆದು ಹೋಗುತ್ತವೆ; ಆದರೆ ವಿರೂಪಾಕ್ಷ ಅಷ್ಟು ದುಷ್ಟ ವೃತ್ತಿಯವನಲ್ಲವೆಂದು ನನ್ನ ಕಲ್ಪನೆಯಿದೆ.'

'ಅಹುದು; ನಿಮ್ಮ ಅನುಭವ ಹಾಗಿದೆ. ನೀವೇ ಏಕೆ, ಇನ್ನಾರನ್ನು ಕೇಳಿದರೂ ವಿರೂಪಾಕ್ಷ ಅಷ್ಟು ದುಷ್ಟನಲ್ಲವೆಂದೇ ಹೇಳುತ್ತಾರೆ.'

'ಹಾಗಾದರೆ ನೀನು ಮಾತ್ರ ಹೀಗೇಕೆ ಆರೋಪವಿಡುವೆ.'

'ಅದಕ್ಕೆ ಕಾರಣಗಳುಂಟು.'

'ಅವಾವು?'

'ಬರಿಯ ರಾಜ್ಯವಾಗಿದ್ದರೆ ಅವನು ಅಷ್ಟು ಅವಸರ ಮಾಡುತ್ತಲಿರಲಿಲ್ಲ. ಇಂದಿಲ್ಲ ನಾಳೆಯಾದರೂ ರಾಜ್ಯ ಸಮಯ ಸಾಧಿಸಿದಾಗ್ಗೆ ಗಳಿಸಲು ಬರಬಹುದು; ಆದರೆ—'

'ಆದರೆ ಇನ್ನೇನು ಹೇಮಾ? ಅವನನ್ನು ಇಂತಹ ಭೀಕರ ಸಂಚಿಗೆ ಕೈ ಹಾಕುವಂತೆ ಮಾಡುವ ಇನ್ನಾವ ವಿಷಯವಿದೆ.'

'ಹೇಮಾಂಬಿಕೆ ಇರುವಳಲ್ಲ. ರಾಜ್ಯ ಬೇಕಾದ ಸಮಯ ಸಿಗಬಹುದು; ಆದರೆ ಒಮ್ಮೆ ಹೇಮಾಂಬಿಕೆ ಸೌಭಾಗ್ಯವತಿಯಾದರೆ ಸಿಕ್ಕುವಳೆ?'

'ಆಂ, ಇದೇನು ಮೋಜು! ಚನ್ನಾಗಿ ಹೇಳು ನೋಡುವಾ?'

'ಹೇಮಾಂಬಿಕೆಯ ನಿರಾಶೆಯೂ ಒಂದು ಕೂಡಿದೆ.'

'ಆದರೆ ಹೇಮಾಂಬಿಕೆಯ ನಿರಾಶೆಯೆಲ್ಲಿ ಆಯಿತು?'

'ಅಹುದು. ಸಿಕ್ಕುವುದಿಲ್ಲವೆಂದಲ್ಲಿ ನಿರಾಶೆಯಾಗದೇನು?'

'ಈಗಲೇ ಸಿಕ್ಕುವದಿಲ್ಲವೆಂದಾಯಿತೆ? ಹಾಗೆ ಹೇಳಿದವರಾರು?'

'ಯಾರೇಕೆ ಹೇಳಬೇಕು? ಅವನಿಗೆ ಅಷ್ಟು ತಲೆಯಿಲ್ಲವೆ?'

'ಪಾಪ! ಆ ಹುಡುಗನನ್ನು ಅಷ್ಟು ಕಷ್ಟಕ್ಕೇಕೆ ಗುರಿಮಾಡಬೇಕು?'

'ಅಂದರೆ?'

'ಅಂದರೇನು? ಅವನೇನು ಕುರೂಪಿಯೋ, ಬಲಹೀನನೆ, ಮುದುಕನೆ? ಯುವರಾಜಪದವೊಂದಿಲ್ಲ. ನಿನ್ನನ್ನು ಅವನು ಪ್ರೀತಿಸುವದು ಸಹಜ. ಅವನೇ ಏಕೆ, ನಿನ್ನಂತಹ ಸುಂದರಿಯನ್ನು-ಸುಗುಣಿಯನ್ನು ಯಾರಾದರೂ ಪ್ರೀತಿಸಬಹುದು. ಅದಕ್ಕೇನು? ಆದರೆ ಅವನನ್ನೇಕೆ ನಿರಾಶೆಪಡಿಸಬೇಕು?'

'ಅಂದರೆ, ಅಧಿಕಾರದ ಬಲುಮೆಯಾಗಬೇಕೇನು?'

'ಛೆ! ಉಂಟೇ? ಬಲುಮೆಯೆಂಬ ಶಬ್ದ ಕೂಡ ಕನ್ನಡ ಸಾಮ್ರಾಜ್ಯದಲ್ಲಿ ಕೇಳ ಬರುವಂತಿಲ್ಲ. ಹಾಗಿದ್ದ ಮೇಲೆ ಅರಮನೆಯಲ್ಲಿ ಬಲುಮೆಯೇ? ಎಂದೂ ಶಕ್ಯವಿಲ್ಲ.'

'ಹಾಗಾದರೆ ನನ್ನಷ್ಟಕ್ಕೆ ನಾನು ಸ್ವತಂತ್ರಳಲ್ಲವೆ?'

'ಅಲ್ಲವೆನ್ನುವರಾರು? ಹಾಗಿದ್ದರೆ ನೀನು ಇನ್ನಾರನ್ನು ಮದುವೆಯಾಗ ಬೇಕೆನ್ನುವೆ?'

'ಅದೇನೋ ನನ್ನ ವಿಷಯ. ಈಗಲೆ ನೀವೇ ಹೇಳಿದಿರಲ್ಲ? ಯಾರಾದರೂ ಪ್ರೀತಿಸಬಹುದೆಂದು. ಆ ಯಾರಾದರೊಳಗೆ ಒಬ್ಬರನ್ನಾಯ್ದುಕೊಳ್ಳುವೆ.'

'ಹೋಗಲಿ ಬಿಡು. ನಿನಗೆ ಬೇಕೆನಿಸಿದ ಹಾಗೆ ಮಾಡು. ಸುಮ್ಮನೆ ಚೇಷ್ಟೆ ಮಾಡಿದೆನು ಅಷ್ಟೇ.'

'ನಾನೇನದನ್ನು ತಿಳಿಯಲಿಲ್ಲವೆ?'

'ಹಾಗಾದರೆ ಹೇಮಾ, ಈ ಸಂಗತಿಯ ವಿಷಯಕ್ಕೆ ಹೆಚ್ಚಿನ ಸಂಗತಿಯಾದರೂ ತಿಳಿದಿದೆಯೆ? ರಾಜ್ಯಪದದಾಶೆ-ಪ್ರೇಮನಿರಾಶೆ ಇವೆರಡರಿಂದ ಏನಾದರೊಂದು ಅನರ್ಥ ವಾಗಬಹುದು.'

---

## ೯ ಕಾರ್ಮೋಡ.

'ಅಮ್ಮಾ, ನಿನ್ನ ಮೊಗವೇಕೋ ಕಂದಿದಂತಿದೆಯಲ್ಲ?'

'ಹೇಮಾ, ನಿನ್ನಿನಿರುಳು ಒಂದೇನೋ ದುಷ್ಟ ಕನಸು ಕಂಡೆನು. ಅದರ ಯೋಚನೆ ಯಲ್ಲಿಯೇ ನಾನಿರುವೆನು.'

'ಏನು, ದುಷ್ಟ ಕನಸೇ?'

'ಅಹುದು ಹೇಮಾ, ಅಹುದು; ದುಷ್ಟವಾದುದು. ಅದರ ಪರಿಣಾಮವಾಗಿ ನಮ್ಮ ಕನ್ನಡ ಸಾಮ್ರಾಜ್ಯಕ್ಕೇನೋ ಗಂಡಾಂತರ ಬರುವವೆಂದು ನನಗೆ ಭೀತಿಯಾಗಿದೆ!'

'ಅಮ್ಮಾ, ಹುಟ್ಟಿದ ಮನುಷ್ಯನಿಗೆ ಬೇನೆ-ಬೇಸರಗಳು ಹೇಗೋ, ಹಾಗೆ ಸ್ಥಾಪಿತ ವಾದ ಸಾಮ್ರಾಜ್ಯಗಳಿಗೂ ಸಂಕಟಗಳು ಸಂಭವಿಸತಕ್ಕವೇ. ಅಂತಹ ಸಂಕಟಗಳಲ್ಲಿ ಸುರಕ್ಷಿತವಾಗುಳಿಯುವುದೇ ಸಾಮ್ರಾಜ್ಯದ ಸ್ಥೈರ್ಯ. ಅದಿರಲಿ. ಕನಸನ್ನೇನು ಕಂಡೆ? ಹೇಳು ನೋಡುವಾ.'

'ಹೇಮಾ, ನಾವೆಲ್ಲರೂ ನಮ್ಮ ಮುಖ್ಯ ಮುಖ್ಯ ಸರದಾರರೊಂದಿಗೆ ಅದೆಲ್ಲಿಗೋ ಹೊರಟಿದ್ದೆವು. ದಾರಿ ಸುಗಮವಾಗಿ ಸಾಗುತ್ತಲಿದ್ದಿತು. ಎಲ್ಲರೂ ಅತ್ಯಾನಂದದಿಂದ ಹೊರಟಿದ್ದೆವು.'

'ಮುಂದೇನಾಯಿತು?'

'ಎಲ್ಲರೂ ಹೋಗುವಲ್ಲಿ ಆಕಸ್ಮಾತ್ ಕಾರ್ಮೋಡ ಕವಿದುವು. ಆಕಾಶವೆಲ್ಲ

ಮೋಡಗಳಿಂದ ಮುಚ್ಚಿ ಹೋಯಿತು. ಕಗ್ಗತ್ತಲು ಕವಿಯಿತು. ಕಣ್ಣು ಕುರುಡು ಬಿದ್ದವು. ಎಲ್ಲರಿಗೂ ಈ ಕತ್ತಲು ಹೇಗೆ ಕಳೆದೀತೆಂಬದೇ ಒಂದು ಯೋಚನೆ ಹತ್ತಿ ಹೋಗಿದ್ದಿತು.'

'ಹುಂ, ಮುಂದೆ?'

'ತಡವರಿಸುತ್ತ ಹೇಗೋ ಮುಂದೆ ಸಾಗಿದೆವು; ಆದರೆ ಒಂದೆಡೆ ಆಕಸ್ಮಾತ್ ಭೂಮಿ ಕುಸಿಬಿದ್ದಿತು. ನಮ್ಮ ಸರದಾರರೆಲ್ಲರೂ ಆ ಭೂಮಿಯಲ್ಲಿ ಹೂತು ಹೋದಂತೆ ತೋರಿತು. ಮತ್ತೆ ಪ್ರಭುಗಳೂ ಆ ತೆಗ್ಗಿನಲ್ಲಿಯೇ ಬೀಳುವವರಿದ್ದರು.'

'ಆದರೆ ಬೀಳಲಿಲ್ಲವಷ್ಟೆ?'

'ಇಲ್ಲ. ನೀನು ಮತ್ತು ಯುವರಾಜನು ಕೂಡಿಯೇ ಹೋಗಿ ಕೈಹಿಡಿದು ಮೇಲಕ್ಕೆ ಕರೆದು ತಂದಿರಿ. ನಿಮ್ಮೀರ್ವರಿಂದ ಅವರು ಉಳಿದುಕೊಂಡರು. ಎಲ್ಲ ಸರ ದಾರರೂ ತಗ್ಗಿನಲ್ಲಿ ಕಾಣದಷ್ಟು ದೂರ ಬಿದ್ದುಹೋದರು.'

'ಸರಿ, ಹಾಗಾದರೆ ಪ್ರಭುಗಳಂತೂ ಉಳಿದರಲ್ಲವೆ?'

'ಅಹುದು; ನಿಮ್ಮೀರ್ವರ ಸಹಾಯದಿಂದಲೇ ಉಳಿದರು.'

'ಪಂಪಾಪತಿ ಮತ್ತು ಭುವನೇಶ್ವರಿಯರ ಪ್ರಸಾದದಿಂದ ಎಂದೆನ್ನು.'

'ಹೇಮಾ, ಇದರರ್ಥವೇನು?'

'ಅಮ್ಮಾ, ನಾನು ಆಗಲೆ ಹೇಳಲಿಲ್ಲವೆ? ಕಂಟಕಗಳಿಗೆ ಕಾಲುಗೆಟ್ಟಿದ್ದರೆ, ಕನ್ನಡಸಾಮ್ರಾಜ್ಯ ಸ್ಥಾಪನೆಯಾದರೂ ಆಗುತ್ತಲಿದ್ದಿತೆ? ಆದುದರಿಂದ ಸಂಕಟವೇನೋ ಸಂಭವಿಸುವಂತೆ ತೋರುತ್ತದೆ. ಇದು ಪಂಪಾಪತಿಯಿತ್ತ ಸೂಚನೆಯೇ ಇರಬೇಕು. ನಾವೆಲ್ಲರೂ ಜಾಗ್ರತರಾಗಿಯೇ ಇರುವಾ. ಏನೇನು ಆಗುತ್ತದೆಯೋ ಅದನ್ನು ನೋಡುವಾ. ಪಂಪಾಪತಿಗೇನೇ ಸಕಲರನ್ನೂ ಸುರಕ್ಷಿತವಾಗಿಡಲು ಸ್ತೋತ್ರ ಮಾಡಿ ಕೊಳ್ಳುವಾ.'

ಇನ್ನಾವ ಸಮಯದಲ್ಲಿಯೇ ಆಗಿದ್ದರೆ ಹೇಮಾಂಬಿಕೆ ಸ್ವಪ್ನಕ್ಕೆ ಎಷ್ಟು ಮಾತ್ರವೂ ಗಮನ ಕೊಡುತ್ತಿರಲಿಲ್ಲ. 'ಸುಳ್ಳೇ' ಎಂದು ಹಾಸ್ಯಮಾಡುತ್ತಲಿದ್ದಳು; ಆದರೆ ಅಂದು ಆ ಸ್ವಪ್ನದಲ್ಲಿ ಸತ್ಯಾಂಶ ಬಹಳವಿದೆಯೆಂಬಂತೆ ತೋರಿತು. ಹೇಮಾಂ ಬಿಕೆ ಒಮ್ಮೆಲೆ ಸ್ವಪ್ನವನ್ನು ನಂಬಿದುದಕ್ಕೆ ಪೊನ್ನಲದೇವಿಗೆ ನಿಜವಾಗಿಯೂ ಆಶ್ಚರ್ಯ ವಾಗಬೇಕಿದ್ದಿತು. ಗುಪ್ತಕಟದ ಗುಪ್ತವಾರ್ತೆ ಹೇಮಾಂಬಿಕೆಗೆ ತಿಳಿದ ಬಗ್ಗೆ ಸಂಶಯ ಪಡಬೇಕಾಗಿದ್ದಿತು; ಆದರಾ ಪ್ರೇಮಳ ಸ್ವಭಾವದ ರಾಣಿಗೆ ಯಾವ ಕಲ್ಪನೆಯೂ ಬರಲಿಲ್ಲ. ತನ್ನ ಸ್ವಪ್ನದ ವ್ಯಸನವೇ ಸಾಕಷ್ಟಕ್ಕಿಂತ ಮಿಕ್ಕಿದ್ದಿತು. ತಾನು ನಂಬಿ ದ್ದಂತೆ ಮುಗ್ಧಭಾವದಿಂದ ಹೇಮಾಂಬಿಕೆಯೂ ನಂಬಿದ್ದಾಳೆಂದು ತಿಳಿದುಬಿಟ್ಟಳು. 'ತಮ್ಮಾ, ಉನ್ನತಿಪಡೆದ ಕನ್ನಡಸಾಮ್ರಾಜ್ಯಕ್ಕೆ ಯಾವ ತೊಂದರೆಯೂ ತಟ್ಟದಿರಲಿ.' ಎಂದು ಪಂಪಾಪತಿಗೆ ಪ್ರಾರ್ಥನೆ ಮಾಡಿಕೊಳ್ಳಹತ್ತಿದಳು. ತನ್ನ ಕೈಯಲ್ಲಿದ್ದುದೆಂದರೆ, ಅಷ್ಟೇ ಎಂದು ತಿಳಿದ ಆ ರಾಣಿ ಇನ್ನೇನು ತಾನೇ ಮಾಡುವಳು? ಮಾನವನ ಯತ್ನಕ್ಕೆ

ಮಾರಿದ್ದೆಂದು ಆಕೆ ನಂಬಿದ್ದಳು; ಆದರೆ ಹೇಮಾಂಬಿಕೆಯ ಸ್ಥಿತಿ ಹಾಗಿರಲಿಲ್ಲ. ಪಂಪಾಪತಿಯ ಸಹಾಯವಂತೂ ಅವಶ್ಯವಾಗಿ ಬೇಕು. ಅವರೊಡನೆ ಸ್ವಪ್ರಯತ್ನವಾದರೂ ಬೇಕು, ಎನ್ನುವ ಮತದವಳಾಗಿದ್ದಳು. ಆಕೆ ರಾಣಿಯೆದುರು ಏನೂ ಹೇಳದೆ ಎದ್ದು, ವಿಚಾರಿಸುತ್ತ ಉದ್ಯಾನದತ್ತ ಹೊರಟಳು. ವಿಜಯನಗರದ ಅಪ್ರತಿಮ ಸೌಂದರ್ಯವನ್ನಾಗಲಿ, ಅತ್ಯಂತ ವೈಭವವನ್ನಾಗಲಿ ಆಕೆ ನೋಡಲಿಲ್ಲ. ಅವೆರಡಕ್ಕೂ ಮೂಲ ಕಾರಣರಾದ ಆಳುವರಸಿನ ಮತ್ತು ಅವನ ಮನೆಯವರ ಕುಶಲದ ಬಗ್ಗೆ ಯೋಚಿಸುತ್ತಲಿದ್ದಳು. ಹೀಗಿರುವಾಗಲೆ ಆಕೆ ರಾಜೋದ್ಯಾನಕ್ಕೆ ತಲುಪಿದಳು. ಅಲ್ಲಿ ಇಬ್ಬರು ದಾಸಿಯರಲ್ಲಿ ಮಾತುಗಳು ನಡೆದಿದ್ದವು:

'ಹಾಗಾದರೆ ಮಂದಿರವು ಒಳ್ಳೇ ಸುಂದರವಾಗುವದು.'

'ಸುಂದರವೆಂದರೇನು? ಕಲಾವಿದ ಕನ್ನಡಿಗರ ಕಲೆಯೆಲ್ಲವೂ ಕೇಂದ್ರೀಕೃತವಾಗುವದು; ಅಂದಲ್ಲಿ ಸುಂದರವಾಗುವದೆಂದು ಹೇಳಬೇಕೇ?'

'ಈಗೇಕೆ ಹೊಸ ಅರಮನೆ ಕಟ್ಟಿಸಲುದ್ಯುಕ್ತರಾಗಿರುವರು?'

'ಪ್ರತಾಪದೇವರಾಯರು ಯುವರಾಜರು ತಮ್ಮ ಅದ್ವಿತೀಯ ಶೌರ್ಯದಿಂದ ಲಂಕೆಯನ್ನು ಗೆದ್ದುದರ ಸ್ಮರಣಾರ್ಥವಾಗಿ 'ಮಲ್ಲಿಕಾರ್ಜುನ ಮಂದಿರ'ವೆಂಬ ಅತಿ ರಮಣೀಯವಾದ ಅರಮನೆ ಕಟ್ಟಿಸಲುದ್ಯುಕ್ತರಾಗಿರುವರು.

'ಸರಿ-ಸರಿ, ಯೋಗ್ಯವೇ. ಯುವರಾಜರು ಅಂತಹ ಮನ್ನಣೆಗೆ ತಕ್ಕವರೇ ಇರುವರು.'

'ಸಖಿ, ಪ್ರತಾಪದೇವರಾಯರ ಗುಣಗ್ರಾಹಕತೆಯೂ ಯುವರಾಜರ ವಿಷಯದ ಪ್ರೇಮವೂ ಕಡಿಮೆ ತರಗತಿಯವೆ.'

'ಛೆ, ಉಂಟೇ? ನಿಜವಾಗಿ ಅವರ ಗುಣಗಳಾದರೂ ಹೊಗಳತಕ್ಕುವೇ?'

'ಮತ್ತಿನ್ನೇನು? ಇಂದೇ 'ಕೋನ ಶಿಲೆ'ಯ ಸ್ಥಾಪನೆಯಾಯಿತು. ಇಂದು ಪ್ರತಾಪದೇವರಾಯರ ಉತ್ಸಾಹವು ಅವರ್ಣನೀಯವಾಗಿದ್ದಿತು. ಕುಮಾರರಂತೂ ಅತ್ಯಂತ ಹರುಷದಿಂದ ಕೆಲಸ ಮಾಡುತ್ತಲಿದ್ದರು. ಕುಮಾರರ ಇಂದಿನ ಉತ್ಸಾಹ ಅವರ್ಣನೀಯವಾಗಿದ್ದಿತು. ಬಂದಬಂದವರೆದುರು ಯುವರಾಜರ ಗುಣವರ್ಣನೆ ಮಾಡುತ್ತಲಿದ್ದರು. ಸಂಗಣ್ಣ ಮಂತ್ರಿಗಳಿಗೆ ಕಲಾವಿದರನ್ನೆಲ್ಲ ಕಲೆಹಾಕಲು ಆಗ್ರಹದಿಂದ ಹೇಳುತ್ತಲಿದ್ದರು.'

'ಧನ್ಯರು, ನಮ್ಮ ಯುವರಾಜರು!'

'ಮತ್ತೆ ಅಂತೆಯೇ ಕರ್ನಾಟಕದ ಕೀರ್ತಿ ನಾಲ್ಕು ದಿಕ್ಕಿಗೂ ಹರಡುವಂತೆ ಮಾಡಿದರು.—'

ಹೇಮಾಂಬಿಕೆ ಹಿಂದಿನಿಂದ ಎಲ್ಲವನ್ನೂ ಕೇಳಿದಳು. ಯುವರಾಜನ ಯೋಗ್ಯತೆಯ ವಿಷಯಕವಾಗಿಯಾಗಲಿ, ಗೌರವದ ವಿಷಯಕವಾಗಿಯಾಗಲಿ ಆಕೆಗೆ ಅಲ್ಪವಾದರೂ ಸಂದೇಹವಿರಲಿಲ್ಲ. ಅಂತಹ ವೀರ, ಧೀರ ಯುವರಾಜನ ಅತುಲ ಪರಾಕ್ರ

ಮದ ಸ್ಮರಣೆಗೆಂದು 'ಮಲ್ಲಿಕಾರ್ಜುನ ಮಂದಿರ ನಿರ್ಮಾಣ'ವಾದರೂ ಅದರಲ್ಲಿ ಅಂತಹ ವಿಶೇಷವೇನೂ ಇರಲಿಲ್ಲ. ಗುಣಗೌರವ ಗುಣಕ್ಕೆ ಗೌರವ ದೊರೆಯಲೇಬೇಕು ಅದು ತ್ರಿಕಾಲಾಬಾಧಿತ ನಿಯಮ; ಆದರಾ ಗೌರವ ಎಲ್ಲರಿಂದಲೂ ದೊರೆಯದು. ರತ್ನಪರೀಕ್ಷಕ ನಿಗಲ್ಲದೆ ಉಳಿದವರಿಗೆ ರತ್ನಗಳ ಬೆಲೆ ತಿಳಿಯದು. ಕಾಜೆಂದು ಬಿಸುಟಬಹುದು. ಹಾಗೆ ಆ ಗುಣಗಳನ್ನರಿಯದವನು ಗೌರವಿಸಬಹುದೆ? ಒಂದು ವೇಳೆ ಹಾಗೆ ಗೌರ ವಿಸಲಾರಂಭಿಸಿದರೆ, ಅಂತಸ್ಥ ಉದ್ದೇಶವಾವದೋ ಅಡಗಿರಬೇಕೆಂದು ಸ್ಪಷ್ಟವಾಗಿ ಹೇಳ ಬಹುದಲ್ಲವೆ? ಹೇಮಾಂಬಿಕೆಗೆ ಸಂಶಯುವನ್ನುಂಟು ಮಾಡಿದ ವಿಷಯವಾದರೂ ಅದೇ ಆಗಿದ್ದಿತು. ಅಷ್ಟು ಸಲ ವಿರೂಪಾಕ್ಷನ ವರ್ತನೆ ನಿರೀಕ್ಷಿಸಿದ್ದಳು; ಆದರೆ ಯುವರಾಜನ ವಿಷಯಕವಾದ ಆದರ ಭಾವ ಒಂದುಸಲವೂ ತೋರಿರಲಿಲ್ಲ. ಮನಸಾ ಯುವರಾಜ ನನ್ನು ದ್ವೇಷಿಸುತ್ತಲಿದ್ದನು. ಬಾಯಿ ಮಾತ್ರ ತಡೆದಿದ್ದನು. ಅಂತಹನು ಅಂದು ಅಷ್ಟು ಅತಿಯಾಗಿ ಆದರಿಸಬೇಕಾದರೆ, ಅದರಲ್ಲಿ ಅವನದೇನೋ ಅಂತಸ್ಥೂದ್ದೇಶ ಇರ ಬೇಕೆಂಬ ಊಹೆ ಬಂದಿತು. ಅಲ್ಲಿಯ ವಾರ್ತೆಯನ್ನೆಲ್ಲ ಅರಿಯಬೇಕೆಂದು ಮುಂದೆ ನೋಡುವಲ್ಲಿ ದಾಸಿಯರು ಹೊರಟು ಹೋಗಿದ್ದರು. ಮರಳಿ ಕರೆದು ಸಂಗತಿ ವಿಚಾ ರಿಸಬೇಕೆಂದರೆ, ಅವರೆಲ್ಲಿಯೋ ಹೋಗಿಬಿಟ್ಟರು. ಮತ್ತು 'ಅಷ್ಟು ಆತುರತೆಯಾದರೂ ಏಕೆ?' ಎಂಬ ಯೋಚನೆ ಬರಲು, ಅಲ್ಲಿಯೇ ಕುಳಿತಳು. ದೇಹದಿಂದ ಆಕೆಯೇನೋ ಸುಮ್ಮನೆ ಕುಳಿತಿದ್ದಳು; ಆದರೆ ತಲೆಯಲ್ಲಿ ವಿಚಾರ ಚಕ್ರ ಗರಗರನೆ ಕುಂಬಾರನ ತಿಗರಿ ಗಿಂತಲೂ ವೇಗವಾಗಿ ತಿರುಗುತ್ತಲಿದ್ದಿತು. ಹೀಗೆ ಆಕೆ ಒಳ್ಳೇ ವಿಚಾರಮಗ್ನಳಾಗಿ ಕುಳಿತಿರುವಾಗ್ಗೆ ಯುವರಾಜ ಮತ್ತು ಕುಮಾರಶೀರ್ವರು ಕೂಡಿಯೇ ಅಲ್ಲಿಗೆ ಬಂದರು.

ಕುಮಾರ:—'ಯುವರಾಜ, ಇಂದಿನ ಕಟ್ಟಡ ವಿಜಯನಗರಕ್ಕೊಂದು ಶೋಭೆ ಯಾಗಲಿಕ್ಕಿಲ್ಲವೆ?'

ಯುವರಾಜ:—'ಅಂದರೇನು? ಕರ್ನಾಟಕವೆಂದರೆ ಕಲೆಗೆ ನೆಲೆಯೇ ಆಗಿದೆ. ಅದರಲ್ಲಿ ಅದನ್ನು ಮೂರ್ತಿಮಂತ ಕಲೆಯನ್ನಾಗಿ ಮಾಡಲು ನೀನು ಬದ್ಧಕಂಕಣನೇ ಆಗಿರುವೆ. ಅಂದಲ್ಲಿ ರಮಣೀಯವಾಗದೇನು?'

ಇಬ್ಬರೂ ಹೇಮಾಂಬಿಕೆಯ ಸಮೀಪಕ್ಕೆ ಬಂದರು. ಹೇಮಾಂಬಿಕೆ ನಗು ಮುಖದಿಂದ ಸ್ವಾಗತಿಸಿದಳು.

ಕುಮಾರ:—ಹೇಮಾ, ಅರಸಿಕ ವಿರೂಪಾಕ್ಷನ ಈ ಹಂಚಿಕೆಯಲ್ಲಿ ಸಹಾಯ ಮಾಡುವೆಯಾ?'

ಹೇಮಾಂಬಿಕೆ:—'ಹಂಚಿಕೆಯಾವದು? ನನ್ನ ಸಹಾಯವೇನು? ನಿಮಗೆ ಅರಸಿಕ ರೆನ್ನುವ ಅರಸಿಕರಾರು?'

ಕುಮಾರ:—'ಆದರೆ ನನಗೆ ರಸಿಕನೆನ್ನುವೆಯೇನು?'

ಹೇಮಾಂಬಿಕೆ:—'ನಿಮ್ಮ ಇಂದಿನ ಉಪಕ್ರಮವೇ ತೋರಿಸುತ್ತದೆ.'

ಯುವರಾಜ:—ಭಾಪು! ಭಾಪು! ಹೇಮಾ, ಕುಮಾರನಿಗೆ ಯೋಗ್ಯ ಉತ್ತರವಿತ್ತೆ.

ಕುಮಾರ:—ಹೇಮಾ, ಯುವರಾಜನ ಶೌರ್ಯೌದಾರ್ಯಗಳಿಗೋಸುಗ ಆತನ ಹೆಸರು ಕನ್ನಡಿಗರ ಹೃದಯದಂತಿದ್ದ ವಿಜಯನಗರದಲ್ಲಿ ಚಿರಸ್ಮರಣೀಯವಾಗಬೇಕೆಂದು ನಾನೊಂದು ಸುಂದರ ಮಂದಿರ ನಿರ್ಮಿಸಲಾರಂಭಿಸಿರುವೆನು.

ಹೇಮಾ:—ತನ್ಮೂಲಕ ಕುಮಾರನ ಹೆಸರೂ ಆಚಂದ್ರಾರ್ಕವಾಗುಳಿಯುವದು.

ಕುಮಾರ:—ನನ್ನ ಯಶಸ್ಸಿನ ಬಗ್ಗೆ ನನ್ನ ಯತ್ನವಿಲ್ಲ.

ಹೇಮಾಂಬಿಕೆ:—ಅಂತೆಯೇ ನಿಮಗೆ ಅದು ದೊರೆಯುತ್ತದೆ.

ಕುಮಾರ:—ಅದು ಹೇಗೆ ಹೇಮಾ?

ದುರ್ಯೋಧನ ಮತ್ತು ಅರಗಿನ ಮನೆಗಳು ಆಕೆಯ ಸ್ಮರಣೆಗೆ ಬಂದುವು; ಆದರೆ ಆಗಲೆ ವಿರೂಪಾಕ್ಷನ ಮನನೋಯಿಸುವದು ಆಕೆಗೆ ಬೇಕಿರಲಿಲ್ಲ. ಆಗ ಹೇಮಾಂಬಿಕೆಯು:—ಹೇಗೆಂದರೇನು ಕುಮಾರ? ಅದ್ವಿತೀಯ ಕಲಾಕೃತಿಗಳ ನಿರ್ಮಾಣದಿಂದ ಕಲೆ ಚಿರಸ್ಥಾಯಿಯಾಗುವದಂತೂ ಸರಿಯೆ. ಅದಾದಾಗಲೇಬೇಕು. ಅದರೊಡನೆ ಕಲಾವಂತರು ತಾವು ಬಯಸದಿದ್ದರೂ ಆಚಂದ್ರಾರ್ಕವಾದ ಕೀರ್ತಿಯನ್ನು ತಪ್ಪದೇ ಪಡೆಯುವರು. ಕಾಲಿದಾಸ ಕವಿ ಶಾಕುಂತಲ ನಾಟಕ ಬರೆಯಲಿಲ್ಲವೆ? ಅಂತಹ ಅದ್ವಿತೀಯವಾದ ಆ ನಾಟಕದ ಮೂಲಕವಾಗಿ ಆ ದುಷ್ಯಂತ-ಶಕುಂತಲೆಯರ ಹೆಸರು ಪ್ರತಿಯೊಬ್ಬ ಅಕ್ಷರಸ್ಥನ ಹೃದಯದಲ್ಲಿ ನಾಟಿದೆ. ಅವರಾ ಉಜ್ವಲ ಚರಿತೆ ಬೆಳಗುತ್ತಲಿವೆ; ಆದರೆ ಕಾಲಿದಾಸನ ಕೀರ್ತಿಯೆಷ್ಟು ಹಬ್ಬಿದೆ? ಜಗದ್ವಂದ್ಯ ಕವಿಕುಲಲಲಾಮನೆಂಬ ಹೆಸರು ಪಡೆದಿರುವನು! ಎಲ್ಲ ಕಲೆಗಳ ವಿಷಯವೂ ಹೀಗೆಯೇ ಇದೆ.

ಕುಮಾರ:—ಅಹುದು; ಆದರೆ ಅದು ಕಲಾನಿರ್ಮಾಣಕರಿದ್ದರಲ್ಲವೆ? ಅಂತಹ ಕಲಾನೈಪುಣ್ಯಕರಿದ್ದರಲ್ಲವೆ? ಅತ್ಯಂತ ಶ್ರೇಷ್ಠವಾದಾ ಕಲೆಯ ನೆಲೆ ತಲೆಯಲ್ಲಿದ್ದರಲ್ಲವೇ? ಏನೂ ಇಲ್ಲದ ನಾನು ಕಲಾವಂತನೇ ಅಲ್ಲ.

ಯುವರಾಜ:—ಹೋಗಲಿ ಬಿಡು; ವಿರೂಪಾಕ್ಷ, ಅದು ಭವಿಷ್ಯದ ವಿಷಯ. ಆ ಬಗ್ಗೆ ಸುಮ್ಮನೆ ಊಹಾಪೋಹ ಮಾಡುವದೇಕೆ? ಹೇಮಾ, ನೀನು ಕುಮಾರನು ಸದ್ಯ ನಿರ್ಮಿಸಲಿರುವ ಮಂದಿರದ ಯೋಜನೆ ಕೇಳಿರುವೆಯೇನು?

ಹೇಮಾಂಬಿಕೆ:—ಮಂದಿರದ ವಿಷಯವನ್ನೇ ಕೇಳಿರಲಿಲ್ಲ. ಅಂದಲ್ಲಿ ಅದರ ಯೋಜನೆ ಅರಿಯುವ ಬಗೆಯೇನು? ಆದರೇನಾಯಿತು? ಈಗಲಾದರೂ ಕೇಳಲು ಆತಂಕವೇನು? ಏಕೆ ಕುಮಾರ, ನೀವು ಯೋಜಿಸಿದ ಮಂದಿರದ ಕಲ್ಪನೆಗಳನ್ನು ಹೇಳಿ ನೋಡುವಾ?

ಕುಮಾರ:—ನಿನ್ನಂತಹರು ಕೇಳಶಕ್ಕಂತಹ ಯೋಜನೆಯೇನೂ ಅಲ್ಲ.

ಹೇಮಾ:—ಅಯೋಗ್ಯತೆಯ ಶಿಫಾರಸು ಪತ್ರ ದೊರೆತಿತೇನು?

ಕುಮಾರ:—ಛೆ, ಛೆ! ಹೇಮಾ, ನಾನಂದುದು ಹಾಗಲ್ಲ. ನನ್ನದು ಏನೋ ಹುಚ್ಚು ಕಲ್ಪನೆಯಿದೆ.

ಹೇಮಾ:—ಹೂಂ, ಅದೇನೇ ಇರಲಿ. ಹೇಳಿ ನೋಡುವಾ.

ಕುಮಾರ:—ಒಂದು ಹಚ್ಚನೆಯ ಹುಲ್ಲಿನಿಂದ ಅಂದವಾಗಿ ತೋರುತ್ತಲಿರುವ ದಿನ್ನೆ. ಅಲ್ಲಲ್ಲಿ ವಿವಿಧ ಬಣ್ಣದ ಹೂಗಳು ಅಂದವಾಗಿ ಅರಳಿ ದಿನ್ನೆಯನ್ನು ಅತ್ಯಂತ ರಮಣೀಯವಾಗಿ ಭೂಷಿಸುತ್ತಲಿವೆ. ಹಸುರು ಮುರಿಯುತ್ತಲಿರುವ ದಿನ್ನೆಯ ಮೇಲ್ಬದಿಯಲ್ಲಿ ಗರಿಗೆದರಿದ ನವಿಲು ಅಂದವಾಗಿ ನಿಂತಿವೆ. ನವಿಲ ಗರಿಗಳು ಚಲ್ಲ ವರೆದು ಮೇಲೆಲ್ಲ ಸುಂದರವಾಗಿ ನಿಂತಿವೆ. ನವಿಲು, ಅವರ ಗರಿಗಳು, ಕೆಳಗಿನ ದಿನ್ನೆ ಎಲ್ಲವುಗಳೂ ಕೃತಕವೆಂಬ ಯೋಚನೆಯೇ ಬರಕೂಡದು. ದೂರದಿಂದ ನೋಡುವಲ್ಲಿ 'ವಿಜಯನಗರದ ಮಧ್ಯದಲ್ಲಿ ಈ ನಿಸರ್ಗ ಸೌಂದರ್ಯ ಹೇಗೆ ಬಂದಿತು?' ಎಂಬ ಗೂಢ ಬೀಳಬೇಕು. ಇನ್ನೂ ಕೊಂಚ ನಿರೀಕ್ಷಿಸಿದಲ್ಲಿ ಉದ್ಯೋಗದಲ್ಲಿ ಮುಳುಗಿದ ಬೀದಿಗಳು, ಜನಭರಿತವಾದ ಪೇಟೆಗಳು, ನಾದಮಯವಾದ ವಿಜಯನಗರ ಎಲ್ಲವೂ ಮರೆತು, ಆ ರಮಣೀಯ ಶೋಭೆ ನೋಡುವಲ್ಲಿಯೇ ತನ್ಮಯರಾಗಿ, ತದಾಕಾರವೃತ್ತಿ ಯುಂಟಾಗಬೇಕು. ಇದು ಬಾಹ್ಯಾಕಾರ.

ಒಳಹೊಕ್ಕರೆ ಕರ್ನಾಟಕದ ಕಲಾವಂತರು ಸಿದ್ಧಗೊಳಿಸಿದ ಅಪ್ರತಿಮ ಕಲ್ಲು ಕೆತ್ತನೆಯೂ, ಅದ್ವಿತೀಯ ಚಿತ್ರಕೊರೆಯುವ ಚಾತುರ್ಯವೂ ಮೂರ್ತಿಮಂತಾಗಿ ಕಾಣುವಂತಾಗಬೇಕು. ಒಂದೆಡೆಯಲ್ಲಿ ಸಾವಿರಾರು ವರುಷಗಳವರೆಗೆ ಅವ್ಯಾಹತ ವಾಗಿ ರಾಜ್ಯವಾಳುತ್ತಲಿದ್ದ ಬೇರೆ ಬೇರೆ ಕನ್ನಡದರಸುಗಳ ಇತಿಹಾಸ ಸಾಗ್ರವಾಗಿ ಸಿಕ್ಕುವಂತಾಗಬೇಕು. ಇನ್ನೊಂದೆಡೆಯಲ್ಲಿ ಮಹಮ್ಮದೀಯರ ದವಡೆಯಿಂದ ಕನ್ನಡ ನಾಡು ಕಸಿದು ಕರ್ನಾಟಕಸಾಮ್ರಾಜ್ಯ ಸ್ಥಾಪಿಸಿದ ಹರಿಹರರಾಯನ ಜೀವನ ಚರಿತೆ ನೋಟಕರ ಮನದಲ್ಲಿ ನಾಟುವಂತಾಗಬೇಕು. ಎಲ್ಲಕ್ಕೂ ಹೆಚ್ಚಿನದೆಂದರೆ, 'ಸುವರ್ಣ ಸೃಷ್ಟಿ!' ಕಲ್ಲುಕೆತ್ತನೆಯ ಮತ್ತು ಬಣ್ಣಕೊಡುವವರ ಜಾಣ್ಮೆ ವ್ಯಕ್ತವಾಗುವ ಸ್ಥಳವೇ ಅದು. ಒಮ್ಮೆ ಒಳಹೊಕ್ಕರೆ ಎಲ್ಲರೂ ತಮ್ಮ ಇರವನ್ನೇ ಮರೆತು, ವೀರ ಯತಿ ವಿದ್ಯಾ ರಣ್ಯ ಗುರುಗಳು ತಮ್ಮ ಶ್ರೇಷ್ಠತಮ ತಪೋಬಲದ ಮಹಿಮೆಯಿಂದ ಬಂಗಾರದ ಮಳೆ ಗರೆವಂತೆ ಮಾಡಿದ ಆ ಸುಂದರತಮ ನೋಟ ಈಗ ಮನದಲ್ಲಿದ್ದುದು ಎದುರಿನಲ್ಲಿ ಮೂಡಬೇಕು. ಪ್ರತಿಯೊಬ್ಬನೂ ಅಂದು ನಮ್ಮ ಹಿರಿಯರು— ಭಾಗ್ಯವಂತ ಕನ್ನಡಿ ಗರು-ಕಂಡು ಆನಂದಹೊಂದಿದ ಸುಂದರ ನೋಟವನ್ನು ಪ್ರತ್ಯಕ್ಷ ನೋಡಿ ವರ್ತಿಸಬೇಕು.

ಹೇಮಾ:—ಭಾಪು! ಭಾಪು! ಕುಮಾರ, ನಿಜವಾಗಿಯೂ ಅದ್ವಿತೀಯವಾದ ಕಟ್ಟಡವಾಗುವದರಲ್ಲಿ ಸಂದೇಹವಿಲ್ಲ.

ಕುಮಾರ:—ಬರಿಯ ಎರಡು ಒಳ್ಳೆಯ ಮಾತುಗಳಾದರೆ ತೀರದು.

ಹೇಮಾ:—ಇನ್ನೇನು?

ಕುಮಾರ:—ನನ್ನ ಈ ಯೋಜನೆಯಲ್ಲಿ ಇನ್ನೂ ಅವಶ್ಯ ಕಂಡ ಮಾರ್ಪಾಟು ಮಾಡಲು ನೀನು ಸಹಾಯ ಮಾಡಬೇಕು.

ಹೇಮಾ:—ನನ್ನ ಸಹಾಯದ ಆವಶ್ಯಕತೆಯೇ ಬೀಳುವ ಸಂಭವವಿಲ್ಲ. ಒಂದು

ವೇಳೆ ಅಂತಹ ಸಮಯ ಬಂದರೆ ನಾನು ಅತ್ಯಾನಂದದಿಂದ ಮುಂಬರುವೆನು.

ನಿಜವಾಗಿ ವಿರೂಪಾಕ್ಷ ಜಾಣಾಕ್ಷನಲ್ಲವೆಂದು ಅವನ ಈ ವೃತ್ತಿಯಿಂದ ತಿಳಿದು ಬರುವಂತಿದೆ. ಅದು ವರೆಗೆ ಯುವರಾಜನ ಬೆನ್ನು ಬಿಡದಿದ್ದರೂ ಅವನ ಸ್ತುತಿ ಮಾಡುತ್ತಲಿರಲಿಲ್ಲ; ಆದರೆ ಒಂದೆರಡು ದಿನಗಳಲ್ಲಿ ಅಷ್ಟು ಬಲವಾದ ಮಾರ್ಪಾಟು ಮಾಡಲು, ಬೇರೆಯವರ ಸಂಶಯಕ್ಕೆ ಕಾರಣವಾದೀತೆಂಬ ಸಂಶಯ ಅವನಿಗೆ ಬಂದಿರಲಿಲ್ಲ. 'ಅತಿಸ್ನೇಹಃ ಪಾಪಶಂಕೀ' ಎಂಬಂತೆ ತಾನು ಹೆಚ್ಚಾಗಿ ಸ್ನೇಹತೋರಿಸಲಾರಂಭಿಸಿದುದು ಶಂಕಾಸ್ಪದವಾದೀತೆಂಬ ಕಲ್ಪನೆಯೇ ಅವನಿಗೆ ಬರಲಿಲ್ಲ. ಮೇಲೆ ಉಲ್ಲಸಿತನಾಗಿದ್ದನು. ಅದೇಕೆ? ಮನಲ್ಲಿಯೂ ಉಲ್ಲಸಿತನೇ ಆಗಿದ್ದನು. ತೋರಿಕೆಯಲ್ಲಿ ಅಂದು ತಾನು ಕೈಕೊಂಡ ಸ್ಮಾರಕದ ಉತ್ಸಾಹವನ್ನು ತೋರಿಸುತ್ತಲಿದ್ದನು; ಆದರೆ ಮನದಲ್ಲಿ ಉತ್ಸಾಹಿತನಾದುದರ ಕಾರಣವು ಅರಸುಮನೆಯವರನ್ನೂ ಆತನ ಪಕ್ಷದವರನ್ನೂ ನಾಮಶೇಷ ಮಾಡುವ ಸುಲಭೋಪಾಯ ದೊರೆತುದು. ಹಾಗೆ ಅಂತರಂಗದಲ್ಲಿ ಉಲ್ಲಾಸ ತುಂಬಿ ಹೋಗಲು, ಬಾಹ್ಯವೂ ಉಲ್ಲಾಸಮಯವೇ ಆಯಿತು! ಅವಕ್ಕೊಂದು ಬೇರೆ ಹೆಸರು ಕೊಟ್ಟಿದ್ದನು ಅಷ್ಟೇ; ಆದರೆ ಅದರಿಂದ ಅನ್ಯರ ಸಂಶಯಕ್ಕೆ ಅವಕಾಶ ದೊರೆತೀತೆಂಬಾ ಯೋಚನೆಯು ಉಂಟಾಗಲಿಲ್ಲ; ಮತ್ತು ಹಾಗೆ ಸಂಶಯ ಬರುವ ಕಾರಣವೂ ಇರಲಿಲ್ಲ. ಯುವರಾಜನನ್ನು ಆ ವರೆಗೆ ಮನಸಾ ದ್ವೇಷಿಸುತ್ತಲಿದ್ದರೂ ಕೃತಿಯಲ್ಲಾಗಲಿ, ಮಾತಿನಲ್ಲಾಗಲಿ ಎಂದೂ ತೋರಿಸಿರಲಿಲ್ಲ. ರಾಜಮನೆತನವನ್ನೇ ನಲಸಮ ಮಾಡುವ ಗುಪ್ತ ಪ್ರಯತ್ನವಿದ್ದರೂ, ಜನತೆಯಲ್ಲಿ ರಾಜಮನೆತನದ ಉನ್ನತಿಯನ್ನೇ ಆಶಿಸುತ್ತಲಿದ್ದ. ವಿಜಯದಶಮಿಯಿಂದ ಆ ವರೆಗಿನ ವಾತಾವರಣವನ್ನವಲೋಕಿಸಿ, ಯುವರಾಜನ ಗುಣಗಾನದಿಂದ ಪ್ರಜೆಗಳು ಹುಚ್ಚರೇ ಆಗಿದ್ದರೆಂದು ಮನಗಂಡಿದ್ದನು. ಯುವರಾಜನನ್ನು ತಾನೆಂದೂ ಬಹಿರಂಗವಾಗಿ ದ್ವೇಷಿಸಿರದೆ, ಆಗಾಗ್ಗೆ ಹೊಗಳುತ್ತಲಿದ್ದುದರಿಂದ, ಹೆಚ್ಚಾಗಿ ಹೊಗಳ ಹತ್ತಿದರೆ ಅದರಿಂದ ಜನರು ತನ್ನ ಬಗ್ಗೆ ಸಂದೇಹ ತೆಗೆದುಕೊಳ್ಳಬಹುದೆಂಬ ಯೋಚನೆಯೇ ಬರಲಿಲ್ಲ; ಮತ್ತು ಬಹುತರ ಯಾರೂ ವಿರೂಪಾಕ್ಷನಲ್ಲಿ ಸಂದೇಹವುಳ್ಳವರಾಗಲಿಲ್ಲ. ಅಂದು ಯುವರಾಜನ ಅದ್ವಿತೀಯ ಶೌರ್ಯದ ಸ್ಮಾರಕದ ಸಲುವಾಗಿ ಅವನಾರಂಭಿಸಿದ ಉದ್ಯಮಕ್ಕೆ ಅವನನ್ನೂ ಹೊಗಳಿದರು. ವಿರೂಪಾಕ್ಷನ ವಿಷಯಕ್ಕೂ ಅದೆಷ್ಟೋ ಮಟ್ಟಿಗೆ ಆದರಬುದ್ಧಿ ಜನತೆಯಲ್ಲಿ ಉಂಟಾಯಿತು. ಹೀಗೆ ಯಾರೂ ವಿರೂಪಾಕ್ಷನ ಅಂತಸ್ಥ ಹೇತುವನ್ನರಿಯಲು ಶಕ್ತರಾಗಲಿಲ್ಲ. ಅವರಿಗೆ ಆ ಯೋಚನೆಯೇ ಇರಲಿಲ್ಲ; ಆದರೆ ಹೇಮಾಂಬಿಕೆಯ ವಿಷಯ ಹಾಗಿರಲಿಲ್ಲ. ವಿರೂಪಾಕ್ಷನ ಸತ್ಯಸ್ವರೂಪವನ್ನವಳು ಮೊದಲೇ ಊಹಿಸಿದ್ದಳು. ಅವನಲ್ಲಿದ್ದ ಸೇಡು ತೀರಿಸುವ ಹೇಯಬುದ್ಧಿ ಜಾಗೃತವಾದಾಗಲೇ ಅವನನ್ನು ಚೆನ್ನಾಗಿ ಕಾಯತಕ್ಕದೆಂದು ನಿರ್ಧರಿಸಿದ್ದಳು. ಹಾಗೆಯೇ ಅವನ ಪ್ರತಿಯೊಂದು ಕೃತಿಯನ್ನೂ ಸೂಕ್ಷ್ಮವಾಗಿ ಅವಲೋಕಿಸುತ್ತಲಿದ್ದಳು. ಅವನ ಅನೇಕ ಕೃತಿಗಳಲ್ಲಿ ಸಂದೇಹ ಸ್ಪಷ್ಟವಾಗುತ್ತಲೇ ಇದ್ದಿತು. ಅಂದು ದಾಸಿಯರ ಮಾತು

ಗಳಿಂದ ಗುಪ್ತಕಟದ ಸಂಗತಿಯನ್ನು ತಿಳಿದಳು. ಎಂದೂ ಮನಸಾ ಯುವರಾಜನನ್ನು ಪ್ರೀತಿಸದ ಮನುಷ್ಯ, ಯುವರಾಜನ ಕೀರ್ತಿಪ್ರಸಾರಕ್ಕೆ ಟೊಂಕಕಟ್ಟಿ ನಿಲ್ಲಬೇಕಾದರೆ ಅಂತಸ್ಥ ಉದ್ದೇಶವೊಂದಿರಲೇ ಬೇಕೆಂದು ಪ್ರಬಲವಾದ ಸಂದೇಹ ಆಕೆಯ ಮನದಲ್ಲಿ ಮೂಡಿತು. ವಿರೂಪಾಕ್ಷನ ಮಾತುಗಳಿಗೆ ಉತ್ತೇಜಿತಳಾದಂತೆ ಉತ್ತರ ವೀಯುತ್ತಲಿದ್ದಳು. ಅವನ ರಸಿಕತೆಯನ್ನು ಬಣ್ಣಿಸುತ್ತಲಿದ್ದಳು. ಅವೆಲ್ಲವುಗಳಿಂದ ಅವನ ನಿಜ ಮನಃಸ್ಥಿತಿಯರಿಯುವುದೂ; ಮತ್ತು ಆ ಸಂಗತಿ ತನಗೆ ತಿಳಿದ ಬಗ್ಗೆ ಅಲ್ಪವಾದರೂ ತಿಳಿಯಕೂಡದಂತಿರುವದೂ ಆಕೆಯ ಮುಖ್ಯ ಉದ್ದೇಶವಾಗಿದ್ದಿತು. ಆಕೆ ತನ್ನ ಉದ್ದೇಶಗಳಲ್ಲಿ ಗೆದ್ದಳು. ತನ್ನ ಅಂತಸ್ಥ ಉದ್ದೇಶ ತನ್ನ ಹೊರತು ಇನ್ನಾರಿಗೂ ತಿಳಿದಿರಲಿಲ್ಲವೆಂದು ವಿರೂಪಾಕ್ಷ ಚೆನ್ನಾಗಿ ನಂಬಿದನು. ತನ್ನ ನಟನೆಯಿಂದ ಎಲ್ಲರನ್ನೂ ಮೋಸಗೊಳಿಸಿದೆನೆಂದು ಆನಂದಭರಿತನಾದನು. ಅದರಲ್ಲಿ ಹೇಮಾಂಬಿಕೆಯನ್ನಂತೂ ಮರುಳು ಹಿಡಿದವಳಂತೆ ಮಾಡಿದ್ದ ಬಗ್ಗೆ ಪೂರ್ಣ ಮನವರಿಕೆ ಮಾಡಿಕೊಂಡನು. ಹಾವಿಗೆ ಹುಚ್ಚು ಹಿಡಿಸುವ ಪುಂಗಿಯಂತೆ, ಹೇಮಾಂಬಿಕೆಗೆ ಯುವರಾಜನ ಗುಣಗಾನವು ಹುಚ್ಚು ಹಿಡಿಸಿತೆಂದು ತಿಳಿದನು. ಇನ್ನೂ, ಮತ್ತೂ ಬಹಳವಾಗಿ ಸ್ತುತಿ ಮಾಡಿದನು. ತನ್ನ ಸ್ವಕಾರ್ಯ ಸಾಧನೆಯಾದಂತೆಯೇ, ಎಂದು ಭಾವಿಸಿದನು; ಆದರೆ ತಾನು ತನ್ನ ವಾರ್ತೆಯಿಂದಲೇ ತನ್ನ ಆಂತರ್ಯವನ್ನು ಬೈಲಿಗಿಟ್ಟ ಬಗ್ಗೆ ತಿಳಿಯಲಿಲ್ಲ. ತನ್ನ ಅಂತರಂಗ ಭದ್ರವೇ ಇದ್ದಿತೆಂದು ತಿಳಿದನು. ತನ್ನ ಚಾತುರ್ಯ ಚೆನ್ನಾಗಿ ಕಾರ್ಯ ಸಾಧಿಸಿತೆಂದು ತಿಳಿದನು. ಅದು ಮಾನವನ ಮೌಢ್ಯವಲ್ಲದೆ ಇನ್ನೇನು?

ಹೇಮಾಂಬಿಕೆ ವಿರೂಪಾಕ್ಷನ ಅಂದಿನ ವರ್ತನೆ ಕಪಟವಾಗಿರಬೇಕೆಂದು ತರ್ಕಿಸಿದಳು. ಅದರಿಂದ ರಾಜಮನೆತನಕ್ಕೆ ನಷ್ಟವೇ ಎಂದು ತಿಳಿದಳು. ಅದರಿಂದ ಜನತೆಯನ್ನಾಗಲಿ ರಾಜ-ಯುವರಾಜರನ್ನಾಗಲಿ ಮೋಸಗೊಳಿಸುವದೇ ಅವನ ಮುಖ್ಯೋದ್ದೇಶವಾಗಿರಬೇಕೆಂದೂ ತಿಳಿದಳು; ಆದರೆ ಅಷ್ಟರಿಂದಲೇ ಆಕೆಯ ಕಾರ್ಯವಾಗಲಿಲ್ಲ. ವಿರೂಪಾಕ್ಷನ ಕಪಟವರ್ತನೆಯ ಅಂತಿಮ ಧ್ಯೇಯವನ್ನರಿಯಬೇಕಾಗಿದ್ದಿತು. ಅದಕ್ಕೆಂದು ಆಕೆ ಜಾಗರೂಕತೆ ವಹಿಸಲೇ ಬೇಕಾಗಿದ್ದಿತು. ಅವನ ಗೌಪ್ಯವನ್ನು ಕಂಡು ಹಿಡಿಯಲೇ ಬೇಕಾಗಿದ್ದಿತು. ಅದಕ್ಕಾಗಿಯೇ ಆಕೆ ತನ್ನ ಯತ್ನ ನಡೆಯಿಸಬೇಕಾಗಿದ್ದಿತು.

'ರಾಜಮನೆತನ ಘಾತಿಸುವದು ವಿರೂಪಾಕ್ಷನ ಉದ್ದೇಶವಿರುವದಂತೂ ಸರಿಯೇ; ಆದರೆ ಆತನಾ ಪ್ರಯತ್ನ ಯಾವ ರೀತಿಯಿಂದ ಮುಂದೊರೆಯುತ್ತಲಿರಬೇಕು. ತನ್ನ ದುಷ್ಟಕಾರ್ಯ ಕೈಗೂಡಿಸಲು ಅವನುಪಯೋಗಿಸಿದ ಸಾಧನವಾವದಿರಬೇಕು?........ ದೇವಾ-ದೇವಾ, ಪಂಪಾಪತೆ, ಎಂತೆಂತಹ ಅಘಟಿತ ಘಟನೆಗಳು ನಡೆಯುತ್ತಲಿವೆಯಲ್ಲ! ದೇಶಹಿತ-ರಾಷ್ಟ್ರಹಿತಕ್ಕಾಗಿ ತನು ಮನ ಧನಗಳನ್ನೆಲ್ಲ ಅರ್ಪಿಸಿ, ಸತತವಾಗಿ ದುಡಿಯುತ್ತಲಿರುವ, ಸತ್ಪುರುಷರ ಜೊತೆಯಲ್ಲಿಯೇ ಸ್ವಾರ್ಥಕ್ಕೆಂದು, ತಮ್ಮ ಸ್ವಂತದ ಲಾಭ

ಕ್ಕೆಂದು ಎಂತಹ ನೀಚ ಕಾರ್ಯವನ್ನಾದರೂ ಕೈಕೊಳ್ಳಲು ಹಿಂಜೆಗೆಯದ ದುಷ್ಟರೂ ಇಷ್ಟೇ ಇರುವರು! ಎಂತೆಂತಹ ಜನರು ವಾಸಿಸುತ್ತಲಿರುವರಲ್ಲ? ದೇವಾ! ಸದ್ಯಕ್ಕೆ ವಿಜಯ ನಗರದರಸಗೆ ಬಂದೊದಗಿದ ಸಂಕಟವನ್ನು ನಿವಾರಿಸು. ಇವರು ಮುಂದೊರೆಯುತ್ತಲಿರುವ ದಾರಿಯಲ್ಲಿಯೇ ಗುಪ್ತವಾಗಿದ್ದ ಈ ಕಂದಕದಿಂದ ಪಾರು ಮಾಡು. ಅವರು ಮಲಗುವ ಶಯ್ಯೆಯಲ್ಲಿಯೇ ಅಡಗಿರುವ ಕಾಲಸರ್ಪವನ್ನು ಕಡೆಗಾಣಿಸು. ಹೇಗಾದರೂ ಮಾಡಿ ಸದ್ಯ ಕನ್ನಡಿಗರ ಮೇಲೆ ಬಂದ ಈ ಮಹಾವಿಪತ್ತನ್ನು ನಿವಾರಿಸಿ ಅದನ್ನು ಕಾಯುವ ಭಾರ ನಿನ್ನದೇ--'

ಮುಂತಾಗಿ ಅವೆಷ್ಟೋ ಸಮಯ ಪಂಪಾಪತಿಗೆ ಪ್ರಾರ್ಥನೆ ಸಲ್ಲಿಸುವದರಲ್ಲಿಯೇ ಕುಳಿತಿದ್ದಳು. ಹಗಲಿನ ಸೂರ್ಯಪ್ರಕಾಶ ಸ್ವಚ್ಛವಾಗಿ ಹರಡಿದ್ದರೂ ಹೇಮಾಂಬಿಕೆಗೆ ಕತ್ತಲು ಕವಿದಂತೆ ತೋರಹತ್ತಿತು. 'ಎಷ್ಟು ಬೇಗನೆ ಕತ್ತಲಾಯಿತಲ್ಲ!' ಎಂದು ಆಶ್ಚರ್ಯದಿಂದ ಹೇಮಾಂಬಿಕೆ ಅತ್ತಿತ್ತ ಕಣ್ಣಿರುವಿದಳು. ಎಲ್ಲೆಡೆಯಲ್ಲಿಯೂ ಕತ್ತಲೆ ತಾನೇ ತಾನಾಗಿ ವ್ಯಾಪಿಸಿದ್ದಿತು. ಒಂದು ವೇಳೆ ಕತ್ತಲೆಯೇ ಆಗಿದ್ದರೂ, ವಿಜಯ ನಗರದಂತಹ ರಾಜಧಾನಿಯಲ್ಲಿ ದೀಪಗಳೇಕಿಲ್ಲ! ಎಂದು ಬೇರೊಂದು ಶಂಕೆ ಬಂದಿತು. ಹೀಗೆ ಶಂಕಾಮೂಢಳಾಗಿ ಯೋಚನೆಯಲ್ಲಿ ಮಗ್ನಳಾಗಿರುವಾಗಲೇ, ಮಂದವಾದ ಪ್ರಕಾಶವೊಂದು ಕಾಣಿಸಿತು. ಹೇಮಾಂಬಿಕೆ ಅತ್ತವೇ ನೋಡಹತ್ತಿದಳು. ಆ ಮಂದ ಪ್ರಕಾಶದಲ್ಲಿಯೇ ಅತಿ ಸುಂದರವಾದ ಯತಿಗಳ ಆಕೃತಿಯೊಂದು ಕಾಣಿಸಿತು. ವಿದ್ಯಾರಣ್ಯ ಗುರುಗಳೇ, ಎಂದು ಆಕೆ ಗುರುತಿಸಿದಳು. ಆ ದಿವ್ಯ ತೇಜೋಮೂರ್ತಿಯನ್ನು ಕಣ್ತುಂಬ ನೋಡುತ್ತ ಕುಳಿತಿರಲು, ಅಮೃತವಾಣಿ ಕೇಳಹತ್ತಿತು: 'ಮಗು, ಮರ್ತ್ಯಲೋಕವಿದು! ಎಲ್ಲ ವಸ್ತುಗಳಿಗೂ ಇಲ್ಲಿ ಅವಕಾಶವಿದೆ. ಸಿಂಹಾಸನವನ್ನು ಸ್ಥಾಪಿಸಲು ಪ್ರೇರಣೆಯಿತ್ತ ಪಂಪಾಪತಿ, ಅದನ್ನು ನಿಶ್ಚಯವಾಗಿಯೂ ಕಾಯುವನು. ಇದರಲ್ಲಿ ನಿನ್ನ ಭಾಗ ಮುಖ್ಯವಾಗಿದೆ. ಅವನ್ನರಿತು ನಡೆ—'

ಆ ಅಮೃತ ವಾಣಿಯೂ ನಿಂತಿತು; ಸುಂದರತಮ ನೋಟವೂ ಮರೆಯಾಯಿತು. ಹೇಮಾಂಬಿಕೆ ಗಡಬಡಿಸಿಕೊಂಡೆದ್ದು ಸುತ್ತೆಲ್ಲ ನಿರಕಿಸಲಾರಂಭಿಸಿದಳು; ಆದರೆ ಗುರುವರರ ಛಾಯೆ ಕೂಡ ಎಲ್ಲಿಯೂ ಕಾಣಲಿಲ್ಲ. ಅವರಾ ಅಮೃತ ವಾಣಿ ಕಿವಿಗಳಲ್ಲಿ ತುಂಬಿ ಹೃದಯದಲ್ಲಿ ನೆಟ್ಟು ಹೋಗಿದ್ದಿತು. ಅದರಿಂದಾಕೆ ಅತೀವ ಉತ್ತೇಜಿತಳಾದಳು. ಹೇಗೆನ್ನುವದು ತಿಳಿಯದಿದ್ದರೂ, ಪ್ರಭುಗಳೂ ಯುವರಾಜರೂ ಯಾವ ಅಪಾಯವಿಲ್ಲದೆಯೂ ಸುರಕ್ಷಿತರಾಗುಳಿಯುವರೆಂಬ ನಂಬುಗೆಯಾಯಿತು. ತನ್ನಿಂದ ಉತ್ತಮವಾದ ರಾಜಸೇವೆ, ತದ್ವಾರಾ ರಾಷ್ಟ್ರಸೇವೆ ಘಟಿಸಲಿದ್ದುದರಿಂದ, ಆಕೆ ತನ್ನ ಜೀವನ ಧನ್ಯವಾಯಿತೆಂದೆಣಿಸಿದಳು. ಹೃಷ್ಟಮನಸ್ಕಳಾಗಿ ಅರಮನೆಯತ್ತ ಹೊರಟಳು—ವಿಜಯನಗರದ ಮೇಲೆ ಕವಿಯಲಿದ್ದ ಕಾರ್ಮೋಡ ಕಡೆಗಾಣಿಸುವ ವಿಚಾರವೊಂದೇ ಆಕೆಯ ಮನದಲ್ಲಿ ಮೂಡಿದ್ದಿತು.

———

# ೧೦ ಮಲ್ಲಿಕಾರ್ಜುನ ಮಂದಿರ.

'ರಾಮಾ, ಇದು ನೋಡು ವಿಜಯನಗರದ ಸ್ಥಾಪನಾಚಾರ್ಯರೆಂಬ ಬಿರುದಿಗೆ ತೀರಾ ತಕ್ಕವರಾದ ವೀರ ಯತಿ ವಿದ್ಯಾರಣ್ಯ ಮಹರ್ಷಿಗಳ ಜೀವನ ಚರಿತೆಯ ಪ್ರತಿಯೊಂದು ಭಾಗವೂ ಸೊಗಸಾಗಿ ತಿಳಿಯುವಂತೆ ಕೆತ್ತಲು ನಾನು ಮೊದಲೇ ಎಚ್ಚರ ಕೊಟ್ಟಿದ್ದೆನು.'

'ಭಾಪು! ಭಾಪು! ಕುಮಾರ, ನಿಜವಾಗಿಯೂ ನಿಮ್ಮ ಕಲಾಪ್ರೇಮವು ಹೊಗಳಲು ಯೋಗ್ಯವಿದೆ. ವೀರ ಯತಿ ವಿದ್ಯಾರಣ್ಯ ಗುರುವರರ ಒಂದೊಂದೇ ಚಿತ್ರ ಅವರಾ ಅದ್ವಿತೀಯ ತೇಜಸ್ಸನ್ನಾಗಲಿ, ಅನುಪಮ ತಪೋಬಲವನ್ನಾಗಲಿ ನೋಟಕರ ಹೃದಯದಲ್ಲಿ ಚನ್ನಾಗಿ ನಾಟುವಂತಿವೆ.'

'ಇದು ಗುರುಗಳ ತಪೋಭೂಮಿ. ತಪೋಮಗ್ನರಾದ ಗುರುಗಳು ಅಗ್ನಿಗಿಂತಲೂ ಮಿಗಿಲಾದ ತೇಜದಿಂದ ಕೂಡಿರುವರು. ಇಲ್ಲಿ ನೋಡು, ಜಗನ್ಮಾತೆ ಭುವನೇಶ್ವರಿ ಗುರುಗಳ ತಪದಿಂದ ಪ್ರಸನ್ನಳಾಗಿರುವಳು. ಆದರೂ ಮುಖದಲ್ಲಿ ಹರುಷವಿಲ್ಲ. ನೋಟ ಮರುಕದಿಂದ ಕೂಡಿದೆ. ಅಸಹಾಯತೆ-ವಾತ್ಸಲ್ಯಗಳ ಬೆರಿಕೆಯು ದೇವಿಯ ಮೊಗದಲ್ಲಿ ಬಿಂಬಿಸಿದೆ. ಇಲ್ಲಿ ದ್ವಿತೀಯ ಜನುಮ ತಳೆದ ಗುರುವರರು ಹೇಗೆ ತಮ್ಮ ದೈವೀ ತೇಜದಿಂದ ಯತಿಶ್ರೇಷ್ಠರಾಗಿ ಶೋಭಿಸುತ್ತಲಿರುವರು ನೋಡು? ಇದೋ, ಇಲ್ಲಿ ನೋಡು, ನಮ್ಮ ಪೂರ್ವಜ ವಿಜಯನಗರ ರಾಜ್ಯಕ್ಕೆ ತಳಹದಿಯಿತ್ತ ಹರಿಹರರಾಯ. ಗುರುಗಳ ಪಾದವಡಿಯಲ್ಲಿ ಲೀನನಾಗಿರುವ. ಇದೋ, ಇದೇ ನೋಡು ಸಕಲ ಭೂಮಂಡಲವನ್ನೂ ಬೆರಗುಗೊಳಿಸಿದ ದಿವ್ಯನೋಟ. ಯತಿಗಳ ತಪೋಮಹಿಮೆಯನ್ನು ತೋರುವ ಸ್ವರ್ಗೀಯ ನೋಟ. ನಮ್ಮ ಪೂರ್ವಜರು-ದೈವಶಾಲಿಗಳಾದ ಕನ್ನಡಿಗರು-ತುಂಬುಗಣ್ಣುಗಳಿಂದ ನೋಡಿದ ಸುಂದರ ನೋಟ. ಇದೇ ಸುವರ್ಣವೃಷ್ಟಿ!'

'ಭಾಪು! ಕುಮಾರ, ಗುರುಗಳ ದಿವ್ಯ ಚರಿತ್ರೆ ಪ್ರತಿಯೊಬ್ಬ ಮಾನವನ ಕಣ್ಣೆದುರು ನರ್ತಿಸುವಂತೆ ಮಾಡಿರುವಿರಿ. ನಿಮ್ಮ ಈ ಪ್ರಯತ್ನದಿಂದ ಕನ್ನಡ ಪ್ರಜೆಗಳು ಉಪಕೃತರಾಗಿರುವರು.'

'ಇದೋ, ಈ ಭಾಗದಲ್ಲಿ ನಮ್ಮ ಸಂಗಮವಂಶದ ರಾಜರ ಶೂರ ಕೃತ್ಯಗಳೆಲ್ಲ ಬಣ್ಣಿಸಲ್ಪಟ್ಟಿವೆ.'

'ಬಹು ಸುಂದರ, ಬಹು ಸೊಗಸಾಗಿವೆ.'

ಪ್ರತಾಪದೇವರಾಯ ಮತ್ತು ಆತನ ಮಗ ವಿರೂಪಾಕ್ಷ ಈರ್ವರೂ ಬಹಳ ದಕ್ಷತೆ ವಹಿಸಿ ಕಟ್ಟಲಾರಂಭಿಸಿದ್ದ ಮಲ್ಲಿಕಾರ್ಜುನ ಮಂದಿರದ ಕೆಲಸ ಬಹುತರ ಮುಗಿದಂತಾಗಿದ್ದಿತು. ಸಾವಿರಾರು ಜನರು ಒಂದೇ ಸವನೆ ದುಡಿದು, ಅಲ್ಪಾವಕಾಶದಲ್ಲಿಯೇ ಅದ್ಭುತವಾದ ಆ ಸುಂದರ ಮಂದಿರವನ್ನು ಸಿದ್ಧಗೊಳಿಸಿದ್ದರು. ಮಂದಿರ ಬಹಳ ಸುಂದರವಾಗಿದ್ದಿತು. ಕನ್ನಡಿಗರ ಕಲಾಪ್ರೇಮ ಅವರ್ಣನೀಯವಾದುದು. ವಿಜಯ

ನಗರದಲ್ಲಿಯಂತೂ ಕಲೆ ಮೂರ್ತಿಮಂತಾಗಿ ವಾಸಿಸುತ್ತಿದ್ದಿತು. ಅದರಲ್ಲಿ ಪ್ರತಾಪ ದೇವರಾಯ ಮತ್ತು ವಿರೂಪಾಕ್ಷರು ವಿಶೇಷವಾಗಿ ದಕ್ಷತೆ ವಹಿಸಿ, ಸ್ವತಃ ಮೇಲ್ವಿಚಾರಣೆಗೆ ನಿಂತು ಕೆಲಸ ಮಾಡಿಸಿದ್ದರಿಂದ, ಮಂದಿರವು ಅಪ್ರತಿಮವಾಗಿದ್ದಿತು. ಇಮ್ಮಡಿ ದೇವರಾಯನಂತೂ ತಮ್ಮನ ವಿಷಯಕ್ಕೆ ಮತ್ತು ಆತನ ಮಗನ ವಿಷಯಕ್ಕೆ ಬಹಳ ಆನಂದಿತನಾಗಿದ್ದನು. ಸ್ವಾರ್ಥದ ಲವಲೇಶವೂ ಇಲ್ಲದೆ, ತನ್ನ ಶೂರ ಮಗನ ಸ್ಮಾರಕವೆಂದು ಅಂತಹ ಸುಂದರ ಮಂದಿರ ನಿರ್ಮಾಣ ಮಾಡಲು ಆರಂಭಿಸಿದ್ದರಿಂದ, ಅವನು ಅದರ ಬಗ್ಗೆ ಬಹಳ ಪ್ರೇಮವುಳ್ಳವನಾಗಿದ್ದನು. ಆವಾಗಲೂ ತಮ್ಮನನ್ನು ಕೊಂಡಾಡುತ್ತಲಿದ್ದನು. ತನ್ಮೂಲಕ ಆ ತಂದೆ-ಮಕ್ಕಳು ಕನ್ನಡಿಗರ ಹೃದಯದಲ್ಲೊಂದು ಉಚ್ಚಸ್ಥಾನ ಪಡೆದರೆಂದು ಆವನು ನಂಬಿದನು. ಜನರಾದರೂ ಪ್ರತಾಪದೇವರಾಯನ ಔದಾರ್ಯವನ್ನು ಮನಮುಟ್ಟಿ ಹೊಗಳುತ್ತಲಿದ್ದರು. ಎಲ್ಲಿ ನೋಡಿದರೂ ಪ್ರತಾಪ ದೇವರಾಯ ಮತ್ತು ವಿರೂಪಾಕ್ಷರ ಹೆಸರೇ ಕೇಳಬರುತ್ತಲಿದ್ದುವು. ಯುವರಾಜನ ಹೆಸರು ಕೊಂಚ ಹಿಂದೆ ಬಿದ್ದಂತಾಗಿದ್ದಿತು. ಪ್ರಜೆಗಳಲ್ಲಿ ಯುವರಾಜನ ವಿಷಯದ ಪ್ರೇಮ ಕಡಿಮೆಯಾಗಿತ್ತೆಂದಲ್ಲ; ಆದರೆ ಆ ಕಾಲದ ಮಟ್ಟಿಗೆ ವಿರೂಪಾಕ್ಷನ ಕೃತಿ ಜನರ ಕಣ್ಣಲ್ಲಿ ಹೆಚ್ಚಾಗಿ ಕಾಣುತ್ತಲಿದ್ದಿತು.

ವಿರೂಪಾಕ್ಷ ಅವನ್ನೆಲ್ಲ ನೋಡುತ್ತಲಿದ್ದನು. ಮಂದಿರದ ಧ್ಯೇಯೋದ್ದೇಶಗಳು ಬೇರೆಯಾಗಿದ್ದರೂ, ಜನರು ತನ್ನನ್ನು ನೋಡಿ ಆದರಿಸುವದೂ, ಮನ್ನಿಸುವದೂ ನಾಡುತ್ತಿದ್ದಕ್ಕೆ, ಅವರ ಹುಚ್ಚುತನಕ್ಕೆ ನಗುತ್ತಲಿದ್ದನು. ತನ್ನ ಆಟದಿಂದ ವಿಜಯ ನಗರದ ಪ್ರಜೆಗಳೆಲ್ಲರೂ ಹುಚ್ಚರಾದುದಕ್ಕೆ ತನ್ನೊಳಗೇ ನಗುತ್ತಲಿದ್ದನು; ಆದರೆ ಅವನಾವರೂ ಜಾಣನೇ? ಅವನಾವರೂ ಒಂದು ಬಗೆಯ ಹುಚ್ಚನೇ! ಜಾಣನಾಗಿದ್ದರೆ ತನ್ನಾ ಮೋಸದ ನಡವಳಿಯಿಂದಲೇ ಪಾಠ ಕಲಿಯುವಂತಿದ್ದಿತು. ಆ ಪಾಠದಿಂದಲೇ ಸರಿಯಾದ ದಾರಿಗೆ ತಲುಪಬಹುದಿತ್ತು. ಅದರಿಂದ ತನ್ನ ಮತ್ತು ವಿಜಯನಗರದ ಉನ್ನತಿ ಸಾಧಿಸಬಹುದಿತ್ತು.

ಆ ಸಮಯದಲ್ಲಿ ವಿರೂಪಾಕ್ಷನ ನಡವಳಿ ಮೋಸದಿಂದ ಕೂಡಿದ್ದಿತು; ಆದರೆ ಆ ಮೋಸದ ಉದ್ದೇಶವಾವದೂ ಯಶಸ್ಸು ದೊರಕಿಸುವದು, ಮಾನ ಹೊಂದುವುದು, ಗೌರವ ಪಡೆಯುವದು ಇವೇ ಅಲ್ಲವೆ? ಕೊಂಚ ಸೂಕ್ಷ್ಮವಾಗಿ ನಿರೀಕ್ಷಿಸಿದ್ದರೆ, ಅವುಗಳನ್ನು ಪಡೆಯುವ ಸಮೀಪದ ದಾರಿಯೇ ಸಿಗುವಂತಿದ್ದಿತು. ತಾವು ಮೋಸವಾಗಿ ಆ ಮಂದಿರಕ್ಕಾರಂಭಿಸಿದ್ದರು. ಅಷ್ಟರಿಂದಲೇ ಜನರು ಅದೆಷ್ಟು ಪ್ರಸನ್ನರಾಗಿದ್ದರು! ಹಾಗಾಗಲು ಕಾರಣವೇನು? ಆಳುವರಸು ಮತ್ತು ಆಗಿನ ಪ್ರಜೆಗಳೆಲ್ಲರೂ ಆ ತಂದೆ-ಮಕ್ಕಳು ಸ್ವಾರ್ಥತ್ಯಾಗಿಗಳೆಂದೇ ತಿಳಿದರಲ್ಲದೆ, ಇನ್ನೇನಿಲ್ಲ. ತಮ್ಮ ಯಾವ ಸ್ವಾರ್ಥವೂ ಇಲ್ಲದೆ, ಬರಿಯ ಯುವರಾಜನ ಗೌರವಾರ್ಥವಾಗಿ ಆ ಸ್ಮಾರಕದ ಯೋಜನೆ ಕೈಕೊಂಡುದನ್ನು ನೋಡಿ ನಿಸ್ವಾರ್ಥಿಗಳೆಂದು ಅವರೀವರನ್ನೂ ಮನ್ನಿಸುತ್ತಲಿದ್ದರಲ್ಲವೆ? ಅದನ್ನೇ ಸರಿಯಾಗಿ ತಿಳಿದು ನೋಡಿದ್ದರೆ, ವಿರೂಪಾಕ್ಷನಿಗಾಗಲಿ ಪ್ರತಾಪದೇವರಾಯನಿಗಾಗಲಿ

ಯಶೋಮಂದಿರದ ದ್ವಾರವೇ ಸಿಕ್ಕು ಹೋಗುತ್ತಲಿದ್ದಿತು. ತಮ್ಮ ಆಚರಣೆಯಲ್ಲಿ ಮಾರ್ಪಾಟನ್ನುಂಟು ಮಾಡಿ, ಅದರಿಂದ ಅವರಿಗೆ ನಿಜವಾದ ಯಶಸ್ಸಿನ ಲಾಭವಾಗಿ ಅವರ ಹೆಸರು ಆಚಂದ್ರಾರ್ಕವಾಗುಳಿಯುತ್ತಲಿದ್ದಿತು; ಆದರೆ ಹಾಗೆಲ್ಲ ಯೋಚಿಸಲು ಅವರಿಗೆ ಅವಕಾಶವಾದರೂ ಇದ್ದಿತೆಲ್ಲಿ? ಮತ್ತು ಸ್ವಲ್ಪ ಅವಕಾಶ ಸಿಕ್ಕರೂ ಸ್ವಾರ್ಥಾಂಧರಾದ ಅವರಿಗೆ ಕಾಣುವದಾದರೂ ಹೇಗೆ? ಆಗ್ಗೆ ಅವರ ದೃಷ್ಟಿ ಸಿಂಹಾಸನದ ಮೇಲಿದ್ದಿತು. ಸಿಂಹಾಸನ ಕೈವಶವಾಗುವವರೆಗೆ ಯಾವ ಸಂಗತಿಯಿಂದಲೂ ಅವರಿಗೆ ಸಮಾಧಾನವಾಗುವಂತಿರಲಿಲ್ಲ. ಸ್ವಾರ್ಥ ನಿಸ್ವಾರ್ಥಗಳ ಯೋಚನೆಯೇ ಇಲ್ಲವೆ ತಮ್ಮ ಉದ್ದೇಶದತ್ತ ಸಾಗಿದ್ದರು. ನಿತ್ಯವೂ ಮುಂದೊರೆಯುತ್ತಲಿದ್ದರು.

ಹಾಗೆ ತನ್ನ ಮಡ್ಡತನದಿಂದಲೇ ತಾನು ಮೋಸ ಹೋಗಿ, ವಿರೂಪಾಕ್ಷ ತಾನು ಸ್ವತಃ ಮೇಲ್ವಿಚಾರಣೆ ಮಾಡಿ ಸಿದ್ಧಿಗೊಳಿಸುತ್ತಲಿದ್ದ 'ಮಲ್ಲಿಕಾರ್ಜುನ ಮಂದಿರ'ಕ್ಕೆ ಹೇಮಾಂಬಿಕೆಯನ್ನು ಕರೆದೊಯ್ದು, ಅದರಲ್ಲಿನ ವಿವಿಧ ಭಾಗಗಳನ್ನು ತೋರಿಸುತ್ತಲಿದ್ದನು. ಕಟ್ಟಡ ನಿಜವಾಗಿಯೂ ಅಂದವಾಗಿದ್ದಿತು. ಬೇರೆ ಸಮಯದಲ್ಲಾಗಿದ್ದರೆ, ಹೇಮಾಂಬಿಕೆ ಅಂತಹ ಕಲಾಮಂದಿರವನ್ನು ನೋಡಿ ನಿಜವಾಗಿಯೂ ಆನಂದಪಡುತ್ತಲಿದ್ದಳು. ಕಲಾಪ್ರೇಮಿಯೂ, ಕಲಾವಿದಳೂ ಆದ ಆಕೆಗೆ ಅಂತಹ ಕಲಾಕೃತಿ ನಿಜವಾಗಿಯೂ ಆನಂದಕ್ಕೆ ಕಾರಣವಾಗಬಹುದಿತ್ತು. ವಿರೂಪಾಕ್ಷನೇನೋ ಹೇಮಾಂಬಿಕೆ ಅಂತಹ ಸುಂದರ ಕಲಾಪ್ರದರ್ಶನದಿಂದ ಸಂತುಷ್ಟಳಾದಳೆಂದೇ ಭಾವಿಸಿದನು. ಅವನು ಧೂರ್ತನಿದ್ದನು; ಆದರೂ ಮಾನವತೆಯ ಮೂಲಕವೋ ಏನೋ ಹೇಮಾಂಬಿಕೆಯ ನಿಜಹೃದಯವರಿಯಲಾಗಲಿಲ್ಲ. ಹೇಮಾಂಬಿಕೆ ಹೃಷ್ಟಳಾದಂತೆ ತೋರುತ್ತಲಿದ್ದರೂ, ಮನವು ಸಂಶಯಗ್ರಸ್ತವಾದುದರಿಂದ ಪ್ರತಿಯೊಂದು ವಸ್ತುವನ್ನೂ ಸಂಶಯಪೂರ್ವಕವಾಗಿಯೇ ನೋಡುತ್ತಲಿದ್ದಳು. ವಿರೂಪಾಕ್ಷನ ಕಪಟರೂಪದ ಆ ಕಲಾಕೃತಿಯು ಆವುದೋ ಒಂದು ರೀತಿಯಿಂದ ರಾಜಮನೆತನದ ನಾಶಕ್ಕೆ ಕಾರಣವಾಗಲಿದ್ದ ಮೂಲಕ, ಆಕೆ ಪ್ರತಿಯೊಂದು ಕಲಾಕೃತಿಯನ್ನೂ ಪ್ರೇಮದಿಂದ ನೋಡದೆ, ತಿರಸ್ಕಾರದಿಂದ ನೋಡುತ್ತಲಿದ್ದಳು. ಮಾನವನ ಮೂರ್ಖತನವಾದರೂ ಎಷ್ಟು? ಅಥವಾ ಇದಕ್ಕೆ ನೀಚತನವೇ ಎನ್ನಬಹುದು. ಯಾವ ಕಲಾಕೃತಿಯು ನಿಜವಾದ ಅಂತರಂಗದ ಸ್ಫೂರ್ತಿಯನ್ನು ದ್ಯೋತಿಸುವದೋ, ಯಾವದರ ಅವಲೋಕನ ಮಾತ್ರದಿಂದ ಕಲಾಹೀನನ ಅಂತರಂಗವೂ ಸ್ಫೂರ್ತಿಗೊಳ್ಳುವದೋ, ಯಾವ ಕಲೆಯು ಹೃದಯದ ಪವಿತ್ರ ಭಾವನೆಯೇ ಮೈಗೊಂಡು ನಿಂತಿರುವದೋ, ಯಾವದನ್ನು ನೋಡುತ್ತಲೇ ಹೃದಯದ ಅಪವಿತ್ರತೆಯೆಲ್ಲವೂ ನಾಶವಾಗಿ ಪಾವಿತ್ರ್ಯ ನೆಲೆಗೊಳ್ಳುವದೋ, ಅಂತಹ ಸುಂದರ ಸಮಧುರ ಸೂಕ್ಷ್ಮವಾದ ಕಲಾಕೃತಿಯು ದುಷ್ಟಕಾರ್ಯಕ್ಕೆ ಉಪಯೋಗವಾಗಬೇಕೆ? ಸದ್ಯದ ಕಲಾಕೃತಿಯು ಕಲಾಕೃತಿಯಾಗಿರದೆ, ಕಪಟಕೃತಿಯಾಗಿದೆ. ಇಂತಹ ಕಲೆಯೇ ಕಾಪಟ್ಯಕ್ಕೆ ಆಶ್ರಯಸ್ಥಾನವಾಗಿದೆ—ಮುಂತಾದ ವಿಚಾರಗಳಲ್ಲಿ ಮಗ್ನಳಾಗುತ್ತಲಿದ್ದಳು; ಆದರೂ ಹೊರಗೆ ಸಂತೋಷವನ್ನೇ ಸೂಚಿಸುತ್ತಲಿದ್ದಳು.

ಹೀಗೆ ಇಬ್ಬರೂ ತಮ್ಮ ತಮ್ಮ ಅಂತರಂಗದ ಸಂಗತಿಗಳನ್ನು ಭದ್ರವಾಗಿರಿಸಲು ಯತ್ನಿಸುತ್ತಲಿದ್ದರು. ವಿರೂಪಾಕ್ಷನ ಕಪಟ ಬಹುಮಟ್ಟಿಗಲ್ಲದಿದ್ದರೂ, ಅಲ್ಪವಾದರೂ ತಿಳಿದಿದ್ದಿತು; ಆದರೆ ಹೇಮಾಂಬಿಕೆಯ ಕಾಪಟ್ಯ ಕಿಂಚಿತ್ತಾದರೂ ಬಹಿರಂಗಕ್ಕೆ ಬೀಳದೆ, ಬಹಳ ಭದ್ರವಾಗಿದ್ದಿತು. ವಿರೂಪಾಕ್ಷ ಅನ್ಯರನ್ನು ಮೋಸಗೊಳಿಸಲೆತ್ನಿಸಿ ಕೊನೆಗೆ ತಾನೇ ಮೋಸ ಹೋದನು.

ಹೇಮಾಂಬಿಕೆ ಮಂದಿರ ನೋಡಿ ಬಂದಳು. ಆಕೆಗೆ ಕಾಪಟ್ಯದ ಸಂಶಯ ಮೊದಲೇ ಬಂದಿದ್ದಿತು; ಆದರೆ ಆ ಕಪಟಾಚರಣೆ ಆಚರಿಸಲ್ಪಡುವ ಸಾಧನವೇ ಸಿಕ್ಕದಾಯಿತು. ಯಾವ ರೀತಿಯಿಂದ ವಿರೂಪಾಕ್ಷನಾಗಲಿ, ಪ್ರತಾಪದೇವರಾಯನಾಗಲಿ ಅದರ ಮೂಲಕವಾಗಿ ತಮ್ಮ ಉದ್ದಿಷ್ಟಸಾಧನೆ ಕೈಕೊಳ್ಳಲಿರುವರೆಂಬದೇ ತಿಳಿಯಲಿಲ್ಲ. ಆಕೆ ಬಹಳವಾಗಿ ಯೋಚಿಸಿದಳು. ಹೀಗೆ ಹತ್ತು-ಹದಿನೈದು ದಿನಗಳು ಯೋಚನೆಯಲ್ಲಿಯೇ ಕಳೆದುವು. ಹೊಸ ಕಟ್ಟಡ ಬಹುತರವಾಗಿ ಮುಗಿಯುತ್ತ ಬಂದಿದ್ದಿತು. ಕಟ್ಟಡ ಕಾರ್ಯವೆಲ್ಲವೂ ಕೊನೆಗಂಡು ಬಣ್ಣಹಚ್ಚುವ ಕಾರ್ಯಕ್ಕಾರಂಭವಾಯಿತು. ಕಟ್ಟಡ ಪೂರ್ಣವಾಗುತ್ತ ಬಂದಂತೆ, ಹೇಮಾಂಬಿಕೆಯ ಯೋಚನೆ ಬಹಳವಾಯಿತು. 'ಹೇಗೆ?' ಎಂಬುದೇ ಆಕೆಯ ಪ್ರಶ್ನೆ. 'ಕಪಟವಿರುವದಂತೂ ನಿಶ್ಚಯ. ಹಾಗಾದರೆ ಕಪಟವು ಹೇಗೆ ಕೈಗೂಡಿಸಲ್ಪಡುವದು!............' ಇದೇ ಆಕೆಯ ಪ್ರಶ್ನೆ ನಿತ್ಯವೂ ಯೋಚನಾಗ್ರಸ್ತಳಾಗಿದ್ದರೂ ಹೊರಗೆ ಯಾರಿಗೂ ತಿಳಿಸದಂತಿದ್ದಳು. ವಿರೂಪಾಕ್ಷ, ಆಕೆಗೇನಾದರೂ ಸಂಶಯ ಬಂದಿದ್ದರೆ ತಿಳಿಯಬೇಕೆಂದು ಬಲವಾಗಿ ಯತ್ನಿಸಿದನು; ಆದರೆ ಹೇಮಾಂಬಿಕೆಯ ಯೋಚನಾಚಕ್ರ ಅಭೇದ್ಯವಾಗಿದ್ದಿತು. ಒಳಗೆ ಪ್ರವೇಶ ಸಿಕ್ಕದ್ದರಿಂದ ಅದು ಶೂನ್ಯವಿರುವದೆಂದೇ ವಿರೂಪಾಕ್ಷ ತಿಳಿದನು. ವಿರೂಪಾಕ್ಷನನ್ನು ಮೋಸಗೊಳಿಸಿದ ಹೇಮಾಂಬಿಕೆಗೆ ಯುವರಾಜನನ್ನು ಮೋಸಗೊಳಿಸಲಾಗಲಿಲ್ಲ. ಅದಕ್ಕೆ ಕಾರಣವೂ ಇದ್ದಿತು. ಮೊದಲಿನದೆಂದರೆ, ಮಲ್ಲಿಕಾರ್ಜುನನು ಸರಳವೃತ್ತಿಯವನು. ಮಲ್ಲಿಕಾರ್ಜುನನೆದುರು ವಿರೂಪಾಕ್ಷನೆದುರಿನಂತೆ ಕಾಪಟ್ಯಕ್ಕೆ ಅವಕಾಶ ದೊರೆಯುತ್ತಲಿರಲಿಲ್ಲ. ಮಲ್ಲಿಕಾರ್ಜುನನ ಸರಳವೃತ್ತಿಯ ಪರಿಣಾಮ ಬಹಳಮಟ್ಟಿಗೆ ಹೇಮಾಂಬಿಕೆಯ ಮನಸ್ಸಿನ ಮೇಲಾಗಿ, ಅದರಿಂದ ಅಭೇದ್ಯವಾದ ಆಕೆಯ ಮನಸ್ಸು ಕೊಂಚ ಸಡಿಲಾಗುತ್ತಲಿದ್ದಿತು. ಆಕೆಯ ಅಂತರಂಗದ ಭಾವ ಮುಖದಲ್ಲಿ ಮೂಡುತ್ತಲಿದ್ದಿತು. ಇದರ ಹೊರತು ಇನ್ನೊಂದು ಕಾರಣವೆಂದರೆ, ಹೇಮಾಂಬಿಕೆ ಮಲ್ಲಿಕಾರ್ಜುನನಲ್ಲಿ ಪ್ರೇಮವುಳ್ಳವಳಾಗಿದ್ದಳು. ವಿರೂಪಾಕ್ಷನ ಕಪಟದ ಪರಿಣಾಮವಾಗಿ ಯುವರಾಜನಿಗೆಲ್ಲಿ ಅಪಾಯ ಸಂಭವಿಸುವದೋ, ಎಂಬ ತಳಮಳ ಆಕೆಯ ಮನಕ್ಕೆ ಹತ್ತಿದುದು ಯುವರಾಜನನ್ನು ಕಾಣುತ್ತಲೆ ಹೆಚ್ಚಾಗಿ, ನಗುಮುಖ ಖಿನ್ನನಾಗುತ್ತಲಿದ್ದಿತು. ಇದಲ್ಲದೆ ಇನ್ನೊಂದು ಕಾರಣವೆಂದರೆ, ಯುವರಾಜನೆದುರು ಅವನ್ನೆಲ್ಲ ಬಚ್ಚಿಡುವ ಕಾರಣವಿರಲಿಲ್ಲ. 'ಸುಮ್ಮನೆ ಅವನಿಗೇಕೆ ಶೊಂದರೆ?' ಎಂದು ಹೇಳಿರಲಿಲ್ಲ ಅಷ್ಟೇ.

ಮಲ್ಲಿಕಾರ್ಜುನನು ಹೇಮಾಂಬಿಕೆಯು ಮನದ ತಳಮಳವರಿತಿದ್ದನು. ಅದರ ಕಾರಣವನ್ನಾದರೂ ಅವನು ತಿಳಿಯದಿರಲಿಲ್ಲ. ಅವನಾದರೂ ವಿರೂಪಾಕ್ಷನ ನಡೆ ವಳಿಯನ್ನರಿಯುತ್ತಲೇ ಇದ್ದನು. ಅವನಿಗಾದರೂ ಯಾವ ಸಂಗತಿಯೂ ತಿಳಿಯು ದಿರಲಿಲ್ಲ.

ಒಂದು ದಿನ ಸಾಯಂಕಾಲದ ಸಮಯ. ಹೇಮಾಂಬಿಕೆ ತನ್ನ ಅರಮನೆಯ ಕೋಣೆಯಲ್ಲಿ ಯೋಚನಾಮಗ್ನಳಾಗಿ ಕುಳಿತಿದ್ದಳು. ಅದೆಷ್ಟು ಸಮಯ ಕುಳಿತಿದ್ದ ಳೋ ಆಕೆಗೆ ತಿಳದಿರಲಿಲ್ಲ. ಆಗ್ಗೆ ಆಕೆಗೆ ಭಿನ್ನ ಭಿನ್ನ ಯೋಚನೆಗಳು ಬಂದು ಹೋಗುತ್ತಲಿದ್ದವು. ಆಕೆ ತೇಲುತ್ತಲಿದ್ದ ಯೋಚನಾಪ್ರವಾಹ ಭಾವೀ ಕರ್ನಾಟಕ ಸಾಮ್ರಾಜ್ಯದತ್ತ ಹೊರಟಿದ್ದಿತು. ಭಾವೀ ಸಮ್ರಾಟ ಮಲ್ಲಿಕಾರ್ಜುನ, ಆತನ ಕಾಲದ ಉಜ್ವಲ ಇತಿಹಾಸ ಆಕೆಯ ಹೃದಯದಲ್ಲಿ ನರ್ತಿಸಲಾರಂಭಿಸಿದ್ದಿತು. ಆದಾವೋ ಸುಂದರ, ಸುಮಧುರ ಸಂಗತಿಗಳನ್ನು ನೋಡುತ್ತಲೆ ಮೈಮರೆತು ಕುಳಿ ತವಳು ಕಣ್ದೆರೆದಳು. ಒಮ್ಮೆಲೆ ಆಕೆಯ ಮುಖ ಬಾಡಿತು. ಹೃದಯ ಕಂಪಿಸ ಹತ್ತಿತು. ಕಣ್ಣಲ್ಲಿ ಕತ್ತಲೆ ತುಂಬಿತು. ಸೂರ್ಯಾಸ್ತದ ನಂತರದ ಮಬ್ಬು ಆಕೆಯ ಹೃದಯದಲ್ಲಿ ಪ್ರವೇಶಿಸಿ ಹೃನ್ಮಂದಿರವನ್ನೆಲ್ಲ ವ್ಯಾಪಿಸಲು, ಆಕೆ ಕಾಣುತ್ತಲಿದ್ದ ಉಜ್ವಲ ಚಿತ್ರಗಳೆಲ್ಲ ಕಣ್ಮರೆಯಾದವು. ಆದೊಂದು ಭೀಕರ ಅಪಶಕುನವೆಂದೇ ಆಕೆ ಬಗೆದಳು. ಕರ್ನಾಟಕ ಸಾಮ್ರಾಜ್ಯಕ್ಕೊಂದು ಕುತ್ತೇ ಬಂದೊದಗಿದಂತೆ ಭಾವನೆಯಾಯಿತು. ಒಡನೆಯೇ ವಿರೂಪಾಕ್ಷನ ಕಪಟವರ್ತನೆ ಸ್ಮರಣೆಗೆ ಬರಲು, ಆಕೆಯ ದೇಹವೆಲ್ಲವೂ ಕಂಪಿಸಿತು. ಜ್ಞಾನಶೂನ್ಯಳಾಗಿ ಕುಳಿತುಬಿಟ್ಟಳು. ಭಾವೀ ಭೀಕರ ಯೋಚನೆಗಳೆಲ್ಲ ಭೂತಗಳೋಪಾದಿಯಲ್ಲಿ ನರ್ತಿಸಲಾರಂಭಿಸಹತ್ತಿದವು. ಅವುಗಳನ್ನು ತಡೆಯುವ ಸಾಮರ್ಥ್ಯವಿಲ್ಲದೆ, ಆ ಅಸಹ್ಯ ಆಕೃತಿಗಳ ಅವಲೋಕನೆ ಯಲ್ಲಿಯೇ ಕುಳಿತುಬಿಟ್ಟಳು; ಆದರೆ ಅಲ್ಪಾವಕಾಶದಲ್ಲಿಯೇ ಅವುಗಳೆಲ್ಲ ಪ್ರಖರ ಜ್ಯೋತಿಯ ಎದುರು ಮಾಯವಾದುವು. ಹೃನ್ಮಂದಿರದೊಳಗಿನ ಕತ್ತಲೆ ಪೂರ್ಣ ವಾಗಿ ನಾಶವಾಗಿ ಪೂರ್ಣಚಂದ್ರನ ಶಾಂತಪ್ರಭೆ ಹರಡಿತು. ಕರ್ನಾಟಕ ಸಾಮ್ರಾ ಜ್ಯದ ಮೇಲೊದಗಿದ ಕುತ್ತು ಕತ್ತರಿಸಿ ಹಾಕುವ ಸುಂದರೇಂದುವಿಗೆ ಹೇಮಾಂಬಿಕೆ ವಂದನೆಗಳರ್ಪಿಸಿದಳು. ಹೀಗೆ ಹೇಮಾಂಬಿಕೆಯು ಅಂತರಂಗ-ಬಹಿರಂಗದೊಡನೆ ಸಮರಸವಾಗಿ ನಿರಾಶೆಯ ಕತ್ತಲೆಯಿಂದ ಆಶಾಜ್ಯೋತಿಯಲ್ಲಿ ಕಾಲಿಡುವಾಗಲೇ ಅಲ್ಲಿ ಯುವರಾಜನಾಗಮಿಸಿದನು.

ಯುವರಾಜ ಹೇಮಾಂಬಿಕೆಯನ್ನರಸುತ್ತ ಆಕೆ ಕುಳಿತಲ್ಲಿಗೆ ಬಂದು ನೋಡು ತ್ತಾನೆ, ಹೇಮಾಂಬಿಕೆಯೊಂದು ಕತ್ತಲೆಯ ಕೋಣೆಯಲ್ಲಿ ಕುಳಿತಿದ್ದಳು. ದೀಪ ವಿರಲಿಲ್ಲ. ಎಲ್ಲೆಡೆಯಲ್ಲಿ ಕತ್ತಲೆಯಿದ್ದರೂ ಹೇಮಾಂಬಿಕೆ ಕುಳಿತಲ್ಲಿ ಮಾತ್ರ ಪೂರ್ಣಚಂದ್ರನ ದಿವ್ಯಪ್ರಭೆ ಗವಾಕ್ಷದಿಂದ ಒಳಹೊಕ್ಕು, ಆಕೆಯ ಮೇಲೆಲ್ಲ ಹರಡಿ ದ್ದಿತು. ಆಕೆ ಕುಳಿತಷ್ಟರ ಮಟ್ಟಿಗೆ ಮಾತ್ರ ಬಿದ್ದ ಬೆಳದಿಂಗಳಿನಲ್ಲಿ ನಿಶ್ಚಲಳಾಗಿ

ಹೇಮಾಂಬಿಕೆ ಕುಳಿತಿದ್ದಳು. ಪ್ರಸನ್ನ ಮನದಿಂದಲೂ ತುಂಬುಗಣ್ಣುಗಳಿಂದಲೂ ಪೂರ್ಣಚಂದ್ರನನ್ನೇ ನಿರೀಕ್ಷಿಸುತ್ತಲಿದ್ದ ಹೇಮಾಂಬಿಕೆಯ ಕಮಲಮುಖವು ಕಮನೀಯವಾಗಿ ತೋರಿತು. ಒಳ್ಳೇ ಸಂಗಮರವರೀ ಕಲ್ಲಿನಲ್ಲಿ ಕುಶಲ ಶಿಲ್ಪಿಗನು ಕೊರೆದ ಮೂರ್ತಿಯಂತೆ ಹೇಮಾಂಬಿಕೆ ನಯನಮನೋಹರವಾಗಿ ಕಾಣಿಸಿದಳು. ಯುವರಾಜ ನಿರ್ವಿಕಾರ ಮುದ್ರೆಯಿಂದ ಅದೆಷ್ಟೋ ವೇಳೆ ನೋಡುತ್ತಲೇ ನಿಂತನು. ಒಂದು ಒಂದೂವರೆ ಗಳಿಗೆಯ ವರೆಗೆ ನಿಂತರೂ ಹೇಮಾಂಬಿಕೆ ಕೊಂಚವಾದರೂ ಅಲ್ಲಾಡಲಿಲ್ಲ. ತೆರೆದ ಕಣ್ಣು ಮುಚ್ಚಲಿಲ್ಲ. ಯುವರಾಜನ ವಿಸ್ಮಯಕ್ಕೆ ಕೊನೆಯಿಲ್ಲದಾಯಿತು. ಅವನು ಸಮೀಪಕ್ಕೆ ಹೋಗಿ ಮೃದು ಸ್ವರದಲ್ಲಿ:—'ಹೇಮಾ!' ಎಂದು ಕರೆದನು.

ಹೇಮಾಂಬಿಕೆ ಚಕಿತಳಾಗಿ ಮೇಲಕ್ಕೆದ್ದಳು. ಕರ್ನಾಟಕ ಸಾಮ್ರಾಜ್ಯಕ್ಕೊದಗಿದ್ದ ಸಂಕಟವು ತನ್ನ ಮೂಲಕ ಪರಿಹಾರವಾಗಲು, ಯುವರಾಜ ಮೊದಲಾದವರು ತನ್ನ ಸಂಭಾವನೆ ಮಾಡುತ್ತಲಿದ್ದ ಅತ್ಯಂತ ಆನಂದಕರ ನೋಟ ನೋಡುವುದರಲ್ಲಿ ಆಗ ಆಕೆ ತಲ್ಲೀನಳಾಗಿದ್ದಳು.

'ಯುವರಾಜ, ಬಂದುದಾವಾಗ?'

'ನಾನಾವಾಗಲೇ ಬರಲಿ, ನೀನೀ ಕತ್ತಲೆಯಲ್ಲಿ ಕುಳಿತು ಏನು ಮಾಡುತ್ತಲಿರುವೆ?'

'ಅಂ, ಅಹುದು; ಕತ್ತಲೆಯೆಷ್ಟಾಗಿದೆಯಲ್ಲ!'

'ಅಂದರೆ. ನೀನೀವರೆಗೆ ಕತ್ತಲಾದುದನ್ನರಿತೇ ಇಲ್ಲವೆ? ನಾನೇನು ಬೆಳಕಿನಲ್ಲಿ ನಿಂತಿರುವೆನೆಂದು ತಿಳಿದೆಯಾ?'

'ಅಂ, ನಿಜ. ನಿಜವಾಗಿಯೂ ನಾನು ನಿಮ್ಮನ್ನು ಕಾಣಲಿಲ್ಲ. ನಿಮ್ಮ ಸ್ವರ ಕೇಳುತ್ತಲೆ ನಿಮ್ಮನ್ನು ಗುರುತಿಸಿದೆನು. ಏ ಚಿನ್ನಾ—ಚಿನ್ನಾ ಮೇಲೆ ದೀಪ ಹಚ್ಚಿ ಬಿಟ್ಟು ಹೋಗೆ.'

ಅಲ್ಪಾವಕಾಶದಲ್ಲಿ ದೀಪ ಹಚ್ಚಿದುದಾಯಿತು. ಯುವರಾಜ ಹೇಮಾಂಬಿಕೆಯ ಮುಖವನ್ನೇ ನಿರೀಕ್ಷಿಸ ಹತ್ತಿದ. ಹೇಮಾಂಬಿಕೆ ಲಜ್ಜಿತಳಾದಳು.

'ಏನು ಹೇಮಾ, ಇಲ್ಲಿ ಕತ್ತಲೆಯಲ್ಲಿ ಕುಳಿತೇನು ಮಾಡುತ್ತಲಿದ್ದೆ?'

'ಏನೋ ಸುಮ್ಮನೆ ಕುಳಿತಿರಲು, ಚಂದ್ರೋದಯವಾಯಿತು. ಆ ಚಂದ್ರಮನ ಸೊಬಗು ನೋಡುತ್ತಲಿದ್ದೆ'

'ಚಂದ್ರಮನ ಸೊಬಗು ನೀನು ನೋಡುತ್ತಲಿದ್ದೆಯೋ, ಇಲ್ಲವೆ--'

'ಇಲ್ಲವೆ ಇನ್ನೇನು ಯುವರಾಜ!'

'ಚಂದ್ರಮನೇ ತನಗಿಂತಲೂ ಸುಂದರತಮವಾದ ಮೊಗವುಳ್ಳ ನಿನ್ನ ಸೊಬಗನ್ನು ನೋಡುತ್ತಲಿದ್ದನೋ ಆ ಚಂದ್ರಮನಿಗೇ ಅರಿಕೆ ಇರಲಿ. ಇಂದೇ ಇಷ್ಟು ಬಹಳವಾಗಿ ಚಂದ್ರಮನನ್ನು ನೋಡುವುದೇಕೆ?'

'ಏನೋ ಸುಮ್ಮನೆ.'

'ಅದೆಲ್ಲ ಸುಳ್ಳು. ಹೃದಯದಲ್ಲಿ ಅದಾವುದೋ ಒಂದು ಮಹತ್ವವಾದ ವಿಚಾರ ತಾಕಲಾಡುತ್ತಲಿರುವಂತೆ ನಿನ್ನ ಮುಖಮುದ್ರೆ ತೋರುತ್ತಲಿದೆ. ಅಂತಹ ಆಳವಾದ ಯೋಚನೆಯಾವದು?'

'ಯುವರಾಜ, ನನಗೊಂದು ಭೀತಿಯೆನಿಸುತ್ತಲಿದ್ದುದು ನಿಜ.'

'ಅದಾವುದು?'

'ಬೇಗನೆ ಕರ್ನಾಟಕ ಸಾಮ್ರಾಜ್ಯಕ್ಕೊಂದು ಸಂಕಟ ಬರಲಿದೆಯೆಂದು.'

'ಕಲ್ಪನಾಮಯ ಕಂಟಕಗಳಿಗೆ ಕಂಪಿಸಿದರೆ ಹೇಗೆ ಹೇಮಾ? ನಾನಾದರೂ ಆ ವಿಷಯ ಯೋಚಿಸಿಲ್ಲವೆಂದು ಭಾವಿಸಬೇಡ.'

'ನೀವಾದರೂ ಯೋಚಿಸಿರುವಿರಾ ಹಾಗಾದರೆ?'

'ಅಂದರೆ, ತೀರಾ ನಾನೇನಷ್ಟು ದಡ್ಡನೆಂದು ತಿಳಿದೆಯಾ?'

'ಕರ್ನಾಟಕ ಸಾಮ್ರಾಜ್ಯದ ಸದ್ಯದ ಯುವರಾಜರು ಭಾವೀ ಸಮ್ರಾಟರು—'

'ಮತ್ತೆ ನೀನೂ?'

'ನಾನೇನು? ನಾನು—'

'ಸದ್ಯ ಯುವರಾಜ್ಞಿ, ಭಾವೀ ಸಾಮ್ರಾಜ್ಞಿ.'

'ಛೇ! ನಾನಾ ಪದವಿಗೆ ತಕ್ಕವಳಲ್ಲ.'

'ನಿನ್ನ ಹೊರತು ನಾನಾದರೂ ಆ ಪದವಿಗೆ ತಕ್ಕವನು ಅಲ್ಲವೇ ಅಲ್ಲ.'

'ಅದೇಕೆ ಯುವರಾಜ?'

'ಏಕೆ? ಏನು? ಎನ್ನುವ ಪ್ರಶ್ನೆಗಳ ಉತ್ತರಗಳನ್ನು ಆ ಮೇಲೆ ಕಾಣುವಾ. ಸದ್ಯದ ಪ್ರಶ್ನೆ ಮುಖ್ಯವಾಗಿದೆಯಲ್ಲವೆ?'

'ಅಹುದು; ನಾನದನ್ನೇ ಯೋಚಿಸುತ್ತಲಿದ್ದೆನು. ನಿಮ್ಮನ್ನಾದರೂ ಅದನ್ನೇ ಕೇಳಬೇಕೆಂದಿದ್ದೆನು; ಆದರೆ ನೀವೇನೋ ಅಡ್ಡ ತಿರುವಿದಿರಿ.'

'ಹೋಗಲಿ. ಈಗ ನಿನ್ನ ತರ್ಕವೇನಿದೆ?'

'ನನ್ನ ತರ್ಕವೇನೋ ನನಗೇ ತಿಳಿಯದು.'

'ಹಾಗೆಂದರೆ ನಡೆಯದು. ಅದರ ಸುಳುವು ತಿಳಿಸಿದವಳು ನೀನೇ.'

'ಅದೇಕೆ?'

'ಅಂದು ವಿರೂಪಾಕ್ಷನಲ್ಲಾದ ಮಾರ್ಪಾಟು ನೋಡಿ ಅದರ ಪರಿಣಾಮದ ವಿಷಯಕ್ಕೆ ನೀನೊಂದು ಊಹೆ ಕಟ್ಟಿದ್ದೆಯಲ್ಲವೆ? ಆ ಊಹೆಯ ಪರಿಣಾಮವಾಗಿ ನಾನಿಂದು ಜಾಗರೂಕನಾಗಿರಬೇಕಾಯಿತು ನೀನು ಹೇಳಿದುದರ ಪರಿಣಾಮವಲ್ಲವೆ? ನಾನಾದರೂ ಆತನಲ್ಲಾದ ಮಾರ್ಪಾಟನ್ನರಿತಿದ್ದೆನು; ಆದರೆ ಅದರ ಪರಿಣಾಮವಿಷ್ಟು ದೂರ ಹೋಗಬಹುದೆಂದು ನಾನೆಣಿಸಿರಲಿಲ್ಲ. ಅದು ನಿನ್ನ ಮುಂಜಾಗ್ರತೆಯ ಪರಿಣಾಮ.'

'ನನ್ನ ಊಹೆ ದಿಟವಾಯಿತೆನ್ನುವಿರಾ?'

'ಪ್ರತ್ಯಕ್ಷ ಮೈಗೊಂಡು ನಿಂತಿದೆ.'

'ಅಂದರೆ?'

'ಅಂದರೇನು? ಯುವರಾಜನ ಶೌರ್ಯದ ಸ್ಮಾರಕ, ಕರ್ನಾಟಕದ ಕಲೆಯ ನೆಲೆ, ಯುವರಾಜನ ಕೀರ್ತಿಧ್ವಜ 'ಮಲ್ಲಿಕಾರ್ಜುನ ಮಂದಿರ!'

'ಹಾಗಾದರೆ ನನ್ನ ಅಭಿಪ್ರಾಯ ಹೊಂದುಗೂಡಿತು.'

'ಇಲ್ಲವಾದರೆ ಹೇಮಾ, ನನಲ್ಲಿ ತಿರಸ್ಕಾರ-ಅದು ಮಾನವರ ಸ್ವಭಾವ. ತೇಜಸ್ವಿ ಅನ್ಯರ ತೇಜಸ್ಸನ್ನೆಂದೂ ಸಹಿಸನು—'

'ಅಹುದು; ಆದರೆ ಕೈಲಾಗದ ಹೇಡಿಯಂತೆ ಕಪಟವೇಕೆ?'

'ಅದಾದರೂ ಮಾನವ ಸ್ವಭಾವವೇ. ಪ್ರತ್ಯಕ್ಷವಾಗಿ ಎದುರಿನಿಂದ ಸೋಲಿಸಲಾಗದಿದ್ದರೆ ಹಿಂದಿನಿಂದೆರಗುವದು. 'ಏನಕೇನ ಪ್ರಕಾರೇಣ' ಉದ್ದಿಷ್ಟ ಸಾಧನೆಯಾದರಾಯಿತು. ಆ ಬಗ್ಗೆ ಅವರು ದೋಷಾರ್ಹರಲ್ಲ. ನಾವು ಮೈ ಮರೆತರೆ ಮಾತ್ರ ದೋಷವು ನಮ್ಮದೇ. ಅಂತೆಯೇ ನಾನೀಗ ವಿರೂಪಾಕ್ಷನ ಪ್ರತಿಯೊಂದು ಕೃತಿಯನ್ನೂ ನಿರೀಕ್ಷಿಸುತ್ತಲಿರುವೆನು.'

'ನಿಮಗೆ ಪೂರ್ಣ ವಿಶ್ವಾಸವೆನಿಸುತ್ತಲಿದೆಯೋ-ಇಲ್ಲವೆ ಬರಿಯ ಸಂಶಯವೋ?'

'ಸಂಶಯವೇಕೆ? ಸಂಪೂರ್ಣ ಮನವರಿಕೆಯಾಗಿದೆ. ನನ್ನಲ್ಲಿ ತಿರಸ್ಕಾರ ತಳೆದ ವಿರೂಪಾಕ್ಷ ಇಷ್ಟು ಆದರ ತೋರುವುದೆಂದಾದರೂ ಶಕ್ಯವಿದೆಯೆ? 'ಅತಿಸ್ನೇಹಃ ಪಾಪಶಂಕೀ' ಎಂಬ ಕವಿವಚನ ತೀರಾ ಸತ್ಯವಾದುದು. ಇದಲ್ಲದೆ ಇನ್ನೂ ಬೇರೆ ರೀತಿಗಳಿಂದಲೂ ನನಗೆ ಮನವರಿಕೆಯಾಗಿದೆ.' 'ಅವಾವು?'

'ಅವಾವುಗಳೇ ಇರಲಿ; ಸುಮ್ಮನೆ ಪ್ರಚ್ಛಾಪೃಚ್ಛವು ಏನೂ ಅವಶ್ಯವಿಲ್ಲ. ಮನವರಿಕೆಯಾಗಿದೆಯೆಂದರೆ ಸಾಕು.'

'ಹಾಗಾದರೆ ಪ್ರಸಿದ್ಧವಾಗಿಯೇ ಏಕೆ ಅವನ ವಿಚಾರಣೆ ನಡೆಯಿಸಬಾರದು?'

'ಹಾಂ, ಹೇಮಾ ಹಾಗೆ ಮಾಡಹೋದರೆ ಮೈಮೇಲೆ ಬರಬಹುದು."

'ಅದೇಕೆ?'

'ವಿರೂಪಾಕ್ಷನ ಬಲೆ ಇನ್ನೂ ಪೂರ್ಣ ಸಿದ್ಧವಾಗಿಲ್ಲ. ಈಗ ನಾವು ಹಲಕೆಲವರ ಬಾಯಿಮಾತಗಳನ್ನೇ ಸಾಕ್ಷಿಯಾಗಿಡಬೇಕಾದೀತಲ್ಲದೆ, ಪ್ರತ್ಯಕ್ಷ ಆಧಾರವಿಲ್ಲ. ಇನ್ನು ಜನತೆಯಲ್ಲಿಯೋ ವಿರೂಪಾಕ್ಷನ ವಿಷಯಕವಾದ ಆದರ ದಿನ ದಿನ ಬೆಳೆಯುತ್ತಲಿದೆ. ಆ ಆದರವು ಅವನ ಸುಚರಿತ್ರದ ವಿಷಯಕ್ಕಿದ್ದರೆ, ನನಗೆ ಅತ್ಯಾನಂದವಾಗುತ್ತಲಿದ್ದಿತು. ಈಗ ಜನರು ಮೋಸಹೋಗಿರುವರು. ಇರಲಿ. ಇಂತಹ ಸಮಯದಲ್ಲಿ ನಾವು ಅವನ ಮೇಲೆ ತಪ್ಪುಹೊರಿಸ ಹೋದರೆ, 'ವಿರೂಪಾಕ್ಷನ ಬೆಳೆವ ಕೀರ್ತಿ ಸಹಿಸಲಿಲ್ಲ'ವೆಂದು ಜನರು ನಮ್ಮನ್ನು ದೂರದಿರರು; ಏಕೆಂದರೆ, ನಾವು ಸಾಧಾರಣವಾಗಿ ಯಾವುದನ್ನೂ ಸಿದ್ಧಗೊಳಿಸಲು ಸಮರ್ಥರಿಲ್ಲ. ಇದಲ್ಲದೆ ಅಷ್ಟು ತ್ವರೆಯಾದರೂ

ಏಕೆ? ನಾವು ಮೈಮರೆಯದೆ ಜಾಗರೂಕರಾಗಿದ್ದರೆ, ಅವನ ಆ ಆಟವನ್ನೆಲ್ಲ ಅಲ್ಪಾವಕಾಶದಲ್ಲಿ ಹೊಡೆದು ಹಾಕಬಹುದು.'

'ಹಾಗಾದರೆ ಕೊನೆಯವರೆಗೂ ಸುಮ್ಮನಿರಬೇಕೆಂದಂತಾಯಿತು.'

'ಏಕೆ, ನಿನಗೆ ಹೇಗೆ ತೋರುತ್ತದೆ?'

'ಅದೇ ನಿಜ. ಆಧಾರವಿಲ್ಲದೆ ಮುಂದೊರೆವುದು ಮೂರ್ಖತನವಾಗಬಹುದು; ಮತ್ತು ಜಾಗ್ರತೆಯಿಂದಿದ್ದರಾಯಿತು. ಏನು ತಾನೇ ಮಾಡಿಯಾನು?'

'ನಾನಾದರೂ ಅದನ್ನೇ ಅನ್ನುವೆನು.'

'ಯೋಗ್ಯವೇ. ಇರಲಿ. ಈಗ ಯಾವ ಮಾರ್ಗದಿಂದ ಮುಂದೊರೆಯಬೇಕೆಂದು ನಿಮ್ಮ ಯೋಚನೆಯಿದೆ?'

'ನೂತನ ಕಲಾಮಂದಿರದಲ್ಲಿಯೇ ಏನೋ ಮೋಸ ನಡೆಯಲಿದೆ. ಆದುದರಿಂದ ನಾಲ್ಕೆಂಟು ಜನ ವಿಶ್ವಾಸುಗ ಗುಪ್ತಚಾರರನ್ನಿಟ್ಟು, ಅವರ ಮುಖಾಂತರ ನಾವು ಕಾರ್ಯ ಕೈಗೂಡಿಸಬೇಕು.'

'ಮೋಸ ಹೇಗೆ ನಡೆಯಬಹುದೆಂದೆನ್ನುವಿರಿ?'

'ಇದು ವರೆಗೆ ನನಗೆ ತಲುಪಿದ ವಾರ್ತೆಯೆಂದರೆ, ಅಲ್ಲಿ ಒಂದು ಭೀಕರ ಹತ್ಯಾಕಾಂಡ ನಡೆಯಲಿದೆ. ದೊರೆಗಳು ನನ್ನಿಂದ ಆರಂಭವಾಗಿ ನಮ್ಮ ಪಕ್ಷದ ಪ್ರಮುಖರ ಅಂದರೆ, ಸುಮಾರು ನೂರು-ನೂರಿಪ್ಪತ್ತು ಜನರ ಅಂತವಾಗತಕ್ಕುದಿದೆ.'

'ಅಂ! ಎಂತಹ ಭೀಕರ ಮನುಷ್ಯರವರು? ಎಷ್ಟು ಜನರ ಪ್ರಾಣಹಾನಿಗೆ ಸಿದ್ಧರಾಗಿರುವರಲ್ಲ! ಕೊಲೆ ಹೇಗೆ ನಡೆಯಬಹುದು?'

'ಅದರ ಬಗ್ಗೆ ನನಗೆ ನಿಶ್ಚಿತ ವಾರ್ತೆಯೇನೂ ತಲುಪಿರುವದಿಲ್ಲ. ಏನೋ ಮೋಸವಾಗಲಿದ್ದುದು ಮಾತ್ರ ದಿಟ. ಆ ಕಾಪಟ್ಯಕ್ಕೆ ಒಂದು ವೇಳೆ ವಿಷಪ್ರಯೋಗ ಸಾಧನವಾಗಬಹುದು.'

'ಇರಬಹುದು; ಆದರೆ ಅದರಿಂದ ಪಾರುಗಾಣಿಸುವದೆಂತು?'

'ಹೇಮಾ, ಎದೆಗುಂದಬೇಡ. ಒಂದಿಲ್ಲೊಂದು ರೀತಿಯಿಂದ ಈ ಕಂಟಕದಿಂದ ಪಾರುಗಾಣುವ ಬಗ್ಗೆ ನನಗೆ ಪೂರ್ಣವಿಶ್ವಾಸವಿದೆ. ನೋಡುವಾ, ಪಂಪಾಪತಿ ಹೇಗೆ ಪ್ರೇರಿಸುವನೋ?'

## ೧೧ ಸಮಾರಂಭ.

'ಬಹುತ ಅಚ್ಛಾ' 'ಬಹುತ ಅಚ್ಛಾ' 'ಬಹಳ ಸುಂದರ' 'ಬಹಳ ಸುಂದರ' 'ಅಲ್ಲಿ ನೋಡಿ ಆ ರಾಗ ಹೇಗಿದೆ?' 'ಪ್ರತ್ಯಕ್ಷ ಗಂಧರ್ವನವನು.' 'ಅಹಾ, ಏನು ಸ್ವರವದು!' 'ಆ ಗಾಯನವನ್ನೇನು ಮಾಡುವಿರಿ? ಈ ನರ್ತನ ನೋಡಿ ಹೇಗಿದೆ?' 'ಅಹಾ! ಬಲು ಸುಂದರ' 'ಏನು ನರ್ತನವಿದು?' 'ಅವಳ ಶರೀರದಲ್ಲಿ ಅಸ್ಥಿಯ ಅಸ್ತಿತ್ವವೇ ಇಲ್ಲವೆ?'

'ಸೂತ್ರದ ಗೊಂಬೆಯಂತೆ ಎತ್ತ ಬೇಕತ್ತ ಮಣಿಯುವಳು.' 'ಆ ಪದನ್ಯಾಸ ನೋಡು, ಎಷ್ಟು ಚಪಲವಾಗಿದೆ? ಪಾದಗಳು ಭೂಮಿಗೆ ತಲುವಂತೆ ತೋರುವದೇ ಇಲ್ಲ. ಆದರೂ ಕಾಲೊಳಗಿನ ಗೆಜ್ಜೆಗಳು ತಾಲಕ್ಕೆ ಸರಿಯಾಗಿಯೇ ನಾದ ಗೆಯ್ಯುತ್ತಲಿವೆ!'

ಈ ಉದ್ಗಾರಗಳು ಯಾವದೊಂದು ಸಂಗೀತ ಕೂಡಿದಲ್ಲಿಯವು, ಎಂದು ಚನ್ನಾಗಿ ತಿಳಿಯುವಂತಿದೆ; ಮತ್ತು ವಾಸ್ತವ ಸಂಗತಿಯಾದರೂ ಅದೇ ಆಗಿದೆ.

ವಿರೂಪಾಕ್ಷನು ಸ್ವತಃ ಟೊಂಕಕಟ್ಟಿ ಯುವರಾಜನ ಕೀರ್ತಿಯ ಸ್ಮಾರಕವಾಗಿ ಮಲ್ಲಿಕಾರ್ಜುನ ಮಂದಿರದ ನಿರ್ಮಾಣಕ್ಕೆ ನಿಂತುದೂ, ಅದನ್ನು ಅಂದವಾಗುವಹಾಗೆ ಸಿದ್ಧಗೊಳಿಸುತ್ತಲಿದ್ದುದೂ ಹಿಂದೆ ಬಂದಿದೆ. ಎಲ್ಲರ ಅಪೇಕ್ಷೆಯಂತೆ ಕಟ್ಟಡ ಬಲು ಸೊಗಸಾಯಿತು. ನೋಡಿದವರೆಲ್ಲರೂ ಕಂಡು ಹರುಷಬಡದಿರಲಿಲ್ಲ. ತನ್ನ ಯಾವ ಲಾಭವೂ ಇಲ್ಲದೆ ಬರಿಯ ಯುವರಾಜನ ಮೇಲಿನ ಪ್ರೇಮದಿಂದ ವಿರೂಪಾಕ್ಷ ಅಷ್ಟು ದಕ್ಷತೆ ವಹಿಸಿ ನಿಂತುದಕ್ಕೆ ಎಲ್ಲರೂ ಅವನನ್ನು ಬಹಳವಾಗಿ ಹೊಗಳಿದರು. ಕಟ್ಟಡವು ಸುಂದರವಾದಂತೆ, ಅದನ್ನು ತೆರೆಯುವ ಸಮಾರಂಭವಾದರೂ ವಿಜೃಂಭಣೆಯಿಂದಲೇ ನೆರವೇರತಕ್ಕದೆಂದು ವಿರೂಪಾಕ್ಷ ಮತ್ತು ಆತನ ತಂದೆ ಪ್ರತಾಪದೇವರಾಯನ ಇಚ್ಛೆ ಯಿದ್ದಿತು. ಇಬ್ಬರೂ ಒಂದು ಸುಮುಹೂರ್ತವನ್ನು ನಿರ್ಣಯಿಸಿದರು. ಆಗ್ಗೆ ವಿರೂ ಪಾಕ್ಷ ಯುವರಾಜನ ಬಳಿಗೆ ಬಂದನು.

'ಯುವರಾಜ, ಕಟ್ಟಡದ ಕಾರ್ಯ ಬಹುಶಃ ಕೊನೆಗಂಡಂತಾಗಿದೆ'

'ಅಹುದು. ನಾನು ಮುಂಜಾವಿನಲ್ಲಿ ಅಲ್ಲಿ ಹೋಗಿದ್ದೆನು.'

'ಹೇಗಾಗಿದೆ; ನಿನ್ನ ಮನಸ್ಸಿಗೆ ಹೇಗೆನಿಸಿತು?'

'ನಿಜವಾಗಿಯೂ ಕರ್ನಾಟಕಕ್ಕೆ ಒಪ್ಪತಕ್ಕ ಕಟ್ಟಡವು. ಕಲೆಯ ಕೇಂದ್ರ ಸ್ಥಾನವೇ ಆದಾಗಿದೆ. ನಿಜವಾಗಿಯೂ ಒಂದು ಅಜರಾಮರ ಕಲಾಕೃತಿಯ ನಿರ್ಮಾ ಣದ ಅತುಲ ಶ್ರೇಯಸ್ಸು ನಿನ್ನದಿದೆ.'

'ನಿಮ್ಮೆಲ್ಲರ ಉತ್ತೇಜನವಿಲ್ಲದಿದ್ದರೆ ನಾನೇನು ಮಾಡುತ್ತಲಿದ್ದೆನು? ಇರಲಿ. ಈಗ ನನಗೆ ಒಂದು ವಿಷಯ ವಿಚಾರಿಸಬೇಕಾಗಿದೆ.'

'ಅದೇನು?'

'ಕಟ್ಟಡವು ಸುಂದರವಾಗಿದೆಯೆಂದು ನೋಡಿದವರೆಲ್ಲರೂ ಹೇಳುತ್ತಾರೆ.'

'ಸುಂದರವಾದುದಕ್ಕೆ ಸುಂದರವೆನ್ನುವದು ಸಹಜವೇ.'

'ಅದರಂತೆ ಪ್ರಾರಂಭೋತ್ಸವವನ್ನಾದರೂ ಅಂದವಾಗುವಂತಾಚರಿಸಬೇಕೆಂದು ನನ್ನ ವಿಚಾರವಿದೆ.'

'ಅದು ಯೋಗ್ಯವೇ'

'ಅಂದು ನೃತ್ಯ-ಸಂಗೀತ ಮೊದಲಾದ ಕಾರ್ಯಕ್ರಮಗಳನ್ನೇರ್ಪಡಿಸಿ ಶ್ರೇಷ್ಠ ಕಲಾವಂತರನ್ನು ಸನ್ಮಾನಿಸಬೇಕೆನ್ನುವೆ?'

'ಅಹುದು; ಹಾಗೆ ಮಾಡಲೇಬೇಕು.'

'ಅಂದೇ ನಮ್ಮ ರಾಜ್ಯದ ಸಾಮಂತ ಸರದಾರರಿಗೆ ವಿಜೃಂಭಣೆಯ ಔತಣ ವೇರ್ಪಡಿಸಬೇಕೆಂದಿರುವೆನು.'

'ಓಹೋ! ಅವಶ್ಯವಾಗಿ ಮಾಡು.'

'ಮತ್ತೆ ಅಂದಿನ ಸಮಾರಂಭಕ್ಕೆ ನೀನೂ ಪ್ರಭುಗಳೂ ತಪ್ಪದೆ ಬರಬೇಕು.'

'ಇದೆಂತಹ ಮಾತು ನಿನ್ನದು? ಬಾರದೇನು? ನಾನಂತೂ ತಪ್ಪದೆ ಬರುವೆನು. ಪ್ರಭುಗಳಾದರೂ ಬಾರದಿರರು.'

ಹೀಗೆ ವಿರೂಪಾಕ್ಷ ಯುವರಾಜನ ಸಮ್ಮತಿ ಪಡೆದು ಹೊರಟು ಹೋದನು.

ಅತ್ತ ಸ್ವತಃ ಪ್ರತಾಪದೇವರಾಯನು ರಾಯನ ಬಳಿಗೆ ಹೋಗಿ ಪ್ರಾರಂಭೋತ್ಸವವನ್ನು ಸಂಕ್ಷಿಪ್ತವಾಗಿ ಬಣ್ಣಿಸಿದ್ದಲ್ಲದೆ, ಆಮಂತ್ರಣವಿತ್ತನು. ರಾಯನಾದರೂ ಅತೀವ ಆನಂದದಿಂದ ಸಮ್ಮತಿಸಿದನು.

ಪ್ರಾರಂಭೋತ್ಸವ ತೀರಾ ಸಮೀಪಿಸಿತು. ಕಾರ್ಯಕ್ರಮವೆಲ್ಲವೂ ನಿಶ್ಚಿತ ವಾಯಿತು. ಸಂಗೀತ-ನೃತ್ಯಾದಿಗಳಿಗೆ ಸುಪ್ರಸಿದ್ಧ ಕಲಾವಂತರಿಗೆ ಆಮಂತ್ರಣಗಳು ಹೋದುವು. ವಿಜಯನಗರದ ಪ್ರಜೆಗಳಲ್ಲೆಲ್ಲ ಒಂದೇ ಒಂದು ಚರ್ಚೆಯಾಗಿದ್ದಿತು. ವಿರೂಪಾಕ್ಷ ಮತ್ತು ಪ್ರತಾಪದೇವರಾಯರ ಸ್ತುತಿ ಸಹಸ್ರಮುಖದಿಂದ ನಡೆದಿದ್ದಿತು. ಆ ತಂದೆ-ಮಕ್ಕಳ ಗುಣಗಾನದಲ್ಲಿ ಆಳುಪರಸು ಮತ್ತು ಯುವರಾಜರ ಚರಿತ್ರೆ ಕೊಂಚ ಹಿಂದೆ ಬಿದ್ದಂತೆಯೇ ಆಗಿದ್ದಿತೆನ್ನುವಂತೆ ತೋರುತ್ತಲಿದ್ದಿತು. ವಿವಿಧ ಸಿದ್ಧತೆ ಗಳು ಬಹಳ ದಕ್ಷತೆಯಿಂದ ಮುಂದೊರೆದಿದ್ದುವು.

ಒಂದು ದಿನ ಸಾಯಂಕಾಲದಲ್ಲಿ ಹೇಮಾಂಬಿಕೆ ತನ್ನ ಅರಮನೆಯ ಕೋಣೆ ಯೊಂದರಲ್ಲಿ ವಿಚಾರಮಗ್ನಳಾಗಿ ಕುಳಿತಿದ್ದಳು. ಮನದಲ್ಲಿ ಭಿನ್ನ ಭಿನ್ನ ವಿಚಾರ ಗಳು ಒಂದೇಸಮನೆ ಸುತ್ತುತ್ತಲಿದ್ದುವು. ರಾಜಮನೆತನದ ರಕ್ಷಣೆ ಹೇಗೆ ಆದೀತೆಂ ಬುದೇ ಆಕೆಯ ಯೋಚನೆಯಾದ್ದಿತು.

ಆ ಸಮಯಕ್ಕೆ ಸರಿಯಾಗಿ ಯುವರಾಜ ಅಲ್ಲಿಗೆ ಬಂದನು.

'ಹೇಮಾಂಬಿಕೆ ಮಲ್ಲಿಕಾರ್ಜುನ ಮಂದಿರದ ಪ್ರಾರಂಭೋತ್ಸವ ಸಮೀಪಿಸಿತು.'

'ವಿರೂಪಾಕ್ಷನ ಕಪಟಸ್ಫೋಟಕ್ಕೂ ಅವಕಾಶವುಳಿಯಲಿಲ್ಲ.'

'ಎರಡೂ ಒಂದೇ ಬಗೆಯಾಗಿದೆ.'

'ಯುವರಾಜ, ಕಪಟವು ಹೇಗೆ ಸಾಧಿಸಬಹುದೆಂದು ನಿಮ್ಮ ವಿಚಾರವಿದೆ.'

'ನಿನ್ನ ಕಲ್ಪನೆಯೇನಿದೆ?'

'ನನಗೇನೂ ನಿಶ್ಚಿತ ಸಂಗತಿ ತಿಳಿದಿಲ್ಲ; ಆದರೂ ನನ್ನದೊಂದು ಕಲ್ಪನೆಯಿದೆ.'

'ನಾನಾದರೂ ಅದನ್ನೇ ಕೇಳಿದೆನು.'

'ಆಹಾರದಲ್ಲಿ ವಿಷಪ್ರಯೋಗವಾಗಬಹುದೆಂದು ತೋರುತ್ತದೆ. ನಿಮಗೆ ಹೇಗೆ ನಿಸುತ್ತದೆ?'

'ನನ್ನ ವಿಚಾರವಾದರೂ ಹಾಗೆಯೇ ಇದೆ. ಇದರ ಹೊರತು ಇನ್ನಾವ ಕಪ

ಟಕ್ಕೂ ಅವಕಾಶವಿರುವಂತೆ ಕಾಣಬರುವದಿಲ್ಲ.'

'ಅಡಿಗೆಯ ವ್ಯವಸ್ಥೆ ನೀವೇ ವಹಿಸಿಕೊಳ್ಳಬರುವದೋ.'

'ಛೆ! ಸಾಧ್ಯವಿಲ್ಲ.'

'ಏಕೆ?'

'ಏಕೆಂದರೇನು ಹೇಮಾ? ನನ್ನ ಸಲುವಾಗಿಯೇ ಎಂದು ಅವನು ಇಷ್ಟೆಲ್ಲ ಸಾಹಸ ಮಾಡುತ್ತಲಿರಲು, ನನಗೆ ಏನಾದರೂ ಕೈಕೊಳ್ಳಲು ಅವಕಾಶ ಕೊಡಲು ಸಾಧ್ಯವೇ ಇಲ್ಲ; ಮತ್ತು ಪ್ರಭುಗಳಾದರೂ ಸಮ್ಮತಿಸುವದು ಸಾಧ್ಯವಿಲ್ಲ. ಇದಲ್ಲದೆ ಹಾಗೆ ಮಾಡುವದು ಇಷ್ಟವೂ ಅಲ್ಲ.'

'ಅದೇಕೆ?'

'ಈಗ ಆಹಾರದ ದ್ವಾರಾ ಆಗಬಹುದಾದ ವಿಷಪ್ರಯೋಗ ತಪ್ಪಿದರೆ, ಅವರ ಮನದಲ್ಲಿನ ವಿಷವೇನಾದರೂ ನಾಶವಾಗಬಹುದೆ? ಹಾಗೆಯೇ ಉಳಿದ ಆ ವಿಷವು ಒಂದಿಲ್ಲೊಂದು ಸಲ ಘಾತಿಸದೇ ಬಿಡತಕ್ಕುದಲ್ಲ. ನಾವು ಸಾವಧರಾಗಿರುವಾಗಲೇ ಅವರ ಕಾರ್ಯಕ್ರಮ ಕೊನೆಗೊಳ್ಳುವುದೊಳಿತಲ್ಲವೆ?'

'ಹಾಗಾದರೆ--'

'ಛೆ! ಆ ಬಗ್ಗೆ ನೀನು ಅತ್ಯಲ್ಪವಾದರೂ ಶಂಕಿಸಬೇಡ. ನಮಗೆ ಆಹಾರದಲ್ಲಿ ವಿಷಪ್ರಯೋಗವಾದ ಬಗ್ಗೆ ಊಟಕ್ಕೆ ಬಡಿಸುವ ಮೊದಲೇ ನಿಶ್ಚಿತ ವಾರ್ತೆ ತಿಳಿಯುವದಿಲ್ಲವೆ?'

'ಓಹೋ! ಆ ಬಗ್ಗೆ ಸಂಶಯವಿಲ್ಲ. ನಮ್ಮ ಚಾಣಾಕ್ಷ ಸೇವಿಕೆಯರು ಬೇಕಾದಾಗ್ಗೆ ಬೇಕಾದ ಸಂಗತಿ ತಪ್ಪದೆ ತಿಳಿಸುವರು.'

'ಸರಿ. ಆಯಿತ್ತ ಸಮಯದಲ್ಲಿ ಆಹಾರದ ಪರೀಕ್ಷೆ ಮಾಡಿಸಿದರಾಯಿತು. ಅವರ ಕಪಟಸ್ಫೋಟವೂ ಆಗುವದು, ಪ್ರಾಣಹಾನಿಯೂ ತಪ್ಪುವದು.'

'ಅಷ್ಟಾದರೆ ಸಾಕಲ್ಲವೆ?'

'ಆ ಬಗ್ಗೆ ನೀನು ಅಲ್ಪವಾದರೂ ಯೋಚಿಸಬೇಡ. ಪಂಪಾಪತಿ ನಮ್ಮ ಬೆನ್ನ ಮೇಲಿರುವನೆಂಬದನ್ನು ಮರೆಯಬೇಡ.'

ಹೀಗೆ ಅವರೀರ್ವರಲ್ಲಿ ವಿಶೇಷವಾಗಿ ಚರ್ಚೆಯಾಗಿದ್ದಿತು; ಮತ್ತು ತಮ್ಮ ತಮ್ಮ ಹೊಣೆಯರಿತು ಕಾರ್ಯ ಕೈಕೊಂಡಿದ್ದರು.

ಹೇಮಾಂಬಿಕೆ-ಯುವರಾಜರ ಭಾಷಣದಲ್ಲಿ ಚರ್ಚಿತವಾದ ಮಲ್ಲಿಕಾರ್ಜುನ ಮಂದಿರದ ಪ್ರಾರಂಭೋತ್ಸವದ ದಿನದ ವಿರೂಪಾಕ್ಷನ ಸಿದ್ಧತೆಯೂ ಉತ್ಸಾಹವೂ ಅವರ್ಣನೀಯವಾಗಿದ್ದವು. ಅಂದು ಉತ್ಕೃಷ್ಟ ತರಗತಿಯ ಕಲಾವಂತರಿಗೆ ಆಮಂತ್ರಣವಿತ್ತಿದ್ದನು. ರಾಜದರ್ಬಾರ, ರಾಜಾತಿಥ್ಯ, ರಾಜಮನ್ನಣೆ! ಕೇಳುವದೇನು? ಅನೇಕ ಕಲಾವಿದರು ನಾ ಮುಂದೆ ನಾ ಮುಂದೆ ಎಂದು ನುಗ್ಗುತ್ತಲಿದ್ದರು. ಎಲ್ಲರೂ ತಮ್ಮ ತಮ್ಮ ಕಲಾನೈಪುಣ್ಯತೆಯಿಂದ ವಿಜಯನಗರದ ರಾಜಮನೆತನದವರನ್ನು,

ಸರದಾರ ಸಾಮಂತರನ್ನು, ಸುಪ್ರತಿಷ್ಠಿತ ನಾಗರಿಕರನ್ನು ಆನಂದಗೊಳಿಸುತ್ತಲಿದ್ದರು; ತಲೆದೂಗಿಸುತ್ತಲಿದ್ದರು. ಆ ಸಮಯದ ಸ್ವರ್ಗೀಯ ನೋಟವೇ ನೋಟ! ಭರತ ವರ್ಷದಲ್ಲೆಲ್ಲ ತಿರುಗಿ ಭಿನ್ನ ಭಿನ್ನ ಕಲಾಭ್ಯಾಸ ಮಾಡಿದ ಕಲಾವಂತರು, ತಾಂಡವ ನೃತ್ಯ, ತ್ರಿಭಂಗಿ, ಬುದ್ಧ-ಪದ್ಮಾಸನ ಮುಂತಾದ ಭಿನ್ನ ಭಿನ್ನ ಭಾವಗಳನ್ನು ಬಹು ಸುಂದರವಾಗಿ ಮಾಡಿ ತೋರಿಸುತ್ತಲಿದ್ದರು. ನೃತ್ಯಕಲೆಯೊಡನೆ ಒಂದಾಗಿ ಹೋಗಿ ಕಲೆಯೇ ಮೈಗೊಂಡು ಬಂದಂತೆ ಅವರು ಕಾಣುತ್ತಲಿದ್ದರು. ಸೂತ್ರಬದ್ಧ ಕೈಕಾಲು ಗಳಂತೆ ಬೇಕುಬೇಕಾದಾಗ ಹಾಗೆ ಮಣಿಯುವ ಆ ದೇಹ-ಮುಖದಲ್ಲಿ ಮತ್ತೆ ಮತ್ತೆ ಮೈದೋರಿ ಮಾಯವಾಗುವ ವಿವಿಧ ಭಾವಗಳು, ಒಂದೊಂದು ರಸವನ್ನೂ ಸುಂದರ ವಾಗಿ ತೋರುವ ಆ ಭಂಗಿ, ತಾಲಕ್ಕೆ ತಕ್ಕಂತೆ ಮೃದುವಾಗಿ ಇಡುವ ಆ ಪದನ್ಯಾಸ, ಕಾಲಲ್ಲಿ ಮಧುರ ಧ್ವನಿಗೆಯ್ಯುವ ಆ ಗೆಜ್ಜೆಗಳು--ಹೀಗೆ ಸಕಲ ಸೌಂದರ್ಯ ಸಾರ ದಿಂದ ಆ ಸುಂದರ ನರ್ತಕಿಯರು ನೋಟಕರ ಕಣ್ಮನಗಳನ್ನು ಸೆಳೆದು ಬಿಟ್ಟರು.

ಅದೇ ಸ್ಥಿತಿ ಗಾಯಕರದು. ಶಾಪಭ್ರಷ್ಟ ಗಂಧರ್ವರೇ ತಾವೆಂಬಂತೆ ಸುಮಧುರ ಕಂಠದಿಂದ ಅತ್ಯಂತ ಆನಂದದಾಯಕವಾಗಿ ಹಾಡುತ್ತಲಿದ್ದ ಆ ಸಂಗೀತ ಸಕಲ ಸಮೂಹವನ್ನೂ ಗಂಧರ್ವಲೋಕಕ್ಕೆಳೆದೊಯ್ದಿತು ಒಂದೊಂದೇ ಲಯ, ಒಂದೊಂ ದೇ ತಾನ, ಒಂದೊಂದೇ ರಾಗಗಳು ಹೃದಯವನ್ನು ಹಿಂಡಿ ಬಿಡುವಂತಿದ್ದವು.

ಆ ಕಾರ್ಯಕ್ರಮ ಅತೀವ ಸುಂದರವಾಗಿದ್ದಿತು. ಅಂತೆಯೇ ನೋಡಲು ಕುಳಿ ತವರಲ್ಲೆಲ್ಲ ನವಚೈತನ್ಯವನ್ನೇ ಹುಟ್ಟಿಸಿ ಬಿಟ್ಟಿದ್ದಿತು.

'ಅಚ್ಛಾ ಅಚ್ಛಾ, ಬಹುತ ಅಚ್ಛಾ.' 'ಬಲು ಸುಂದರ ಬಲು ಸುಂದರ' ಎಂಬ ಉಭಯ ಭಾಷೆಯಲ್ಲಿಯೂ ಉದ್ಗಾರಗಳು ಮೇಲಿಂದ ಮೇಲೆ ಕೇಳ ಬರುತ್ತಲಿದ್ದವು. ನೋಟಕರ ಚಲನ-ವಲನ ಇಷ್ಟೇ ಇರಲಿಲ್ಲ. ಅದು ಪ್ರತ್ಯಕ್ಷವಾಗಿ ಕೇಳ ಬರುತ್ತ ಲಿದ್ದಿತು ಅಪ್ರತ್ಯಕ್ಷವಾದ ಚಳವಳ ಇನ್ನೂ ಬಹಳ ವಿದ್ದಿತು. ಅದು ಕೊಂಚ ಸೂಕ್ಷ್ಮಾವಲೋಕನಕ್ಕೆ ಕಾಣುವಂತಿದ್ದಿತು.

ಯಾವದೊಂದು ಕಾರ್ಯಕ್ರಮವಿದ್ದರೆ ಅದರಲ್ಲಿ ಭಾಗವಹಿಸಿದವರಲ್ಲಿ ಚೈತನ್ಯ ಕಾಣಲೇಬೇಕು. ಅದು ಸ್ವಾಭಾವಿಕವಾದುದು. ಏಕೆಂದರೆ ಅವರವರಲ್ಲಿ ಪ್ರತ್ಯಕ್ಷ ಭಾಗ ವಹಿಸಿರುತ್ತಾರೆ. ಈಗ 'ಫುಟ್ ಬಾಲ' (ಕಾಲು ಚೆಂಡು) ಆಡುತ್ತಲಿರುವವರಲ್ಲಿ ಹುರುಪು ಕಾಣಬರುವದು ಸ್ವಾಭಾವಿಕವೇ; ಆದರೆ ನೋಟಕರ ಹುಮ್ಮಸ್ಸು ಕಡಿಮೆ ಯಿರುವದಿಲ್ಲ. ಅವರಾ ಭಾವಭಂಗಿಗಳನ್ನು ಕೊಂಚ ಆಟಕರನ್ನು ಮರೆತು ನೋಟಕ ರನ್ನು ನೋಡಿದರೆ ತಿಳಿವಂತಿರುತ್ತವೆ. ಸುಮ್ಮನೆ ಕುಳಿತಿದ್ದರೂ ಚೆಂಡು ಕೆಳ ಬಂದಾಗ್ಗೆ ಅನೇಕರ ಕಾಲುಗಳು ಆ ಚೆಂಡನ್ನೊದೆಯಲು ಅವರು ಆಡುವ ಸ್ಥಳದಲ್ಲಿಲ್ಲದಿದ್ದರೂ ಮೇಲೆ ಬರುತ್ತವೆ. ಕೈ ಮೇಲಾಗುತ್ತವೆ. ಕೇಕೆಗಳಿಗಂತೂ ಮಿತಿಯೇ ಇರುವದಿಲ್ಲ. ಕ್ರಿಕೆಟ ಆಟದಲ್ಲಿಯಂತೂ ಇನ್ನೂ ಸಂಭ್ರಮವಿರುತ್ತದೆ. ಒಗೆಯುವವನೊಬ್ಬ ಹೊಡೆ ಯುವವನೊಬ್ಬ. ಆದರೂ ಎಲ್ಲ ಆಟಗಾರರೂ ಚೆಂಡು ಒಗೆಯುವಂತೆ ಕೈ ಬೀಸುತ್ತ

ಲಿರುತ್ತಾರೆ. ಚೆಂಡಿಲ್ಲದಿದ್ದರೂ ಕೊನೆಗೆ ಒಂದು ಕಲ್ಲನ್ನಾದರೂ ಒಗೆಯುತ್ತಾರೆ. ಕೈಯಲ್ಲಿ ಬ್ಯಾಟಿದ್ದವ ಚೆಂಡು ಹೊಡೆಯುವ ಸರತಿಯಿಲ್ಲದಿದ್ದರೆ, ಒಂದು ಕಲ್ಲು ತಾನೇ ಒಗೆದು ಹೊಡೆಯುತ್ತಾನೆ. ಈ ಮೋಜು ಇನ್ನೂ ನೋಡಬೇಕಾದರೆ ಸದ್ಯದ ಚಲಚ್ಚಿತ್ರಪಟಗಳಲ್ಲಿ ಇಬ್ಬರು ವೀರರಲ್ಲಿ ನಿಕರದ ಕಾದಾಟ ತೆರೆಯ ಮೇಲೆ ನಡೆದಿರಬೇಕು. ಆ ಸಮಯ ಪ್ರೇಕ್ಷಕರಲ್ಲಿ ಉತ್ಸಾಹ ವರ್ಣನೀಯವಾಗಿರುತ್ತದೆ. ಅದರ ಪರಿಣಾಮವಾಗಿ ಸಮೀಪದಲ್ಲಿ ಕುಳಿತವರು ಏಟೇ ತಿನ್ನಬೇಕಾಗುತ್ತದೆ!

ಇಂಥಹ ಉತ್ಸಾಹ ಅಂದಿನ ಗಾನಕೂಟದಲ್ಲಿ ಕಾಣಬರುವದು ಸ್ವಾಭಾವಿಕವು. ಒಬ್ಬ ಉತ್ಕೃಷ್ಟ ಹಾಡುಗಾರನ ಗಾಯನ ನಡೆದಿತ್ತು. ಆತನು ಬಹು ಸುಂದರವಾಗಿ ಹಾಡುತ್ತಲಿದ್ದನು. ಆದರೂ ಆ ಎಲ್ಲ ಶಾಸ್ತ್ರಶುದ್ಧ ಸಂಗೀತ ತಿಳಿಯುವವರೆಷ್ಟು ಜನರಿರುತ್ತಾರೆ? ಬಹಳ ಜನರಿಗೆ ಗಾನ-ತಾಲಗಳ ಪರಿಚಯವೇ ಇರುವದಿಲ್ಲ. ಅಂತಹ ಅನೇಕರೂ ಅಲ್ಲಿ ಬಂದಿದ್ದರು. ಅನೇಕರು ಒಳ್ಳೇ 'ಝೋಕಾ'ಗಿ ಉಡುಪು ಧರಿಸಿದ ಔರಂಗಜೇಬನ ಅಪರಾವತಾರಿಗಳಂತಹರೂ ಇಲ್ಲದಿರಲಿಲ್ಲ. ಅವರು ಬಂದುದು ತಮಗೆ ಸಂಗೀತದಲ್ಲಿ ಜ್ಞಾನವಿಲ್ಲವೆಂಬ ಅಪಹಾಸ್ಯಕ್ಕೆ ಗುರಿಯಾಗಕೂಡದೆಂಬ ಬಯಕೆಗೆ. ತಮಗೆ ತಿಳಿಯದಿದ್ದರೂ 'ಆಹಾ! ಎಷ್ಟು ಸುಂದರ!' ಎಂದು ಕಂಠತಿರುವುತ್ತಾರೆ, ಹುಬ್ಬು ಹಾರಿಸುತ್ತಾರೆ. ಯಾರಾದರೂ ಕೊಂಚ ಸಂಗೀತ ತಿಳಿದವರು ರಾಗ-ತಾಲಗಳನ್ನಂದರಾಯಿತು. ತಮಗದರ ಪರಿಚಯ ಮೊದಲೇ ಇದ್ದಂತೆ ನಟಿಸುತ್ತಾರೆ ಎಲ್ಲರೂ ನಟನೆಯವರೇ ಇರದಿದ್ದರೂ, ಅನೇಕರಿರುವದಂತೂ ದಿಟವೇ. ಅಂತಹ ಅನೇಕರಲ್ಲಿ ಸ್ವಲ್ಪ ಜನ ಕೊನೆಯ ವರೆಗೂ ತಮ್ಮ ನಟನೆ ಮುಂದುವರಿಸುತ್ತಾರೆ; ಆದರೆ ಉಳಿದ ಬಹಳ ಜನರಿಗೆ ಬೇಗನೆ ಮೊಬ್ಬು ಬರುವದುಂಟು. ಹಾಗೆ ಅಂದು ಅನೇಕರು ತಲೆತೂಗುತ್ತಲೆ ಇದ್ದರು. ಅಲ್ಲಲ್ಲಿ ತಾಲಗಳನ್ನು ಬಾರಿಸುತ್ತಲಿದ್ದವರೂ, ಸಂಗೀತಗಾರನ ಜೊತೆಗೆ ತಮ್ಮ ಕಂಠಸ್ವರ ಕೂಡಿಸುತ್ತಲಿದ್ದವರೂ ಇದ್ದೇ ಇದ್ದರು. ಸಂಗೀತ ಬಲ್ಲವರಿಗೆ ಸಂಗೀತ ಕೂಟದಿಂದಾಗುವ ಮನರಂಜನೆ, ಸಂಗೀತವರಿಯದವರಿಗೆ ನೋಟಕ ಸಮೂಹದತ್ತ ನೋಡುತ್ತ ಕುಳಿತರೆ ದೊರೆವಂತಿದ್ದಿತು.

ಸಂಗೀತಕೂಟ ಮುಗಿಯುತ್ತಲೆ ನರ್ತನಕ್ಕಾರಂಭವಾಯಿತು. ಆಗಂತೂ ನೋಟಕರ ಧನ್ಯೋದ್ಗಾರಗಳೂ, ಭಾವಭಂಗಿಗಳೂ ಅವರ್ಣನೀಯವಾಗಿದ್ದುವು. ಅಂದಿನ ಅನುಪಮ ನರ್ತನ ನೋಡುತ್ತಲೆ ನಿರ್ಜೀವ ಪದಾರ್ಥಗಳೂ ಚೇತನಗೊಂಡು ನರ್ತಿಸುವಂತೆ, ಜೀವಸೃಷ್ಟಿಯು-ಅದರಲ್ಲಿಯೂ ಕಲೋಪಾಸಕ ಮಾನವನ ಅವಸ್ಥೆ ಪರಮಾತ್ಮನಿಗೇ ಅರಿಕೆ. ಪ್ರತಿಯೊಬ್ಬನ ಕಾಲು, ಕೈ, ಕಣ್ಣು, ಬಾಯಿಗಳು ನರ್ತಕಿಗಿಂತಲೂ ಒಂದು ಮಾರು ಮುಂದೇ ಇದ್ದವು. ಅಂದಿನಾ ಸುಂದರ ನರ್ತನಕೂಟವನ್ನು ಬಣ್ಣಿಸುವದು ಸಾಧ್ಯವಿಲ್ಲ. ಅತ್ಯಂತ ಸುಂದರವಾದ ಆ ನರ್ತನವು ನೋಟಕರನ್ನು ಇಂದ್ರನಮರಾವತಿಗೆಳೆದೊಯ್ದು ಅಲ್ಲಿಂದ ಕೆಳಕ್ಕೆ ತಂದು ಬಿಟ್ಟಿತು!

ಹೀಗೆ ಮನರಂಜನೆಯ ವಿವಿಧ ಕಾರ್ಯಕ್ರಮಗಳು ನಡೆದುವು. ಆ ಮೇಲೆ ಅಂದಿನ ಕಾರ್ಯದ ಉದ್ದೇಶವನ್ನೂ ಅದರ ಮಹತ್ವವನ್ನೂ ತಿಳಿಸಲು ವಿರೂಪಾಕ್ಷ ಎದ್ದು ನಿಂತನು ಯುವರಾಜ ಮಲ್ಲಿಕಾರ್ಜುನ ಮೊದಲೇ ಬಂದು ಉನ್ನತ ಆಸನ ದಲ್ಲಿ ವಿರಾಜಿಸಿದ್ದನು. ಪ್ರಭುಗಳಿಗೆ ಆಗಲೆ ಕರೆ ಹೋಗಿದ್ದಿತು; ಆದರೆ ಸಂಗಣ್ಣಮಂತ್ರಿ ಗಳೊಡನೆ ಏನೋ ಒಂದು ವಿಚಾರದಲ್ಲಿ ಮಗ್ನರಾದ ಮೂಲಕ ಅವರು ಬಂದಿರಲಿಲ್ಲ. ಉಪಾಹಾರದ ಸಮಯಕ್ಕೆ ಬರುವೆವೆಂದು ಹೇಳಿ ಕಳುಹಿದ್ದರು. ಆದರಂತೆ ಭಿನ್ನ ಭಿನ್ನ ಕಾರ್ಯಕ್ರಮಗಳು ಕೊನೆಗೊಳ್ಳಲು, ವಿರೂಪಾಕ್ಷ ಯುವರಾಜನ ಶೌರ್ಯೌ ದಾರ್ಯಗಳನ್ನು ಬಹಳವಾಗಿ ಹೊಗಳಿದನು. ಪ್ರತಾಪದೇವರಾಯನು ಆ ಮೇಲೆ ಯುವರಾಜನ ವಿಷಯವಾಗಿಯೂ ತಾವು ಕೈಕೊಂಡಿದ್ದ ಕಾರ್ಯದ ವಿಷಯವಾಗಿ ಯೂ ನಾಲ್ಕು ಮಾತು ಹೇಳಿದನು.

ಈ ಎಲ್ಲ ಕಾರ್ಯಕ್ರಮ ಕೊನೆಗೊಂಡರೂ. ಪ್ರಭುಗಳೂ ಸಂಗಣ್ಣ ಮಂತ್ರಿ ಗಳೂ ಬಂದಿರಲಿಲ್ಲ. ಅದಕ್ಕೆ ವಿರೂಪಾಕ್ಷನಿಗೆ ಬಹಳ ಕಳವಳವಾಯಿತು. ಜನ ರೆಲ್ಲರೂ ವಿರೂಪಾಕ್ಷನ ಈ ವರ್ತನದಿಂದ ಬಹಳ ಸಂತುಷ್ಟರಾದರು. ಪ್ರಭುಗಳು ಬಾರದ್ದಕ್ಕೆ ಕಳವಳಪಟ್ಟದ್ದಕ್ಕಂತೂ ಅವರು ವಿರೂಪಾಕ್ಷನನ್ನು ಬಹಳ ಹೊಗಳಿದರು.

ವಿರೂಪಾಕ್ಷ ಮತ್ತು ಪ್ರತಾಪದೇವರಾಯರೀರ್ವರೇ ಏಕಾಂತ ಸ್ಥಳದಲ್ಲಿ ಮುಂದಿನ ಯೋಚನೆ ಮಾಡುತ್ತಲಿದ್ದರು:

ವಿರೂಪಾಕ್ಷ:--ಈಗೇನು ಮಾಡಬೇಕು?

ಪ್ರತಾಪ:--ನಾನಾದರೂ ಅದೇ ಯೋಚನೆಯಲ್ಲಿರುವೆನು. ಅವರೀರ್ವರೂ ಬರುವವರೆಗೆ ತಡೆಯುವದೆಂದರೆ, ಯಾವ ಸಮಯಕ್ಕೆ ನಮ್ಮ ಮೋಸ ಬಯಲಿಗೆ ಬರುತ್ತದೋ ಎಂಬ ಭಯ; ಅವರಿಲ್ಲದೆ ಕಾರ್ಯ ಸಾಗಿಸಲು ಶಕ್ಯವಿಲ್ಲ.

ವಿರೂಪಾಕ್ಷ:—ಸಾಗಿಸಿಬಿಟ್ಟರಾಯಿತು.

ಪ್ರತಾಪ:--ಛೆ! ಅದು ಬಹಳ ಘಾತುಕವಾಗಬಹುದು.

ವಿರೂಪಾಕ್ಷ:—ಏಕೆ?

ಪ್ರತಾಪ:-ಮೊದಲಿನ ತೊಂದರೆಯೆಂದರೆ, ಜನರು ಒಪ್ಪಲಿಕ್ಕಿಲ್ಲ. ಒಂದುವೇಳೆ ಹೇಗಾದರೂ ಒಪ್ಪಿದರೂ ನಾವು ಕೂಡಿಸಿದುದು ಜಾಜ್ವಲ್ಯ ವಿಷವು; ಅದರ ಫಲ ತತ್ಕಾಲ ದೊರೆಯುವದು. ಬೇಗನೆ ಮರಣಗಳಾಗುವ ಮೂಲಕ ಅಲ್ಪಾವಕಾಶದಲ್ಲಿ ಯೇ ವಾರ್ತೆ ತಲುಪಬಹುದು. ಆ ಸಮಯ ನಮ್ಮ ಉದ್ದಿಷ್ಟ ಸಾಧನೆ ದೂರವೇ ಉಳಿದು, ನಮ್ಮ ಜೀವಗಳು ಮಾತ್ರ ಸಂಕಟಕ್ಕೆ ಗುರಿಯಾಗಬಹುದು.

ವಿರೂಪಾಕ್ಷ:--ಹಾಗಾದರೆ ಹೇಗೆ ಮಾಡಬೇಕು?

ಪ್ರತಾಪ:--ಉಪಾಯವೇ ಇಲ್ಲ. ಅದುವರೆಗೆ ನಾವು ತಡೆಯಲೇ ಬೇಕಾಗು ವದು. ಆ ಪಕ್ವಾನ್ನದ ಬಗ್ಗೆ ದಕ್ಷತೆ ಚನ್ನಾಗಿ ವಹಿಸಿರುವೆಯಲ್ಲವೆ?

ವಿರೂಪಾಕ್ಷ:--ದಕ್ಷತೆಯೆಂದರೇನು? ಸದ್ಯ ನನ್ನ ವಶದಲ್ಲಿದೆ ವಿಷವನ್ನು ನಾನೇ

ಸ್ವತಃ ಹಾಕಿರುತ್ತೇನೆ. ಆ ಬಗ್ಗೆ ಇನ್ನಾರಿಗೂ ತಿಳಿಯದು.

ಪ್ರತಾಪ:—ಹಾಗಾದರೆ ಯೋಗ್ಯವಾಯಿತು. ಬೇಗನೆ ಇನ್ನಾರನ್ನಾದರೂ ಕರೆ ಕಳುಹುವಾ.

ಅದೇ ಸಮಯದಲ್ಲಿ ಇನ್ನೊಂದು ಬದಿಯಲ್ಲಿ ಯುವರಾಜ-ಹೇಮಾಂಬಿಕೆಯರಲ್ಲಿ ಮಾತು ನಡೆದಿದ್ದಿತು:

ಯುವರಾಜ:—ಹೇಮಾ, ವಿಷ ಮಿಶ್ರ ಮಾಡಿದುದು ನಿಜವೆ?

ಹೇಮಾಂಬಿಕೆ:—ಅಹುದು.

ಯುವರಾಜ:—ಯಾವ ಪಕ್ವಾನ್ನದಲ್ಲಿ ಕೂಡಿಸಲ್ಪಟ್ಟಿದೆ?

ಹೇಮಾಂಬಿಕೆ:—ಪಾಯಸದಲ್ಲಿ ಕೂಡಿಸಿದಂತೆ ತೋರುತ್ತದೆ.

ಯುವರಾಜ:—ಅಂದರೆ ನಿಶ್ಚಿತ ವಾರ್ತೆ ತಿಳಿಯದೆ?

ಹೇಮಾಂಬಿಕೆ:—ಉಳಿದ ಯಾವ ಪದಾರ್ಥದಲ್ಲಿಯೂ ಏನೂ ಸಂಶಯವಿಲ್ಲ.

ಯುವರಾಜ:—ವಿಷಪ್ರಯೋಗ ಎಂಬುದಕ್ಕೆ ಆಧಾರವೇನು?

ಹೇಮಾಂಬಿಕೆ:—ಪಾಯಸವೊಂದನ್ನು ಮಾಡಿಸಿದ್ದರೂ ಅದರ ಮೇಲೆ ಕುಮಾರನ ದಕ್ಷತೆ ಬಹಳವಾಗಿರುತ್ತದೆ. ಪಾಯಸ ಮುಗಿದ ಮೇಲೆ ಅಲ್ಲಿ ಯಾರೂ ನಿಲ್ಲದಂತೆ ಯುಕ್ತಿಯಿಂದ ಕುಮಾರನು ಎಲ್ಲರನ್ನೂ ಹೊರಗಟ್ಟಿವನಂತೆ.

ಯುವರಾಜ:—ಅದು ಯಾವಾಗ್ಗೆ ಬರಬಹುದು?

ಹೇಮಾಂಬಿಕೆ:—ಆರಂಭಕ್ಕೆ ಬರುವ ಲಕ್ಷಣವಿಲ್ಲ.

ಯುವರಾಜ:—ಏಕೆ?

ಹೇಮಾಂಬಿಕೆ:—ಅದೇನೋ ನಿಶ್ಚಿತವಾಗಿ ತಿಳಿಯದು; ಆದರೂ ಆ ಮೇಲೆ ಬರುವ ಸಂಭವತೋರುತ್ತದೆ. ನೀವು ಯಾವ ಮಾರ್ಗ ಕೈಕೊಳ್ಳುವಿರಿ?

ಯುವರಾಜ:—ನಾನಾದರೂ ಅದೇ ಯೋಚನೆಯಲ್ಲಿರುತ್ತೇನೆ. ನಿನ್ನ ಆ ಚಿನ್ನಾಂಬೆ ಆ ಪಾಯಸ ಬಲ್ಲಳಷ್ಟೆ? ಹೇಮಾ:—ಅಹುದು.

ಯುವರಾಜ:—ಹಾಗಾದರೆ ಆ ಪಾಯಸ ಬಡಿಸಲಾರಂಭವಾಗುತ್ತಲೆ ನನಗೆ ಕೊಂಚ ಸೂಚನೆ ಕೊಡುವಂತೆ ತಿಳಿಸಿಡು.

ಹೇಮಾಂಬಿಕೆ:—ಹಾಗೆಯೇ ಮಾಡಿರಿ; ಆದರೆ ಬಹಳವಾಗಿ ದಕ್ಷತೆವಹಿಸಬೇಕಾಗುವದು.

ಯುವರಾಜ:—ಅದನ್ನು ನಾನರಿಯೆನೆ? ನನ್ನ ಮತ್ತು ಪ್ರಭುಗಳ ವಿಷಯದಲ್ಲಿ ಸ್ವತಃ ನಮಗಿಂತಲೂ ಹೆಚ್ಚಾಗಿ ಪ್ರೇಮ ನಿನ್ನದಿದೆಯೆಂದು ನಾನೇನರಿಯೆನೆ?

ಹೇಮಾಂಬಿಕೆ:—ನನ್ನೊಬ್ಬಳ ವಿಷಯವೇ ಏಕೆ? ಈ ಸಂಶಯ ಬಂದುದಾಗಿದ್ದರೆ, ಕರ್ನಾಟಕದ ಪ್ರತಿಯೊಂದು ವ್ಯಕ್ತಿಯೂ ನನಗಿಂತಲೂ ಎಷ್ಟೋ ಪಟ್ಟು ಹೆಚ್ಚಿನದಾದ ಪ್ರೇಮ ತೋರದಿರರು. ಅದೇಕೆ? ಅಂತಹ ಸಮಯವು ಬಂದೇ ಬರುತ್ತದೆ; ಆದರೆ ಸಕಲವು ಕುಶಲವಾಗಬೇಕೆಂಬುವೇ ನನ್ನ ಹಾರೈಕೆ.

ಯುವರಾಜ:—ಹೇಮಾ, ನಿನ್ನ ಮನದಳಲನ್ನು ನಾನು ಬಲ್ಲೆ. ನಿನ್ನ ಮೂಲಕವಾಗಿಯೇ ಕರ್ನಾಟಕಕ್ಕೊದಗಿದ ಮಹಾ ವಿಪತ್ತು ತಪ್ಪಿತು. ಇಲ್ಲವಾದರೆ, ಎಷ್ಟು ಜನರ ಪ್ರಾಣಹಾನಿಯಾಗುತ್ತಲಿದ್ದಿತೊ!

ಹೇಮಾಂಬಿಕೆ:—ಪೂರ್ಣ ತಪ್ಪಿದಾಗಲೇ ನನಗೆ ಸಮಾಧಾನ.

ಯುವರಾಜ—ಆ ಬಗ್ಗೆ ನೀನು ನಿಶ್ಚಿಂತಳಾಗಿರು. ಪಕ್ವಾನ್ನವಾವುದೆಂದು ನಿಶ್ಚಿತವಾಗಿ ತಿಳಿದಂತೆಯೇ ಇದೆ. ಆ ಕೂಡಲೆ ನಾನವರ ಕಪಟವನ್ನು ಬಯಲಿಗೆಳೆಯುವೆನು. ವಿಪತ್ತು ತಪ್ಪಲು ಇನ್ನೇನು ಬೇಕು?

ಹೇಮಾಂಬಿಕೆ:—ಆದರೂ ಸಂಶಯ ಇದ್ದೇ ಇದೆ. ನಾವು ಸುಳ್ಳೇ ತಿನ್ನುವಂತೆ ನಟಿಸುತ್ತಲಿರಬೇಕಲ್ಲವೆ ಏನನ್ನೂ ತಿನ್ನಕೂಡದು.

ಯುವರಾಜ:—ಅದೇಕೆ?

ಹೇಮಾಂಬಿಕೆ:—ನಿಮ್ಮ ಬಗ್ಗೆ ವಿರೂಪಾಕ್ಷನಾವಾಗಲೂ ಬೆಂಕಿ ಕಾರುತ್ತಲಿರುವನು. ಆದುದರಿಂದ ನನ್ನ ಸೂಚನೆ ಲಕ್ಷ್ಯದಲ್ಲಿಡಬೇಕು.

ಯುವರಾಜ:—ನಿಜವಾಗಿಯೂ ನಿನ್ನ ಉಪಕಾರ ಅಗಣಿತವಾದುದು. ನಿನ್ನೀ ಉಪಕಾರಕ್ಕೆ ನಾನಾವಾಗಲೂ ಕೃತಜ್ಞನಾಗಿರುವೆನು; ಮತ್ತು ಅದನ್ನು ಸ್ಮರಣೆಯಲ್ಲಿಟ್ಟೇ ನಾನು ಜೀವಿಸುವೆನು.

---

## ೧೨ ಅಕಲ್ಪಿತ ವಿಘ್ನ

'ಬನ್ನಿ, ಮಂತ್ರಿವರರೇ, ಹೀಗೆ ಬನ್ನಿ. ಪ್ರಭುಗಳು ಬಂದರೋ?'

'ಇಲ್ಲ, ಅವರು ಬರುವಂತಿಲ್ಲವೆಂದು ತಿಳಿಸಿರುವರು.'

'ಅಂತಹ ಪ್ರಬಲವಾದ ಕಾರಣವಾವುದು?'

'ಅವರಿಗೆ ಒಮ್ಮೆಲೆ ಅಸ್ವಸ್ಥತೆಯುಂಟಾಯಿತು.'

'ಆಂ, ಅಸ್ವಸ್ಥತೆಯೇ?'

'ಅಷ್ಟು ಗಾಬರಿಯಾಗುವ ಕಾರಣವಿಲ್ಲ.'

'ಅದುದಾದರೂ ಏನು? ತಿಳಿಸಿರಿ, ನನ್ನ ಮನ ತಡೆಯದಾಗಿದೆ.'

'ಒಮ್ಮೆಲೆ ಪಿತ್ತವಿಕಾರವಾಗಿ ತಲೆತಿರುಗಹತ್ತಿತು; ತಲೆಶೂಲಿಯೆದ್ದಿತು.'

'ಈಗ ಅವರೆಲ್ಲಿರುವರು?'

'ನಾನು ಅರಮನೆಯ ವರೆಗೆ ಕಳುಹಿಸಿ, ಉಪಚಾರದ ವ್ಯವಸ್ಥೆ ಮಾಡಿ ಬಂದಿರುವೆನು.'

'ಒಳ್ಳೇದು, ನೀವು ಬನ್ನಿ'

'ಯುವರಾಜರಂತೂ ಬಂದಿರುವರಷ್ಟೆ?'

'ಅಹುದು, ಬಂದಿರುವರು.'

'ಅವರೆಲ್ಲಿರುವರು?

'ಇಲ್ಲಿಯೇ ಕುಳಿತಿದ್ದರು. ಇಲ್ಲಿಯೇ ಎಲ್ಲಾದರೂ ಇರಬಹುದು.'

'ಹಾಗಾದರೆ ನಡೆಯಿರಿ.'

ರಾಯನಿಗೆ ಅಸ್ವಸ್ಥತೆಯಾದ ಮೂಲಕ ಬರುವದಾಗದೆಂದು ತಿಳಿದು ಪ್ರತಾಪ ದೇವರಾಯ ಕಾತರನಾದನು. ತಮ್ಮ ವ್ಯೂಹದಿಂದ ಅವನೊಬ್ಬನುಳಿದರೆ ತಮ್ಮಗಳಿಗೆ ಅತ್ಯಂತ ಹಾನಿಕರವೆಂದು ಅವನರಿತಿದ್ದನು. ಬೇಗನೆ ಹೋಗಿ ವಿರೂಪಾಕ್ಷನನ್ನು:

'ವಿರೂಪಾಕ್ಷ, ಈಗ ಹೇಗೆ ಮಾಡಬೇಕು?'

'ಆಕಸ್ಮಿಕವಾಗಿ ಭಯಂಕರ ವಿಘ್ನ ವೊದಗಿತಲ್ಲ!'

'ಅಹುದು; ಆದರೆ ಏನಾದರೊಂದು ಸಂಧಿ ಶೋಧಿಸಲೇಬೇಕು.'

'ನಿಜ. ಇಂತಹ ಸುಂದರ ಸಮಯ ಎಂದೂ ಸಿಕ್ಕದು. ರಾಜಪಕ್ಷದ ಬಹುತರ ಎಲ್ಲ ಜನರೂ ಇಲ್ಲಿರುವರು. ಇವರನ್ನಂತೂ ವ್ಯವಸ್ಥೆ ಮಾಡುವಾ. ಆ ಮೇಲೆ ಉಳಿದು ದನ್ನು ನೋಡಿದರಾಯಿತು.'

'ಛೆ! ಹಾಗೆಂದರೆ ಕಾರ್ಯಸಾಧನೆ ಶಕ್ಯವೇ ಇಲ್ಲ. ಇಷ್ಟೇ ಅಲ್ಲ; ಅದರಿಂದ ನಮಗೇ ಅಪಾಯವುಂಟಾಗಬಹುದು.'

'ಅದೇಕೆ!'

'ಮೂರು-ನಾಲ್ಕು ಜನ ಮುಖ್ಯ ಸರದಾರರು ಹೇಳಿದುದನ್ನು ಮರೆತೆಯಾ? ಒಮ್ಮೆ ಸಂಪೂರ್ಣ ಸದ್ಯದ ರಾಜಮನೆತನ ನಾಮಶೇಷವಾದರೆ ನಾವು ಸಹಾಯ ಮಾಡುವೆವಲ್ಲದೆ, ಒಬ್ಬನುಳಿದರೆ ಸಾಧ್ಯವಿಲ್ಲವೆಂದು. ಕನ್ನಡಿಗರ ರಾಜನಿಷ್ಠೆ ಅತೀವ ವಾದುದು. ಸಂಪೂರ್ಣ ರಾಜಹತಿಯಾದರೆ ನಡೆಯುವದು ನಮಗೆ ಸಾಕಷ್ಟು ಸೈನ್ಯ ಬಲವೂ ಸಿಕ್ಕುವದು. ರಾಜಮನೆತನದವರಾರೂ ಇಲ್ಲವೆಂದಲ್ಲಿ, ಒಂದು ಸಮಯ್ಯ ಅನಿವಾರ್ಯವಾಗಿ ಪ್ರಜೆಗಳೂ ಸುಮ್ಮನಾಗಬಹುದು. ಇಲ್ಲವಾದರೆ ನಮ್ಮನ್ನು ಉಗುರಿ ನಿಂದ ಹರಿದು ಕೊಲ್ಲಬಹುದು; ತಿಳಿಯಿತೆ?'

'ಹೌಂ, ಅಹುದು ಹಾಗಾದರೆ --'

'ಹೌಂ, ವಿರೂಪಾಕ್ಷ, ಕೈಕಾಲುಗೆಟ್ಟರೆ ಉಪಯೋಗವಿಲ್ಲ. ಒಂದು ದಾರಿ ಶೋಧಿ ಸಲೇ ಬೇಕು.'

ವಿರೂಪಾಕ್ಷನಿಗೆ ತಲೆತಿರುಗಹತ್ತಿತು. ತನ್ನ ಆ ಕಪಟ ಕೃತ್ಯವೆಲ್ಲವೂ ಬೈಲಿಗೆ ಬಿದ್ದು ಹೋಯಿತೆಂದೇ ಅವನು ಭಯಪಟ್ಟನು. 'ಅರಸು ಊಟಕ್ಕೆ ಬರುವದಿಲ್ಲ. ಹಾಗಾದರೆ ಮುಂದೆ? ಆತನಂತೂ ಉಳಿದನು. ಅವನನ್ನುಳಿದ ಅವನ ಪಕ್ಷದ ಎಲ್ಲ ವರು ನಾಶವಾದರೂ ಪ್ರಯೋಜನವಿಲ್ಲ. ಆಳುವರಸಿನ ಒಂದು ಪಿಳ್ಳೆಯುಳಿದರೂ ಸರದಾರರು ಮುಂದೆ ಬರುವದಿಲ್ಲ. ಪ್ರಜೆಗಳೂ ಒಪ್ಪುವದಿಲ್ಲ. ಅದರಲ್ಲಿ ಈ ಮುಖ್ಯ ವಾದ ಅರಸೇ ಉಳಿದನು. ಅಂದಲ್ಲಿ ಯಾವ ಪ್ರಜೆಯೂ ಸಮ್ಮತಿಸಲಾರನು. ತದ್ವಿ

ರುದ್ಧವಾಗಿ ತನ್ನಾ ನೋಸಕೃತ್ಯಕ್ಕೆ ತನ್ನನ್ನೇ ಚನ್ನಾಗಿ ದಂಡಿಸಬಹುದು. ಇಷ್ಟೆಲ್ಲ ಅಘಟಿತ ಘಟನೆಗಳ ಉದ್ದೇಶವೇನು? ತಾನು ರಾಜ್ಯ ದೊರಕಿಸಬೇಕು, ತಾನು ಸುಖ ವಾಗಿ ಜೀವನ ಸಾಗಿಸಬೇಕು, ಸಿಂಹಾಸನವೇರಿ ವೈಭವದಿಂದ ರಾಜ್ಯವಾಳಬೇಕು ಎಂದೇ ಅಲ್ಲವೆ? ಅದಕ್ಕೆಂದೇ ಅವನು ಅದೆಷ್ಟೋ ಪ್ರಯತ್ನಗಳನ್ನು ಕೈಕೊಂಡಿದ್ದರು. ಯುಕ್ತಿ-ಪ್ರಯುಕ್ತಿಗಳಿಂದ ಅನೇಕ ಸಂಗತಿಗಳನ್ನು ಸಾಧಿಸಿದ್ದರು. ದೊಡ್ಡ ದೊಡ್ಡ ಸರದಾರರನ್ನು ತಮ್ಮ ಕಡೆಗೆ ಮಾಡಿಕೊಂಡಿದ್ದರು. ಒಳ್ಳೇ ಯುಕ್ತಿಯಿಂದ ಜಾಜ್ವಲ್ಯ ವಿಷ ಸಂಗ್ರಹಿಸಿದ್ದರು; ಆದರೆ ಆಯತ್ತವಾಗಿ ವಿಘ್ನವುಂಟಾಯಿತು. ಅಂದಿನ ತಮ್ಮ ಯೋಜನೆ ತಡೆಯುವದೇ ಒಳಿತೆಂದು ಅವನಿಗೆ ತೋರಹತ್ತಿತು. ತಮ್ಮ ಕಪಟ ಪೂರ್ಣವಾಗಿ ಸಾಧಿಸುವಂತಿರಲಿಲ್ಲ; ಮತ್ತು ಅದರ ಪರಿಣಾಮ ತಮ್ಮ ಮೇಲೆಯೇ ಹೊರಳಬಹುದೆಂಬ ಭಯ—ಅದೇಕೆ ನಿಶ್ಚಿತತೆಯೇ ತೋರಿ ಬರಹತ್ತಿತು ಆದುದ ರಿಂದ ಈಗ ಬಿಟ್ಟುಬಿಟ್ಟು ರಾಜನ ಸಖ್ಯ ತೋರಿಸುತ್ತಲಿದ್ದು, ಬೇರೊಂದು ಸಮಯ ಸಂಧಿ ಸಾಧಿಸಿದರೆ—ಹೀಗೆ ವಿರುಪಾಕ್ಷನ ವಿಚಾರಕ್ಕಾರಂಭವಾಯಿತು.

‘ವಿರೂಪಾಕ್ಷ, ನೋಡು; ಚನ್ನಾಗಿ ವಿಚಾರಿಸಿ ನೋಡು. ನೀನಿನ್ನೂ ತರುಣನಿರುವೆ. ಸುಮ್ಮನೆ ಏನೊಂದೂ ಯೋಚನೆಯಿಲ್ಲದೆ ಸುಖವಾಗಿ ಕಾಲ ಕಳೆಯುವದನ್ನು ಬಿಟ್ಟು ಕಾಪಟ್ಯಕ್ಕೆ ಕೈಗೊಟ್ಟಿರುವೆ. ಕಪಟವೆಂದು ನೀನು ಬಲ್ಲೆ. ಇಂತಹ ಕಪಟದ ಪರಿ ಣಾಮ ಒಳಿತಾಗದು. ನಿನ್ನ ಕಪಟ ಸಾಧಿಸವೆಂಬ ಬಗ್ಗೆ ಪೂರ್ವ ಸೂಚನೆಯೇ ದೊರೆ ತಿದೆ. ಇಷ್ಟರಿಂದ ಎಚ್ಚರನಾಗು. ಯೋಗ್ಯ ದಾರಿ ಶೋಧಿಸು. ಇಲ್ಲವೆ ಮೂರ್ಖ ನಂತೆ ಮುಂದೊರೆದರೆ, ಅದರ ಕಟು ಫಲ ತಿನ್ನಬೇಕಾಗುವದು. ನಿನ್ನ ಕಪಟ ಪೂರ್ಣ ಸಾಧಿಸುವಂತಿಲ್ಲ. ಆ ಸಮಯ—ಮುಂದೆ ನೀನು ಕೈಕೊಂಡಿದ್ದ ಈ ಘೋರ ಕಾಪಟ್ಯ ಬಯಲಿಗೆ ಬರಲು, ನಿನ್ನ ಅವಸ್ಥೆಯೇನಾದೀತೆಂದು ವಿಚಾರಿಸು. ಕೂಡಿದ ಜನರು ತ್ವೇಷಗೊಂಡು ನಿನ್ನನ್ನು ಹರಿದು ತಿನ್ನಬಹುದು. ನರಸಿಂಹ ಹಿರಣ್ಯಕಶ್ಯಪನ ಕರಳು ಬಗೆದಂತೆ ಬಗೆಯಬಹುದು. ನಿನ್ನ ಪ್ರೇತ ಭೂತ-ಪಿಶಾಚಿಗಳಿಗಾಹುತಿಯಾಗ ಬಹುದು. ನಿನ್ನ ಅಪಕೀರ್ತಿ ಆಚಂದ್ರಾರ್ಕವಾಗುಳಿಯಬಹುದು. ನೋಡು, ಯೋಚಿಸಿ ನೋಡಿ ಇಂತಹ ದುರ್ವರ್ತನವಿಂದ ಹಿಂದಾಗು. ಜನರಲ್ಲಿ ನಿನಗೆ ಮನ್ನಣೆ ಬಹಳವಿದೆ. ಅರಸು ಕೂಡಾ ನಿನ್ನನ್ನು ಬಹಳವಾಗಿ ಪ್ರೀತಿಸುತ್ತಲಿರುವನು. ಇದೇ ವರ್ಧಿಸುವಂತೆ ನಡೆ—’ ಮುಂತಾಗಿ ವಿವೇಕ ಚುಚ್ಚುತ್ತಲಿದ್ದಿತು.

ವಿರೂಪಾಕ್ಷ ಕಣ್ದೆರೆದು ನೋಡಿದನು. ಅನೇಕರು ಅಲ್ಲಿ ಬಂದು ಆನಂದದಿಂದ ಕುಳಿತಿದ್ದರು. ತರುಣರಿದ್ದರು, ಪ್ರೌಢರಿದ್ದರು, ವಯಸ್ಕರಿದ್ದರು. ಕರ್ತೃತ್ವಶಾಲಿಗಳಿ ದ್ದರು, ವೀರರಿದ್ದರು, ಚತುರರಿದ್ದರು. ವಿಜಯನಗರದ ವೀರ ಸರದಾರರು ಒಂದೆಡೆ ಕುಳಿತಿದ್ದರು. ಒಂದು ಉಚ್ಚಾಸನದಲ್ಲಿ ಸಂಗಣ್ಣಾಮಂತ್ರಿ ಕುಳಿತಿದ್ದನು. ಶೂರ ಸೈನ್ಯಾಧಿಕಾರಿಗಳು ಇನ್ನೊಂದು ಬದಿಗಿದ್ದರು.

ಆ ಜನರೆಲ್ಲರು ಒಳ್ಳೇ ಆನಂದದಲ್ಲಿದ್ದರು. ‘ಮಲ್ಲಿಕಾರ್ಜುನಮಂದಿರ’ದ ಪ್ರಾರಂ

ಭೋತ್ಸವದ ಸುಸಂಧಿಯಲ್ಲಿ ತಾವು ಭಾಗವಹಿಸಲು ಅವಕಾಶ ದೊರೆತುದಕ್ಕೆ ಸುದೈವಿಗಳೆಂದೇ ತಿಳಿದಿದ್ದರು. ನಗುತ್ತಲಿದ್ದರು, ಕೇಳಿಯುತ್ತಲಿದ್ದರು, ಹರಟುತ್ತಲಿದ್ದರು, ಚರ್ಚಿಸುತ್ತಲಿದ್ದರು. ಎಲ್ಲರೂ ಭಾವೀ ಸಮ್ರಾಟನ ಗುಣವರ್ಣನೆ, ತಾವು ಮುಂದೆ ಮಾಡಲಿದ್ದ ಕಾರ್ಯಗಳ ರೂಪರೇಷೆ ಹಾಕುವದು ಮುಂತಾದ ಭವಿಷ್ಯದಲ್ಲಿ ವಿಹರಿಸುತ್ತಲಿದ್ದರು. ಭೂತಕಾಲದ ಸಿಂಹಾವಲೋಕನೆ, ವರ್ತಮಾನದ ಅನುಭವಗಳಿಂದ ಭವಿಷ್ಯವಳೆಯಲುದ್ಯುಕ್ತರಾಗಿದ್ದರು; ಅವರೆ-ಆದರೆ-ಭವಿಷ್ಯವೆಷ್ಟು ಭೀಕರವಾಗಿದ್ದಿತು! ಅವರ ಜೀವನ ಮಾರ್ಗದಲ್ಲಿ ಅದೆಂತಹ ಕೊರಕಲು-ದಾಟಲಾರದ ಕಂದುಕ ಬಂದೊದಗಿದ್ದಿತು!! ಸಕಲರ ಸುಖಗಳನ್ನೂ ಸೂರೆಗೊಳ್ಳಲು ಅದೆಂತಹ ಕಾಪಟ್ಯ ನಡೆಯುತ್ತಲಿದ್ದಿತು!!! ಅಸಹಾಯ ಮಾನವ! ಮರುಕ್ಷಣವೇ ಏನಾದೀತೆಂಬ ಭರವಸೆಯಿಲ್ಲ; ಆದರೂ ಅದೆಷ್ಟು ಯೋಚಿಸುತ್ತಾನೆ? ನೂರುವರುಷಗಳ ರೂಪರೇಷೆ ಹಾಕುತ್ತಾನೆ; ಮೂರು ನಿಮಿಷದಲ್ಲಿ ಮಾಯವಾಗುತ್ತಾನೆ!

ಮೃತ್ಯುವಿನ ಭೀತಿ ಅದೆಷ್ಟು ಭಯಂಕರವಾದುದು? ಮರಣ ನಿಶ್ಚಯವೆಂದು ಎಲ್ಲರೂ ತಿಳಿದಿದ್ದರೂ ಆಮರಣವೂ ಮರಣವನ್ನು ಮರೆಯಲು ಯತ್ನಿಸುತ್ತಲೇ ಇರುತ್ತಾರೆ. ಅಲ್ಲಿ ನೂರಕ್ಕಿಂತ ಹೆಚ್ಚೇ ಜನರು ಕಲೆತಿದ್ದರು ಸುಂದರವಾದ ನೃತ್ಯ-ಗೀತಗಳಿಂದ ಸಂತುಷ್ಟರಾಗಿದ್ದರು. ಐಹಿಕ ಸುಖದ ಸಾರವನ್ನೇ ಸವಿಯುತ್ತಲಿದ್ದರು; ಆದರೆ ಮುಂದೆ ತಮ್ಮ ಅವಸ್ಥೆ ಏನಿದ್ದೀತೆಂದರಿತಿದ್ದರೆ? ಮೃತ್ಯು ಮಧುರವಾದ ಪಕ್ವಾನ್ನದಲ್ಲಡಗಿ ಕುಳಿತುದನ್ನರಿತಿದ್ದರೆ? ಅದರ ಸುಳುವನ್ನಾದರೂ ತಿಳಿದಿದ್ದರೆ--

ವಿರೂಪಾಕ್ಷನಿಗೆ ಕನಿಕರವೆನಿಸಿತು. 'ಈ ಎಲ್ಲರ ಪ್ರಾಣಾಹುತಿ ನಾನೇಕೆ ತೆಗೆದುಕೊಳ್ಳಬೇಕು? ಬರಿಯ ನನ್ನ ಸ್ವಾರ್ಥದ ಸಲುವಾಗಿಯಲ್ಲವೆ? ನನಗೆ ಸಿಂಹಾಸನಬೇಕೆಂಬ ದುರುದ್ದೇಶದಿಂದಲ್ಲವೆ? ಆ ಸಿಂಹಾಸನ ನನ್ನದೆ? ಅದರಲ್ಲಿ ನನ್ನ ಅಧಿಕಾರವೇನಿದೆ? ಸಿಂಹಾಸನದ ಯೋಗ್ಯ ಹಕ್ಕುದಾರನಿರಲು, ಆತ ಅತ್ಯಂತ ಕರ್ತವ್ಯದಕ್ಷನಾಗಿ ಪ್ರಜಾಪಾಲನೆ ಮಾಡುತ್ತಲಿರಲು, ಸಕಲ ಸದ್ಗುಣಗಳ ಖಣಿಯೇ ಅವನಾಗಿರಲು, ಅಂತಹನನ್ನು ಆಹುತಿಯಾಗಿ ತೆಗೆದುಕೊಂಡು, ಅವನ ಪಕ್ಷದ ನೂರೆಂಟು ಜನರ ಪ್ರಾಣಗಳನ್ನು ನಾಶಗೊಳಿಸಿ, ಆ ಸಿಂಹಾಸನ ನಾನು ತೆಗೆದುಕೊಳ್ಳುವದು ಯೋಗ್ಯವಾದೀತೆ? ರಕ್ತಲೇಪಿತ ರಾಜ್ಯ ನನಗೆ ದಕ್ಕಬಹುದೆ?-ಬೇಡ-ಈ ದುಷ್ಟ ಕಾಪಟ್ಯ ಬೇಡವೇ ಬೇಡ. ವಿಷಮಿಶ್ರಿತ ಪಕ್ವಾನ್ನ ಮಣ್ಣುಗೂಡಿಸಿ ಬಿಡುವೆ—'

ಹೀಗೆ ಅವನ ಹೃದಯ ಕಂಪಿಸಹತ್ತಿತು ಮನಸ್ಸು ಹೊಯ್ದಾಡಲಾರಂಭಿಸಿತು. ಉದ್ವಿಗ್ನತೆ ಸಂಪೂರ್ಣ ಮನೆಮಾಡಿತು.

ಹೀಗೆ ಖಿನ್ನವದನದಿಂದ ವಿರೂಪಾಕ್ಷ ನಿಂತಿರಲು, ಅವನಿಗೆ ಹೊಸ ನೋಟವೊಂದು ಕಾಣಿಸಿತು. ಮೇಲ್ಮಾಳಿಗೆಯಲ್ಲಿ ಗುಬ್ಬಿಗಳು ಚಕ್ಕಂದದಿಂದ 'ಚಿಂವ್' 'ಚಿಂವ್' ಎಂದು ಧ್ವನಿಗೆಯ್ಯುತ್ತ ಹಾರಾಡುತ್ತಲಿದ್ದುವು. ಹಲವು ಒಳ್ಳೇ ಆನಂದದಿಂದ ಕುಳಿತಿದ್ದುವು. ಹಿಂದಿನಿಂದೊಂದು ಬಾವುಗ ಬಂದಿತು. ಅದೆಷ್ಟು ಮೆಲ್ಲಗೆ!

ಅವೆಷ್ಟು ಸದ್ದಿಲ್ಲದೆ, ಆದರೆ ಅದು ಬಂದುದೇತಕ್ಕೆ? ಚಕ್ಕಂದದಿಂದ ಯಾರನ್ನೂ ನೋಯಿಸದೇ ತನ್ನಷ್ಟಕ್ಕೆ ತಾನೇ ಆಡುತ್ತಲಿರುವ ಗುಬ್ಬಿಯನ್ನು ಹಿಡಿಯಲಿಕ್ಕಿಲ್ಲವೆ? ಅಹುದು; ಆದರೆ ಗುಬ್ಬಿಯೇನು ಮಾಡುತ್ತಲಿದ್ದಿತು? ಅಲ್ಲಿಯೇ ಮೆಲ್ಲಗೆ ತಿರುಗಾಡುವ ಹುಳಗಳನ್ನು ಹಿಡಿದು ತಿನ್ನುತ್ತಲಿದ್ದಿತು. ಹುಳಗಳನ್ನು ಗುಬ್ಬಿ ತಿನ್ನುವದು, ಗುಬ್ಬಿಯನ್ನು ಬೆಕ್ಕು ತಿನ್ನುವದು. ಸರಿ. ಪೃಥ್ವಿ ಶಕ್ತಿಯಿದ್ದವನದು; ಯುಕ್ತಿಯಿದ್ದವನದು. ಇಂತಹನೇ ಆಳಬೇಕೆಂಬ ನಿಯಮವಿಲ್ಲ.

'ವಿರೂಪಾಕ್ಷ, ಹುಚ್ಚನಾಗಬೇಡ. ನೋಡು, ಇಲ್ಲಿ ನೆರೆದ ನೂರೆಂಟು ಜನರಾರು? ಎಂದು ಕಣ್ತೆರೆದು ನೋಡು. ಇವರಲ್ಲಿ ಒಬ್ಬನಾದರೂ ನಿನಗೆ ಸಹಾಯ ಮಾಡುವವನಿರುವನೆ? ಒಬ್ಬನಾದರೂ 'ವಿರೂಪಾಕ್ಷ'ನನ್ನು ಮನ್ನಿಸಬೇಕೆನ್ನುವನೇ. ಈ ಜನರೆಲ್ಲ ಉಳಿಯುವದೆಂದರೆ, ನಿನ್ನ ಕಾಲುದಾರಿಯನ್ನು ಕಂಟಕಮಯ ಮಾಡಲಿಕ್ಕೆಂದೆ? ಈಗಲೆ ಸಂಧಿ ದೊರಕಿದೆ; ಇನ್ನೆಂದಾದರೂ ಸಂಧಿ ಸಾಧಿಸಬೇಕೆನ್ನುವೆ; ಆದರೆ ನೋಡು. ಕೊಂಚವೇ ಕಾಲವುಳಿದರಾಯಿತು, ಹೇಮಾಂಬಿಕೆ ಯುವರಾಜನಿಗೆ ಮಾಲೆ ಹಾಕುವಳು. ಆ ಮೇಲೆ ನೀನೇನು ಮಾಡಿದರೂ ಸಿಕ್ಕಳು. 'ಹೇಮಾಂಬಿಕೆಯಿಲ್ಲದ ನಿನ್ನ ಬಾಳು ನಾಯಿಯ ಬಾಳಿವೆಗಿಂತಲೂ ಕೀಳು.' ಹೇಮಾಂಬಿಕೆಯಿಲ್ಲದೆ ನೀನು ರಾಜ್ಯವಾಳಿದರೇನು? ಕಾಡು ಸೇರಿದರೇನು? ರಾಜ್ಯ ಬೇಡವಾದರೆ ಬಿಡು; ಹೇಮಾಂಬಿಕೆಯ ಸಲುವಾಗಿಯಾದರೂ ಮುಂದಾಗು—'

ಮುಗಿಯಿತು; ಹೇಮಾಂಬಿಕೆಯ ಸ್ಮರಣೆಯಾಗುತ್ತಲೇ ವಿರೂಪಾಕ್ಷನ ವಿವೇಕವು ನಷ್ಟವಾಯಿತು. ಒಂದಿಲ್ಲೊಂದು ರೀತಿಯಿಂದ ಒದಗಿದ ಪ್ರಸಂಗದ ಉಪಯೋಗ ಮಾಡಿಕೊಂಡು ರಾಜಮನೆತನ, ರಾಜಪಕ್ಷಿಗಳನ್ನು ನಿರ್ಮೂಲವಾಡಬೇಕೆಂದು ನಿರ್ಧರಿಸಿದನು. 'ಯುವರಾಜ ಸುಗುಣಿಯಿರಬಹುದು, ಶೂರನಿರಬಹುದು, ರಾಜ್ಯದ ಹಕ್ಕುದಾರನಿರಬಹುದು; ಆದರೆ ಹೇಮಾಂಬಿಕೆಯ ಮೇಲೆ ಅವನದೇನು ಅಧಿಕಾರ? ನಾನಾಕೆಯನ್ನು ಹೊಂದಿಯೇ ತೀರಬೇಕು. ಈ ಕಾರ್ಯಕ್ಕೆ ನೂರೇಕೆ, ಸಾವಿರವಾದರೂ ಪ್ರಾಣಹಾನಿಯಾಗಲಿ. ನಾನು ಯಾವ ಕಾಲಕ್ಕೂ ಬಿಡಲು ಸಾಧ್ಯವಿಲ್ಲ. ಬಿಟ್ಟರೆ ಹೇಮಾಂಬಿಕೆ ಎಂದೂ ಸಿಕ್ಕಳು.'

ಪ್ರತಾಪದೇವರಾಯ ಅಲ್ಲಿಯೇ ನಿಂತಿದ್ದನು. ಮಗನ ಮುಖಮುದ್ರೆಯಲ್ಲಾದ ಮಾರ್ಪಾಟುಗಳನ್ನು ನೋಡಿದನು. ವಿರೂಪಾಕ್ಷನ ಮೊಗದಲ್ಲಿ ಕನಿಕರಭಾವ ಉಂಟಾದುದೂ, ಮತ್ತೆ ಕಠೋರತೆ ತೋರಿಬಂದುದೂ ತಿಳಿಯಿತು. ಆದರಿಂದ ವಿರೂಪಾಕ್ಷನಲ್ಲಿ ನಡೆದ ಅಘಟಿತಘಟನೆಗಳ ಬಗ್ಗೆ ಯೋಚಿಸಿದನು. ತಮ್ಮ ಕಾಪಟ್ಯ ಕೈಗೂಡುವ ಬಗ್ಗೆ ಅವನಿಗೂ ಸಂದೇಹವೆನಿಸುತ್ತಲಿದ್ದಿತು. ಕೈಗೂಡಿದಲ್ಲಿ ಒಳಿತು; ಒಂದು ಸಮಯ ಬೈಲಿಗೆ ಬಿದ್ದರೆ? ಅವನು ಯೋಚಿಸಿದನು, ಮತ್ತೆ ಯೋಚಿಸಿದನು; ಮತ್ತೂ ಮತ್ತೂ ಯೋಚಿಸಿದನು. ಬಯಲಿಗೆ ಬೀಳಬಹುದೆಂಬ ಭೀತಿಯಿಂದ ಬಿಟ್ಟರೆ-ದುಃಖ ಕೂಪದ ತಳದಲ್ಲಿ ಹೊರಳುವ ಕ್ರಿಮಿ ಮೇಲೆ ಹತ್ತಲೆತ್ನಿಸುತ್ತಲೆ ಬೀಳುವೆನೆಂಬ

ಭಯ. ಬೀಳುವ ಭಯದಿಂದ ಯತ್ನವನ್ನೇ ಬಿಟ್ಟರೆ, ತಳದಲ್ಲಿಯೇ ಉಳಿಯಬೇಕಾದುದಲ್ಲದೆ ಮೇಲೆ ಹೋಗುವವಕಾಶವೇ ಇಲ್ಲ. ಸ್ವತಃ ತಾನು ಪ್ರಯತ್ನ ಮಾಡದಿದ್ದರೆ ಇನ್ನಾರಾದರೂ ಬಂದು ಮೇಲೆತ್ತುವರೆ? ಅಷ್ಟು ದಯಾಪರವಾದ ಜಗತ್ತು ಇದಿರುವದೆ? ಎಂದೂ ಶಕ್ಯವಿಲ್ಲ. ದುಃಖಕೂಪ ಏರಿ, ಸುಖದ ದಾರಿ ಕಾಣಲು ಸ್ವಂತದ ಯತ್ನದ ಹೊರತು ಇನ್ನೇನೂ ಸಾಧ್ಯವಿಲ್ಲ. ಹಾಗಾದರೆ-ಪ್ರತಾಪದೇವರಾಯನೂ ಯೋಚಿಸಿದನು. ಮಗನ ಹೃದಯದ ತಳಮಳವರಿತನು. ಮಗನಿಗಾಗುತ್ತಲಿದ್ದ ಅಪಮಾನ ಸ್ಮರಣೆಗೆ ತಂದುಕೊಂಡನು. ಮಗನಿಗೊದಗಲಿದ್ದ ಪ್ರೇಮವಿರಹವನ್ನು ಮನಸ್ಸಿನಲ್ಲಿ ತಂದನು. ತನ್ನ ಪ್ರೇಮದ ಮಗನು, ಶೂರಪುತ್ರನು, ಪ್ರೀತಿಯ ಣುಗ ಮುಂದೆ ಏನಾಗುವನು? ಅವನ ಅವಸ್ಥೆ ಏನಾಗುವದು? ಅಪಮಾನ, ಪ್ರೇಮನಿರಾಶೆ, ಹತ ಪ್ರಯತ್ನ ಮುಂತಾದ ಆಘಾತಗಳಿಗೆ ತಡೆಯದೆ ಆತ್ಮಹತ್ಯೆಯನ್ನಾದರೂ ಕೈಕೊಳ್ಳಬೇಕು; ಇಲ್ಲವೆ ಕಾಡು ಪಾಲಾಗಬೇಕು. ಪ್ರತಾಪದೇವರಾಯನಿಗೆ ಈ ಯೋಚನೆ ಸಹನವಾಗಲಿಲ್ಲ. ಸ್ವತಃ ತಾನು ಜನುಮದಿಂದಲೂ ಕರ್ನಾಟಕ ಸಿಂಹಾಸನದ ಸಲುವಾಗಿ, ಕರ್ನಾಟದರಸನುನ್ನತಿಗಾಗಿ, ಕರ್ನಾಟಕ ಸಾಮ್ರಾಜ್ಯರಕ್ಷಣೆಗಾಗಿ ಎಂತೆಂತಹ ಕಷ್ಟ-ನಷ್ಟಗಳಿಗೊಳಗಾದುದರ ಫಲವೇನು? ಅದರಿಂದ ತಾನು ಸಾಧಿಸಿದುದೇನು? ತನ್ನ ಮಟ್ಟಿಗೆ, ತನ್ನ ಮಗನಿಗೆ, ತನ್ನ ಬಳಗಕ್ಕೆ ತಾನು ತಂದಿತ್ತುದೇನು?-ಎಲ್ಲಿ ನೋಡಿದಲ್ಲಿ ಕಗ್ಗತ್ತಲೆ ಕಾಣಹತ್ತಿತು. ಆ ಕಗ್ಗತ್ತಲು ತನ್ನ ಪ್ರಯತ್ನದ ಅಭಾವದಿಂದಲೇ ಉಂಟಾದುದು. ಆ ಕಾಳ ಕತ್ತಲೆಯಲ್ಲಿ ದಾರಿಗಾಣದೆ ವಿರೂಪಾಕ್ಷ, ತನ್ನ ಪ್ರೀತಿಯ ಪುತ್ರ ಎಡವುತ್ತ, ಮುಗ್ಗರಿಸುತ್ತ ಮುಂದೊರೆದಿದ್ದನು-ಭಾವೀ ಭೀಕರ ನೋಟಗಳಿಗೆ ಪ್ರತಾಪದೇವರಾಯನಳುಕಿದನು. ಅಂತಹ ದುರ್ಧರ ಪ್ರಸಂಗಗಳಿಗೆ ಎದೆಗೊಡುವ ಗಟ್ಟಿಗ ತಾನಲ್ಲವೆಂದರಿತನು. ಅಪಮಾನ ಬೆಂಕಿಯಲ್ಲಿ ದಗ್ಧನಾಗಿ ಪರರ ಗುಲಾಮಗಿರಿಯಲ್ಲಿ ಬಾಳುವವಕ್ಕಿಂತಲೂ ಸ್ವಪ್ರಯತ್ನದಲ್ಲಿ ಸಾಯುವದೇ ಲೇಸೆಂದು ಬಗೆದನು. ಅನಾಯಾಸವಾಗಿ ಸಾಧಿಸಿದ ಸುಸಂಧಿಯಲ್ಲಿ ಹಿಂದೆಗೆದರೆ ಮುಂದೆಂದೂ ಸಂಧಿ ಸಿಕ್ಕದೆಂದು ಮನಸ್ಸು ಗಟ್ಟಿಮಾಡಿಕೊಂಡು, ಬರುವ ಭೀಕರ ಪ್ರಸಂಗಗಳಲ್ಲಿ ತನ್ನ ಹೃದಯ ಬೇಯಿಸದೆ, ತನ್ನ ಮಗನ ಆಹುತಿ ಕೊಡದೆ ಆದುದಾಗಲಿ ಎಂದು ನಿರ್ಧರಿಸಿದನು.

'ವಿರೂಪಾಕ್ಷ, ಈಗೇನು ಮಾಡಬೇಕೆನ್ನುವೆ?'

'ನಾನಾದರೂ ಅದನ್ನೇ ಯೋಚಿಸುತ್ತಲಿರುವೆನು'

'ಆದರೆ ಯೋಚನೆ ಮುಗಿಸುವದಾವಾಗ? ಹೊರಗೆ ಜನರು ದಾರೀ ಕಾಯುತ್ತಲಿರುವರು. ಮೃತ್ಯುವನ್ನೆದುರುಗೊಳ್ಳಲು ಆನಂದದಿಂದ ಸಿದ್ಧರಾಗಿರುವರು.'

'ಸಾಯುವೆನೆಂದು ತಿಳಿದರೂ ಅಷ್ಟು ಉತ್ಸಾಹದಿಂದ ಕುಳಿತಿರುವರಲ್ಲ! ಭಾಪು! ಭಾಪು! ಅವರೇ ಗಟ್ಟಿಗರು. ರಣರಂಗದಲ್ಲಿ ನಿಂತ ಸಮಯ ಮೃತ್ಯುವಿನ ಭೀತಿಯಿರುವದಿಲ್ಲ; ಆದರೆ ಆಗ್ಗೆ ಸೈನಿಕರು ರಣೋನ್ಮಾದದಿಂದ ಮತ್ತರಾಗಿರುತ್ತಾರೆ. ಸುತ್ತೆಲ್ಲವೂ ಭೂತ-ಪ್ರೇತಗಳ ನಾಟ್ಯವೇ ಕಾಣುತ್ತಲಿರುತ್ತದೆ. ಆಗ್ಗೆ ಸೈನಿಕರು ಮೃತ್ಯುವಿನೊಡನೆ

ಒಂದುಗೂಡಿರುತ್ತಾರೆ. ಜೀವಿಸಿದ್ದರೂ ಮರಣಹೊಂದಿದಂತೆಯೇ ಅವರ ಸ್ಥಿತಿಯಿರುತ್ತದೆ; ಆದರೆ ಇವರು ಅವರಿಗಿಂತಲೂ ಗಟ್ಟಿಗರು. ಸುಖ ಸಾಧನೆಗಳಲ್ಲಿ ಮುಳುಗಿದ್ದರೂ, ಸುಂದರ ನೋಟಗಳ ಮಧ್ಯದಲ್ಲಿದ್ದರೂ ಮೃತ್ಯುವನ್ನೆದುರುಗೊಳ್ಳಲು ಆನಂದದಿಂದ ಸಿದ್ಧರಾಗಿರುತ್ತಾರೆ.'

'ಹುಚ್ಚು ಹಿಡಿದಿದೆಯೇ ನಿನಗೆ?' 'ಅಂದರೆ?'

'ಈಗ ಅವರಿಗೆ ಸಾಯುವೆವೆಂದು ತಿಳಿದುದು ಹೇಗೆ? ಹೇಳಿದವರಾರು? ಬರಲಿರುವ ಭೀಕರ ಮೃತ್ಯು ಅವರಿಗೆ ತಿಳಿದುದಾಗಿದ್ದರೆ, ಅವರು ಹೀಗೆ ನೂರಾರು ವರುಷಗಳ ಭವಿಷ್ಯವನ್ನಳೆಯಲೆತ್ನಿಸುತ್ತಲಿದ್ದರೆ? ಎಲ್ಲ ಮುಹಮ್ಮದೀಯರನ್ನು ಹಣಿಯಬೇಕೆನ್ನುತ್ತಾರೆ. ಎಲ್ಲ ಭಾರತವರ್ಷವನ್ನು ಆಕ್ರಮಿಸಬೇಕೆನ್ನುತ್ತಾರೆ. ಮರಣ ತಿಳಿದಿದ್ದರೆ, ಹೀಗೆಂದಾದರೂ ಕೂತಿರುತ್ತಲಿದ್ದರೆ? ಅವರಿಗೆ ಸಂಶಯವಾದರೂ ಬಂದುದಾಗಿದ್ದರೆ ಇಲ್ಲಿ ಉಳಿಯುತ್ತಲಿದ್ದರೆ?'

'ಅಹುದು; ನನಗವರ ಮರಣದ ಯೋಚನೆ ಬಂದು ಅವರು ಸಾಯುವದು ನನಗೆ ತಿಳಿದಂತೆ ಅವರಿಗೂ ತಿಳಿದಿರಬಹುದೆಂದು ನನ್ನ ಭಾವನೆಯಾಯಿತು. ಅವರ ಮರಣದ ಬಗ್ಗೆ ನನಲ್ಲಿ-ಅವರಾ ಭೀಕರ ಕೊಲೆಗೆ ಮೂಲ ಕಾರಣನೇ ಆದ ನನಲ್ಲಿ-ಭಿನ್ನ ಭಿನ್ನ ವಿಕಾರ ವಿಚಾರಗಳುಂಟಾಗಿರಲು, ಅವರು ನೆಮ್ಮದಿಯಾಗಿ ಕುಳಿತರೇಕೆ? ಮರಣದ ಭೀತಿಯಿರಲಿಲ್ಲವೆ? ಎಂಬ ಯೋಚನೆ ಬಂದಿತು.'

'ಒಳ್ಳೇದು. ಈಗ ಏನು ಮಾಡಬೇಕೆಂದಿರುವೆ?'

'ನನಗೆ ಏನೂ ತಿಳಿಯುದಾಗಿದೆ.'

'ಕಪಟವನ್ನು ಕೊನೆಯವರೆಗೆ ಮುಂದೂಡತಕ್ಕುದೋ, ಇಲ್ಲವೆ ಇಲ್ಲಿಗೇನೇ ಕೊನೆಗಾಣಿಸತಕ್ಕುದೊ?'

'ಪೂರ್ಣ ಸಾಧ್ಯವಾಗಬಹುದೋ?' 'ಅಂದರೆ?'

'ಅಂದರೆ ಇಷ್ಟೇ. ಇಲ್ಲಿ ನೆರೆದ ಇವರಲ್ಲಿ ಪ್ರತಿಯೊಂದು ವ್ಯಕ್ತಿಯೂ ಮೃತ್ಯುವಶನಾಗುವನು. ಈ ನರಯಜ್ಞದಲ್ಲಿ ಯುವರಾಜನ ಆಹುತಿಯೂ ಆಗುವದು; ಆದರೆ ಅರಸು-ಆಳುವರಸು-ಆತನುಳಿದರೆ ನಾವು ಮಾಡಿದುದೆಲ್ಲವೂ ವ್ಯರ್ಥವು. ಅವನನ್ನು ನೋಡಿದರಾಯಿತು. ಒಂದು ಹುಳುವು ಕೂಡಾ ನಮ್ಮ ಸಮೀಪಕ್ಕೆ ಸುಳಿಯದು. ಇಷ್ಟೇ ಅಲ್ಲ, ಚೇತನಾಹೀನವಾದ ಪದಾರ್ಥಗಳೇ ನಮ್ಮ ಪ್ರಾಣತೆಗೆದುಕೊಳ್ಳಬಹುದು.'

'ಹೊರಗೆ ಜನರು ದಾರೀಕಾಯುತ್ತಲಿರುವರು. ಬೇಗನೇ ಇತ್ಯರ್ಥ ಮಾಡುವುದೊಳಿತಲ್ಲವೆ?'

'ಕಾರಣವಂತೂ ಇದ್ದೇ ಇದೆ. ಅರಸನಾಗಮನಕ್ಕೆಂದು ತಡವಾಯಿತೆಂದು ಹೇಳಿದರಾಯಿತು. ಅದಕ್ಕೇನು? ಆದರೆ ಏನು ಮಾಡಬೇಕೆನ್ನುವಿರಿ?'

'ಅನ್ನುವದೇನು? ಸಂಧಿ ಸಿಕ್ಕಲಿಕ್ಕಿಲ್ಲ.' 'ಹಾಗಾದರೆ—'

'ಉಳಿದುದನ್ನು ನಾನು ನೋಡಿಕೊಳ್ಳುತ್ತೇನೆ.'

# ೧೩ ಅಸಹಾಯ ಯುವರಾಜ.

ಅರಸಿಗೆ ಅಸ್ವಸ್ಥತೆಯಾಗಿದೆಯೆಂಬ ಸಂಗತಿ ಹೊಗೆಯಂತೆ ಹಬ್ಬಿತು. ವಿಜಯ ನಗರದ ಪ್ರತಿಯೊಂದು ವ್ಯಕ್ತಿಯ ಜೀವ ತಲ್ಲಣಿಸಹತ್ತಿತು. ಕರುಣಾಪೂರ್ಣನಾದ ದೊರೆ ತಂದೆಗಿಂತಲೂ ಹೆಚ್ಚಾಗಿದ್ದನು. ಪ್ರಜೆಗಳನ್ನು ಮನೆ ಮಕ್ಕಳಿಗಿಂತಲೂ ಹೆಚ್ಚು ಪ್ರೇಮದಿಂದ ಕಾಣುತ್ತಲಿದ್ದನು. ಅಂತಹ ದೊರೆಗೆ ಅಸ್ವಸ್ಥತೆಯುಂಟಾಗಲು, ಯಾರಿಗೆ ತಾನೆ ಕಳವಳವೆನಿಸಲಿಕ್ಕಿಲ್ಲ? ಎಲ್ಲರೂ ಅರಸನ ಕುಶಲವರಿಯಲು ಆತುರರಾದರು. ಉತ್ಕಂಠತೆಯಿಂದ ಪ್ರಶ್ನೆ ಮಾಡಿದರು.

ಮಲ್ಲಿಕಾರ್ಜುನ ಮಂದಿರದಲ್ಲಿ ನೆರೆದ ಜನರಲ್ಲಂತೂ ಬಹಳೇ ಗಡಿಬಿಡಿಯುಂಟಾಯಿತು; ಬಹಳ ಆತುರರಾದರು. ಸರದಾರರಲ್ಲಿಯ, ಅಧಿಕಾರಿಗಳಲ್ಲಿಯ ಆತುರತೆಯನ್ನು ವಿರೂಪಾಕ್ಷನರಿತನು. ಅವನು ಬೇಗನೆ ಮುಂದೆ ಬಂದು ನಿಂತನು. ಅವನನ್ನು ನೋಡಿ ಎಲ್ಲರೂ ಮತ್ತೆ ಮತ್ತೆ ಅರಸಿನ ವಾರ್ತೆ ಕೇಳಹತ್ತಿದರು. ವಿರೂಪಾಕ್ಷ ಅವರನ್ನೆಲ್ಲ ಕೂರಿಸಿದನು.

'ನನ್ನ ಪ್ರಿಯಬಂಧುಗಳೇ, ದೊರೆಗಳಿಗೆ ಕೊಂಚ ಅಸ್ವಸ್ಥತೆಯುಂಟಾದ ಸಂಗತಿ ನಮಗೆ ಈಗಲೆ ತಿಳಿದಿದೆ; ಆದರೂ ಗಾಬರಿಯಾಗುವ ಕಾರಣವಿಲ್ಲವೆಂದು ರಾಜವೈದ್ಯರು ಸಂದೇಶ ಕಳುಹಿದ್ದಾರೆ. ಇಂತಹ ಶುಭ ಸಮಯದಲ್ಲಿ ಅವರಿಗೆ ಅಸ್ವಸ್ಥತೆಯಾದುದೆಂದರೆ, ನಮ್ಮ ಸಂಭ್ರಮವು ತೇಜೋಹೀನವೇ ಆದಂತಾಗಿದೆ. ಆಗಲಿ. ಆದರೂ ಗಾಬರಿಯಾಗಲು ಕಾರಣವಿಲ್ಲ. ರಾಜವೈದ್ಯರು ಈಗಲೇ ಬಂದಿರುವರು. ಅವರು ಶುಭ ಸಂದೇಶವನ್ನೇ ತಂದಿರುವರು; ಮತ್ತು ಈಗ ಜನರು ಮಹಾರಾಜರನ್ನು ಕಾಣಲು ಹೋಗಿ ಅವರಿಗೆ ತೊಂದರೆ ಕೊಡಬಾರದೆಂಬದೇ ಅವರ ಮುಖ್ಯ ಸೂಚನೆಯಿರುತ್ತದೆ. ತಾವೆಲ್ಲರೂ ನಮ್ಮ ತಂದೆಗಳಂತಿದ್ದ ಪ್ರಭುಗಳನ್ನು ಕಾಣಲು ಅತ್ಯಂತ ಆತುರರಾಗಿರುವದು ಸಹಜವು. ನನಗಾದರೂ ಈಗಲೇ ಹಕ್ಕಿಯಂತೆ ಹಾರಿ ಹೋಗಬೇಕೆಂಬ ಬಲವಾದ ಆತುರತೆಯಾಗಿದೆ. ನಾವು ನಮ್ಮ ಆತುರಕ್ಕೆಡೆಗೊಟ್ಟರೆ ಹೆಚ್ಚಾಗಿ ಕಳವಳಪಡಬೇಕಾಗುವದೆಂದು ತಾವೆಲ್ಲರೂ ಸ್ಮರಣೆಗೆ ತಂದುಕೊಳ್ಳತಕ್ಕದ್ದು. ನಮ್ಮ ಪ್ರಭುಗಳ ಕ್ಷೇಮಲಾಭಕ್ಕೆಂದೇ ತಾವೆಲ್ಲರೂ ತಮ್ಮ ಆತುರತೆಯನ್ನು ಬಿಗಿ ಹಿಡಿಯಬೇಕೆಂದು ನನ್ನ ಅತ್ಯಂತ ನಮ್ರದ ಬಿನ್ನಹವಿರುತ್ತದೆ.'

ಇನ್ನು ಮುಂದಿನ ಕೆಲಸವೆಂದರೆ ನಮ್ಮ ಪ್ರಭುಗಳಿಗೆ ಆಯುರಾರೋಗ್ಯ ಸಂಪಾದಿಸಿ ಕೊಡಲು ಪಂಪಾಪತಿಯನ್ನು ಪ್ರಾರ್ಥಿಸುವದು. ಸದ್ಯದ ಅಸ್ವಸ್ಥತೆಯಿಂದ ಮುಕ್ತರಾಗಿ ಪ್ರಭುಗಳು ಬೇಗನೆ ಸ್ವಸ್ಥರಾಗಲೆಂದು ಆ ಜಗದೀಶನನ್ನು ಬೇಡಿಕೊಳ್ಳೋಣ.

ಇಂದು ವಿಶೇಷವಾದ ಪಕ್ವಾನ್ನಗಳು ಸಿದ್ಧವಾಗಿರುವವು; ಆದರೆ ಅವುಗಳ ಪ್ರಯೋಜನವಿಲ್ಲದಂತಾಯಿತು. ಏಕೆಂದರೆ ನಮ್ಮಗಳ ಪ್ರೇಮದ ಪ್ರಭು ನಮ್ಮ ಮಧ್ಯದಲ್ಲಿಲ್ಲ. ಇಷ್ಟೇ ಅಲ್ಲ, ದೊರೆ ಅಸ್ವಸ್ಥವಾಗಿರುವ ಇಂತಹ ಸಮಯದಲ್ಲಿ ಆ ಪಕ್ವಾನ್ನ

ದಾಸೆ ನಮಗಾರಿಗೂ ಇಲ್ಲವೇ ಇಲ್ಲ. ಅದೆಲ್ಲವನ್ನೂ ದೊರೆಗಳ ಕ್ಷೇಮಲಾಭಾರ್ಥವಾಗಿ ಬಡಬಗ್ಗರಿಗೆ ಕೊಟ್ಟುಬಿಡುವೆವು. ಮುಖ್ಯವಾದ ಪಾಯಸದ ಅಲ್ಪವನ್ನು ತಾವೆಲ್ಲರೂ ಇಂದಿನ ಸ್ಮರಣೆಗೆಂದು ಸೇವಿಸಬೇಕೆಂದು ನನ್ನ ಪ್ರೇಮದ ಸೂಚನೆಯಿರುತ್ತದೆ.

ವಿರೂಪಾಕ್ಷ ಇಷ್ಟೆಲ್ಲ ಮಾತನಾಡಿದನು. ಆದರೆ ಹೃದಯದಲ್ಲಿ ಅದೆಂತಹ ಕ್ಷೋಭೆ ಯುಂಟಾಗಿದ್ದಿತು! ಮೇಲೆ ತೋರಿಸುತ್ತಲಿದ್ದುದು ಮಹಾರಾಜರ ಕ್ಷೇಮಚಿಂತನೆ; ಆದರೆ ಅಂತರಂಗದಲ್ಲಿ ಪ್ರಭುಗಳಷ್ಟೇ ಅಲ್ಲ, ಆ ಪ್ರಭುಪಕ್ಷದವರಾದ ನೂರಾರು ಸಿರಪ ರಾಧಿ ರಾಜನಿಷ್ಠ ಸದ್ಗೃಹಸ್ಥರ ಅಂತಚಿಂತನೆಯೇ ನಡೆದಿದ್ದಿತು. ಅದರೊಡನೆ ಹೃದಯದಲ್ಲಿ ಒಂದು ಭಯಂಕರ ಕ್ಷೋಭೆಯುಂಟಾಗುತ್ತಲಿದ್ದಿತು. ಪ್ರಕ್ಷುಬ್ಧ ಸಾಗರದ ಭೀಕರತೆಗಿಂತಲೂ ಅವನ ಹೃದಯದ ಕ್ಷೋಭೆ ಮಿಗಿಲಾಗಿದ್ದಿತು. ಒಂದೇಸವನೆ ಎದೆ ಹಾರುತ್ತಲಿದ್ದಿತು. ಮನಸ್ಸು ಗಾಬರಿಯಾಗಿದ್ದಿತು. ಧ್ವನಿ ನಡುಗುತ್ತಲಿದ್ದಿತು. ಕೈಕಾಲು ಕಂಪಿಸುತ್ತಲಿದ್ದುವು. ಮೊಗದಲ್ಲಿ ಭೀಕರ ಆಸುರೀ ಲಾಲಸೆ ಮನೆಮಾಡಿದ್ದಿತು. ಕಣ್ಣು ಕೆಂಪಾಗಿದ್ದುವು. ತನ್ನ ಈ ಅವಸ್ಥೆ ಜನರಿಗೆ ಗೋಚರವಾಗಕೂಡದೆಂದು ಬಹಳ ದಕ್ಷತೆ ವಹಿಸುತ್ತಲಿದ್ದನು.

ಅಂತರಂಗದ ವಿಕಾರಗಳ ಪ್ರತಿಬಿಂಬ ಮೊಗದಲ್ಲಿ ಬಿಂಬಿಸದೇ ಇರುತ್ತಿರಲಿಲ್ಲ. ಅದನ್ನು ಅವನಾದರೂ ಅರಿತನು. ಮೊಗದ ವಿಕಾರಗಳಿಂದ ಹೃದಯದ ಭೀಕರತೆ ಯರಿಯಬಹುದೆಂದೇ ಅವನು ಬಹಳ ಗಾಬರಿಯಾದನು. ತನ್ನಾ ಭೀಕರ ಕಾಪಟ್ಯ ಬಯಲಿಗೆ ಬೀಳದಿರಬೇಕೆಂದು ಬಹಳ ದಕ್ಷನಾಗಿದ್ದನು. ನೋಡಿದ ಜನರಿಗೆಲ್ಲ ತನ್ನಾ ಅವಸ್ಥೆಗೆ ಅರಸಿನ ಅಸ್ವಸ್ಥತೆಯೇ ಕಾರಣವೆಂದು ಬಿಂಬಿಸುವಂತೆ ಪ್ರಯತ್ನ ಮಾಡುತ್ತ ಲಿದ್ದನು.

ಕುಶಲ ಅಧಿಕಾರಿಗಳು, ಚತುರ ಮುತ್ಸದ್ದಿಗಳು, ವೀರ ಸೈನಿಕರು, ಪ್ರತ್ಯಕ್ಷ ಸಂಗಣ್ಣ ಮಂತ್ರಿಗಳು ಅಲ್ಲಿದ್ದರು. ಬಹಳ ಸಲವಿಲ್ಲದಿದ್ದರೂ ಒಂದೆರಡು ಸಲವಾದರೂ ವಿರೂಪಾಕ್ಷ ಅವರೆದುರು ಬಂದಿದ್ದನು. ಅಷ್ಟರಿಂದ ಒಬ್ಬನಾದರೂ ವಿರೂಪಾಕ್ಷನ ಅಂತರಂಗವನ್ನರಿಯಬಾರದೆ! ವಿರೂಪಾಕ್ಷನ ನಿಜಸ್ವರೂಪ ಬಯಲಿಗೆಳೆದು ಭೀಕರ ಹತ್ಯಾಕಾಂಡವ ತಪ್ಪಿಸಬಾರದೆ!! ಹಾಯ್-ಹಾಯ್! ಎಂತಹ ಕಠಿಣ ಪ್ರಸಂಗವದು!! ಒಬ್ಬನಿಗೆ-ಒಂದೇ ಒಂದು ವ್ಯಕ್ತಿಗೆ ವಿರೂಪಾಕ್ಷನ ಭೀಕರ ಹೃದಯದ ಪರಿಚಯವಾಗ ಬಾರದೆ! ಒಬ್ಬನಿಗಾದರೂ ವಿರೂಪಾಕ್ಷ ಕೈಕೊಳ್ಳಲಿದ್ದ ಆ ಭಯಂಕರ ನರಹತ್ಯೆಯ ಕಲ್ಪನೆ ಕೂಡ ಆಗಬಾರದೆ!!! ಅಂತಹ ಚತುರಮತಿಗಳನೇಕರು ಅಲ್ಲಿದ್ದರು. ಮೊಗ ನೋಡುತ್ತಲೆ ಹೃದಯವರಿಯುವ ನಿಪುಣರೂ ಅಲ್ಲಿದ್ದರು; ಆದರೆ 'ಪ್ರತ್ಯಾಸನ್ನ ವಿಪತ್ತಿಮೂಢ ಮನಸಾ ಪ್ರಾಯೋ ಮತಿಃ ಕ್ಷೀಯತೆ!' ಎಂದು ಕವಿ ಹೇಳುವಂತಿದ್ದರೂ ಇರಬಹುದು; ಅಥವಾ ಆ ಎಲ್ಲರ ಮನಸ್ಸೊ ಅರಸಿನ ಅಸ್ವಸ್ಥತೆಯ ಬಗ್ಗೆ ವಿಷಾದಪೂರ್ಣ ವಾಗಿದ್ದಿತು. ಆದುದರಿಂದ ಅನೇಕರಿಗೆ ತಮ್ಮಾ ಉದಾಸೀನ ಹೃದಯದತ್ತ ನೋಡು ವದರಲ್ಲಿ ಬೇರೆ ಕೆಲಸಕ್ಕವಕಾಶವೇ ಸಿಕ್ಕಲಿಲ್ಲ. ಒಬ್ಬಿಬ್ಬರು ವಿರೂಪಾಕ್ಷನ ದುರವಸ್ಥೆ

ಯರಿತರು; ಆದರೆ ದೃಷ್ಟಿಕೋನ ಬದಲಾಯಿತು. 'ವಿರೂಪಾಕ್ಷ, ಅರಸಿನಲ್ಲಿ ಬಹಳ ಶ್ರದ್ಧೆಯುಳ್ಳವನು. ಆ ಪ್ರೇಮ ತೋರುವದಕ್ಕೆಂದೇ ಮಲ್ಲಿಕಾರ್ಜುನ ಮಂದಿರಕ್ಕಾರಂಭಿಸಿದ್ದನು. ಅರಸಿನ ಅಸ್ವಸ್ಥತೆಯರಿಯಲು ಅವನು ಅಧೀರನಾದನು. ಅಂತೆಯೇ ಮೊಗ ತೇಜೋಹೀನವಾಯಿತು.' ಹೀಗೆ ಅವನು ಯೋಚಿಸಿದನಲ್ಲದೆ, ಅನ್ಯ ಯೋಚನೆ ಇಣುಕಲಿಲ್ಲ.

ಆ ಎಲ್ಲ ಜನರಿಗೆ ವಿರೂಪಾಕ್ಷ ಕಾಲಮೃತ್ಯುವಾಗಿದ್ದನು. ಪ್ರತ್ಯಕ್ಷ ಯಮನೇ ಅಲ್ಲಿ ವಿರೂಪಾಕ್ಷನ ರೂಪದಿಂದ ಬಂದು ನಿಂತಿದ್ದನು. ಕಾಲಪಾಶ ವಿಷಮಿಶ್ರಿತ ಪಕ್ವಾನ್ನದ ರೂಪ ತಳೆದಿದ್ದಿತು. ಪಾಶ ಬೀಸಲು ಸಿದ್ಧನಾಗಿ ನಿಂತಿದ್ದನು ಆ ಕಾಲ ರೂಪೀ ವಿರೂಪಾಕ್ಷ.

ವಿರೂಪಾಕ್ಷನ ಮನಸ್ಸು ಅತೀವ ಕ್ಷುಬ್ಧವಾಗಿದ್ದಿತು.

ಅಲ್ಲಲ್ಲಿ ಕುರಿ-ಕೋಳಿಗಳನ್ನು ದೇವರಿಗೆಂದು ಕೊಲ್ಲುವುದು ನಾವು ಕಾಡುತನವೆನ್ನುತ್ತೇವೆ. ಅವರ ಹೃದಯ ಕಲ್ಲಿನಿಂದಾದುದೆಂದು ಟೀಕಿಸುತ್ತೇವೆ. ಆ ಪ್ರಾಣಿಗಳ ಸಲುವಾಗಿ ಮರಮರನೆ ಮರುಗುತ್ತೇವೆ. ಅಶಿಕ್ಷಿತರು, ಕಾಡು ಜನರು, ಸಂಸ್ಕೃತಿಯ ಅರಿಯದವರು ಎಂದು ನಾವು ದೂಷಿಸುತ್ತೇವೆ. ಒಂದು ವಿಧದಿಂದ ಅವರು ಅಂತಹ ತಪ್ಪುಗಾರರೂ ಅಲ್ಲವೆನ್ನಬಹುದು. ಮೊದಲೇ ಸಂಸ್ಕೃತಿಹೀನರು; ಆದರಲ್ಲಿ ದೈವೀ ಭಾವನೆಯಿಂದ ಪ್ರೇರಿತರಾದವರು. ನಾವು ಭಕ್ತಿಯಿಂದ ಪರಮಾತ್ಮನಿಗೆ ಕಾಯಿ ಅರ್ಪಿಸುವದಿಲ್ಲವೆ? ಆ ಪರಮಾತ್ಮ ತಾನೇ ನಿರ್ಮಿಸಿದ ನಾವು ಕೊಟ್ಟ ಕಾಯಿ ಸ್ವೀಕರಿಸುತ್ತಲಿದ್ದರೆ, ತನ್ನ ನಿರ್ಮಾಣವೇ ಆದ ಕೋಳಿಯನ್ನು ಸ್ವೀಕರಿಸುವ ಅವನು ಈ ಎರಡಕ್ಕಿಂತಲೂ ಭಿನ್ನವಾದ, ಆದರೆ ಅವುಗಳಲ್ಲಿ ಒಂದು ವೇಳೆ ತೋರಿ ಬರಬಹುದಾದ ಭಕ್ತಿಯನ್ನಪೇಕ್ಷಿಸುತ್ತಾನಲ್ಲವೆ? ಇದು ಹಳಬರ ವಿಚಾರ. ಇನ್ನು ಹೊಸಬರ ವಿಚಾರ ಪರಮಾತ್ಮನಿಗೆ ಎರಡೂ ಬೇಡ. ನಮಗೆ ಕೊಬ್ಬರಿ ಬೇಕೆಂದು ನಾವು ಕಾಯಿ ಅರ್ಪಿಸುತ್ತೇವೆ. ಅವರು ಮಾಂಸಬೇಕೆಂದು ಕೋಳಿಗಳನ್ನರ್ಪಿಸುತ್ತಾರೆ. ಇದು ಭಾವನೆಯ ಪ್ರಶ್ನೆ. ಭಾವನೆಯಲ್ಲಿ ಹೊಯ್ದಾಟವಿಲ್ಲದಿದ್ದರಾಯಿತು. ಆದರೆ-ಆದರೆ-ಇವಕ್ಕಿಂತಲೂ ಭೀಕರವಾದ-ಬಲು ಭಯಂಕರವಾದ ದುರಾಚರಣೆ ಮನುಷ್ಯರು-ಮುಂದೊರೆದವರು, ಸುಶಿಕ್ಷಿತರು, ಸುಸಂಸ್ಕೃತರು ಎನ್ನಿಸಿಕೊಳ್ಳುವ ನಾವು ಮಾಡುತ್ತೇವಲ್ಲ! ಅಹಿಂಸಾ ಪರಮೋ ಧರ್ಮಃ! ಎಂದು ಹೃದಯ ತುಂಬಿ ಹರಿಯುವಂತೆ ತಿಳಿಮನದಿಂದ ಉಪದೇಶ ಮಾಡಿದ ಮಹಾಮಹಿಮ ಬುದ್ಧಗುರುವೆಲ್ಲಿ! ಆತನನುಯಾಯಿಗಳೆಂದು ಹೇಳಿ ನಿತ್ಯವೂ ನರಯಜ್ಞ ಮಾಡುತ್ತಿರುವ ಜಪಾನಿಯರೆಲ್ಲಿ! ಇದು ಯುದ್ಧವಾಯಿತು; ಆದರೆ ಸಮಾಜದಲ್ಲಿ ಸಭ್ಯರ ಸೋಗಿನಿಂದ ನಿತ್ಯವೂ ಅನರ್ಥಗೆಯ್ಯುತ್ತಲಿರುವ ಸುಶಿಕ್ಷಿತ ಜನರೆಷ್ಟಿಲ್ಲ! ಇಂತಹ ಅನೇಕ ನ್ಯಾಯ ಕೋರ್ಟಿನೆದುರು ಬಂದೇ ಬರುತ್ತವೆ. ಅವರಿಗೆ ಸಂಸ್ಕೃತಿಯಿಲ್ಲವೆನ್ನಬೇಕೆ? ಜ್ಞಾನವಿಲ್ಲವೆನ್ನಬೇಕೆ? ಶಿಕ್ಷಣವಿಲ್ಲವೆನ್ನಬೇಕೆ? ಇದೆಲ್ಲವೂ ಇರುತ್ತದೆ; ಆದರೆ ಸ್ವಾರ್ಥವೊಂದಿರುವ ಮೂಲಕ ಅದರ ಮರೆಯಲ್ಲಿ ಇವುಗಳೆಲ್ಲವೂ

ಅಡಗಿ ಕಾಣದಾಗುತ್ತಲಿ ಸ್ವಾರ್ಥದ ಭೂತವೇ ಮುಂದೊರೆದು ತನ್ನ ಸ್ವೇಚ್ಛಾಚರಣೆ ಯಿಂದ ಬೇಕುಬೇಕಾದ ಉತ್ಪಾತಗಳನ್ನುಂಟುಮಾಡುತ್ತದೆ. ಅನರ್ಥಗಳು ಸಂಭವಿಸು ವಂತೆ ಯತ್ನಿಸುತ್ತದೆ. ಭೀಕರ ಹತ್ಯಾಕಾಂಡಗಳು ನಡೆದು ತಮ್ಮ ಸ್ಮರಣೆ ಕೊನೆಯು ವರೆಗುಳಿಯುವಂತೆ ಮಾಡುತ್ತವೆ.

ವಿರೂಪಾಕ್ಷ ಮಲ್ಲಿಕಾರ್ಜುನ ಮಂದಿರಕ್ಕಾರಂಭವಾದಾಗಿನಿಂದಲೂ ಭಾವೀ ಭೀಕರ ನೋಟ ಕಾಣುತ್ತಲೇ ಇದ್ದನು. ಆ ಬಗ್ಗೆ ಅವನ ಮನದಲ್ಲಿ ಭಿನ್ನ ಭಿನ್ನ ವಿಚಾರಗಳೇಳುತ್ತಲಿದ್ದವು. ಸಿಂಹಾಸನಾಕ್ರಮಣಕ್ಕೆಂದು ನೂರಾರು ಜನರ ಪ್ರಾಣ ಹರಣವಾದರೂ ಆಗಬೇಕೆಂದರಿತಿದ್ದು, ಅದರಂತೆ ತನ್ನ ಮನಸ್ಸು ಸಿದ್ಧಮಾಡುತ್ತ ಲಿದ್ದನು. ಒಂದೊಂದು ಸಲ ಅವನ ಮನಸ್ಸು ಅಳಕುವದು; ಆದರೆ ಅದಕ್ಕೆ ಬೇರೆ ಬೇರೆ ಭೀತಿಗಳನ್ನೊಡ್ಡಿ ಅದನ್ನು ಸಿದ್ಧಗೊಳಿಸಲೆತ್ನಿಸುತ್ತಲಿದ್ದನು. ವಿವೇಕವೆಷ್ಟು ನಿಷೇಧಿಸಿದರೂ, ಮನಸ್ಸೆಷ್ಟು ಹೊಯ್ದಾಡಿದರೂ, ಬುದ್ಧಿಯೆಷ್ಟು ಚಂಚಲವಾದರೂ ತನ್ನ ಕೆಲಸ ಮಾಡದಿರುವದಾಗಲಿಲ್ಲ. ಆ ಎಲ್ಲ ಚಲನವಲನಗಳನ್ನು ತಡೆಹಿಡಿದು, ತನ್ನ ಮುಖ್ಯೋದ್ದೇಶವಾದ ಸಿಂಹಾಸನಾಕ್ರಮಣದತ್ತ ಮುಂದೊರೆಯುತ್ತಲಿದ್ದನು; ಆದರೆ ಮತ್ತೆ ಕಾರ್ಯ ಸಾಧಿಸಬಂದಾಗ್ಗೆ ವಿಘ್ನ-ಭಯಂಕರ ವಿಘ್ನವೊದಗಿತು. ತಂದೆ ಮಕ್ಕಳಿಬ್ಬರೂ ಬಹಳವಾಗಿ ಚರ್ಚಿಸಿದರು. ಕೊನೆಗೆ ಕೂಡಿದವರನ್ನು ಯುವರಾಜ ನೊಡನೆ ಅಲ್ಲಿಯೇ ಗೊತ್ತುಹಚ್ಚಬೇಕೆಂದು ನಿರ್ಧರಿಸಿದರು.

ರಾಯನ ಕುಶಲಚಿಂತನೆಗೆಂದು ಸರದಾರ-ಸಾಮಂತ ಮೊದಲಾದವರೆಲ್ಲರೂ ಎದ್ದುನಿಂತ ಕಣ್ಮುಚ್ಚಿ ಅಂತರಂಗದ ತಿಳಿಮನದಿಂದ ಪಂಪಾಪತಿಗೆ ಪ್ರಾರ್ಥನೆ ಸಲ್ಲಿಸ ಹತ್ತಿದರು. ಆದರೆ-ಆದರೆ-ಅರಸಿನ ಕುಶಲಚಿಂತನೆಗೆ ಪ್ರಾರಂಭಿಸಿದ ಅವರಿಗೆ ತಮ್ಮ ಕುಶಲದ ಕಲ್ಪನೆಯಿದ್ದಿತೆ? ಭಯಂಕರ ಕಾಲನಾಗದ ಹೆಡೆಯಲ್ಲಿ ಕಲ್ಪನೆಯಿಲ್ಲದೆ ಕುಳಿತು, ಅನ್ಯರಿಗೆ ಚೇಳು ಸಮೀಪಿಸಲು ಅವರಿಗೆ ಎಚ್ಚರಕೊಡುವಂತೆ ಅವರ ಸ್ಥಿತಿ ಯಾಗಿದ್ದಿತು. ಭೀಕರ ಹಾಲಾಹಲವನ್ನು ಅಮೃತವೆಂದು ಕುಡಿಯುತ್ತಲಿದ್ದು, ಅರ ಸಿನ ಉಪಚಾರಕ್ಕೆ ಚಿಂತಿಸುತ್ತಲಿದ್ದರು. ಅಗಾಧವಾದ ಉದಧಿಯಲ್ಲಿ ತಾವು ನಿರ್ನಾಮ ರಾಗುತ್ತಲಿದ್ದರೂ ಇನ್ನೊಬ್ಬನನ್ನು ಪಾರುಮಾಡಲೆತ್ನಿಸುವಂತೆ ಅವರ ಕೃತಿಯಿದ್ದಿತು. ಮೃತ್ಯುದೇವತೆ ತನ್ನ ಬರ್ಫದಂತಹ ಕೈಗಳಿಂದ ಹಿಡಿವೆಳೆಯುತ್ತಲಿದ್ದರೂ ಇನ್ನೊ ಬ್ಬರ ಸುರಕ್ಷಿತತೆಯ ವಿಷಯವಾಗಿ ಚಿಂತಿಸುತ್ತಲಿದ್ದರು. ಮಾನವೀ ಅಜ್ಞಾನ!!!

ಆ ಎಲ್ಲರೂ ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತಲಿದ್ದರು. ಅವರಾ ನೋಟ ಹೇಗೆ ತೋರುತ್ತಲಿದ್ದಿತು? ಹಲವು ಸ್ವಾತಂತ್ರ್ಯವೀರರನ್ನು, ದೇಶಹಿತಕ್ಕೆಂದು ಆತ್ಮ ತ್ಯಾಗ ಮಾಡಲು ಸಿದ್ಧರಾದ ಮಹಾತ್ಮರನ್ನು ಬಂಧಿಸಿ ತಂದು ಒಂದೆಡೆಯಲ್ಲಿ ನಿಲ್ಲಿಸಿ, 'ನಿಮಗೆ ದೇಹಾಂತ ಶಿಕ್ಷೆ ವಿಧಿಸಿದೆ. ಅಂತ್ಯ ಪ್ರಾರ್ಥನೆ ಸಲ್ಲಿಸಿರಿ' ಎಂದು ಹೇಳಲು, ಕೊಂಚವಾದರೂ ಅಳುಕದೆ, ಅಂಜದೆ ಮೃತ್ಯುವನ್ನಾಲಂಗಿಸಲು ಸಿದ್ಧರಾದಾ ಸ್ವಾತಂತ್ರ್ಯ ಪ್ರೇಮಿಗಳಂತೆ ಕಾಣಬಹುದಿತ್ತು; ಆದರೆ ಅವರಿಗೆ ತಮ್ಮ ಮೃತ್ಯುವಿನರಿವೇ ಇರಲಿಲ್ಲ.

ಇದ್ದುದಾಗಿದ್ದರೆ ಎಲ್ಲರಿಲ್ಲದಿದ್ದರೂ ಹಲವರಾದರೂ ಮರಣಕ್ಕೆ ಅಂಜದೆ ಸಿದ್ಧರಾಗುತ್ತಿದ್ದರು; ಆದರೆ ಈಗ ಎಲ್ಲರೂ ಕೊಂಚವಾದರೂ ಯೋಚಿಸದೆ ಮರಣವನ್ನಾಲಂಗಿಸಲು ಸಿದ್ಧರಾಗಿದ್ದರು. ತಾವೆಲ್ಲರೂ ಮನೆಯಲ್ಲಿ ತಮ್ಮ ಪ್ರೀತಿಯ ನಲ್ವೆಂದಿರನ್ನು, ಪ್ರೇಮದಣುಗರನ್ನು, ಕಳಕಳಿಯ ತಂದೆ-ತಾಯಿಗಳನ್ನು ನಗುನಗುತ್ತಲೆ ಬಿಟ್ಟು ಬಂದಿದ್ದರು. ತಾವು ಮಲ್ಲಿಕಾರ್ಜುನ ಮಂದಿರಕ್ಕೆ ಹೋದೆವೆಂದರೆ, ಕಾಲನಾಲಯ ಪ್ರವೇಶಿಸಿದಂತೆಯೇ ಎಂದು ತೀರ ಸ್ವಲ್ಪಾದರೂ ತಿಳಿದಿದ್ದರೆ, ಆಗ್ಗೆ ವಿಜಯನಗರದ ಅವಸ್ಥೆ ಆ ಪಂಪಾಪತಿಗೇ ಅರಿಕೆ! ನೂರಾರು ಜನ ಪ್ರತಿಷ್ಠಿತ ಜನರ ಮರಣವೆಂದರೆ, ಅವರ ಆಪ್ತರ-ಇಷ್ಟರ ಗೋಳಾಟದಿಂದ ವಿಜಯನಗರವೆಲ್ಲ ತುಂಬಿ ಬ್ರಹ್ಮಾಂಡ ಭೇದಿಸಬಹುದಿತ್ತಲ್ಲವೆ? ದುಃಖಾಗ್ನಿಯಿಂದ ಸಹಸ್ರಾವಧಿ ಜನರ ಹೃದಯ ಬೆಂದು ಹೋಗಬಹುದಿತ್ತಲ್ಲವೆ? ಅವರಾ ಭೀಕರ ಮರಣ ಪ್ರತ್ಯಕ್ಷ ಕಂಡು ಬಣ್ಣಿಸಲು ಕೆಲಕೆಲವು ಕವಿಗಳು ತಮ್ಮ ಲೆಕ್ಕಣಿಕೆ ಸಿದ್ಧಮಾಡಿ ನಿಲ್ಲಬಹುದಿತ್ತಲ್ಲವೆ? ಇತಿಹಾಸಕಾರರು ತಮ್ಮ ದಪ್ತರು ಸಹಿತವಾಗಿ ಹೆಸರು ಮುಂತಾದುವೆಲ್ಲವನ್ನೂ ಸಂಪೂರ್ಣವಾಗಿ ನಮೂದಿಸಲು ನಿಲ್ಲಬಹುದಿತ್ತಲ್ಲವೆ? ಆಚಂದ್ರಾರ್ಕವಾಗಿ ಅಂದಿನಾ ಕಾಳಚಿತ್ರರೇಖಿಸಲು ಚಿತ್ರಿಗರು ತಮ್ಮ ಕುಂಚು ಎತ್ತಬಹುದಿತ್ತಲ್ಲವೆ?.........ಅದೇಕೆ ಮೊದಲೇ ಗೊತ್ತಿದ್ದರೆ, ವಿಜಯನಗರದ ವೀರ ಸೈನಿಕರು-ವೀರ ಪ್ರಜೆಗಳು ಕಪಟಿಗಳ ಪಾರುಪತ್ಯಕ್ಕೆ ದಕ್ಷರಾಗಿರುತ್ತಿದ್ದಿಲ್ಲವೆ? ಅದೇಕೆ ಗೊತ್ತಾಗಿದ್ದಿತು? ಆದರೆ ಸಂಶಯ ಮಾತ್ರ ಯುವರಾಜನೇ ಅರಿತಿದ್ದನು. ಅವನು ಆಯತ್ತದ ಸಮಯದಲ್ಲಿ ಎಲ್ಲರನ್ನೂ ಕಾಪಾಡಲು ಸಿದ್ಧನಾಗಿದ್ದನು.

'ವಿರೂಪಾಕ್ಷ, ನಾನಿನ್ನು ಅರಮನೆಯತ್ತ ಹೊರಡುವೆ. ಕೆಲವೇ ನಿಮಿಷ ನಮಗಿದೆ. ಈ ನಿಕರವ ಸಮಯ ಕಳೆದರೆ ಮತ್ತೆ ಸಿಕ್ಕದು. ನಮ್ಮ ಸಕಲ ಯತ್ನವೂ ವ್ಯರ್ಥವಾಗುವದು. ಕೊನೆಯವರೆಗೂ ನಾನು, ನೀನು, ನಮ್ಮ ವಂಶಜರು ದುಃಖ ಕೂಪದಲ್ಲಿ ಉರುಳಾಡಬೇಕಾಗುವದು.'

'ಛೆ! ಇದುವರೆಗೂ ಮಾಡಿದ ಯತ್ನ ಹುಸಿಯಾಗತಕ್ಕುದಲ್ಲ. ಅಪಮಾನಿತರಾಗಿ ಬಾಳುವದಕ್ಕಿಂತಲೂ ಮರಣವೇ ಲೇಸು. ಆದುದರಿಂದ ಇದೇ ಮೊದಲಿನ ಮತ್ತು ಕೊನೆಯ ಯತ್ನ. ನಮ್ಮ ಪ್ರಯತ್ನಗಳೆಲ್ಲ ಕೈಗೂಡಿ ಉಚ್ಚ ಮಾನವಾದರೂ ದೊರಕಲಿ; ಇಲ್ಲವೆ—'

'ಭವಿಷ್ಯದ ಯೋಚನೆಯೇಕೆ? ಸದ್ಯದ ಕಾರ್ಯವೊಂದನ್ನು ದಕ್ಷತೆಯಿಂದ ವಹಿಸಿ ನಡೆ.'

'ಹಾಗಾದರೆ........'

'ಅನ್ಯ ಯೋಚನೆಯೇ ಬೇಡ. ಈಗಲೆ ಆ ಪಾಯಸ ಸಕಲರಿಗೂ ಕೊಟ್ಟು, ತಿನ್ನಿಸಿಬಿಡು.'

'ನಾನೀಗ ಅದನ್ನೇ ಮಾಡುವೆ.'

'ಹಾಗಾದರೆ ನಾನು ಹೊರಡುವೆ.'

ಪ್ರತಾಪದೇವರಾಯನು ಅರಮನೆಯತ್ತ ಹೊರಟನು.

ಅದುವರೆಗೆ ಹೇಮಾಂಬಿಕೆ ಅಂತಃಪುರದಲ್ಲಿದ್ದಳು. ಅರಸಿಗೆ ಅಸ್ವಸ್ಥತೆಯಾದ ಸಂಗತಿ ತಿಳಿದೊಡನೆ ಲಗುಬಗೆಯಿಂದ ಅರಸನ ಬಳಿಗೆ ಬಂದಳು ಆತನನ್ನು ವಿಶೇಷವಾಗುಪಚರಿಸಿ ಆತನಿಗೆ ಕೊಂಚ ಸ್ವಸ್ಥವೆನಿಸುತ್ತಲೇ ಮಲ್ಲಿಕಾರ್ಜುನ ಮಂದಿರದತ್ತ ಹೊರಟಳು ಆ ಜನರ ಮತ್ತು ಅವರ ದೌಷ್ಟ್ಯದ ವಿಷಯಕವಾಗಿ ಆಕೆ ಭಯಪಡುತ್ತಲಿದ್ದಳು. ದುಷ್ಟರ ಕಾರ್ಯಸಿದ್ಧಿಗಾಗಿ ನೂರಾರು ಪ್ರಮುಖ ಸರದಾರ-ಸಾಮಂತರು ಸಾಯಲಿದ್ದರು; ಆದರೆ ದೈವಯೋಗದಿಂದ ಪಂಪಾಪತಿಯ ಆಶೀರ್ವಾದದಿಂದ ಅವರಾ ಕಪಟ ಬಲೆಯನ್ನು ಹೇಮಾಂಬಿಕೆ ಅರಿತಳು. ಹಾಗೆಯೇ ಯುವರಾಜನೂ ತಿಳಿದನು. ಇಬ್ಬರೂ ಆ ಘೋರತರ ಅನರ್ಥವನ್ನು ತಪ್ಪಿಸಲು ಬದ್ಧಕಂಕಣರಾಗಿದ್ದರು. ಅದರಂತೆ ಮಲ್ಲಿಕಾರ್ಜುನನ ಮಂದಿರದಲ್ಲಿ ಯುವರಾಜನನ್ನು ಕಂಡು ಆತನಿಗೆ ಯೋಗ್ಯವಾದ ಸಲಹೆಗಳಿತ್ತು ಬಂದಿದ್ದಳು. ತನ್ನ ನಿರೀಕ್ಷೆಯಂತೆ ಸಕಲವೂ ಸುರಕ್ಷಿತವಾಗುಳಿಯುವದಲ್ಲದೆ ನೀಚರ ನೈಚ್ಯವೂ ಹೊರಬಂದು ಅದರಿಂದ ಕನ್ನಡ ಸಾಮ್ರಾಜ್ಯಕ್ಕೆದುರಾದ ಕಂಟಕ ದೂರವಾಗುವದೆಂದೆಣಿಸಿದಳು. ಹೀಗೆ ಆಕೆ ಯೋಚನೆಯಲ್ಲಿರುವಾಗ್ಗೆ ಅರಸಿಗೆ ಅಸ್ವಸ್ಥತೆಯುಂಟಾಯಿತು, ಅರಸನ ಸ್ವಸ್ಥತೆಯಿಂದ ವಿಷಾದವೆನಿಸಿದರೂ ಒಂದು ಬಗೆಯಿಂದ ಸಮಾಧಾನವೆನಿಸಿತು. ತನ್ನ ಪ್ರೀತಿಯ ತಮ್ಮ ಮತ್ತು ಆತನ ಮಗ ಇವರೀರ್ವರೂ ಕಲೆತು ತಮ್ಮ ಪ್ರಾಣಾಪಹರಣಕ್ಕೆ ರಚಿಸಿದ ಭಯಂಕರ ಕಪಟವನ್ನು ಪ್ರತ್ಯಕ್ಷ ನೋಡಿ, ಅದರಿಂದುಂಟಾಗುವ ಮನಸ್ಸಿನ ತಾಪ ಉಳಿಯಿತು. ಆ ಮೇಲೆ ಆ ಕಾರ್ಯ ಕೇಳಿದರೂ ಪ್ರತ್ಯಕ್ಷ ನೋಡಿದ್ದಷ್ಟು ವಿಷಾದವಾಗಲಿಕ್ಕಿಲ್ಲ, ಎಂಬ ಯೋಚನೆಯೊಂದಿಗೆ ಅರಸಿಗೆ ಉಪಚಾರ ಮಾಡಿದಳು. ಕೊಂಚ ಸ್ವಸ್ಥವೆನಿಸಲಾರಂಭಿಸಲು, ಹೇಮಾಂಬಿಕೆಗೆ ಬಹಳವಾಗಿ ಆನಂದವೆನಿಸಿತು. ಒಡನೆಯೇ ಆಕೆಗೆ ಬೇರೊಂದು ಯೋಚನೆ ಬಂದಿತು. ಅರಸು ಬರುವನೆಂದು ಮಲ್ಲಿಕಾರ್ಜುನ ಮಂದಿರದಲ್ಲಿ ಎಲ್ಲರೂ ಕಾಯುತ್ತ ಕುಳಿತಿದ್ದರು; ಆದರೆ ಅರಸಿಗೆ ಅಸ್ವಸ್ಥತೆಯಾಗಲು ಅವನು ಅಲ್ಲಿ ಹೋಗುವ ತನ್ನ ಯೋಚನೆ ಬದಲಾಯಿಸಬೇಕಾಯಿತು. ಆದುದರಿಂದ ಅದರ ಪರಿಣಾಮವಾಗಿ ಅಲ್ಲಿ ನಡೆದುದನ್ನು ನೋಡಬೇಕೆಂದು ಆಕೆ ಮಲ್ಲಿಕಾರ್ಜುನ ಮಂದಿರದತ್ತ ಹೊರಟಳು. ಭಿನ್ನ ಭಿನ್ನ ವಿಚಾರಗಳಲ್ಲಿ ಮುಳುಗಿ ಮುಂದೊರೆಯುತ್ತಲಿರುವಾಗಲೇ ಎದುರಿನಲ್ಲಿ ಯುವರಾಜ ಬರುವದು ಕಾಣಿಸಿತು. ಆಕೆ ಬೇಗ ಬೇಗನೆ ಮುಂದೊರೆದು ಹೋಗಿ ಯುವರಾಜನನ್ನು ಕಂಡಳು.

'ಏನು ಹೇಮಾ, ಪ್ರಭುಗಳಿಗೆ ಅಸ್ವಸ್ಥತೆಯುಂಟೆ?'

'ಅಹುದು. ಕೊಂಚ ಪಿತ್ತಪ್ರಕೋಪವಾದಂತಾಗಿದ್ದಿತು.' 'ಈಗ ಹೇಗಿದೆ?'

'ಈಗ ಬಹುತರ ಸ್ವಸ್ಥವಾಗಿರುವರು. ಇಂದೊಂದು ದಿನ ಅವರನ್ನು ಶಾಂತವಾಗಿರಗೊಟ್ಟರೆ, ನಾಳೆಗೆ ಪೂರ್ಣ ಗುಣವಾಗುವದರಲ್ಲಿ ಸಂಶಯವಿಲ್ಲ; ಆದರೆ ಅಲ್ಲಿಯ ವೃತ್ತಾಂತವೇನು?

ಅರಸಿಗೆ ಅಸ್ವಸ್ಥತೆಯೆಂದು ಕೇಳುತ್ತಲೆ ಯುವರಾಜ ಅನ್ಯಯೋಚನೆಗೊಳಗಾಗದೆ ಅಂತಃಪುರದತ್ತ ಹೊರಟನು. ಅವನಿಗೆ ಅಲ್ಲಿ ಏನು ನಡೆಯಬಹುದೆಂಬ ಯೋಚನೆಯೇ ಉಳಿಯಲಿಲ್ಲ. ಅರಸಿನ ಒಂದೇ ಒಂದು ವಿಚಾರ ಅವನನ್ನು ಎಳೆದು ತಂದಿದ್ದಿತು. ಹೇಮಾಂಬಿಕೆ ಅಲ್ಲಿಯ ವಾರ್ತೆ ಕೇಳುತ್ತಲೆ, ಅವನು ಗಾಬರಿಯಾದನು. ನೂರಾರು ವಿಜಯನಗರದ ಆಧಾರಸ್ತಂಭದಂತಿದ್ದ ಸರದಾರ ಸಾಮಂತರು ಅಲ್ಲಿ ನೆರೆದಿದ್ದರು. ಅವರೆಲ್ಲರ ಪ್ರಾಣಘಾತ ನಡೆಯುತಲಿದ್ದಿತು. ಆದರವರಿಗೆ ಕೊಂಚವೂ ಸಂದೇಹವಿರಲಿಲ್ಲ. ಅದನ್ನರಿತವ ಯುವರಾಜನೊಬ್ಬನೇ; ಆದರಾ ಯುವರಾಜ....

ಯುವರಾಜ ಮಾತನಾಡದಿರಲು ಹೇಮಾಂಬಿಕೆ ಅಧೀರಳಾದಳು. ಅಲ್ಲಿಯ ವಿದ್ಯಮಾನಗಳರಿಯಲು ಆತುರಳಾದಳು. ಬಳಿಕ ಆತುರತೆಯ ಸ್ವರದಲ್ಲಿ, 'ನೀವರ ಪಾರುಪತ್ಯ ಕಂಡೇ ಬಂದಿರಲ್ಲವೆ?' ಎಂದು ಸಂದೇಹಮಿಶ್ರಿತ ಧ್ವನಿಯಲ್ಲಿ ಕೇಳಿದಳು.

ಯುವರಾಜ ಭ್ರಮಿಷ್ಟನಂತಾದನು. 'ಹೇಮಾ, ತಪ್ಪಾಯಿತು. ತಂದೆಯವರಿಗೆ ಅಸ್ವಸ್ಥತೆಯೆಂದು ಕೇಳಿ ಬರಲು, ನಾನು ಹುಚ್ಚನಂತೆ ಹೊರಟೇ ಬಿಟ್ಟೆನು. ಅವರಾರ ಯೋಚನೆಯೂ ಬರಲಿಲ್ಲ.' ಎಂದು ಕಳವಳದಿಂದ ನುಡಿದನು.

ಹೇಮಾಂಬಿಕೆ ಗಾಬರಿಯಾದಳು. ಆಕೆಗೆ ಜಗತ್ತೇ ಶೂನ್ಯವಾಗಿ ತೋರಹತ್ತಿತು. ಅತ್ಯಂತ ಆತುರತೆಯಲ್ಲಿ 'ಯುವರಾಜ, ಘಾತವಾಯಿತು! ವಿಜಯನಗರದ ನೂರಾರು ನಿಷ್ಪಾಪ ಜೀವಗಳ ಅಂತವಾಯಿತು. ವಿಜಯನಗರದ ನಿರಪರಾಧ ಸರದಾರರು ಹತರಾದರು. ಹಾಯ್! ಹಾಯ್! ಏನನರ್ಥವು?' ತುಂಬಿದ ಕಂಠದಿಂದ ಹೇಮಾಂಬಿಕೆ ನುಡಿದಳು.

ಯುವರಾಜನ ಜೀವ ತಲ್ಲಣಿಸಹತ್ತಿತು. ಎದೆ ಬಡಿದುಕೊಳ್ಳಹತ್ತಿತು. 'ಹೇಮಾ, ಈಗಲೆ ಹೋಗುವೆ. ನಾನು ಹೊರಟು ಬಹಳ ವೇಳೆಯಾಗಿಲ್ಲ. ಈಗಲೆ ಅನರ್ಥ ಸಂಭವಿಸಿರಲಿಕ್ಕಿಲ್ಲ.' ಎಂದವನೇ ಮಲ್ಲಿಕಾರ್ಜುನ ಮಂದಿರದತ್ತ ಓಡಹತ್ತಿದನು.

ಹೇಮಾಂಬಿಕೆ ಅತ್ಯಂತ ದುಃಖದಿಂದ ಮಲ್ಲಿಕಾರ್ಜುನ ಮಂದಿರದೊಳಗಿನ ದಾರುಣ ನೋಟ ಸ್ಮರಿಸುತ್ತ ಅತ್ತವೇ ಹೊರಟಳು. ಆಕೆಯ ಚೈತನ್ಯವೇ ಲೋಪವಾಯಿತು. ವಿರೂಪಾಕ್ಷ ಮತ್ತು ಪ್ರತಾಪವರ್ಮನಾಯಕರ ಬಗ್ಗೆ ಅತ್ಯಂತ ತ್ವೇಷವೆನಿಸತೊಡಗಿತು. ಅಷ್ಟರಲ್ಲಿ ಎದುರಿನಿಂದ ಹೇಮಾಂಬಿಕೆಯ ಬಹಳ ವಿಶ್ವಾಸುಕಳಾದ ಚೆನ್ನಾಂಬೆ ದಾಸಿ ಬಂದಳು. ಹೇಮಾಂಬಿಕೆ ಆತುರತೆಯಿಂದ:--'ಚೆನ್ನಾ, ಮಲ್ಲಿಕಾರ್ಜುನ ಮಂದಿರದ ವಾರ್ತೆಯೇನು?' ಎಂದು ಕೇಳಿದಳು.

'ಉಳಿದ ಪಕ್ವಾನ್ನಗಳಾವನನ್ನೂ ಬಡಿಸದೆ, ಆ ಮುಖ್ಯ ಪಾಯಸವನ್ನೇ ಬಡಿಸುವಂತೆ ವ್ಯವಸ್ಥೆಯಾಗಿ, ಬಡಿಸಿದಂತಾಯಿತು.'

'ಅಂದರೆ, ಎಲ್ಲರೂ ಪಾಯಸ ಸೇವಿಸಿದರೆ?' ಹೇಮಾಂಬಿಕೆ ಅತೀವ ಉತ್ಕಂಠೆಯಿಂದ ಪ್ರಶ್ನೆ ಮಾಡಿದಳು.

'ಹೇಗೆ ತಿನ್ನುವರು? ಅಲ್ಲಿ ಯುವರಾಜರಿರಲಿಲ್ಲವೆ?' ಚಿನ್ನಾಂಬೆ ಶಾಂತಳಾಗಿ ಪ್ರಶ್ನೆ ಮಾಡಿದಳು.

'ಅಲ್ಲಿ ನೀನು ಯುವರಾಜನನ್ನು ನೋಡಿದೆಯಾ?' ಹೇಮಾಂಬಿಕೆ ಮತ್ತೆ ಕೇಳಿದಳು.

'ಅಂದರೆ, ಅಲ್ಲಿ ಯುವರಾಜರಿರಲಿಲ್ಲವೆ?' ಚಿನ್ನಾಂಬೆ ಆತುರಳಾಗಿ ಕೇಳಿದಳು.

'ಇಲ್ಲ. ಅವರು ಈಗ ತಾನೇ ಅತ್ತ ಹೋದರು. ನೀನು ನೋಡಲಿಲ್ಲವೆ?' ಹೇಮಾಂಬಿಕೆ ಉತ್ಕಂಠತೆಯಿಂದ ಕೇಳಿದಳು.

'ಇಲ್ಲ. ಅವರು ಅಲ್ಲಿರುವರೆಂದೇ ನನ್ನ ನಂಬಿಗೆಯಿದ್ದಿತು. ನಾನು ಅವಸರದಿಂದ ನಿಮ್ಮನ್ನು ಕಾಣಲು ಹೊರಟಿದ್ದೆನು. ಆದುದರಿಂದ ಎಡ-ಬಲಗಳಾವನ್ನೂ ನೋಡಲಿಲ್ಲ' ಚಿನ್ನಾಂಬೆಯೆಂದಳು.

'ಅಂತಹ ಅವಸರದ ಕೆಲಸವೇನು?' ಹೇಮಾಂಬಿಕೆ ಆತುರತೆಯಿಂದ ಪ್ರಶ್ನೆ ಮಾಡಿದಳು.

ಚಿನ್ನಾಂಬೆ ಅತ್ತಿತ್ತ ನೋಡಿ, 'ಪ್ರತಾಪದೇವರಾಯರು ಅರಮನೆಯತ್ತ ಹೋಗಿರುವರು. ದುಷ್ಟ ಹೇತುವೇನೋ ಇರಬೇಕೆಂದು ತೋರುತ್ತದೆ. ಆದುದರಿಂದ ನಿಮಗೆ ಸೂಚನೆ ಕೊಡಲು ಬಂದಿರುವೆನು' ಎಂದಳು.

ಚಿನ್ನಾಂಬೆಯ ಮಾತು ಕೇಳಿ ಹೇಮಾಂಬಿಕೆ ಅತೀವ ಗಾಬರಿಯಾದಳು. 'ಹಾಯ್-ಹಾಯ್! ಶಂಪಾಪತೀ, ಈಗೇನು ಮಾಡಲಿ?' ಆರ್ತಸ್ವರದಿಂದ ಕೂಗಿದಳು.

'ತಡವಾದರೆ ಘಾತವಾದೀತು. ಬೇಗನೆ ಓಡುತ್ತ ಹೋಗಬೇಕು. ಅಲ್ಲಿ ಏನು ಅನರ್ಥ ನಡೆದಿದೆಯೋ ಆ ಶಂಪಾಪತಿಗೇ ಅರಿಕೆ!' ಚಿನ್ನಾಂಬೆ ತ್ವರೆಪಡಿಸಿದಳು.

ಹೇಮಾಂಬಿಕೆ ಮೂಢಳಂತಾದಳು. ಏನಾದರೂ ಅರಮನೆಗೆ ಓಡುವದೇ ಯೋಗ್ಯವೆಂದು ಬಗೆದಳು. ಮಲ್ಲಿಕಾರ್ಜುನ ಮಂದಿರದಲ್ಲಿ ನೂರಾರು ನಿರಪರಾಧಿ ಜೀವಿಗಳ ದುರವಸ್ಥೆಯ ಸ್ಮರಣೆಯಾಗಿ ಆಕೆಗೆ ತಳಮಳವಾಯಿತು. ಕೂಡಲೆ ಆಕೆಗೆ ಯುವರಾಜನ ವಿಚಾರ ಬಂದಿತು. ಆ ಯುವರಾಜ ನೋಟದಿಂದ ಉದಾಸೀನನಾದಾಗ್ಗೆ ವೈರಿಗಳು ಘಾತಿಸಬಹುದೆಂಬ ಸಂಶಯವು ಆಕೆಗೆ ಇತಿಮಿತಿಯಾಯಿತು! ಒಂದೆಡೆ ಆಳುವರಸಿನ ಕುಶಲ ಶಂಕಾಸ್ಪದವಾಗಿತ್ತು. ಇನ್ನೊಂದೆಡೆ ತನ್ನ ಪ್ರೇಮನಿಧಿ ನಾಶವಾಗುವ ಸಮಯ ಪ್ರಾಪ್ತವಾಗಿತ್ತು. ಅರಸು ಅಸ್ವಸ್ಥನಿದ್ದು, ಅಲ್ಲಿ ಇನ್ನಾರೂ ಇರಲಿಲ್ಲ. ಅಲ್ಲಿ ತಾನು ಹೋಗಲೇಬೇಕೆಂದು ಬಗೆದಳು. ಹಾಗಾದರೆ ಯುವರಾಜ? ಒಂದೇ ಕ್ಷಣ ಯೋಚಿಸಿದಳು. ಮರುಕ್ಷಣದಲ್ಲಿ 'ಚಿನ್ನಾ, ನೀನೀಗಲೇ ಮಲ್ಲಿಕಾರ್ಜುನನ ಮಂದಿರಕ್ಕೆ ತೆರಳು. ಯುವರಾಜ ಅಸಾವಧನಾಗಲು ಅನರ್ಥ ಸಂಭವಿಸಬಹುದು. ಏನಾದರೂ ಮಾಡಿ ಯುವರಾಜನನ್ನು ಕಾಯುವದು ನಿನ್ನ ಕೆಲಸ' ಎಂದವಳೇ ವಿದ್ಯುದ್ವೇಗದಿಂದ ಹೊರಟಳು. ಚಿನ್ನಾಂಬೆ ಮಲ್ಲಿಕಾರ್ಜುನನ ಮಂದಿರದತ್ತ ಓಡಿದಳು.

# ೧೪ ದಾರುಣ ನೋಟ.

ಯುವರಾಜ ಮತ್ತನಂತಾಗಿದ್ದನು. ಗಾಳಿಗೆ ಹಾರುವ ಜೀರ್ಣಪರ್ಣದಂತೆ ಓಡುತ್ತಲಿದ್ದನು. ಎಡ-ಬಲ ನೋಡಲಿಲ್ಲ; ಮುಂದೆ ಮಾರ್ಗ ಯೋಚಿಸಲಿಲ್ಲ. ತಲೆಯಲ್ಲಿ ಒಂದೇ ಒಂದು ವಿಚಾರ ಮನೆ ಮಾಡಿದ್ದಿತು. ತಾನು ಅಲ್ಲಿ ಹೋಗುವ ಸಮಯಕ್ಕೆ ಅಲ್ಲಿ ಏನು ನಡೆಯಬಹುದು? ಯಾವ ನೋಟ ತನಗೆ ಕಾಣಬಹುದು? ಏನು-ಏನು ಅನರ್ಥಗಳು ನಡೆದಿರಬಹುದು? ಎಂತಹ ಪರಿಸ್ಥಿತಿಯಲ್ಲಿ ತಾನು ಮಲ್ಲಿಕಾರ್ಜುನ ಮಂದಿರದಲ್ಲಿ ಕಾಲಿಡಬಹುದು? "ನಾನು ಹೋಗುವ ಸಮಯಕ್ಕೆ ಭೀಕರ ಹತ್ಯಾಕಾಂಡಕ್ಕಾರಂಭವಾಗಿದ್ದರೆ—ಅಲ್ಲ, ನಾನು ಎಂತಹ ಪ್ರಸಂಗವನ್ನೆದುರಿಸಬೇಕಾದೀತು? ಕಾಪಟ್ಯಸಿದ್ಧಗೊಳಿಸಲು ಏನು ಮಾಡಬೇಕಾದೀತು? ಅಥವಾ—ಅಥವಾ ಆ ಕಾಪಟ್ಯವೇ ಸಟೆಯಿದ್ದರೆ? ಇಷ್ಟೆಲ್ಲ ಯೋಚನೆಯೊಳಗಾದುದು ವ್ಯರ್ಥವಾಗುವದೇನೋ ನಿಜ; ಆದರೆ ನಾವು ಊಹಿಸುತ್ತಿರುವ ಭೀತಿಯನ್ನ, ನಿರೀಕ್ಷಿಸುತ್ತಲಿದ್ದ ಆ ದುರ್ಧರ ಪ್ರಸಂಗವಾದರೂ ತಪ್ಪುವುದು. ನಮಗೆ ಇನ್ನೆಷ್ಟೋ ಸಂಕಟಗಳು ಸಂಭವಿಸಿದರೂ ನಮ್ಮ ಪ್ರಜಾಜನರು ಪೀಡೆಯಿಲ್ಲದವರಾಗುವರು; ಆದರೆ-ಆದರೆ ಛೀ! ಅದು ಶಕ್ಯವಿಲ್ಲ. ಇದು ವರೆಗೆ ನೂರಾರು ಸಲವಾದರೂ ಯೋಚಿಸಿರುವೆ. ಒಮ್ಮೆಲೆ ಇಷ್ಟು ಸ್ವಾರ್ಥತ್ಯಾಗ ತೋರಿಸಲು ಈ ತಂದೆ-ಮಕ್ಕಳು ಆರಂಭಿಸಿದ ಕಾರಣವೇನಿರಬೇಕು?-ಅವರು ಕಾಪಟ್ಯಕ್ಕೆ ಕೈಗೊಟ್ಟುದೇ ಸರಿ. ಹಾಗಿದ್ದರೆ-ಹಾಗಿದ್ದರೆ ಅವರು ನಾನು ಹೋಗುವ ಸಮಯಕ್ಕೆ ಏನು ಮಾಡುತ್ತಲಿರುವರು? ನಾನೆಂತಹ ಮೂರ್ಖನು? ಸಂಗಣ್ಣಮಂತ್ರಿಗಳಿಗಾದರೂ ಸೂಚಿಸಬಾರದಿತ್ತೆ? 'ಸಟೆಯೋ'-'ದಿಟವೋ' ಎಂಬ ಆಂದೋಲನದಲ್ಲಿ ಸಿಲುಕಿ, ಎಂತಹ ಮೂರ್ಖತನ ಮಾಡಿದೆನಲ್ಲ? ತಂದೆಯವರಿಗೆ ಅಸ್ವಸ್ಥತೆಯಾದರೂ ಇದೇ ಸಮಯಕ್ಕೆ ಆಗಬೇಕೇ? ಅವರ ಅಸ್ವಸ್ಥತೆಯ ಸಂಗತಿಯರಿಯುತ್ತಲೆ ಹಿಂದು ಮುಂದಿನ ಯೋಚನೆಯಿಲ್ಲದೆ ಹೋಗಿಬಿಟ್ಟೆನಲ್ಲ! ಹಾಯ್! ಹಾಯ್! ಪಂಪಾಪತೇ, ನಾನು ಅಲ್ಲಿಗೆ ತಲುಪುವವರೆಗೆ ಹೇಗಾದರೂ ಮಾಡಿ ಈ ಅನರ್ಥ ತಡೆ''

ಯುವರಾಜ ವೇಗವಾಗಿ ಓಡುತ್ತಲಿದ್ದನು; ಆದರೆ ಅವನ ತಲೆಯಲ್ಲಿಯ ವಿಚಾರಗಳ ತಂಡ ಅದಕ್ಕೂ ವೇಗವಾಗಿ ತಿರುಗುತ್ತಲಿದ್ದಿತು. ದಾರಿಯಲ್ಲಿ ಹಲವರು ಬರುತ್ತಲಿದ್ದರು; ಹಲವರು ಹೋಗುತ್ತಲಿದ್ದರು. ಅವರಿಗೆ ಯುವರಾಜನ ಆ ಅವಸ್ಥೆ ಕಾಣುತ್ತಲೇ ಆಶ್ಚರ್ಯವೆನಿಸಿತು. ತಮ್ಮ-ವಿಶಾಲ ಕರ್ನಾಟಕ ಸಾಮ್ರಾಜ್ಯದ ಯುವರಾಜ—ಪ್ರಜಾಪ್ರೇಮಿ ಯುವರಾಜ, ಭಾವೀ ಕರ್ನಾಟಕ ಸಮ್ರಾಟ ಹೀಗೇಕೆ ಕಾಲಿನಿಂದಲೇ ನಡೆಯುತ್ತ ಹೊರಟಿರುವನು? ಅವನು ಎಡ-ಬಲಗಳನ್ನು ನೋಡದೆ ಒಂದೇ ಸಮನೆ ಓಡುತ್ತಲಿದ್ದರ ಕಾರಣವೇನು? ಅನೇಕರು ಯುವರಾಜನನ್ನು ಹಿಂಬಾಲಿಸಿದರು.

ಯುವರಾಜ ಅತಿತ್ವರೆಯಿಂದ ಮಲ್ಲಿಕಾರ್ಜುನ ಮಂದಿರದ ಹೆಬ್ಬಾಗಿಲಿಗೆ ಬಂದ. ಅಲ್ಲಿ ಯಾರನ್ನೂ ಒಳಗೆ ಬಿಡಕೂಡದೆಂಬ ಕಟ್ಟಪ್ಪಣೆಯಿದ್ದಿತು. ಬಾಗಿಲು ಕಾಯು

ನವರು ಯುವರಾಜನನ್ನು ನೋಡಿದರೂ ಕೂಡ ವಿಚಾರಕ್ಕೆ ಬಿದ್ದರು. ಅದರೂ ತಡೆಯುವ ಯೋಜನೆಯಲ್ಲಿಯೇ ಇದ್ದರು. ಯುವರಾಜನಿಗೆ ಅಷ್ಟೆಲ್ಲ ಅವಕಾಶವೇ ಇರಲಿಲ್ಲ. ತನ್ನ ಎರಡೂ ಕೈಗಳಿಂದ ಇಬ್ಬರನ್ನೂ ದೂಡಿ ಒಗೆದು ಒಳಗೆ ಓಡಿದನು. ಅಲ್ಲಿ ಆತನ ಕೈ ಕಾಲು ಕಳಚಿಯೇ ಹೋದವು ಯಾವ ದುರ್ಘಟ ಪ್ರಸಂಗಕ್ಕೆ ಅವನ ಮನವು ಭಯಪಡ ತ್ತಲಿದ್ದಿತೋ, ಆ ಭೀಕರ, ಭಯಾನಕ, ಕ್ರೂರ ಪ್ರಸಂಗ ನೋಡಿ ಅವನ ಕಣ್ಣು ಕತ್ತಲೆಗೂಡಿಸಿದವು! ಚೇತನ ಲುಪ್ತವಾಯಿತು! ಕಾಲ್ಗಳು ಕಂಪಿಸಲಾರಂಭಿಸಿದವು! ದೀನ ದೃಷ್ಟಿಯಿಂದ ಆ ಅತ್ಯಂತ ಕ್ರೂರವಾದ ನೋಟ ನೋಡಹತ್ತಿದನು. ಕ್ರೌರ್ಯದ ಅಂತಿಮ ಸೀಮೆಯನ್ನೂ ದಾಟಿ ಹೋದಾ ಕಠೋರ ಅಸುರೀ ನೋಟದಿಂದ ನೋಟ ಕಿತ್ತದಾಯಿತು. ಕಂಪಿಸುವ ಸ್ವರದಿಂದ 'ದೇವಾ, ಪಂಪಾಧೀಶಾ, ಇದೇನು ಮಾಡಿದೆ?' ಎಂದು ನುಡಿದು ಸ್ತಬ್ಧನಾಗಿ ನಿಂತುಬಿಟ್ಟನು.

ಒಂದು-ಒಂದೂವರೆ ಗಳಿಗೆಯ ವರೆಗೆ ಯುವರಾಜ ಕಣ್ಣು ಕೂಡ ಪಿಳುಕಿಸದೆ ಆ ರಾಕ್ಷಸೀ ನೋಟದಿಂದ ಮತ್ತನಂತಾಗಿ ನಿಂತುಬಿಟ್ಟನು. ನೆಟ್ಟು ಹೋದ ಭೀತಿ, ತೀವ್ರವಾದ ನಿರಾಶೆ, ಘನವಾದ ತ್ವೇಷ ಎಲ್ಲವುಗಳಿಂದಾವೃತನಾಗಿ ಕಲ್ಲುಮೂರ್ತಿ ಯಂತೆ ನಿಂತುಬಿಟ್ಟನು. ಆ ಸಮಯ ಅವನ ತಲೆಯಲ್ಲಿ ಯಾವ ವಿಚಾರವೂ ಇರ ಲಿಲ್ಲ; ಹೃದಯದಲ್ಲಿ ಯಾವ ಭಾವನೆಯೂ ಇರಲಿಲ್ಲ. ತಲೆ, ಮನ, ಹೃದಯ ಗಳೆಲ್ಲ ಶೂನ್ಯವಾಗಿದ್ದುವು. ಶೂನ್ಯದೃಷ್ಟಿಯಿಂದ ನೋಡುತ್ತ, ಅಲ್ಲಾಡದೆ ನಿಂತು ಬಿಟ್ಟನು. ದುಃಖವು ಪರಮಾವಧಿಯಾಗಿದ್ದಿತು. ನಾಲಿಗೆ ಕಿವಿ ಕಣ್ಣುಗಳೆಲ್ಲವೂ ಚೇತನೆಯಿಲ್ಲದೆ ಕಲ್ಲುಮೂರ್ತಿಯ ಅವಯವಗಳಂತಾಗಿದ್ದುವು.

ಇಂತಹ ನಂತರ ಹೃದಯವಿದಾರಣವಾದಾ ಅವಸ್ಥೆಯಲ್ಲಿ ಕೊಂಚ ಸಮಯವ ಕಳೆಯಲು, ಯುವರಾಜ ಚೇತರಿಸಿಕೊಂಡೆದ್ದನು. ತೊಲಗಿ ಹೋದ ಚೇತನ, ಭಾವನೆ, ವಿಚಾರ, ವಿಕಾರಗಳೆಲ್ಲವೂ ಮರಳಿ ಬಂದುವು. ಕಲ್ಲುಮೂರ್ತಿಯಂತಿದ್ದ ಯುವರಾಜ ಪುನಃ ಯುವರಾಜನಾದ; ಆದರೆ ಅದೆಂತಹ ಮಾರ್ಪಾಟು? ನಂದನ ವನದಲ್ಲಿ ಆನಂದದಿಂದ ಕ್ರೀಡಿಸುವಂತಹನನ್ನೊಯ್ದು ಸಹರಾದ ಮರುಭೂಮಿಯ ಮಧ್ಯದಲ್ಲಿ ನಿಲ್ಲಿಸಿ ಮಾಯವಾಗಿ ಬಿಟ್ಟರೆ-ನಿರಾಶೆಯ ಪರಮಾವಧಿಯಾದರೆ-ಆಗ್ಗ ಮನುಷ್ಯನಿಗೆ ತನ್ನ ಅರಿವೇ ತನಗುಳಿಯುವದಿಲ್ಲ.

'ದೇವಾ, ಏನಿದು? ನಾನೇನನ್ನು ನೋಡುತ್ತಲಿರುವೆನು? ಇದೆಂತಹ ದಾರುಣ ನೋಟ ನೋಡಲು ನನಗೆ ನೀಡಿದೆ? ಇಂತಹ ಅಸುರೀ ನೋಟ ನೋಡುವದಕ್ಕಿಂತ ಲೂ ಕಣ್ಣಳೇ ಕಳಚಿ ಹೋಗಲಾಗದೆ? ಕಿವಿಗಳೇ ಕಿವುಡಾಗಬಾರದೆ?......ಹಾಯ್! ಹಾಯ್!-ದೇವಾ, ಈ ಪಲ್ಲವನ್ನೂ, ನನ್ನ ಪರಮ ಪ್ರೀತಿಯ ಅಪ್ತರನ್ನೂ, ಮಿತ್ರ ರನ್ನೂ-ಇಷ್ಟರನ್ನೂ-ಎಲ್ಲರನ್ನೂ ಹೀಗೇಕೆ ನಿರ್ದಯನಂತೆ ಎಳೆದೊಯ್ದೆ? ಅವರು ಮಾಡಿದ ಅಪರಾಧವೇನು?....ಅವರೊಡನೆ ನನ್ನನ್ನೂ ಒಯ್ಯದೆ ಬಿಟ್ಟುದೇಕೆ? ಈ ಭೀಕರ ನೋಟ ನೋಡಿ-ನೋಡಿ, ದುಃಖಾತಿರೇಕದಿಂದ ತಳಮಳಿಸಲು ನನ್ನನ್ನು

ಬಿಟ್ಟುದೇಕೆ? ಎಂತಹ ದುಷ್ಟ ದಿನವಿದು?’

ಯುವರಾಜ ಹುಚ್ಚನಂತಾದನು. ದುಃಖಪೂರ್ಣ ನೋಟ ಮತ್ತೆ ಮತ್ತೆ ನೋಡಹತ್ತಿದನು. ಹೃದಯದ ಗಾಯ ಬೆಳೆಯುತ್ತಲೆ ನಡೆಯಿತು. ನಿಟ್ಟುಸಿರು ಪ್ರತಿಕ್ಷಣ ಹೃದಯದ ಭಾರವನ್ನು ಹಗುರು ಮಾಡಲು ಹೊರಬೀಳುತ್ತಲಿದ್ದಿತು; ಆದರೆ ಸತತವಾಗಿ ಕಣ್ಣಿಗೆ ಬಿದ್ದಾ ದಾರುಣ ನೋಟ ಹೃದಯ ಹಿಡಿದಂತೆ ತುಂಬಿ ಅವನಿಗೆ ಮೇಲಕ್ಕೇಳಲು ಬಾರದಂತೆ ಮಾಡಿದ್ದಿತು.

ಭಾರವಾದ ಹೃದಯದಿಂದ ಕೇಳಲಾರದಡಿಗಳನ್ನು ಕಿತ್ತಿ ಕೆಳಗಿಳಿದನು.

‘ಇವರಾರು?-ಆಂ-ಇವರು ಸಂಗಣ್ಣ ಮಂತ್ರಿಗಳು! ಅಯ್ಯೋ ದೇವರೇ! ಇಂತಹ ಮಾನವಶ್ರೇಷ್ಠ ಮರೆಯಾದನೇ? ಅಯ್ಯೋ ಮಂತ್ರಿಪುಂಗವರೇ, ನಿಮ್ಮನ್ನೆಲ್ಲಿ ಕಾಣುವೆ? ನಿನ್ನ ಚತುರ ಮಾತು, ವಿಚಾರಪೂರ್ಣ ಭಾಷಣ, ವಿದ್ವತ್ಪೂರ್ಣ ಸಲಹೆಗಳನ್ನು ನಾವೆಲ್ಲಿ ಪಡೆಯುವೆವು? ದೇವಾ-ದೇವಾ, ಏನನರ್ಥವಿದು? ಇದಕ್ಕಿಂತಲೂ ಮಿಗಿಲಾದ ಕ್ರೌರ್ಯವಿರಬಹುದೆ? ಹಾಯ್! ಹಾಯ್! ಚತುರ ಮಂತ್ರಿಶ್ರೇಷ್ಠರಿಗಾದರೂ ಕೊಂಚ ದಯದೋರಬಾರದೆ?-ಮಾನವನ ಅಸ್ಥಿರತೆಯಾದರೂ ಎಷ್ಟು? ಈಗ ತಾಸಿಗೆ ಮೊದಲು ಕರ್ನಾಟಕ ಸಾಮ್ರಾಜ್ಯವನ್ನೇ ಅಲುಗಾಡಿಸುವ ಶಕ್ತಿವಂತ, ವಿದ್ವನ್ಮಣಿಗಳನ್ನೂ ತಲೆದೂಗಿಸುವ ವಿದ್ವಾನ, ಚಾತುರ್ಯಕ್ಕೆಲ್ಲ ಆಶ್ರಯಸ್ಥಾನ, ಇಂತಹ ಪುರುಷಶ್ರೇಷ್ಠನ ಅವಸ್ಥೆ ಈಗೇನಾಗಿದೆ? ಅದೇ ಕೈ, ಅದೇ ಬಾಯಿ, ಅದೇ ತಲೆಗಳಿವೆ. ಆದರದೆಂತಹ ಮಾರ್ಪಾಟು! ಒಂದೇ ಒಂದು ಬರೆಹದಿಂದ ವಿಶಾಲ ಕರ್ನಾಟಕ ಸಾಮ್ರಾಜ್ಯಕ್ಕೆ ಸಾಮ್ರಾಜ್ಯವಲ್ಲಾಡಿಸುವ, ವೈರಿಯೆದೆಗಳನ್ನಳುಕಿಸುವ, ಪಂಡಿತರನ್ನೂ ಮಣಿಸುವ ಕರವು ಈಗೇನು ಮಾಡುವಂತಿದೆ? ವಿದ್ವತ್ಪೂರ್ಣ, ವಿಚಾರ ಪರಿಪ್ಲುತ, ರಸಭರಿತ ವಾಣಿಯಿಂದ ಸಕಲರ ಹೃದಯಗಳನ್ನೂ ಆಕರ್ಷಿಸುವ ಮುಖ ಈಗೇನು ಮಾಡಬಲ್ಲದು? ಎಂತಹ ಅಜ್ಞಾನವಿದು? ಈ ಅವಸ್ಥೆ ಪ್ರತಿನಿತ್ಯ ನೋಡುತ್ತಲಿದ್ದರೂ ಮತ್ತೆ ಮತ್ತೆ ಮತ್ತರಾಗಿ ಆಚರಿಸುತ್ತಿರುವೆವಲ್ಲ? ಒಂದೇ ಒಂದು ಗಳಿಗೆಯಲ್ಲಿ ಇಂತಹ ಭೀಕರ ಮಾರ್ಪಾಟು ಮಾಡಿರುವರಲ್ಲವೆ? ಆದರೆ-ಆದರೆ-ನೀವು ಚಿರಂಜೀವಿಗಳೇ? ಇಂದು ಇಲ್ಲಿ ಕಾಣುವ ಈ ಚೈತನ್ಯಹೀನತೆ ನಿಮಗೆ ಬಾರದಿರುವದೇ? ನಿಮ್ಮ ಈ ಘೋರ ಕಾರ್ಯಕ್ಕೆ ಕೈಗೊಟ್ಟ ತಲೆ ಹೃದಯ ಮನಗಳು ಕೊನೆಯವರೆಗೂ ಇದೇ ಸ್ಥಿತಿಯಲ್ಲುಳಿವವೇ? ಮೂರ್ಖರಿರಾ, ಕೊಂಚ ಕಣ್ದೆರೆದು ನೋಡಬಾರದೆ? ತಂದೆಯೊಡನೆ ಮಧುರ ಪಕ್ವಾನ್ನಗಳನ್ನು ಸವಿಯ ಬಂದ ಈ ಚಿಕ್ಕ ಮಗುವನ್ನಾದರೂ ನೋಡಿ ನಿಮ್ಮ ಪಾಷಾಣ ಹೃದಯ ಕರಗಬಾರದೆ? ಇಲ್ಲಿ ನೋಡಿ ಈ ಚಿಕ್ಕ ಬಾಲಿಕೆ ನರ್ತಕಿಯನುಕರಣ ಮಾಡುತ್ತಲಿದ್ದಾಗಲೇ ಮೃತಪಟ್ಟಿರುವಳು. ಇಲ್ಲಿ ಕರ್ನಾಟಕ ಸಾಮ್ರಾಜ್ಯದ ಚತುರ ಸೇನಾನಾಯಕರು! ಏಕೆ ಸೇನಾಧೀಶರೇ, ನಿಮ್ಮ ಚಾತುರ್ಯವೆಲ್ಲಿ ಹೋಯಿತು? ಆ ಚಾಂಡಾಲ ವಿರೂಪಾಕ್ಷನ ಮೊಗವನ್ನೊಂದು ಸಲ ನೋಡಿದ್ದರೆ ನಿಮಗೆ ತಿಳಿಯದಿರುತ್ತಲಿರಲಿಲ್ಲ. ಜನರ ಹೃದಯ

ಪರೀಕ್ಷೆ ಮಾಡಲಾರದ ನೀವು ಹೇಗೆ ಸೇನಾಪತಿಯಾದಿರಿ?-ಅಯ್ಯೋ ಸಂಗಣ್ಣಮಂತ್ರಿಗಳಂತಹ ಚತುರರೇ ಅರಿಯುದಿರುವದನ್ನು ನೀವು ನೋಡುವುದು ಹೇಗೆ?—'

ಯುವರಾಜ ಮತಿಭ್ರಷ್ಟನಂತೆ ಅಂಡಲೆಯುತ್ತಲಿದ್ದನು.

ವಿಶಾಲವಾದ ಭವನ, ಸುಂದರವಾದಾಸನಗಳು, ಸುವಸ್ತ್ರಗಳಿಂದ ಭೂಷಿತರಾದ ಅನೇಕ ಸರದಾರರು, ಸಾಮಂತರು ಸಾಲ್ಗೆಡಿದು ಕುಳಿತಿದ್ದರು; ಆದರೆ-ಆದರೆ-ಕುಳಿತಲ್ಲಿಯೇ ಅವರ ಅಂತವಾಗಿದ್ದಿತು. ವಿರೂಪಾಕ್ಷನ ಅಪ್ಪಣೆಯಾಗುತ್ತಲೆ ಪಾಯಸ ಬಡಿಸಿಯಗಾಯಿತು. ಒಂದು ಸಲ ಪಂಪಾಪತಿಯು ಜಯಘೋಷದೊಡನೆ ಒಂದು ತುತ್ತು ಬಾಯಲ್ಲಿಟ್ಟರು. ಮತ್ತೊಂದು ತುತ್ತು ತೆಗೆದುಕೊಳ್ಳುವ ಶಕ್ತಿಯೇ ಉಳಿಯಲಿಲ್ಲ. ಜಾಜ್ವಲ್ಯವಾದ ವಿಷದ ಪರಿಣಾಮವಾಗಿ ಪಂಪಾಪತಿಯು ಜಯಘೋಷದೊಡನೆ ಪಂಪಾಪತಿಯಲ್ಲಿಯೇ ಐಕ್ಯರಾದರು! ವಿಷವು ತನ್ನ ಕಾರ್ಯ ಅಲ್ಪಾವಕಾಶದಲ್ಲಿಯೇ ಕೈಗೂಡಿಸಿತು. ಕುಳಿತವರೆಲ್ಲರೂ ಕುಳಿತಂತೆಯೇ ಉಳಿದಿದ್ದರು; ಅಳಿದಿದ್ದರು. ಅವರೆಲ್ಲರ ಜೀವಜ್ಯೋತಿ ಲಯವಾಗಿ 'ಕಾಷ್ಠಲೋಷ್ಠಸಮ' ಕಾಯಗಳು ಮಾತ್ರ ಅಲ್ಲಿ ಕುಳಿತಿದ್ದುವು. ಯಾರಾದರೂ ಬಂದು ನೋಡಿದರೆ ಮೊದಲು ನೋಟಕ್ಕೆ ಅವರು ತೀರಿರುವರೆಂಬ ಕಲ್ಪನೆ ಬರುವಂತಿರಲಿಲ್ಲ; ಆದರೆ ಕೊಂಚವೇ ನಿರೀಕ್ಷಿಸಿದಲ್ಲಿ, ಸೊಟ್ಟ ಬಾಯಿತೆರದ, ಮೇಲುಗಣ್ಣಿದ್ದ, ಅಡ್ಡವಾದ ಬಿದ್ದ ಆ ವಿಕೃತವಾದ ಆಕೃತಿಗಳನ್ನು ನೋಡಿ ಓಡುವಂತಿದ್ದಿತು. ಪಿಶಾಚಗಳ ವಸತಿಸ್ಥಾನವೋ, ಭೂತಗಳ ನಾಟ್ಯಸ್ಥಾನವೋ, ದೆವ್ವಗಳ ನರ್ತನ ಗುಹೆಯೋ, ವೇತಾಳಗಳ ಚರ್ಚಾಕೂಟವೋ ಎಂದು ಭಯಪಟ್ಟು, ಭೀತಿಯಿಂದ ಚೇತನಾಹೀನನಾಗಿ ಬೀಳುವಂತಿದ್ದಿತು.

ಯುವರಾಜ ದುಃಖದ ಮೂರ್ತಿಯೇ ಆಗಿದ್ದನು. ಶೋಕಸಾಗರದಲ್ಲಿ ವಾಸಿಸುವ ಶೋಕಮೂರ್ತಿಯೇ ಆಗಿದ್ದನು. ಶೋಕರಸ ಮೈಗೊಂಡು ಬಂದಂತಾಗಿದ್ದಿತು. ದುಃಖಪೂರ್ಣ ನೋಟ ಮತ್ತೆ ಮತ್ತೆ ನೆಟ್ಟ ದಿಟ್ಟಿಯಿಂದ ನೋಡುತ್ತಲಿದ್ದನು. ಆ ಕ್ರೂರ ಅತ್ಯಾಚಾರಕ್ಕೆ ಬಲಿಬಿದ್ದು ಪ್ರಾಣ ಕಳೆದುಕೊಂಡ ತರುಣ, ಪ್ರೌಢ, ವೃದ್ಧ ಮೃತಜೀವಿಗಳನ್ನು ಮತ್ತೆ ಮತ್ತೆ ನೋಡುವನು. ಭೀತಿ ಮಾಯವಾಗಿದ್ದಿತು. ಜೀವದಿಂದಿದ್ದರೂ ಆ ಮೃತಜೀವಿಗಳೊಡನೆ ಒಂದಾಗಿ ಹೋಗಿದ್ದನು. ದುಸ್ಸಹನೀಯವಾದ ನೋಟ ನೋಡಿ ನೋಡಿ ಅವನ ಹೃದಯ ಕರಗಿ ನೀರಾಗಿದ್ದಿತು. ಹೃದಯದ್ರಾವಕ ನೋಟದಿಂದ ಕಣ್ಣು ಕಳೆಗೆಟ್ಟವು. ಆ ದುಃಖಪೂರ್ಣ ನೋಟ ಅವನ ರೋಮ ರೋಮಗಳಲ್ಲಿ ತುಂಬಿಹೋಯಿತು.

'ಅಯ್ಯೋ! ಎಂತಹ ಸುಕುಮಾರ ತರುಣನಿವ? ಮನೆಯಲ್ಲಿ ಪ್ರೇಮದ ಮಡದಿಯಿರಬಹುದು. ನಲ್ಲ ಬೇಗ ಬರುವನೆಂದು ನಿರೀಕ್ಷಿಸುತ್ತಲಿರಬಹುದು? ಆದರೆ-ಆದರೆ ನಲ್ಲನ ನಿಜಾವಸ್ಥೆ ತಿಳಿದರೆ ಆ ಬಾಲೆಯ ಅವಸ್ಥೆ ಏನಾದೀತು? ಬೆಂದ ಬಾಳೆಯು ಕಂಬದಂತುರಳಲಿಕ್ಕಿಲ್ಲವೆ? ಶೋಕದಿಂದ ಸಕಲರ ಹೃದಯಗಳನ್ನು ಕಲುಕ

ಲಿಕ್ಕಿಲ್ಲವೆ? ಅಬ್ಬಾ!-ಈ ಎಲ್ಲರ ಆಪ್ತೇಷ್ಟರ ಶೋಕ ಎಷ್ಟಾಗಬಹುದು? ಪಂಪಾಪತೆ! ಆ ಎಲ್ಲರ ಗೋಳು ನಿನ್ನ ಕಿವಿಗೆ ಮುಟ್ಟದಿರಬಹುದೆ? ಹೃದಯ ತಟ್ಟದಿರಬಹುದೆ....'

ಅವನ ಆ ಆವೇಗ ಮೀರಿ ಹೋಗಿದ್ದಿತು. ದುಃಖಸಾಗರದಲ್ಲಿ ಈಜಬಿದ್ದಂತಾಗಿದ್ದಿತು. ಸುತ್ತೆಲ್ಲವೂ ಅತ್ಯಾಚಾರಕ್ಕೊಳಗಾಗಿದ್ದ ಮೃತಶರೀರಗಳು. ಅವುಗಳ ಮಧ್ಯ ನಿಂತಿದ್ದನು. ತಡೆಯುವವರಾರೂ ಇರಲಿಲ್ಲ. ಆ ದುಃಖದೊಡನೆ ಒಂದಾಗಿ ಶೋಕಮೂರ್ತಿಯೇ ತಾನಾಗಿ ಶೋಕಿಸಲು ತಾನೇ ತಾನಾಗಿದ್ದನು. ಅಳುವ, ಬಿಕ್ಕುವ, ಶೋಕಿಸುವ, ತನ್ನಷ್ಟಕ್ಕೆ ತಾನೇ ಮಾತನಾಡುವ, ಮೃತಜೀವಿಗಳನ್ನುದ್ದೇಶಿಸಿ ಪ್ರಶ್ನೆ ಮಾಡುವ. ಬಾಹ್ಯಜ್ಞಾನಕ್ಕೆ ಬಧಿರನೇ ಆಗಿದ್ದನು.

ವಿರೂಪಾಕ್ಷ ಕೋಣೆಯೊಂದರಲ್ಲಿ ಭಯಕಂಪಿತನಾಗಿ ಕುಳಿತಿದ್ದನು. ಪಾಯಸ ಬಡಿಸಲಪ್ಪಣೆ ಮಾಡಿ, ದಾಸದಾಸಿಯರನ್ನಟ್ಟಿ ನೋಡುವಷ್ಟರಲ್ಲಿ ಸಕಲರ ಪ್ರಾಣ ಹಾರಿಹೋಗಿದ್ದುವು. ಆ ರೌದ್ರನೋಟಕ್ಕೆ ಅವನೆದೆ ಅಳುಕಿತು. ಹೃದಯ ಭಯಕಂಪಿತವಾಯಿತು. ಮಸ್ತಕ ಶೂನ್ಯವಾಯಿತು. ಮುಂಗಾಣದೆ ಮೂಢನಾಗಿ ಕೋಣೆಯೊಂದರಲ್ಲಿ ಕುಳಿತುಬಿಟ್ಟನು. ಬಹಳ ಸಮಯ ಅವನಿಗೆ ಮುಂದಿನ ಯೋಚನೆಯೇ ತಿಳಿಯದಾಯಿತು. ಶೂನ್ಯ ಮನಸ್ಕನಾಗಿ ಮೇಲ್ಮಾಳಿಗೆಯನ್ನೇ ನಿಟ್ಟಿಸುತ್ತ ಕುಳಿತಿರಲು, ಅವನಿಗೆ ಯುವರಾಜನ ಧ್ವನಿ ಕೇಳಿಸಲಾರಂಭಿಸಿತು. ಒಡನೆಯೇ ಅವನ ಹೃದಯ ತಣ್ಣಗಾಯಿತು. ತಲೆ ತಿರುಗಹತ್ತಿತು. ಮಂದಿರಕ್ಕೆ ಮಂದಿರವೇ ಕಳಚಿ ಬಿದ್ದು ತನ್ನ ಸಮಾಧಿಯಾದಂತೆ ಭಾಸವಾಯಿತು. ಅತೀವ ಗಾಬರಿಯಾದನು. ತನ್ನ ಕಾಪಟ್ಯ ಬಯಲಿಗೆ ಬಿದ್ದು, ತನಗೆ ದೇಹಾಂತ ಶಾಸನ ಸಿಕ್ಕುವುದು ಸತ್ಯವೆಂದೆಣಿಸಿದನು. 'ದೇವಾ! ದೇವಾ! ಇದೊಂದು ಸಲ ಪಾರು ಮಾಡು. ಇನ್ನೆಂದೂ ಇಂತಹ ಕ್ರೌರ್ಯಕ್ಕೆ ಕೈಹಾಕುವದಿಲ್ಲ. ಒಂದೇ ಒಂದು ಸಲ ಕ್ಷಮಿಸಿ, ನನ್ನನ್ನು ಪಾರು ಮಾಡು—'ಎಂದು ದೀನ ವದನದಿಂದ ಕೆಳಗೆ ಕುಳಿತನು.

ಮೆಲ್ಲಗೆ ವಿರೂಪಾಕ್ಷನಿಗೆ ಎಚ್ಚರು ಬಂದಿತು. ಮಂದಿರದಲ್ಲೆಲ್ಲ ಜನರೇ ಇಲ್ಲದಿರಲು, ಸಪ್ಪಳವೆಲ್ಲಿಯದು? ಎಂಬ ಸಂದೇಹ ಬಂದಿತು. ಮೆಲ್ಲಗೆ ಸದ್ದಿಲ್ಲದೆ ಮುಂದೆ ಬಂದು ಇಣುಕಿದನು. ಆ ಮೃತ ಜೀವಿಗಳ ಮಧ್ಯದಲ್ಲಿ ತಿರುಗುವ ಆ ಆಕೃತಿಯನ್ನು ನೋಡಿದನು. ಪ್ರೇತಭಕ್ಷಣೆಗೆಂದು ಬಂದ ಭೂತದಂತೆ ಕಾಣುತ್ತಲಿದ್ದಿತು. ನಡೆಯುವ ರೀತಿ, ನೋಡುವ ಬಗೆ, ಆಡುವ ಸ್ಥಿತಿಗಳಿಂದ ಆ ಆಕೃತಿ ಯಾರೆಂಬುದೇ ತಿಳಿಯದಾಯಿತು. ಧ್ವನಿ ಕೇಳಬರುತ್ತಲಿದ್ದಿತು. ರೋದನಸ್ವರ-ಅಳುವು ತುಂಬಿ ಹೋದಾ ಸ್ವರವೂ ಗುರುತಿಲ್ಲದಂತಾಯಿತು. ಇನ್ನೂ ಮುಂದೆ ಬಂದು ನಿರೀಕ್ಷಿಸಿದ. ಒಡನೆಯೇ ವಿರೂಪಾಕ್ಷ ಬೆಚ್ಚಿ ಬಿದ್ದನು. 'ಹಾಗಾದರೆ ಈ ಹತ್ಯಾಕಾಂಡದಲ್ಲಿ ಯುವರಾಜ ಸಿಕ್ಕಲಿಲ್ಲ! ಈತ ಉಳಿದುದು ಹೇಗೆ? ಇಲ್ಲವೆ-' ಭೂತದ ವಿಚಾರ ಒಂದು ಕ್ಷಣ ಬಂದು ಅವನೂ ನಡುಗಿದನು; ಆದರೆ ಮರುಕ್ಷಣವೇ ಮತ್ತೆ ಜಾಗರೂಕನಾಗಿ ಕೊಂಚ ಸಮಯ ಯುವರಾಜನನ್ನೇ ನೋಡಹತ್ತಿದನು. ದೈನ್ಯದಿಂದ ಒಂದೊಂದೇ

ಹೆಜ್ಜೆ ಕಿತ್ತಿಡುವ. ಒಂದು ಮೃತಕಾಯ ಕಾಣುತ್ತಲೇ ನಿಲ್ಲುವ. ಬಾಗಿದ ಮೊಗ ಮೇಲಕ್ಕೆತ್ತುವ. ಮೃತಜೀವಿಯ ಹೆಸರಿನಲ್ಲಿ ಸ್ಪಷ್ಟವಾಗಿಯೂ ಅಸ್ಪಷ್ಟವಾಗಿಯೂ ಮಾತನಾಡುವ. ಆ ಮೃತ ಮನುಷ್ಯನ ಬಗ್ಗೆ ಹಳಹಳಿಸುವ. ಆತನ ಮನೆ ಮಂದಿಯ ಬಗ್ಗೆ ತಳಮಳಿಸುವ. ಶೋಕದ ಸಕಲ ವಿಕಾರಗಳೂ ಯುವರಾಜನಲ್ಲಿ ಪ್ರತಿಕ್ಷಣಕ್ಕೆ ವ್ಯಕ್ತವಾಗುತ್ತಲಿದ್ದವು.

ಅಂತಹ ದೀನ ಸ್ವರೂಪದಿಂದ ವಿರೂಪಾಕ್ಷನಿಗಾದರೂ ಕನಿಕರವೆನಿಸಬೇಕಿದ್ದಿತು; ಆದರೆ ಅವನ ಹೃದಯದಲ್ಲಿ ಕನಿಕರಕ್ಕಾಸ್ಪದವಿದ್ದರಲ್ಲವೆ? ಕೋಪ, ದ್ವೇಷ, ಅಸೂಯೆಗಳಿಂದ ತುಂಬಿ ಹೋಗಿರುವಾಗಲೇ ಭೀಕರ ಕೃತ್ಯ ನಡೆದುಹೋಯಿತು. ಆ ಭೀಕರ ಹತ್ಯೆಗಳಿಂದವನು ಮತ್ತನೇ ಆಗಿದ್ದನು. ಪ್ರತಿಕ್ಷಣಕ್ಕೂ ಕಾಪಟ್ಯ ಬಯಲಿಗೆ ಬೀಳಬಹುದೆಂದು ಭಯಪಡುತ್ತಲಿದ್ದನು. ಯುವರಾಜ ಬದುಕಿರಬಹುದೆಂಬ ಕಲ್ಪನೆಯೇ ಆತನಿಗೆ ಇರಲಿಲ್ಲ. ಬದುಕಿ ಉಳಿದವನೆಂದರೆ ಮೊರೆಯೊಬ್ಬನೇ. ಆತನ ಸಮಾಚಾರ ತೆಗೆದುಕೊಳ್ಳಲು ಪ್ರತಾಪದೇವರಾಯನೇ ಅತ್ತ ಹೋಗಿದ್ದನು; ಆದರೆ ಯುವರಾಜ ಪ್ರತ್ಯಕ್ಷವಾಗಿ ಕಾಣಬರಲು, ಹೃದಯ ಬಲವಾಗಿ ಬಡಿದುಕೊಳ್ಳಹತ್ತಿತು. ಅದುವರೆಗೂ ಯುವರಾಜನ ಬಗ್ಗೆ ಚಿಕಿತ್ಸೆ ಮಾಡದಿದ್ದುದು ಭಯಂಕರ ತಪ್ಪಾಯಿತೆಂದು ತಿಳಿದನು. ಅಂತಹ ಭಯಂಕರ ನರಯಜ್ಞದಲ್ಲಿ ಮುಖ್ಯ ಆಹುತಿಯನ್ನೇ ಮರೆತುದಕ್ಕೆ ಅವನಿಗೆ ಅಚ್ಚರಿಯಾಯಿತು. ಅಂತೆಯೇ ಯುವರಾಜನನ್ನು ಕಾಣುತ್ತಲೇ ಕನಿಕರವೆನಿಸುವದರ ಬದಲು ದ್ವೇಷವೆನಿಸಿತು. ಕೋಪದಿಂದ ಮುಂದೆ ಹೋದನು. ಯುವರಾಜ ತನ್ನನ್ನು ನೋಡಬಹುದೆಂದು ಬಹು ಮೆಲ್ಲಗೆ ಅಡಗಿಕೊಂಡೇ ಹೋಗುತ್ತಲಿದ್ದನು; ಆದರೆ ಯುವರಾಜನ ಮೈಮೇಲೆ ಭಾನವಿದ್ದರಲ್ಲವೇ ಅತ್ತಿತ್ತ ನೋಡುವದು? ಅಲ್ಲಿಯ ಆ ಕಳವಳದ ನೋಟವು ಹೃದಯದಲ್ಲಿ ಹೊಕ್ಕು ಅವನಿಗೆ ದಾರುಣವಾದ ವ್ಯಥೆಯನ್ನುಂಟುಮಾಡುತ್ತಲಿದ್ದಿತು. ವ್ಯಥೆಯಿಂದಾವೃತನಾಗಿ ಶೋಕಮೂರುತಿಯಂತೆ ಮುಂದೊರೆಯುತ್ತಲಿದ್ದನು. ಒಮ್ಮೊಮ್ಮೆ ವೇಗವಾಗಿ ಹೆಜ್ಜೆಗಳನ್ನು ಹಾಕಿದರೆ, ಒಮ್ಮೊಮ್ಮೆ ಮೆಲ್ಲನೆ ಹೆಜ್ಜೆಯಿಕ್ಕುತ್ತಲಿದ್ದನು. ಆ ಸಭಾಲಯವನ್ನೆಲ್ಲ ಹತ್ತೆಂಟು ಸಲ ಸುತ್ತು ಹಾಕಿದನು. ಒಮ್ಮೆಯಾದರೂ ಮೊಗವೆತ್ತಲಿಲ್ಲ; ದೀನದೃಷ್ಟಿಯಿಂದ ದಾರುಣ ನೋಟ ನೋಡುವುದರಲ್ಲಿಯೇ ತಲ್ಲೀನನಾಗಿದ್ದನು.

ವಿರೂಪಾಕ್ಷ ಯುವರಾಜನ ಆ ಅವಸ್ಥೆಗೆ ತನ್ನ ಮನದಲ್ಲಿಯೇ ನಕ್ಕನು. ಯಜ್ಞಶಾಲೆಯಿಂದ ಹೇಗೋ ತಪ್ಪಿಸಿಕೊಂಡ ಪಶು ತನ್ನಷ್ಟಕ್ಕೆ ತಾನೇ ಮರಳಿ ಬಂದು ಯಜ್ಞಕುಂಡವನ್ನು ಪ್ರವೇಶಿಸುವಂತೆ ತೋರಿತು. ತನ್ನಾ ಅತ್ಯಂತ ಭಯಂಕರವಾದ ಸ್ವಾರ್ಥ ಯಜ್ಞಕ್ಕೆ ಪೂರ್ಣಾಹುತಿ ಹಾಕಲು ಸಮಯ ದೊರೆತುದಕ್ಕೆ ಅತ್ಯಾನಂದವಾಯಿತು. ಅವನು ಜಪ್ಪಿಸಿ ಕೊಂಚ ಸಮಯ ಯುವರಾಜನ ಹಿಂದೆಯೇ ತಿರುಗಿದನು. ಎರಡು-ಮೂರು ಸಲ ಹೊಡೆಯಲು ಖಡ್ಗವೆತ್ತಿದನು; ಆದರೆ ಸಫಲವಾಗಲಿಲ್ಲ. ಒಂದು ಸಲ ಕೈ ಎತ್ತಿದಾಗ್ಗೆ ಯುವರಾಜ ಕುಳಿತುಬಿಟ್ಟನು. ಆಗ್ಗೆ ಮುಗ್ಗ

ರಿಸಿ ಯುವರಾಜನ ಮೇಲೆಯೇ ಬೀಳತಕ್ಕವನು; ಆದರೆ ಸಾವರಿಸಿಕೊಂಡಿದ್ದನು. ಇನ್ನೊಂದು ಸಲ ಹೊಡೆಯುವಷ್ಟರಲ್ಲಿ ಯುವರಾಜ ವೇಗವಾಗಿ ಮುಂದೆ ಹೋದನು. ಅವನ ಖಡ್ಗಪ್ರಹಾರ ವ್ಯರ್ಥವಾಯಿತು. ಕೊನೆಗೊಮ್ಮೆ ಸಂಧಿಸಾಧಿಸಿ ಖಡ್ಗವೆತ್ತಿದನು. ಒಂದೇ ಒಂದು ಕ್ಷಣ. ಯುವರಾಜನ ಶಿರ ದಡದಿಂದುರುಳಿ ಭೀಕರ ಸ್ವಾರ್ಥಯಜ್ಞ ಪೂರ್ಣವಾಗುತ್ತಲಿದ್ದಿತು; ಆದರೆ ಅಂತಹ ಸನ್ನಿವೇಶವೊದಗಿದ್ದರೆ, ಕನ್ನಡಿಗರು ಉದಾರ ಮಲ್ಲಿಕಾರ್ಜುನರಾಯನಾಳಿಕೆ ಕಾಣುತಲಿರಲಿಲ್ಲ. ಒಂದೇ ಒಂದು ಕ್ಷಣ; ಎಂತಹ ಭೀಕರ ಕ್ಷಣವದು! ಕರ್ನಾಟಕ ಸಾಮ್ರಾಜ್ಯದ ಹಣೇಬರಹವೇ ಆ ಒಂದು ಕ್ಷಣದಲ್ಲಿದ್ದಿತು. ನಿರ್ಜನವಾದ ಸಭಾಲಯ. ನೂರಾರು ಮೃತಜೀವಿಗಳು ಮನುಷ್ಯನ ಅಸಹಾಯತೆಯನ್ನು ಮೂರ್ತೀಕರಿಸುತ್ತಲಿವೆ. ದೈನ್ಯಸ್ವರೂಪ ಯುವರಾಜ ತನ್ನನ್ನು ತಾನೇ ಮರೆತು ದುಃಖಕರ ನೋಟದೊಡನೆ ಒಂದುಗೂಡಿಹೋಗಿದ್ದಾನೆ. ಬೆಕ್ಕು ಜಪ್ಪಿಸಿ ತನ್ನ ಭಕ್ಷ್ಯದ ಮೇಲೆ ಹಾರಲು ಸಿದ್ಧವಾಗಿದೆ. ಹಾರಲಿದ್ದಿತು. ಎಂತಹ ನಿಕರದ ಕ್ಷಣ! ಮರುಕ್ಷಣದಲ್ಲಿಯೇ ಇಲಿ ಬೆಕ್ಕಿನ ಬಾಯಿಯಲ್ಲಿ ಬೀಳಬೇಕಿದ್ದಿತು; ಆದರೆ—ಆ ಒಂದೇ ಒಂದು ಕ್ಷಣ, ಕರ್ನಾಟಕದ ಭಾವೀ ಇತಿಹಾಸ ಬರೆಯುವ ಮಹತಿಯುಳ್ಳ ಆ ಕ್ಷಣದ ಮಹತಿಯೇ ಮಹತಿ.

ಮಾನವ ಜೀವನದಲ್ಲಿ ಇಂತಹ ಕ್ಷಣಗಳೆಷ್ಟೋ ಬರುತ್ತವೆ. ಸುಖಸಾಗರದ ಮಧ್ಯದಲ್ಲಿ ತೇಲಿಸುವ, ದುಃಖಕೂಪದ ತಳಸೇರಿಸುವ ಇಂತಹ ಕ್ಷಣಗಳ ಮಹತಿ ಎಲ್ಲರಿಗೂ ತಿಳಿದೇ ಇರುತ್ತವೆ. ಒಂದೊಂದು ಕ್ಷಣವೆಂದರೆ ವರುಷಕ್ಕಿಂತಲೂ ಮಿಗಿಲಾಗಿರುತ್ತವೆ.

ಆ ಒಂದು ಕ್ಷಣ ದಾಟಿದ್ದರೆ—ಆಹುದು, ಅಂತೆಯೇ ಯುವರಾಜನುಳಿದನು. ವಿರೂಪಾಕ್ಷನ ಬಯಕೆ ಈಡೇರದುಳಿಯಿತು. ಹೇಮಾಂಬಿಕೆ ಚಿನ್ನಾಂಬೆಯನ್ನು ಯುವರಾಜನನ್ನು ಕಾಯಲ್ಪಟ್ಟದುದನ್ನು ಓದುಗರು ಮರೆತಿರಲಿಕ್ಕಿಲ್ಲ. ಆಕೆ ಬಾಗಿಲಿಗೆ ಬರುತ್ತಲೆ ರಕ್ಷಕರು ಒಳಗೆ ಬಿಡದಾದರು. ಕೊನೆಗೆ ಏನೇನೋ ಯುಕ್ತಿಗಳನ್ನು ಯೋಜಿಸಿ ಒಳಹೊಕ್ಕಳು.

ಸಭಾಲಯ ಪ್ರವೇಶಿಸುತ್ತಲೇ ಆಕೆಗೆ ಮೊದಲು ಕಾಣಿಸಿದ ನೋಟವೆಂದರೆ, ಯುವರಾಜನ ಮೇಲೆ ನಡೆಯುತ್ತಲಿದ್ದ ಅತ್ಯಾಚಾರ! ಯುವರಾಜ ದೀನವದನದಿಂದ ಕಂಬನಿಮಳೆಗರೆಯುವ ಕಣ್ಗಳಿಂದ ಒಂದು ಪ್ರೇತದತ್ತ ನೋಡುತ್ತ, ತನ್ನಷ್ಟಕ್ಕೆ ರುದಿಸುವ ಸ್ವರದಿಂದ ಗುಣಗುಟ್ಟುತ್ತ ನಿಂತಿದ್ದನು. ಅವನ ಹಿಂದೆ ರಕ್ಕಸನೋಪಾದಿಯಲ್ಲಿ ವಿರೂಪಾಕ್ಷ ತನ್ನ ಖಡ್ಗವೆತ್ತಿರುವನು. ಚಿನ್ನಾಂಬೆ ನಡುಗಿದಳು. ಒಂದೇ ಒಂದು ಕ್ಷಣ ತಡೆದರೆ, ಯುವರಾಜನ ಮೇಲೆ ಖಡ್ಗಪ್ರಹಾರವಾಗುತ್ತದೆ. ಮೈಮರೆತು, ಬೀಳುವ ಭಯವಿಲ್ಲದೆ ಧಾವಿಸಿ, ವಿರೂಪಾಕ್ಷನನ್ನು ಅಡ್ಡಹಾಕಿ, ತನ್ನ ಎಲ್ಲ ಬಲವನ್ನೊಟ್ಟುಗೂಡಿಸಿ ದೂಡಿದಳು. ವಿರೂಪಾಕ್ಷ ಅಸಾವಧನಾಗಿ ನಿಂತಿದ್ದನು. ಅವನಾ ಆಸುರೀ ಕೃತ್ಯಾವಲೋಕನದಿಂದ ಚಿನ್ನಾಂಬೆಯ ಬಲ ನೂರ್ಮಡಿಯಾಗಿ

ಬೆಳೆಯಿತು. ಹಾಗೆ ಚಿನ್ನಾಂಬೆ ನೋಡುತ್ತಲೇ ಪ್ರೇತಗಳ ಮಧ್ಯದಲ್ಲಿ ವಿರೂಪಾಕ್ಷ ನುರುಳಿದನು. ಕರದೊಳಗಿನ ಖಡ್ಗ 'ಝಣ್' ನಾದ ಮಾಡುತ್ತ ನೆಲಕ್ಕೆ ಬಿದ್ದಿತು. ಈ ಎಲ್ಲ ಸಪ್ಪಳಕ್ಕೆ ಯುವರಾಜ ಎಚ್ಚೆತ್ತನು. ಅಲ್ಪಾವಕಾಶದಲ್ಲಿಯೇ ವಿರೂಪಾಕ್ಷನ ದುಷ್ಟ ಕೃತ್ಯ ಅವನಿಗೆ ತಿಳಿಯಿತು. ಅವನು ಕಂಪಿಸುವ ಸ್ವರದಲ್ಲಿ 'ವಿರೂಪಾಕ್ಷ, ನೀನು ಇಷ್ಟು ದುಷ್ಟತನಕ್ಕಿಳಿಯಬಹುದೆಂದೆಣಿಸಿರಲಿಲ್ಲ. ಇದೋ, ಇಲ್ಲಿ ನೋಡು. ಈ ನೂರಾರು ಜನರು ಹೇಗೆ ಸತ್ತುಬಿದ್ದಿರುವರು! ತರುಣರವರು ಕರ್ನಾಟಕ ಸಾಮ್ರಾಜ್ಯದ ಸೇವೆ ತನುಮನಧನದಿಂದ ಮಾಡಿರುವರು. ಅನೇಕರು ಜೀವನದ ಸೊಬಗನ್ನು ಈಗ ತಾನೇ ಸುರಿಯುತಾರಂಭಿಸಿದ್ದರು. ಉನ್ನತವಾದ ಕರ್ನಾಟಕ ಸಾಮ್ರಾಜ್ಯದ ಆಧಾರಸ್ತಂಭಗಳಂತಿದ್ದರು. ಈ ಎಲ್ಲರೂ ನಿನಗೆ ಮಾಡಿದ ಅಪ ರಾಧವೇನು? ಇವರನ್ನೆಲ್ಲ ಹೀಗೆ ಘಾತಿಸುವಷ್ಟು ನೀಚತನ ಎಂದಿನಿಂದ ಕಲಿತೆ? ಹಾಯ್! ಹಾಯ್!! ಹೃದಯ ವಿದಾರಣವಾಗುವ ಈ ನೋಟ ನಿನಗೆ ಕಾಣದೇ? ನೋಡು, ಕಣ್ದೆರೆದು ಚನ್ನಾಗಿ ನೋಡು. ನಿನ್ನ ಅಲ್ಪ ಸ್ವಾರ್ಥಕ್ಕಾಗಿ ಎಂತಹ ಭೀಕರ ಕಾರ್ಯವೆಸಗಿರುವೆ? ಬರಿಯ ಈ ಮೃತಿಹೊಂದಿದವರ ಬಗ್ಗೆ ಯೋಚಿಸದೆ, ಈ ಎಲ್ಲರ ಬಂಧು-ಬಳಗದವರ, ಮಮತೆಯುವರ, ಆಧಾರಿಗಳ ಬಗ್ಗೆ ಯೋಚಿಸು. ನಿನ್ನ ಈ ಕೃತ್ಯ ಅವರಿಗೆ ತಿಳಿದುದಾದರೆ, ಅವರೇನು ಮಾಡಬಹುದು? ಎಷ್ಟು ಶೋಕಿಸ ಬಹುದು? ಹಾಯ್! ಹಾಯ್! ಎಂತಹ ದುರ್ಬುದ್ಧಿಯುಂಟಾಯಿತಲ್ಲ! ಭದ್ರವಾದ ಕರ್ನಾಟಕ ಸಾಮ್ರಾಜ್ಯಮಂದಿರದ ಆಧಾರಸ್ತಂಭಗಳನ್ನೇ ಉರುಳಿಸಿರುವೆಯಲ್ಲ! ತಳ ಹದಿಯನ್ನೇ ಅಲುಗಾಡಿಸಿರುವೆಯಲ್ಲ! ನಿನಗೆ ಸಾಮ್ರಾಜ್ಯವು ಬೇಕಿದ್ದರೆ—ಯುವ ರಾಜಪದ ಬೇಕಿದ್ದರೆ—ನಾನು ಕೊಡುತ್ತಲಿದ್ದೆನಲ್ಲ!............'

ಕರಳು ಕಿತ್ತು ಬರುವಂತೆ ಯುವರಾಜ ಮಾತನಾಡಹತ್ತಿದನು. ಪ್ರೇತಗಳ ಮಧ್ಯದಲ್ಲುರುಳಿದ ವಿರೂಪಾಕ್ಷ ಪ್ರೇತವತ್ ಬಿದ್ದೇ ಇದ್ದನು.

ಯುವರಾಜ ಚಿನ್ನಾಂಬೆಯ ಬಳಿ ಹೊರಳಿದನು. 'ಚಿನ್ನಾ, ನಿನ್ನ ಒಡತಿಯು ಆಣತಿ ಚನ್ನಾಗಿ ಪಾಲಿಸಿದೆ; ಆದರೆ ಅಧಮನಾದ ನನ್ನನ್ನೇಕೆ ಉಳುಹಿಸಿದೆ? ಯಾವ ಸುಖಕ್ಕೆಂದು ನಾನುಳಿಯಬೇಕು? ಇಲ್ಲಿ ನೋಡು, ಈ ನಿರಪರಾಧಿ, ಸಾಮ್ರಾಜ್ಯ ನಿಷ್ಠ ಸೇವಕರ ಅವಸ್ಥೆ ನೋಡು. ಎಲ್ಲರೂ ಹೇಗೆ ಗತಪ್ರಾಣರಾಗುರುಳಿರುವರು! ಇವರನ್ನು ಳಿದು ನಾನು ಏನು ಮಾಡುವಂತಿರುವೆ? ಈ ಎಲ್ಲರ ರಕ್ತದಿಂದ ಸಿಂಚಿತವಾದ ಸಿಂಹಾ ಸನವನ್ನು ನಾನು ಹೇಗೆ ಏರುವೆನು? ಹೋಗು, ಚಿನ್ನಾ, ನಿನ್ನ ಒಡತಿಗೆ ದಾರುಣ ವಾದೀ ಸಂಗತಿಯನ್ನು ವಿವರಿಸು; ಮತ್ತು ಈ ಸ್ಮಶಾನಭೂಮಿಯಲ್ಲಿ, ಪ್ರೇತಗಳ ಮಧ್ಯದಲ್ಲಿ, ಭೂತನಂತೆ ತಿರುಗುವ ಯುವರಾಜ ಇಲ್ಲಿಂದ ಹೊರ ಹೊರಡಲು ಸಿದ್ಧ ನಿಲ್ಲವೆಂದು ತಿಳಿಸು.'—

ಯುವರಾಜ ಅತ್ಯಂತ ದೈನ್ಯದಿಂದ ಮಾತನಾಡಲಾರಂಭಿಸಲು ಚಿನ್ನಾಂಬೆಗೆ ಬಹಳ ಕಳವಳವಾಯಿತು. ಅಂತಹ ಹೃದಯ ವಿದಾರಣವಾದ ನೋಟದಿಂದ

ಆಕೆಗೂ ಅತ್ಯಂತ ತಾಪವಾಯಿತು. ಹೀಗೆ ಇಬ್ಬರೂ ದುಃಖಮಗ್ನರಾಗಿರಲು, ವಿರೂಪಾಕ್ಷ ಅದೇ ಸಂಧಿ ಸಾಧಿಸಿದನು. ಮೆಲ್ಲನೆ ಎದ್ದವನೇ ಓಡಿದನು. ಚಿನ್ನಾಂಬೆ ಅವನನ್ನು ತಡೆಯಬೇಕೆಂದಳು; ಆದರೆ ಸಾಧಿಸಲಿಲ್ಲ.

'ಯುವರಾಜ—'

'ಚಿನ್ನಾ, ಇನ್ನು ಯುವರಾಜನೆಲ್ಲಿ? ಹೋಯಿತು! ಆತನ ಅಂತಸ್ಥ ಚೈತನ್ಯವೇ ಹೋಯಿತು! ನೋಡು, ಈ ಕರಳು ಕಿತ್ತುವ ನೋಟ ನೋಡು. ಈ ಎಲ್ಲರಿಂದ ವಿರಹಿತವಾದ ವಿಜಯನಗರವು ಕುಂಕುಮಹೀನ ಸತಿಯಂತಿದೆ. ಇನ್ನೆಲ್ಲಿ—'

'ಯುವರಾಜ—'

'ಊಂ, ಹುಂ. ಆ ಶಬ್ದವೇ ನನಗೆ ಕರ್ಣಕಠೋರವಾಗಿದೆ! ನಾನೆಲ್ಲವನ್ನೂ ಅರಿತಿರುವೆನು; ಆದರೆ ಉಪಾಯವಿಲ್ಲ. ಇಲ್ಲಿಂದ ಕದಲುವದೇ ನನಗಾಗದು. ಕಾಲು ಇಲ್ಲಿಂದ ಮುಂದಕ್ಕೆ ಸಾಗುವಂತಿಲ್ಲ—'

'ಆದರೆ—'

'ನಿನ್ನ ಶಂಕೆಗಳಿಗೆ ನಾನು ಉತ್ತರ ಕೊಡುವ ಸ್ಥಿತಿಯಲ್ಲಿಲ್ಲ. ನೋಡಿಲ್ಲಿ, ಚಿಕ್ಕ ಹಸುಗಳು, ತರುಣ ಯುವಕರು, ಪ್ರೌಢ ಮನುಷ್ಯ, ವೃದ್ಧರು ಎಲ್ಲರೂ ನನ್ನ ಅಧಮತನದ ಫಲವಾಗಿ ಹೇಗೆ ಮೃತಿಯನ್ನೈದಿರುವರು!'

'ಅದಕ್ಕೆ ನೀವೇನು ಮಾಡಿದಿರಿ?'

'ಚಿನ್ನಾ, ನನ್ನ ಮೂರ್ಖತನದ ಪರಿಣಾಮವೇ ಇದು! ನಾನು ಕೊಂಚ ಜಾಣನಾಗಿದ್ದರೆ, ಈ ಎಲ್ಲ ನನ್ನ ಬಂಧುಗಳು, ನನ್ನ ಪ್ರೀತಿಯ ಗೆಳೆಯರು—ಎಲ್ಲರೂ ಸುರಕ್ಷಿತವಾಗಿ--'

'ಆದುದಾಗಿ ಹೋಯಿತು—'

'ಅಹುದು; ಮತ್ತೆ ಅಂತೆಯೇ ನಾನೀಗ ಪಶ್ಚಾತ್ತಾಪಪಡಬೇಕಾಗಿ ಬಂದಿರುವದು. ಶಕ್ಯವಿದ್ದರೆ ನನ್ನ ಪ್ರಾಣಾರ್ಪಣೆಯಿಂದಾದರೂ ಎಲ್ಲರನ್ನುಳಿಸುತ್ತಲಿದ್ದೆ. ಈಗ ಅಳುತ್ತ ಕುಳ್ಳಿರುವದೊಂದೇ ಉಪಾಯವಾಗಿದೆ. ಕರ್ನಾಟಕದ ದುರ್ದೈವ—'

'ಮುಂದಾಗುವ ಅನರ್ಥವನ್ನಾದರೂ ತಪ್ಪಿಸಬೇಕಲ್ಲವೆ?'

'ಆಗುವದೆಲ್ಲ ಆಗಿದೆ—'

'ಇಲ್ಲ, ಇನ್ನೂ ಆಗಲಿದೆ-'

'ಅಂ, ಅದೇನು? ಚಿನ್ನಾ, ಬೇಗ ಹೇಳು? ಇದಕ್ಕಿಂತಲೂ ಹೆಚ್ಚಿನ ಅನರ್ಥವೇನು ನಡೆಯಲಿದೆ? ಬೇಗ ಹೇಳು?

'ಪ್ರತಾಪದೇವರಾಯರು-'

'ಆತನೇನು ಮಾಡುವ?' 'ಅರಮನೆಯತ್ತ ಹೋಗಿರುವ.'

'ಆಂ, ಹೀಗೆ ಮೊದಲೇ ಹೇಳಬಾರದೆ? ಅಲ್ಲಿ ತಂದೆಯವರು. ಅಹುದು, ಬೇಗ ಬೇಗ ನಡೆ.'

'ರಾಜಪುತ್ರಿ ಯುವರಿರುವರು.'

'ಯಾರು ಹೇಮಾನೇ?'

'ಅಹುದು.'

'ಆದರೂ ಪರವೆಯಿಲ್ಲ; ಬೇಗ ನಡೆ.'

ಯುವರಾಜ ಒಮ್ಮೆಲೆ ಎಚ್ಚರಾದನು. ತಂದೆಯು ಬಗ್ಗೆ ಸಂದೇಹವೆನಿಸಲಾರಂಭಿಸಿತು. ಓಡಲಾರಂಭಿಸಿದನು. ಹೇಮಾಂಬಿಕೆ ತಂದೆಯನ್ನು ಕಾಯ್ದಿರಬಹುದೆ? ಎಂಬ ವಿಚಾರದಲ್ಲಿ ಮುಳುಗಿದ್ದನು.

ಓದುಗ ಮಹಾಶಯ, ಒಂದರ ಹಿಂದೊಂದು ಅನರ್ಥ ಪರಂಪರೆಗೆ ಸಿಲುಕಿದಂತಾಗಿದೆ. ನಡೆಯಿರಿ, ನೋಡುವಾ ಅಲ್ಲಿಯ ಸಂಗತಿ.

---

# ೧೫ ಪ್ರಸಂಗಾವಧಾನ

ಪ್ರತಾಪದೇವರಾಯ ಮಲ್ಲಿಕಾರ್ಜುನ ಮಂದಿರದಿಂದ ಹೊರಟ ಸಂಗತಿ ಹಿಂದೆ ಬಂದಿದೆ. ಆಗ್ಗೆ ಆತನೆಂದರೆ ವೇತಾಳತುಂಬಿದಂತಾಗಿದ್ದನು. ತಲೆಯಲ್ಲಿ ಒಂದೇ ಒಂದು ವಿಚಾರ ಮನೆಮಾಡಿದ್ದಿತು. ರಾಜಪಕ್ಷ ಯುವರಾಜನೊಂದಿಗೆ ನಷ್ಟವಾಯಿತೆಂದರಿತಿದ್ದನು. ಹಾಗಾದರೆ ಉಳದವ ಆಳುವರಸು. ಸರಿ. ಹೇಗಾದರೂ ತಾನಾತನನ್ನು ವಧಿಸಲೇಬೇಕು. ದುರ್ವಿಚಾರದಿಂದ ಸಂಪೂರ್ಣ ಆವೃತ್ತನಾಗಿ ರಾಕ್ಷಸನಂತೆ ಕ್ರೂರನಾಗಿ ಕಾಣುತ್ತಲಿದ್ದನು. ಅವನು ಅತ್ಯಂತ ಸೌಮ್ಯಮುದ್ರೆ ತಳೆಯಲೆತ್ನಿಸಿದನು. ಗಿಡಗನಂತೆ ಒಂದೇ ಏಟಿಗೆ ಹಾರಿ ಆಳುವರಸಿನ ಗಂಟಲು—ಆದರೆ ಸಾಧ್ಯವಿರಲಿಲ್ಲ. ಓಡಿಯಾದರೂ ಹೋಗಬೇಕೆಂದರೆ, ಸಂಶಯಾಸ್ಪದ. ಅಲ್ಲಿಯೇ ಇದ್ದ ಕುದುರೆಯೊಂದನ್ನೇರಿದನು. ಸೇವಕ ಮುಂದೆ ಓಡಲು ಸಿದ್ಧನಾದನು. ಅವನಿಗೆ ಬೇಡವೆಂದು ಹೇಳಿ ಕುದುರೆಬಿಟ್ಟನು. ಮಾರ್ಗದಲ್ಲಿ ಜನರು ವಂದಿಸುತ್ತಲಿದ್ದರು. ಆಗಾಗ್ಗೆ ಜನರ ವಂದನೆ ಸ್ವೀಕರಿಸುತ್ತಲಿದ್ದನು. ಮನಸ್ಸು ಅತ್ಯಂತ ವ್ಯಗ್ರವಾಗಿದ್ದು, ಅದರ ಪ್ರತಿಬಿಂಬ ಮುಖದಲ್ಲಿ ಮೂಡಿರಲೇಬೇಕೆಂದು ಅವನರಿತಿದ್ದನು. ಅರಸಿನ ಸ್ವಸ್ಥತೆಯ ಮುಚ್ಚಳ ಅದಕ್ಕೆ ಹಾಕಿದನು ಅರಸಿಗಸ್ವಸ್ಥತೆಯಾದ ಮೂಲಕ ಆತನ ಪ್ರೀತಿಯ ತಮ್ಮ ಅತ್ಯಂತ ದುಃಖಿತನಾಗಿದ್ದನೆಂದು ತೋರಿಸಿದನು.

ಹೀಗೆ ಪ್ರತಾಪದೇವರಾಯ ಅಂತಃಪುರದ ಸಮೀಪಕ್ಕೆ ಹೋದನು. ದ್ವಾರಪಾಲಕರು ವಂದನೆಗಳನ್ನರ್ಪಿಸಿದರು.

'ಮೇಲೆ ಪ್ರಭುಗಳ ಬಳಿಯಲ್ಲಿ ಇನ್ನಾರಿರುವರು?'

'ಯಾರೂ ಇಲ್ಲ.'

'ಒಬ್ಬರೇ ಇರುವರೇ?'

'ಅಹುದು.'

ಈ ಉತ್ತರದಿಂದ ಪ್ರತಾಪದೇವರಾಯನ ಪಾಶವೀವೃತ್ತಿ ಬಲವಾಯಿತು! ಉನ್ಮತ್ತತೆ ಮೊಗದಲ್ಲಿ ಮನೆಮಾಡಿತು. ಆಸುರೀ ಲಾಲಸೆ ಕಣ್ಣುಗಳಲ್ಲಿ ಕಾಣಿಸಿತು. ವಿಕಟಹಾಸ್ಯಮೊಡನೆ ಒಳಸೇರಿ, ಅರಸಿನ ಅಂತ್ಯ ಸಂಸಾರ ಕೈಕೊಳ್ಳಬೇಕೆಂದೆಣಿಸಿದನು. ಅವನಿಗೆ ಪ್ರತಿಯೊಂದು ಕ್ಷಣವೂ ವಿಲಂಬ ಬಹಳವಾಯಿತೆಂಬ ಭಾವನೆಯಾಯಿತು. ಆದಷ್ಟು ಬೇಗನೆ ಒಳಸೇರಲು ಮನ ಆತುರಪಡಿಸಹತ್ತಿತು. ಮರುಕ್ಷಣದಲ್ಲಿಯೇ ಇನ್ನಾರಾದರೂ ಬಂದರೆ-ಅನ್ಯರಾಗಮನಕ್ಕೆ ಮೊದಲೇ ಕಾರ್ಯ ಕೈಗೂಡಿಸುವ ಇಚ್ಛೆ ಬಲವಾಯಿತು. ಓಡುತ್ತಲೇ ಮಹಡಿಯೇರಬೇಕೆಂದೆಣಿಸಿದನು; ಆದರೆ ಇನ್ನೂ ಹಾಗೆ ಅಸಾವಧನಾಗುವಂತಿರಲಿಲ್ಲ. ತಾನು ಕಟ್ಟಿಸುತ್ತಲಿದ್ದ ಆ ಮಂದಿರದ ಬಹು ಭಾಗ ಮಲ್ಲಿಕಾರ್ಜುನಮಂದಿರದಲ್ಲಿ ಕೊನೆಗಂಡಿದ್ದಿತು. ಕಳಸವಿಡುವದುಳಿದಿದ್ದಿತು. ಅದುವರೆಗೆ ತನ್ನ ನಿಜಸ್ವರೂಪ ಧಾರಣಮಾಡುವಂತಿರಲಿಲ್ಲ. ಆದಷ್ಟು ಸೌಮ್ಯತೆಯನ್ನೇ ತಳಿಯಬೇಕಿದ್ದಿತು. ಅದಕ್ಕಾಗಿಯೇ ಅವನು ಬಹಳ ಜಪ್ಪಿಸುತ್ತಲಿದ್ದನು.

'ಹಾಗಾದರೆ ಪ್ರಭುಗಳೊಬ್ಬರೇ ಮಲಗಿರುವರಲ್ಲವೆ?' 'ಅಹುದು.'

'ರಾಜವೈದ್ಯರು ಬಂದಿದ್ದರೆ?'

'ಅಹುದು ದೊರೆಗಳೇ. ಅವರು ಹೋಗಿ ಒಂದು-ಒಂದೂವರೆ ಗಳಿಗೆಯಾಗಿರಬಹುದು.'

'ವೈದ್ಯರೇನೆಂದು ಹೇಳಿದರು?'

'ನಮಗೆ ತಿಳಿಯದು.'

'ಆದರೂ ಕೇಳಿದುದಾದರೂ ಏನು?'

'ಬರಿಯ ಪಿತ್ತವಿಕಾರವೆಂದು ತಿಳುಹಿ, ಗಾಬರಿಯಾಗುವ ಕಾರಣವಿಲ್ಲವೆಂದು ತಿಳಿಸಿದರೆಂದು ವಾರ್ತೆ.'

'ಹಾಗಾದರೆ ಒಳಿತಾಯಿತು. ನಾನು ಗಾಬರಿಯಿಂದ ಸಮಾರಂಭವನ್ನೆಲ್ಲ ಬಿಟ್ಟೇ ಓಡಿಬಂದೆನು. ಒಂದು ಸಲ ಪ್ರಭುಗಳ ದರುಶನ ತೆಗೆದುಕೊಂಡು ಮರಳುವೆನು.

ಪ್ರತಾಪದೇವರಾಯನಿಗೆ ಒಂದೊಂದು ಮಾತನಾಡುವವೆಂದರೆ ಜೀವಕ್ಕೆ ಬಂದಂತಾಗುತ್ತಲಿದ್ದಿತು. ಅಷ್ಟು ವಿಲಂಬವೇ ಕಾರ್ಯಹಾನಿಗೆ ಕಾರಣವಾಗಬಹುದೆಂದು ಭಾವಿಸಿದನು. ಕಾವಲುಗಾರರು ತಡೆಯಬಹುದೇನೋ ಎಂದು ಶಂಕಿಸಿದನು; ಆದರೆ ಅವರೇನೂ ತಡೆಯಲಿಲ್ಲ. ಪ್ರತಾಪದೇವರಾಜ ಓಡುತ್ತಲೇ ಒಳಹೊಕ್ಕನು.

ಹೇಮಾಂಬಿಕೆ ದೂರದಿಂದ ಓಡುತ್ತ ಬರುತ್ತಲಿದ್ದಳು. ಪ್ರತಾಪದೇವರಾಯ ಒಳಸೇರಿದುದನ್ನು ನೋಡಿದಳು. ಆಕೆಯ ಜೀವ ತಲ್ಲಣಿಸಿತು. ಮೈಮೇಲಿನ ಎಚ್ಚರಿಲ್ಲದೆ ವೇಗವಾಗಿ ಓಡಿದಳು. ಗಾಳಿಗೆ ಹಾರುವ ಪಟದಂತೆ ವೇಗವಾಗಿ ಬಾಗಿಲಿಗೆ ಬಂದಳು. ಪ್ರತಿಕ್ಷಣವೂ ಯುಗಪ್ರಾಯವಾಗಿದ್ದಿತು. ಪ್ರತಾಪದೇವರಾಯ ಒಳಸೇರಿದನೆಂಬ ನೋಟವೇ ಶಲ್ಯಪ್ರಾಯವಾಗಿ, ಆಕೆಗೆ ಅತಿಯಾದ ವೇದನೆಯುಂಟು

ಮಾಡಿತು. ಒಳಗೆ ನಡೆದುದೇನೋ ಎಂಬ ಭೀಕರ ವಿಚಾರ ಆಕೆಯನ್ನು ಬಲವಾದ ಸಂಕಟಕ್ಕೆ ಗುರಿಮಾಡಿತು. ಗಾಳಿಗೆ ಹಾರಿದಂತೆ ಬಾಗಿಲಿಗೆ ಬಂದಳು.

ಕಾವಲುಗಾರರು ಆಕೆಯ ಆ ಅವಸ್ಥೆ ನೋಡಿದರು.

ಸಿಂಹಿಣಿಯಂತೆ ಕಾಣುತ್ತಲಿದ್ದಳು. ಮೋರೆಯಲ್ಲಿನ ಪ್ರಖರತೇಜ ಕಣ್ಣು ಕುಕ್ಕಿಸು ವಂತಿದ್ದಿತು. ಕಣ್ಣಿನಿಂದ ಕಿಡಿಗಳುದುರುತ್ತಲಿದ್ದುವು. ತಲೆ ಕೆದರಿದ್ದಿತು. ಆ ರೌದ್ರ ರೂಪಕ್ಕೆ ಕಾವಲುಗಾರರು ಭೀತರಾದರು. ಭಯಕಂಪಿತರಾಗಿ ಅವರು ದೂರ ಸರಿದರು.

ಹೇಮಾಂಬಿಕೆ ಒಳಸೇರಿದಳು.

ವಿಕಟಹಾಸ್ಯಗೆಯ್ಯುವ ಪ್ರತಾಪದೇವರಾಯ ಯಮದೂತನಂತೆ ಅರಸಿನ ಹಾಸಿನ ಬಳಿಯಲ್ಲಿ ನಿಂತಿದ್ದಾನೆ. ಆಸುರೀಲಾಲಸೆಯಿಂದ ಪರಿಪೂರ್ಣನಾಗಿ, ಪ್ರತ್ಯಕ್ಷ ರಕ್ಕಸನಂತೆ ಕಾಣುತ್ತಲಿದ್ದಾನೆ. ತನ್ನಾ ದುರುದ್ದೇಶ ಸಾಧನೆಗೆಂದು ಸಿದ್ಧನಾಗಿದ್ದಾನೆ. ಕರದಲ್ಲಿ ಲಕಲಕಿಸುವ ಆ ಖಡ್ಗ—

ಹೇಮಾಂಬಿಕೆ ಮಿಂಚಿನಂತೆ ಧಾವಿಸಿದಳು. ಅರಸನ್ನು ಪಾರುಗಾಣಿಸಲು ಒಂದು ಕ್ಷಣ—ಅರೆಕ್ಷಣಮಾತ್ರ ಯೋಚಿಸಿದಳು. ಪ್ರತಾಪದೇವರಾಯನನ್ನು ಹಿಡಿ ಯುವದಾಗಲೀ, ಅವನನ್ನು ತಡೆಯುವದಾಗಲೀ ಸಾಧ್ಯವಿರಲಿಲ್ಲ. ಜನರನ್ನು ಕರೆ ಯಲು ಸಮಯವೂ ಇರಲಿಲ್ಲ ಅರಸಿಗೆ ಅರೆ ನಿದ್ರೆಹತ್ತಿ ಸುಮ್ಮನೆ ಮಲಗಿದ್ದನು.

ಅರೆಕ್ಷಣದಲ್ಲಿಯೇ ಏನು ಮಾಡಬೇಕೆಂದು ಯೋಚಿಸಿದಳು. ಸರ್‍ರನೇ ಮಿಂಚಿ ನಂತೆ ಹೋದವಳೇ ಅರಸಿನ ಮಂಚದ ಬುಡಕ್ಕೆ ಕೆಳಕ್ಕೆ ನಿಲ್ಲಿಸಿದ ಕಬ್ಬಿಣದ ಮೊಳೆ ಯನ್ನು ಜಗ್ಗಿದಳು. ಬರಿಯ ಹೆಣ್ಣುಮಗಳು, ಆದೆಷ್ಟು ಬಲವಾಗಿದ್ದಿತೋ ಆ ಮೊಳೆ ಕಡೆಗೆ ಬಂದಿತು. ಒಡನೆಯೇ ಅರಸು ಮಲಗಿದ ಹಲಗೆಯು ಕೆಳಗೆ ಸರಿ ಯಿತು. ಅದರೊಡನೆ ಅರಸೂ ಕೆಳಗೆ ಸರಿದನು. ಆ ಹಲಗೆ ಕೆಳಗೆ ಸರಿಯಲಿಕ್ಕೂ ಪ್ರತಾಪದೇವರಾಯನ ಏಟು ಬೀಳಲಿಕ್ಕೂ ಸರಿಯಾಯಿತು. ಎದೆಯಲ್ಲಿ ನಾಟಲಿದ್ದಾ ಖಡ್ಗ ಅಡ್ಡವಾಗಿ ತಲೆಗೆ ಬಡಿಯಿತು. ಅರಸು 'ಅಯ್ಯೋ' ಎಂದು ಚೀತ್ಕರಿಸಿದನು. ಒಡನೆಯೇ ಮೂರ್ಛೆಯಿಂದುರುಳಿದನು. ಹೇಮಾಂಬಿಕೆ ಲಗುಬಗೆಯಿಂದ ಅರಸ ನನ್ನು ಕೆಳಕ್ಕುರುಳಿಸಿ ಕಟ್ಟಿಗೆಯ ಹಲಿಗೆಯೆತ್ತಿ ಹಿಡಿದಳು. ಇಷ್ಟೆಲ್ಲ ಅಘಟಿತ ಘಟನೆ ಅರೆಕ್ಷಣದಲ್ಲಿ ಸಂಭವಿಸಿತು.

ಪ್ರತಾಪದೇವರಾಯನ ವಿಕಟಹಾಸ್ಯ ಬಲವಾಯಿತು. ಮತ್ತೆ ಮತ್ತೆ ಏಟು ಹಾಕಹತ್ತಿದನು. ಅರಸು ಇರುವನೋ ಇಲ್ಲವೋ ಎಂಬ ಬಗ್ಗೆ ಸಂದೇಹವೇ ಬರ ಲಿಲ್ಲ; ಮತ್ತು ಬರುವದಾದರೂ ಹೇಗೆ? ತನ್ನ ಹೊರತು ಅಲ್ಲಿ ಇನ್ನಾರೂ ಬಂದಿರ ಲಿಲ್ಲ; ತಾನೇ ತಾನಾಗಿದ್ದನು. ಅಂದಮೇಲೆ ಅರಸು ಹೋಗುವದೆಲ್ಲಿ? ಇದರ ಹೊರತು ಅರಸು 'ಅಯ್ಯೋ!' ಎಂದು ಕೂಗಿದ್ದನು.

'ಅಯ್ಯೋ—ಅಯ್ಯೋ—ನರಳು, ಹೊರಳು, ಉರುಳು. ಬೇಡವೆನ್ನುವರಾರು? ಈಗ ನಾನಾರು ಬಲ್ಲೆಯಾ? ಕರ್ನಾಟಕ ಸಾಮ್ರಾಜ್ಯದರಸು. ಕರ್ನಾಟಕ ಸಿಂಹಾ

ಸನ ನನ್ನದಿದೆ. ಕರ್ನಾಟಕವನ್ನಾಳುವವ ನಾನು. ಸಕಲ ಭೂಮಂಡಲವನ್ನೇ ಅಲುಗಾಡಿಸುವೆ. ನೋಡುವೆ. ಅದಾರು ನನ್ನ ಅಪಮಾನ ಮಾಡುವರೋ. ಇಗೋ, ನಿನ್ನ ಸಾಮ್ರಾಜ್ಯದಾಡಳಿತದ ಪ್ರತಿಫಲವನ್ನು. ಹೋಗು, ಯಮಲೋಕಕ್ಕೆ ಹೊರಡು. ಇನ್ನಾರು ಬಿಡಿಸುವವರು? ಸಾಕೋ? ಇಗೋ ಇನ್ನೊಂದು, ಮತ್ತೊಂದು, ಮಗದೊಂದು, ಒಂದು-ಎರಡು—'

ಪ್ರತಾಪದೇವರಾಯನೆಂದರೆ ಪ್ರತ್ಯಕ್ಷ ದೈತ್ಯನಾಗಿದ್ದನು. ಅವನಾ ಆಘಾತಪೂರ್ಣ ಭಾಷಣ, ವಿಕಟಹಾಸ್ಯ, ಖಡ್ಗಪ್ರಹಾರಗಳಿಂದ ಹೇಮಾಂಬಿಕೆ ನಡುಗಿದಳು! ಮಾನವನ ಸ್ಥಿತಿ ಇದುವರೆಗೆ ತಲುಪಬಹುದೆಂದು ಆಕೆಗೆಂದೂ ತೋರಿರಲಿಲ್ಲ. ಅದೆಂತಹ ರೌದ್ರತೆಯದು! ಪ್ರಳಯ ಭೈರವನಿಗೆ ಕೂಡ ಮಿಗಿಲಾಗಿದ್ದಿತು. ಪ್ರತಿಯೊಂದು ಅಕ್ಷರಕ್ಕೂ ಆಘಾತ ಕೊಡುತ್ತ ಮಂಚಕ್ಕೆ ಖಡ್ಗದೇಟು ಹಾಕುತ್ತಲಿದ್ದನು. ಹಾಸುಗೆಳೆಲ್ಲವೂ ಚೂರುಚೂರುಗಳಾಗಿ, ಮಂಚದ ಹಲಗೆ ಕೂಡ ಚೂರಾಗುವ ಸಮಯ ಬಂದಿದ್ದಿತು; ಆದರೂ ಅತ್ತ ಅವನ ಲಕ್ಷ್ಯವೇ ಇರಲಿಲ್ಲ. ಒಂದೇಸಮನೆ 'ನಾನು ರಾಜ. ನಿನಗೆ ಕೊಡುವ ಶಿಕ್ಷೆಯಿದು. ಹೊರಡು ಬೇಗ, ನನ್ನ ರಾಜ್ಯ, ನನ್ನ ಪೃಥ್ವಿಯೆಲ್ಲವನ್ನೂ ಬಿಟ್ಟು ಹೊರಡು. ಇನ್ನು ನಾನೇ ಅರಸು—ನಾನೇ ಅರಸು—ನಾನೇ ಅರಸು—ಅಹ್ಹಾ-ಹ್ಹಾ ನಾನೀಗ ಅರಸು. ಮೂರ್ಖ ಜನಗಳಿರಾ? ಈಗ ಅರಸನಾರು? ಸಮ್ರಾಟನಾರು ಬಲ್ಲಿರಾ? ನಾನು, ಪ್ರತಾಪದೇವರಾಯನ ಪ್ರತಾಪ ಹೇಗಿದೆ ನೋಡಿರಿ? ಅವನಿಗೆ ಮನಸ್ಸು ಬಂದರೆ, ಸಕಲ ಭೂಮಂಡಲವನ್ನೇ ರಸಾತಳಕ್ಕೆ ತುಳಿಯಬಹುದು. ನಾನೇ ಅರಸು, ನಾನೇಅರಸು. ನಾ—ನೇ —ಅ—ರ—ಸು.'

ಪ್ರತಾಪದೇವರಾಯನ ಅಬ್ಬರ ಪ್ರತಿಕ್ಷಣ ಬೆಳೆಯುತ್ತಲೇ ನಡೆಯಿತು. ಮನಸ್ಸು ತಣಿಯುವವರೆಗೂ ಮಂಚಕ್ಕೆ ಖಡ್ಗದೇಟು ಕೊಟ್ಟು, ಅಟ್ಟಹಾಸದಿಂದ ಹೊರಹೊರಟನು.

ಅಗ್ಗಿ ಮತ್ತನಿಗಿಂತಲೂ ಮತ್ತನಾಗಿದ್ದನು. ಜೋಲಿಹೋಗುತ್ತಲಿರಲು, ಹಾಗೆ ಹೀಗೆ ಅಲೆದಾಡುತ್ತ ಹೊರಟಿದ್ದನು. ಕಣ್ಣುಗಳಲ್ಲಿ ರಾಕ್ಷಸೀವೃತ್ತಿ ಚನ್ನಾಗಿ ವ್ಯಕ್ತವಾಗುತ್ತಲಿದ್ದಿತು. ಕೈಯಲ್ಲಿಯ ಖಡ್ಗ ಅತ್ತಿತ್ತ ಅಲೆದಾಡುತ್ತಲಿದ್ದಿತು. ವಿಕಟಹಾಸ್ಯದೊಡನೆ 'ನಾ-ನೇ-ಅರಸು,' ಎಂಬ ಕಠೋರ ಸ್ವರ ಹೊರಬರುತ್ತಲಿದ್ದಿತು. ತಮೋಗುಣದ ಮೂರ್ತಿಯೇ ಅವನಾಗಿದ್ದನೆಂದರೂ ಸಲ್ಲುವಂತಿದ್ದಿತು.

ಹೇಮಾಂಬಿಕೆ ಮಂಚದ ಬುಡದಿಂದ ಕಾಣಿಸಿದುದನ್ನು ನೋಡುತ್ತಲಿದ್ದಳು. ಅವನ ಪ್ರತಿಯೊಂದು ಚಲನ ವಲನವೂ ಆಕೆಗೆ ಕೇಳಬರುತ್ತಲಿದ್ದಿತು. ಅವನಾ ಭೀಕರ ಆಕೃತಿಯು ಆಕೆಗೆ ಅತೀವ ಭಯವನ್ನುಂಟುಮಾಡುತ್ತಲಿದ್ದಿತು. ಅರಸು ಖಡ್ಗಪ್ರಹಾರದಿಂದ ಮೂರ್ಛಿತನಾಗಿ ಬಿದ್ದಿದ್ದನು. ಆತನನ್ನುಪಚರಿಸಬೇಕೆಂಬ ಭಾನವೂ ಕೂಡ ಉಳಿಯಲಿಲ್ಲ; ಅಥವಾ ಹಾಗೆ ಮಾಡಬೇಕೆಂದರೂ ಸಾಧ್ಯವಿರಲಿಲ್ಲ. ಪ್ರತ್ಯಕ್ಷ ಕಾಲನೇ ಎದುರ್ನಿಂದ್ದನು. ಹಾಗೆಯೇ ನೋಡುತ್ತ ಉತ್ಕಂಠೆಯಿಂದ ಕುಳಿ

ತಿರಲು ಪ್ರತಾಪದೇವರಾಯು ಹೊರಹೊರಟನು.

ಅರಸಿನ ಅಂತವಾಯಿತೆಂಬ ಆನಂದದ ಅಟ್ಟಹಾಸದಲ್ಲಿ ಅವನು ವಿಕಟವಾಗಿ ನಗುತ್ತ ಹೊರಟನು. ಬಾಗಿಲು ದಾಟುತ್ತಲೇ ಅದನ್ನು ತಾನೇ ಮುಚ್ಚಿಕೊಂಡು ಮುಂದೆ ಹೊರಟನು. ಮುಮ್ಮಾಳಿಗೆಯ ಮುಂಬದಿಗೆ ಬಂದು ನಿಂತನು. ಮಾರ್ಗದಲ್ಲಿ ಅನೇಕರು ಹಾಡುತ್ತಲಿದ್ದರು ಅವರೆಲ್ಲರನ್ನು ದ್ದೇಶಿಸಿ:-'ಎಲೋ ಮೂರ್ಖರಿರಾ, ಚನ್ನಾಗಿ ಕಿವಿತೆರೆದು ಕೇಳಿರಿ, ಕಣ್ತೆರೆದು ನೋಡಿರಿ. ಇಗೋ, ನಿಮ್ಮ ಎದುರಿನಲ್ಲಿ ನಿಂತಿರುವ ಈ ಪ್ರತಾಪದೇವರಾಯನೇ ಅರಸು. ಈಗ ನಾನೇ-ಅ-ರ-ಸು,-ನಾ-ನೇ-ಅ ರ-ಸು.'

ಎಂತಹ ಭೀಷಣ ಸ್ವರವದು! ಪ್ರತಿಯೊಂದು ಸ್ವರಾಘಾತವೂ ವಿಲಕ್ಷಣವಾದ ತರಂಗಗಳನ್ನು ಹುಟ್ಟಿಸಿತು. ಹವೆಯ ಆ ತರಂಗಗಳು ಪ್ರಕ್ಷುಬ್ಧ ಸಾಗರದ ತೆರೆಗಳನ್ನು ಹಿಂದೆ ಹಾಕುವಂತಿದ್ದುವು. ಅಂತಹ ಆ ಭೀಕರ ತರಂಗಗಳು ನಾಗರಿಕರ ಕರ್ಣಪುಟಲಕ್ಕೆ ಅಪ್ಪಳಿಸುತ್ತಲೇ ನಾಗರಿಕರು ನಡುಗಿದರು. 'ಪ್ರತಾಪದೇವರಾಯು ಅರಸು' ಅದೇಕೆ?—ಎಲ್ಲರೂ ಶಂಕಾತುರರಾಗಿ ಪ್ರಶ್ನೆಮಾಡಹತ್ತಿದರು; ಆದರೆ ಉತ್ತರಕೊಡುವವರಾರು? ಎಲ್ಲರೂ ಏಕೆ? ಎಂದು ಪ್ರಶ್ನೆ ಮಾಡುವವರೇ! ಅರಸಿಗೆ ಅಸ್ವಸ್ಥೆಯಾದ ವಾರ್ತೆ ಆಗ ತಾನೆ ತಿಳಿಯುತ್ತಿದ್ದಿತು. ಅಸ್ವಸ್ಥತೆಯಾಗುತ್ತಲೇ ಅಂತವೇ ಆಯಿತೆ?' ರಾಜನಿಷ್ಠ ಕನ್ನಡಿಗರ ಹೃದಯುಗಳು ಈ ವಿಚಾರದಿಂದ ಅಳುಕಿದವು. 'ಒಂದು ಸಮಯ ಇಂತಹ ಭೀಕರ ಮರಣ ಸಂಭವಿಸಿದರೂ, ಯುವರಾಜ ಇಲ್ಲವೆ? ಹಾಗಿರಲು ಈತ ಅರಸು ಹೇಗೆ? ಛೆ, ಈತನೆಂದೂ ಅರಸನಾಗಲಾರ.' ಹೀಗೆ ಸಂದೇಹಪಡುವಾಗಲೇ ಪ್ರತಾಪದೇವರಾಯನ 'ನಾ-ನೇ ಅ-ರ ಸು' ಎಂಬ ಶಬ್ದಗಳು ಶಲ್ಯದಂತೆ ನಾಟುತ್ತಲಿದ್ದವು. ಜನರು ಕಿಂಕರ್ತವ್ಯಮೂಢರಾದರು. ಅಲ್ಪಾವಕಾಶದಲ್ಲಿಯೇ ಸಾವಿರಾರು ಜನರು ನೆರೆದರು. ಆ ಭೀಕರ ರೂಪ, ವಿಕಟಹಾಸ್ಯಗಳು ಅವರನ್ನು ನಡುಗಿಸಿಬಿಟ್ಟವು. ಒಂದು ಸಮಯ ಈತ ಅರಸನೇ ಆದರೆ, ಈ ಭೀಷಣತೆಯೇಕೆ? ಇವನಿಗೆಲ್ಲೋ ಮತಿಭ್ರಮೆಯಾಗಿರಬೇಕು. ಈತನೆಂದೂ ಅರಸನಾಗಲಾರ! ಮತ್ತೆ ಪ್ರತಾಪದೇವರಾಯನ 'ನಾನೇ ಅರಸು' ಎಂಬ ಶಬ್ದಗಳು ಕೇಳಬರುವವು.

ಜನತೆಯಲ್ಲಿ ವಿಲಕ್ಷಣವಾದ ಗಡಿಬಿಡಿಯುಂಟಾಯಿತು. ಎಲ್ಲರೂ ಕೂಗಿ, ಕೂಗಿ 'ಅರಸರೆಲ್ಲಿ? ಯುವರಾಜರೆಲ್ಲಿ?' ಎಂದು ಪ್ರತಾಪದೇವರಾಯನಿಗೆ ಕೇಳುತ್ತಲಿದ್ದರು. ಅವರ ಎಲ್ಲ ಪ್ರಶ್ನೆಗಳಿಗೂ ಪ್ರತಾಪದೇವರಾಯನ 'ನಾನೇ ಅರಸು' ಎಂಬದೊಂದೇ ಉತ್ತರವಾಗಿದ್ದಿತು.

'ನಾನೇ ಅರಸು' 'ನಾನೇ ಅರಸು' 'ನಾನೇ ಅರಸು.' ಪ್ರತಾಪದೇವರಾಯನ ಮುಖಕ್ಕೆ ಕೊಂಚವಾದರೂ ತಡೆಯಿರಲಿಲ್ಲ. 'ನಾನೇ ಅರಸು' ಎಂಬ ನಾದದಿಂದ ಅವನ ದೇಹ ಪರಿಪೂರ್ಣವಾಗಿದ್ದಿತು. ಮತ್ತೂ ಮತ್ತೂ 'ನಾನೇ ಅರಸು' ಎಂಬ ಉಚ್ಚಾರ ಮುಖದಲ್ಲಿ ಮೂಡಿ ಕೇಳುವವರ ಕಿವಿಗಳಿಗಪ್ಪಳಿಸುತ್ತಲಿದ್ದಿತು. ಅನ್ಯ ವಿಚಾರವೇ ಆತನ ಮನಸ್ಸಿಗೆ ನಿಲುಕಲಿಲ್ಲ. ಅನ್ಯ ಶಬ್ದ ಮುಖದಿಂದ ಹೊರಬರುತ್ತ

ಲಿರಲಿಲ್ಲ. ಅನ್ಯ ಶಬ್ದ ಆತನ ಕಿವಿಗಳಿಗೆ ಕೇಳಬರುತ್ತಿರಲಿಲ್ಲ. ತನ್ನ ಅರಸುತನದ ವಿಚಾರವೊಂದರಲ್ಲಿಯೇ ಮಗ್ನನಾಗಿ 'ನಾನೇ ಅರಸು' 'ನಾನೇ ಅರಸು' ಎಂದು ಕೂಗುತ್ತ ನಿಂತುಬಿಟ್ಟನು.

ಮಹಡಿ ಪ.ುವಮ್ಮಾಳಿಗೆ ಮುಂಬದಿಯಲ್ಲಿ ಪ್ರತಾಪದೇವರಾಯ 'ನಾನೇ ಅರಸು' ಎಂದು ಕೂಗುತ್ತ ನಿಂತಿರುವ ಅವನಾ ರೂಪು, ಸ್ವರಾಘಾತ' ವೊಗದಲ್ಲಿ ಮನೆಮಾಡಿದ್ದ ಆಸುರೀ ತೃಷ್ಣೆ ಇವುಗಳ ಅವಲೋಕನದಿಂದ ನೋಟಕರ ಹೃನ್ಮನಗಳು ನಡುಗುವಂತ್ತಿದ್ದುವು. ಸಾವಿರಾರು ಜನರು ತಮ್ಮ ತಮ್ಮೊಳಗೆ ಕೂಗುತ್ತ ಚೀರುತ್ತ ನಿಂತಿದ್ದರು.

ಯುವರಾಜನ ಕಾಲೇ ಹೋದುವು. ಚಿನ್ನಾಂಬೆಯಿಂದ ಉತ್ತೇಜಿತನಾಗಿ ಮಲ್ಲಿಕಾರ್ಜುನಮಂದಿರದಿಂದ ಓಡುತ್ತಲೇ ಬಂದಿದ್ದನು. ಚಿನ್ನಾಂಬೆಯೂ ಸಂಗಡಲೇ ಇದ್ದಳು. ತಂದೆಯನ್ನು ಕೊಂದೇ ಬಂದಿದ್ದನೆಂದು ತಿಳಿದನು.

'ಚಿನ್ನಾ, ನನ್ನ ದುರ್ದೈವ ಬಹಳ ಬಲವತ್ತರವಾಗಿದೆ ನೋಡು. ಈ ಭೀಕರ ಆಕೃತಿಯನ್ನಾದರೂ ನೋಡು. ತನ್ನಿಚ್ಛೆ ಕೊನೆಗಾಣಿಸಿಯೇ ಬಂದು ಇಲ್ಲಿ ನಿಂತಿರುವಂತೆ ತೋರುತ್ತದೆ. ಹೋಗು, ನಾನಿನ್ನು ಹೀಗೆಯೇ ಮರಳಿ ವನಕ್ಕೆ ತೆರಳುವೆನು. ಸ್ಮಶಾನರೂಪವಾದೀ ನಗರದಲ್ಲಿ ನಾನಿರಲಾರೆ--'

ಯುವರಾಜನ ಒಂದೊಂದೇ ಶಬ್ದ ಅವನ ಆಳವಾದ ದುಃಖವನ್ನು ಚನ್ನಾಗಿ ವ್ಯಕ್ತಪಡಿಸುತ್ತಲಿದ್ದಿತು. ಆ ರೌದ್ರ ನೋಟದಿಂದ ಆಕೆಯಾದರೂ ಗಾಬರಿಯಾಗಿದ್ದಳು. ಮುಂದೇನು ಮಾಡಬೇಕೆಂದು ಆಕೆಗೂ ತಿಳಿಯದಾಯಿತು. ಹೇಮಾಂಬಿಕೆಯನ್ನು ಕಾಣುವವರೆಗೆ ಆಕೆಗೆ ಯಾವ ಇತ್ಯರ್ಥವೂ ಆಗುವಂತಿರಲಿಲ್ಲ. ಆದುದರಿಂದ ಹೇಮಾಂಬಿಕೆಯವರೆಗೆ ಯುವರಾಜನನ್ನು ಕರೆದೊಯ್ಯಬೇಕಾಗಿದ್ದಿತು.

'ಯುವರಾಜ, ಮೊದಲು ನಡೆದ ಸಂಗತಿಯನ್ನಾದರೂ ಅರಿಯುವಾ.'

'ಚಿನ್ನಾ, ಹೊಸದಾಗಿ ಅರಿಯುವ ಅವಶ್ಯಕತೆಯಿಲ್ಲ. ಈ ಭಯಂಕರ ಉನ್ಮತ್ತತೆಯೇ ಸಾಕ್ಷಿಯಿದೆ.'

'ರಾಜಪುತ್ರಿಯವರು ಹಾಗೆಂದೂ ಮಾಡಗೊಟ್ಟಿರಲಿಕ್ಕಿಲ್ಲ.'

'ಹುಚ್ಚಿ, ಪಾಪ! ಆ ಹೆಣ್ಣುಮಗಳೇನು ಮಾಡುವಳು? ನೋಡು, ಲಾಲಸಾಪೂರ್ಣನಾದ ಈ ಸೈತಾನನೆದುರು ಹತ್ತುಜನರಾದರೂ ತಡೆಯಲಾರರು. ವ್ಯರ್ಥವಾದ ಆಶೆಯಿಂದ ಫಲವೇನು?'

'ಒಂದು ಸಮಯ, ಹಾಗಾಗಿದ್ದಿತೆಂದೇ ತಿಳಿದರೂ—ಪುತ್ರತ್ವದ ಕೊನೆಯ ಕಟುಕರ್ತವ್ಯವೊಂದಿದೆಯಲ್ಲ!' ಎಷ್ಟೇ ದುಃಖವಾದರೂ ಎಷ್ಟೇ ಸಂಕಟವಾದರೂ ಅದನ್ನು ನೆರವೇರಿಸಲೇಬೇಕಲ್ಲವೆ? ಬಿಟ್ಟರೆ ಕರ್ತವ್ಯ ಚ್ಯುತಿಯಾಗುವದಲ್ಲವೆ?'

ಚಿನ್ನಾಂಬೆಯ ಶಬ್ದಗಳು ಯೋಗ್ಯ ಪರಿಣಾಮ ಮಾಡಿದುವು. 'ಅಹುದು; ಚಿನ್ನಾ, ನಿನ್ನ ಮಾತು ದಿಟವಿದೆ. ಈಗಲೇ ಬೆಂದು ಹೋಗುತ್ತಲಿರುವ ಈ ಹೃದಯ, ಆ ದುಃಖಕರ ನೋಟದಿಂದ, ಮುಂದೆ ನಾನು ಕೈಕೊಳ್ಳಲಿರುವ ಕಟುತಮ ಕರ್ತವ್ಯ

ದಿಂದ ಭಸ್ಮವಾಗುವದರಲ್ಲಿ ಸಂದೇಹವಿಲ್ಲ. ಆದರೂ ಉಪಾಯವಿಲ್ಲ ನಡೆ. ಅದನ್ನಷ್ಟು ಪೂರಯಿಸಿ, ನಾನು ಅಡವೀ ಕೂಡುವೆ. ಇಷ್ಟೆಲ್ಲ ಅಘಟಿತ ಘಟನೆಗಳಿಂದ ದೊರಕಿಸಿದ ಈ ಸಾಮ್ರಾಜ್ಯ ಆತನಿಗೇ ಇರಲಿ.'

ಹೇಗಾದರೂ ಮುಂಬಂದರೆ ಸಾಕೆಂದು ಚಿನ್ನಾಂಬೆ ಹಾಗೆ ಹೇಳಿದಳು. ಆಕೆಗಾದರೂ ಯಾವ ನಿರ್ಧಾರವೂ ಆಗಲಿಲ್ಲ. ಆದರೂ ಹೇಮಾಂಬಿಕೆಯನ್ನು ಕಾಣಲೇ ಬೇಕಾಗಿದ್ದಿತು. ಆತುರತೆಯಿಂದ ಯುವರಾಜನನ್ನೊಡಗೊಂಡು ಒಳಹೊಕ್ಕಳು.

ಇಬ್ಬರೂ ಒಳಸೇರಿ ನೋಡುವಲ್ಲಿ ಹೇಮಾಂಬಿಕೆ ಅರಸನನ್ನುಪಚರಿಸುತ್ತಲಿದ್ದಳು. ತಲೆಗೆ ಪಟ್ಟೀಕಟ್ಟಿದ್ದಳು. ಯುವರಾಜ ಹರ್ಷೋನ್ಮಾದದಿಂದ 'ಪಿತಾಜಿ' ಎಂದನು.

'ಮಲ್ಲಿಕಾರ್ಜುನ, ಆವಾಗ ಬಂದೆ?' ಅರಸು ನರಳುವ ಸ್ವರದಲ್ಲಿ ಕೇಳಿದನು.

ಹೇಮಾಂಬಿಕೆ, ಒಂದು ಸಲ ಮೇಲೆ ನೋಡಿದಳು. ಹೇಮಾಂಬಿಕೆಯ ಆ ನೋಟದಲ್ಲಿ ಅದೆಷ್ಟೋ ಭಾವನೆಗಳು ವ್ಯಕ್ತವಾದವು. ಮುಖ್ಯ ಉದ್ದೇಶವೆಂದರೆ, ಆಕೆ ಅದುವರೆಗೂ ಅರಸಿನುಪಚಾರದಲ್ಲಿ ತೊಡಗಿದ್ದಳು. ಅರಸು ಸುರಕ್ಷಿತನಾಗಬೇಕೆಂದು ಹಾರೈಸುತ್ತಲಿದ್ದಳು. ಅದರಂತೆ ಶಕ್ತಿಮೀರಿ ಯತ್ನಿಸುತ್ತಲಿದ್ದಳು. ಆಕೆಯ ಪ್ರಸಂಗಾವಧಾನದಿಂದಲೂ, ಚಾತುರ್ಯದಿಂದಲೂ ಅರಸು ಕ್ಷೇಮವಾಗುಳಿದಿದ್ದನು. ಆ ಬಗ್ಗೆ ಆಕೆಗೆ ಅತ್ಯಾನಂದವೆನಿಸುತ್ತಲಿದ್ದಿತು; ಆದರೆ ಆಕೆಯ ಹಾರೈಕೆ ಬೇರೆಯೇ ಇದ್ದಿತು. ತನ್ನ ಪ್ರೇಮನಿಧಿ ಯುವರಾಜ ಮಲ್ಲಿಕಾರ್ಜುನ ಮಂದಿರದತ್ತ ಓಡಿದಾಗಲೇ ಆತನ ಕುಶಲದ ಬಗ್ಗೆ ಶಂಕೆ ಬಂದಿತು. ಆತನ ರಕ್ಷಣೆಗೆಂದು ತಾನು ಆತನ ಬೆನ್ನು ಹತ್ತಬೇಕಿದ್ದಿತು; ಆದರೆ ಅದಕ್ಕಿಂತಲೂ ಹೆಚ್ಚಾದ ಕರ್ತವ್ಯ ಕರೆಯುತ್ತಲಿದ್ದಿತು. ಅಂತೆಯೇ ತನ್ನ ಪ್ರೇಮನಿಧಿ ಕಾಯಲು ಚಿನ್ನಾಂಬೆಯನ್ನಟ್ಟಿ ತಾನು ಅರಸಿನ ಬಳಿ ಬಂದಿದ್ದಳು. ಆದರೆ ಆಕೆಯ ಚಿತ್ತವೆಲ್ಲವೂ ಯುವರಾಜನತ್ತವೇ ಇದ್ದಿತು. ತಾನೆಂತಹ ವಾರ್ತೆ ಕೇಳಬೇಕಾಗುವದೋ, ಎಂಬ ಭೀಕರ ವಿಚಾರ ಮನದಲ್ಲಿ ಮೂಡುತ್ತಲಿದ್ದಿತು. ಅನೇಕ ಶಂಕೆ-ಕುಶಂಕೆಗಳು ಪ್ರವೇಶಿಸುತ್ತಲಿದ್ದುವು. ಅವೆಲ್ಲವುಗಳನ್ನೂ ಹೊಡೆದಟ್ಟಿ ದಕ್ಷತೆಯಿಂದ ಅರಸಿನುಪಚಾರ ಕೈಕೊಂಡಿದ್ದಳು; ಆದರೂ ಕಣ್ಮನಗಳು ದ್ವಾರದತ್ತವೇ ಇದ್ದವು. ಪ್ರತಿಕ್ಷಣವೂ ಆಶೆ-ನಿರಾಶೆಗಳಲ್ಲಿ ಮುಳುಗೇಳುತ್ತಲಿದ್ದಳು. ಇಂತಹ ನಿಕರದ ಸಮಯದಲ್ಲಿ ಯುವರಾಜನಾಗಮಿಸಲು ಅತ್ಯಾನಂದವಾಗುವದು ಸಹಜವೇ. ಆ ಆನಂದದ ಭರದಲ್ಲಿಯೇ ಭೀಷಣವಾದ ಕಪಟದ ಬಲೆಯಿಂದ ಪಾರಾಗಿ ಬಂದ ತನ್ನ ಹೃದಯದಧಿದೇವನನ್ನು ಕಣ್ತುಂಬ ನೋಡಲು ಆಕೆ ಮೊಗವೆತ್ತಿದಳು.

ಯುವರಾಜನಲ್ಲಿ ವಿಲಕ್ಷಣವಾದ ಮಾರ್ಪಾಟಾಗಿದ್ದಿತು. ಕಣ್ಯಕ್ತಿ, ಮೊಗದ ಕಳೆ, ಶಾರೀರಕ ಬಲ ಎಲ್ಲವೂ ಕುಂದಿದಂತೆ ಕಾಣಿಸಿತು. ಮಲ್ಲಿಕಾರ್ಜುನ ಮಂದಿರದಲ್ಲಿ ಭೀಕರ ಪ್ರಸಂಗ ನಡೆದು ಹೋಗಿರಬೇಕೆಂದು ಯೋಚಿಸಿದಳು. ಅದರಿಂದ ಆಕೆ ಅತೀವ ಅಧೀರಳಾದಳು. ಅಂತಹ ದುರ್ಘಟನೆಯಲ್ಲಿ ಯುವರಾಜ ಸಿಕ್ಕದೆ ಕ್ಷೇಮ

ದಿಂದ ಮರಳಿದ್ದಕ್ಕೆ ಪಂಪಾಪತಿಯನ್ನು ಪ್ರಾರ್ಥಿಸಿದಳು.

ಯುವರಾಜನೂ ಕೃತಜ್ಞತೆಯ ನೋಟವನ್ನು ಹೇಮಾಂಬಿಕೆಯ ಮೇಲೆ ಬೀರಿದನು; ಆದರೂ ತೇಜೋಹೀನನಾದುದರಿಂದ ಹೇಮಾಂಬಿಕೆಗೆ ಸಾಕಷ್ಟು ಸಮಾಧಾನವಿರಲಿಲ್ಲ. ಯುವರಾಜನೂ ನಿರುಪಾಯನಾಗಿದ್ದನು. ಭಯಂಕರ ಉದ್ವಿಗ್ನತೆಯು ಹೊರತು ಇನ್ನೇನೂ ಅವನ ಹೃದಯದಲ್ಲಿರಲಿಲ್ಲ.

ಹೇಮಾಂಬಿಕೆ ಯುವರಾಜನ ಸ್ಥಿತಿಯನ್ನರಿತಳು. ನಡೆದು ಹೋದ ಭೀಕರ ಹತ್ಯಾಕಾಂಡದ ಬಲವಾದ ಆಘಾತ ಯುವರಾಜನಿಗಾದಂತೆ ಆಕೆಗೆ ತಿಳಿಯಿತು. ಆ ಆಘಾತದಿಂದ ಯುವರಾಜನ ಹೃದಯ ಚೇತನಗೊಳ್ಳುವದು ಕಠಿಣವೆಂಬ ವಿಚಾರ ಬಂದಿತು. ಆಕೆಯೂ ಯೋಚನೆಗೊಳಗಾದಳು.

ಇಷ್ಟರಲ್ಲಿ ಹೊರಗೆ ಗದ್ದಲವು ಬಲವಾಯಿತು. ಜನರು ಕೂಗುವದು, ಚೀರುವದು ಕೇಳಬರಹತ್ತಿತು. ಯುವರಾಜ ಮುಂದೆ ಹೋಗಿ ಗವಾಕ್ಷದಿಂದಿಣುಕಿದನು. ಮುಮ್ಮಾ-ಳಿಗೆಯ ಮುಂಬದಿಗೆ ಪ್ರತಾಪದೇವರಾಯ 'ನಾನೇ ಅರಸು' ಎಂದು ಮತ್ತೆ ಮತ್ತೆ ಕೂಗುತ್ತ ನಿಂತಿದ್ದನು. ಕೆಳಗೆ ಜನಸ್ತೋಮ ಬಲವಾಗಿದ್ದಿತು. ಎಲ್ಲರೂ ಒಂದೇ ಸಮನೆ ಕೂಗುತ್ತಲಿದ್ದರು. ಎಲ್ಲರ ಬಾಯಿಯಲ್ಲಿಯೂ ಮಾತುಗಳಿದ್ದುದರಿಂದ ಯಾವದೂ ಸ್ಪಷ್ಟವಾಗಿ ಕೇಳಬರುತ್ತಿರಲಿಲ್ಲ. ಹಲವರು ಕೈಮೇಲೆ ಮಾಡುತ್ತಲಿದ್ದರು. ಕೆಲವರು ಮೇಲೆ ನೋಡಿ ಕೇಳುತ್ತಲಿದ್ದರು. ಸಹಸ್ರಾವಧಿ ಜನರು ನೆರೆದಿದ್ದರು. ಎಲ್ಲರೂ ಏನನ್ನೋ ವಿಚಾರಿಸುತ್ತಲಿದ್ದರು.

'ಇಷ್ಟು ಜನ ನೆರೆದಿದೆ. ಇದೇನು ರಾಜಧಾನಿಯೋ ಇಲ್ಲವೆ — ಒಬ್ಬನಾದರೂ ವ್ಯವಸ್ಥೆ ಮಾಡಬಾರದೆ?' ಎಂಬ ವಿಚಾರ ಅವನ ಮನದಲ್ಲಿ ಬಂದಿತು. ಒಡನೆಯೇ ಯಾರು ತಾನೇ ಬರಬೇಕು? ಅಧಿಕಾರಿಗಳೆಲ್ಲರೂ ಭೀಕರ ಕಾಪಟ್ಯದ ಪರಿಣಾಮವಾಗಿ ಅಕಾಲಮೃತ್ಯುವಿಗೆ ಗುರಿಯಾಗಿದ್ದರು. ವ್ಯವಸ್ಥೆಮಾಡುವವರಾರು? ಈ ಯೋಚನೆ ಅವನಿಗೆ ಬಹಳವಾಗಿ ನೋವು ಉಂಟುಮಾಡಿತು. ಮಲ್ಲಿಕಾರ್ಜುನಮಂದಿರದಲ್ಲಿನ ಭೀಕರ ನೋಟ ಕಣ್ಣಮುಂದೆ ಬಂದು ನಿಂತಿತು.

ಜನತೆಯ ಅಸ್ವಸ್ಥತೆ ಬೆಳೆಯಹತ್ತಿತು. ನಿಜವಾದ ಸಂಗತಿ ಅವರಿಗೆ ಬೇಕಾಗಿದ್ದಿತೆಂದು ಯುವರಾಜನರಿತನು. ನಿಜ ಸಂಗತಿ ತಿಳಿಸದಿದ್ದರೆ, ಜನತೆಯ ಕ್ಷೋಭೆ ಅವಸಾನಮೀರುವದೆಂಬ ಭಯ ಬಂದಿತು. ತನ್ನ ದಗ್ಧಹೃದಯವನ್ನು ಕೊಂಚ ಮರೆತು, ಮರಳಿ ಬಂದನು.

'ಹೇಮಾ, ಗದ್ದಲವು ಬಲವಾಗಿದೆ.'

'ಆಂ! ಗದ್ದಲವೇ ಎಲ್ಲಿ?'

'ಹೊರಗೆ ಬೀದಿಯಲ್ಲಿ.'

'ಏಕೆ?'

'ಚಿಕ್ಕಪ್ಪನ ಅಸುರೀ ರೂಪ ನೋಡಿ ಕೋಪಿಸಿರುವಂತೆ ತೋರುತ್ತದೆ. ಆತ

ಒಂದೇಸವನೆ 'ನಾನು ಅರಸು' ಎಂದು ಕೂಗತ್ತಲಿರುವನು. ಅವರಿಗೆ ಇತಿಮಿತಿಯಾಗಿರಬೇಕು. ನಿಜವೃತ್ತಾಂತ ತಿಳಿಯುವ ಆತುರತೆ ಬಲವಾಗಿರುವಂತೆ ತೋರುತ್ತದೆ.'

'ಹಾಗಾದರೆ ಏನು ಮಾಡಬೇಕು?'

'ನಾವು ನಿಜ ವೃತ್ತಾಂತವರುಹಬೇಕು.'

'ನಾನು ಹೋಗಿ ಹೇಳಬಹುದೇ?'

'ಛೆ, ಅದರಿಂದೇನೂ ಉಪಯೋಗವಾಗಲಿಕ್ಕಿಲ್ಲ!'

'ಅದೇಕೆ?'

'ಒಬ್ಬರ ಮಾತು ಕೇಳಿಕೊಳ್ಳುವಷ್ಟು ತಾಳ್ಮೆಯೇ ಜನತೆಯಲ್ಲಿರುವಂತೆ ತೋರುವದಿಲ್ಲ. ನೀನೇನಾದರೂ ಹೇಳಹೋದರೆ ನೂರೆಂಟು ಜನರೂ ನೂರೆಂಟು ಪ್ರಶ್ನೆ ಕೇಳಬಹುದು. ನಿನ್ನ ಉತ್ತರ ಕೇಳದೆ ಮತ್ತೆ ಕೂಗಿ ಹೆಚ್ಚಾಗಿ ಗೊಂದಲವೆಬ್ಬಿಸಬಹುದು.'

'ಹಾಗಾದರೆ ನೀವೇ ಹೋಗಿಬಿಡಿರಿ. ನಿಮ್ಮನ್ನು ನೋಡಿ ಶಾಂತರಾಗಬಹುದು.'

''ಚಿಕ್ಕಪ್ಪ, 'ನಾನೇ ಅರಸು,' ಎಂದು ಕೂಗುತ್ತಲಿರುವ. ಅವನ ಬಗ್ಗೆ ಅವರ ಮನದಲ್ಲುಂಟಾದ ಶಂಕೆಗೆ ನನ್ನನ್ನು ಕಾಣುತ್ತಲೇ ಉತ್ತರ ದೊರೆಯಬಹುದು; ಆದರೆ ಇನ್ನೊಂದು ಪ್ರಶ್ನೆ ಉಳಿಯುತ್ತದೆ.'

'ಅದಾವದು?'

'ಪ್ರಭುಗಳ ಕುಶಲವರಿಯುವ ಕುತೂಹಲ.'

'ನೀವು ಹೇಳಬಹುದಲ್ಲ.'

'ಛೆ! ನಾನು ಹೇಳುವದನ್ನು ಕೇಳಿಕೊಳ್ಳುವಷ್ಟು ತಾಳ್ಮೆಯಾದರೂ ಅವರಲ್ಲಿದೆಯೆನ್ನುವೆಯಾ?

'ಹಾಗಾದರೆ ಏನು ಮಾಡಬೇಕು?'

'ನೆರೆದ ಜನಸಮೂಹಕ್ಕೆ ಪ್ರಭುಗಳ ದರುಶನವಾಗಬೇಕು.'

'ಅಂ, ಈಗ ತಾನೇ ಎಚ್ಚರಿಯುತ್ತಲಿರುವರು. ನೀವು ಬಂದಾಗ್ಗೆ ಆರೆ ಎಚ್ಚತ್ತಿರುವರು. ಪುನಃ ಗ್ಲಾನಿಗೊಳಗಾಗಿರುವರು. ಹೀಗಿರಲು ಅವರಿಗೆ ಪ್ರಭುಗಳ ದರುಶನ ಹೇಗಾಗಬೇಕು?'

'ಹೇಗಾದರೂ ಆಗಲೇಬೇಕು.'

'ಹಾಗಾದರೆ—'

'ಹೇಮಾ, ನಾವೀರ್ವರೂ ತಂದೆಯವರನ್ನು ಕರೆದೊಯ್ಯೋಣ. ಒಂದು ಸಲ ಪ್ರಭುಗಳ ದರುಶನವಾದರಾಯಿತು. ಮುಂದೆ ಜನರು ಬಹಳ ಮಟ್ಟಿಗೆ ಶಾಂತರಾಗುವರು. ಆ ಮೇಲೆ ನಾನಾಗಲಿ, ನೀನಾಗಲಿ ಯಾರಾದರೂ ಅವರಿಗೆ ತಿಳಿಹೇಳಬಹುದು.'

'ಇಲ್ಲ, ಮುಮ್ಮಾಳಿಗೆಯ ಮೇಲೆ—'

'ನಿಜ; ಇಲ್ಲಿ ಹೋಗುವಂತಿಲ್ಲ. ಒಳ್ಳೇದು; ಮೇಲಿನ ಅಟ್ಟಹತ್ತಿ ಹೋಗಿ ಅಲ್ಲಿ ಮುಮ್ಮಾಳಿಗೆಗೆ ಹೋಗುವಾ. ಹೇಗಾದರೂ ಮಾಡಿ ಪ್ರಭುಗಳ ದರುಶನ ಜನಸ್ತೋಮ

ಕ್ಕಾಗುವಂತೆ ಮಾಡಲೇಬೇಕು.'

ಇದೇ ಸಮಯಕ್ಕೆ ಪುನಃ ಗ್ಲಾನಿಗೊಳಗಾಗಿದ್ದ ರಾಯನೆಚ್ಚತ್ತನು.

'ಯುವರಾಜ.'

'ಪ್ರಭುಗಳೇ—'

'ಗದ್ದಲವೇನು?'

'ಜನತೆಗೆ ಪ್ರಭುಗಳ ದರುಶನ ಬೇಕಾಗಿದೆ.'

'ಆದರೆ— ಏನಿದು, ನನಗೆ ನೋವಾದುದೇನು? ಈ ಗದ್ದಲವೇನು? ಏನಿದು, ಹೇಳು ನೋಡುವಾ?'

'ಪ್ರಭುಗಳೇ, ಆಮೇಲೆ ವಿದಿಸುವೆನು. ಮೊದಲು ಜನತೆಗೆ ದರುಶನವೀಯಬೇಕು.'

'ಇಷ್ಟೇಕೆ ಆತುರರಾಗಿರುವರು?'

'ತಮ್ಮ ಕ್ಷೇಮದ ಬಗ್ಗೆ ಶಂಕಿತರಾಗಿರುವರು.'

'ಅದೇಕೆ?'

ಆ ಮೇಲೆ 'ವಿಶದವಾಗಿ ವಿದಿಸುವೆನು.'

'ಹಾಗಾದರೆ ನಡೆಯಿರಿ.'

## ೧೭. ಪರಿಣಾಮ.

ಹೊರಗಿನ ಗದ್ದಲವು ಯುವರಾಜನಿಗೆ ಬಹಳ ತೊಂದರೆಯಿತ್ತಿತು. ಅದಕ್ಕೆ ಕಾರಣವು ಆ ಜನಸ್ತೋಮವಲ್ಲ; ಆದರೆ ಆ ಜನಸ್ತೋಮಕ್ಕೆ ಕಾರಣವಾದ ಕಪಟ ಜಾಲ. ತಂದೆಯ ಶುಶ್ರೂಷೆಯಲ್ಲಿ ಕೊಂಚ ಮರೆತ ಆ ಭೀಕರ ಕಪಟಕೃತಿ ಮತ್ತೆ ಅವನ ಕಣ್ಣೆದುರು ಬಂದು ನಿಂತಿತು. ಆದರೂ ಅನ್ಯ ವಿಚಾರಕ್ಕೆ ಅವಕಾಶವೀಯದೆ, ನೆರೆದ ಜನಸ್ತೋಮಕ್ಕೆ ಪ್ರಭು ದರುಶನ ನೀಡುವ ಉದ್ಯೋಗಕ್ಕೆ ತೊಡಗಿದನು. ಅಸ್ವಸ್ಥತೆ, ಆಘಾತಗಳಿಂದ ರಾಯ ಬಹಳವಾಗಿ ಶಕ್ತಿಗುಂದಿದ್ದನು. ಆದರೂ ಹೇಮಾಂಬಿಕೆ ಮತ್ತು ಯುವರಾಜರ ಸಹಾಯದಿಂದ ಆತ ಮೇಲಕ್ಕೇಳಲು, ಇಬ್ಬರೂ ಕರೆದುಕೊಂಡು ಮೇಲಕ್ಕೆ ಹೋದರು. ಅಲ್ಲಿ ಮುಮ್ಮಾಳಿಗೆಯ ಮುಂಬದಿಗೆ ಹೋಗಿ ನಿಂತರು.

ಪ್ರತಾಪದೇವರಾಯನ ರೌದ್ರರೂಪ, ವಿಕಟಹಾಸ್ಯ, ಭೀಕರಾಕಾರಗಳಿಂದ ಜನ ತ್ರಸ್ತರಾಗಿ ಹೋಗಿದ್ದರು. ನಿಜ ಸಂಗತಿಯ ಅರಿವು ಅವರಿಗಾಗಿದ್ದರೆ ಆ ಮೊದಲೇ ಪ್ರತಾಪದೇವರಾಯನಿಗೆ ಯೋಗ್ಯ ಪ್ರಾಯಶ್ಚಿತ್ತವೀಯಲು ಹಿಂದೆ ಬೀಳುತ್ತಲಿರಲಿಲ್ಲ; ಆದರೆ ಎಲ್ಲವೂ ತೆರೆಯ ಮರೆಯಲ್ಲಿದ್ದಿತು. ಅವರು ನಿಜವನ್ನರಿಯಲು ಉತ್ಸುಕರಾಗಿದ್ದರು. ಆ ಅದಕ್ಕಾಗಿಯೇ ಅವರು ಉತ್ಕಂಠೆಯಿಂದ ಕೂಗುತ್ತಲಿದ್ದರು.

ರಾಯ ಯುವರಾಜ ಮತ್ತು ಹೇಮಾಂಬಿಕೆಯರ ಸಹಾಯದಿಂದ ಪ್ರತಾಪದೇವ

ರಾಯನಿಗಿಂತಲೂ ಮೇಲೆ ಬಂದು ನಿಲ್ಲಲು, ಜನರ ಲಕ್ಷ್ಯ ಸಹಜವಾಗಿ ಅತ್ತ ಹೋಯಿತು. ಒಡನೆಯೇ ಆಳುವರಸಿನ, ದಯಾಳು ಯುವರಾಜನ ಮುಖಚಂದ್ರಮನ ದರುಶನದಿಂದ ಜನತೆಯ ಹೃದಯದಲ್ಲಿನ ಹರುಷಗಡಲು ಉಕ್ಕೇರಲಾರಂಭಿಸಿತು. ಹರ್ಷೋದ್ಗಾರಗಳು ಕೇಳಬರಲಾರಂಭಿಸಿದುವು. ತ್ರಸ್ತವಾದ ಜನತೆ ನಲಿಯಲಾರಂಭಿಸಿತು. ತಮ್ಮ ದೊರೆ, ಯುವರಾಜರೀರ್ವರೂ ಕ್ಷೇಮದಿಂದಿದ್ದ ಬಗ್ಗೆ ಪ್ರತ್ಯಕ್ಷ ಅವರ ದರುಶನವೇ ದೊರೆಯಲು, ಎಲ್ಲರೂ ಅತ್ಯಂತ ಆನಂದವನ್ನು ಹೊಂದಿದರು.

'ಯುವರಾಜ, ಇಷ್ಟೆಲ್ಲ ಜನಸಮೂಹ ನೆರೆದ ಕಾರಣವೇನು?'

'ಅವರು ತಮ್ಮ ಕುಶಲದ ವಿಷಯಕ್ಕೆ ಸಂದೇಹಪಟ್ಟಿದ್ದರು.'

'ಆದರೆ ಈ ಎಲ್ಲ ಜನತೆ ಹೀಗೆ ಗುಂಪುಗೂಡಿದ್ದರೂ ವ್ಯವಸ್ಥೆಗೆ ರಕ್ಷಕರೇಕಿಲ್ಲ?'

'ಅವರಿಗೆ ಆ ಬಗ್ಗೆ ಯಾರೂ ಅಪ್ಪಣೆ ಕೊಟ್ಟಿಲ್ಲ.'

'ಅಂದರೆ ನಗರ ರಕ್ಷಕರು, ಮೇಲಧಿಕಾರಿಗಳು ತಮ್ಮ ತಮ್ಮ ಕರ್ತವ್ಯ ಮರೆತಿರುವರೇ ಹೇಗೆ?'

'ಪ್ರಭುಗಳೇ, ಕನ್ನಡ ಅಧಿಕಾರೀ ವರ್ಗದವರಲ್ಲಿ ಅಂತಹ ದುಷ್ಟನೊಬ್ಬನೂ ಪ್ರವೇಶ ಹೊಂದಿಲ್ಲ.''

'ಹಾಗಾದರೆ ಈ ಅವ್ಯವಸ್ಥೆಯೇಕೆ?'

'ಪ್ರಭುಗಳೇ—'

ಮುಂದೆ ಯುವರಾಜನಿಂದ ಮಾತುಗಳೇ ಹೊರಡದಾದುವು. ಮುಖ ಮೊದಲೇ ಬಾಡಿದುದು ಮುದುಡಿತು. ಹೃದಯ ಬಡಿದುಕೊಳ್ಳಲಾರಂಭಿಸಿತು. ಕಂಬನಿ ಮೂಡಿದುವು. ಆ ಭೀಕರ ಹತ್ಯಾಕಾಂಡವನ್ನೆಂತು ವಿವರಿಸುವದು? ಅವನಿಗೆ ಮಾತುಗಳೇ ಹೊರಡದಾದುವು. ಮತ್ತೂ ಮತ್ತೂ ಆ ಭೀಕರ ನೋಟ ವ್ಯಥೆಯನ್ನುಂಟುಮಾಡಿತು. ಅರಸು ಜನಸಮೂಹವನ್ನೇ ನಿರುಕಿಸುತ್ತಲಿದ್ದ ಮೂಲಕ, ಯುವರಾಜನತ್ತ ನೋಡಲಿಲ್ಲ. ಯುವರಾಜ ದೀನದೃಷ್ಟಿಯಿಂದ ಹೇಮಾಂಬಿಕೆಯನ್ನು ನೋಡಿದನು. 'ಹೇಮಾ, ಸಂಭವಿಸಿದ ಅನರ್ಥದ ವಿವರಣೆ ಮಾಡಲು ನನ್ನಿಂದಾಗದು. ಈ ಸಮಯ ನೀನೇ ಆ ಕಾರ್ಯ ಮಾಡು' ಎಂದು ಆ ನೋಟದಿಂದ ತಿಳಿಯುವಂತಿದ್ದಿತು.

ಯುವರಾಜನಲ್ಲಾದ ಮಹತ್ತರ ಮಾರ್ಪಾಟನ್ನು ಹೇಮಾಂಬಿಕೆ ಅರಿತಳು. ಅವನ ಕೋಮಲ ಹೃದಯಕ್ಕಾದ ಬಲವಾದ ಆಘಾತದಿಂದ ಅವನ ಹೃದಯವಳುಕಿಹೋದ ಬಗ್ಗೆ ಆಕೆಗೆ ನಿಶ್ಚಯವೆನಿಸಿತು. ಅವನ ಬಗ್ಗೆ ಹೇಮಾಂಬಿಕೆಗೆ ಬಹಳ ತಾಪವಾಯಿತು. ಆ ಭೀಕರ ಕಾಪಟ್ಯದ ಪರಿಣಾಮ ಯುವರಾಜನ ಮೇಲಾದಂತೆ ರಾಯನ ಮೇಲಾದರೂ ಆಗಬಹುದೆಂದು ಭೀತಿಯೆನಿಸಲಾರಂಭವಾಯಿತು. ಮೊದಲೇ ಅಸ್ವಸ್ಥನಾದ ರಾಯ ಅದರಿಂದ ಇನ್ನೂ ಹೆಚ್ಚು ಅಸ್ವಸ್ಥನಾಗಬಹುದೆಂಬ ವಿಚಾರ ಆಕೆಯನ್ನು ಬಹಳ ಯೋಚನೆಗೀಡುಮಾಡಿತು. ಏನೇ ಆದರೂ ಆಗಲೇ ಸಕಲವನ್ನ

ರುಹುವದೊಳಿತಲ್ಲವೆಂದು ಆಕೆಗನಿಸಿತು. ಕೂಡಲೆ ರಾಯನಿಗೆ, 'ಪ್ರಭುಗಳೇ, ಮೊದಲು ಕೆಳಗೆ ಹೋಗುವಾ. ಆ ಮೇಲೆ ಸಕಲ ಸಂಗತಿಯನ್ನೂ ತಿಳಿಸುವೆನು' ಎಂದು ಹೇಳಿದಳು.

ರಾಯನಿಗೆ ಆ ಗೂಢವೇ ತಿಳಿಯಲಿಲ್ಲ. ಆದರೂ ಅಲ್ಲಿ ಬಹಳ ಸಮಯ ನಿಲ್ಲುವುದೊಳಿತಲ್ಲವೆಂದುಭಾವಿಸಿ, ಹೇಮಾಂಬಿಕೆಯ ಸೂಚನೆಗೆ ಸಮ್ಮತಿಸಿದನು.'ಹಾಗೇ ಆಗಲಿ. ಹೇಮಾ, ಕೆಳಗೆ ಹೋಗುವಾ ನಡೆ; ಆದರೆ ಇಂದೇನಾದರೂ ಅನರ್ಥ ಸಂಭವಿಸಿದೆಯೇ ಹೇಗೆ?' ಎಂದು ಉತ್ಕಂಠೆಯಿಂದ ಕೇಳಿದನು.

ಹೇಮಾಂಬಿಕೆ ಮಾತನ್ನೇ ಆಡದೆ ರಾಯನನ್ನು ಕೆಳಗೆ ಕರೆತಂದು ಮಂಚದ ಮೇಲೆ ಮಲಗಿಸಿದಳು. ಅರಸಿಗೆ ಆಯಾಸದ ಮೂಲಕ ದಾಹವೆನಿಸಿತು.

'ಹೇಮಾ, ನೀರಡಿಕೆಯಾಗಿದೆ; ಕೊಂಚ ನೀರು ಕೊಡುವೆಯಾ?' ಎಂದು ಕೇಳಿದನು.

ಒಡನೆಯೇ ಅನರ್ಥ ಸಂಭವಿಸುವದಕ್ಕೆ ಮೊದಲೇ ರಾಜವೈದ್ಯರಿತ್ತಿದ್ದ ನಿದ್ರೆಯ ಓಷಧಿ ಹಾಕಿ ಕೊಟ್ಟುಬಿಟ್ಟಳು. ಅದರಿಂದ ರಾಯನಿಗೆ ಅಲ್ಪಾವಕಾಶದಲ್ಲಿಯೇ ನಿದ್ರೆ ಬಂದಿತು.

ಅರಸು ನಿದ್ರೆ ಹತ್ತಿ ಮಲಗಲು ಹೇಮಾಂಬಿಕೆಗೆ ಕೊಂಚ ಬಿಡುವು ದೊರೆಯಿತು. ನಿಟ್ಟುಸಿರಿನಿಂದ ಯುವರಾಜನತ್ತ ತನ್ನ ನೋಟ ತಿರುಗಿಸಿದಳು. ಯುವರಾಜನಲಗಿನ ಆ ಅವಸ್ಥೆಯಿಂದ ಹೇಮಾಂಬಿಕೆ ಗಾಬರಿಯಾದಳು. ಮಂಚದ ಒಂದು ಬದಿಯಲ್ಲಿ ಮೊಳಕಾಲು ಸಂದುಗಳಲ್ಲಿ ಮೊಗವಿರಿಸಿ ಕುಳಿತುಬಿಟ್ಟಿದ್ದನು. ನವತಾರುಣ್ಯ ತೇಜದಿಂದ ಉಕ್ಕುತ್ತಲಿದ್ದ ಯುವರಾಜ ಮುಪ್ಪಿನ ಮುದುಕನಂತೆ ಕಾಣಹತ್ತಿದ್ದನು. ಕಣ್ಣೀರು ಧಾರೆಗಟ್ಟಿ ಸುರಿಯುತ್ತಲಿದ್ದವು. ಬಿಕ್ಕು ಬಿಕ್ಕಿಸಿ-ಅಳುತ್ತಲಿದ್ದನು. ದಾರುಣವಾದ ವ್ಯಥೆ ಅವನನ್ನು ದಹಿಸುತ್ತಲಿದ್ದಿತು. ಅಂತರಂಗದಲ್ಲಿ ಆಳವಾಗಿ ನಟ್ಟು ಹೋಗಿದ್ದ ಆ ಭೀಕರ ಅಸಹ್ಯಕರ ನೋಟ ಅವನಿಗೆ ಯಮಯಾತನೆಯನ್ನುಂಟು ಮಾಡಿತು. ಆ ಒಂದು ಆಘಾತದಿಂದ ಯುವರಾಜನ-ಮುಂದಿನ ವಿಚಾರ ಹೇಮಾಂಬಿಕೆಗೆ ನಡುಗನ್ನುಂಟುಮಾಡಿತು. ಯುವರಾಜನಾ ಅವಸ್ಥೆಯಿಂದ ಆಕೆಯ ಹೃದಯ ಕಳವಳಪಡಲಾರಂಭಿಸಿತು. ಯುವರಾಜನನ್ನು ಸಂತಯಿಸುವ ಬಗ್ಗೆ ಯೋಚಿಸಲಾರಂಭಿಸಿದಳು.

ಹೊರಗೆ ಒಂದೇಸವನೆ ರಾಯನ ಹೆಸರಿನಲ್ಲಿ ಜಯಘೋಷ ನಡೆಯಲು, ಪ್ರತಾಪದೇವರಾಯನಿಗೆ ಅತ್ಯಾನಂದವಾಯಿತು. ಆಗ್ಗೆ ಆತನ ಅವಸ್ಥೆಯೆಂದರೆ, ಉನ್ಮಾದ-ಶೋಕದಿಂದ ಪೀಡಿತವಾದಂತಾಗಿದ್ದಿತು. ಅವನಿಗೆ ಅನ್ಯ ಯೋಚನೆ, ಅನ್ಯ ವಿಷಯಗಳ ಸ್ಮರಣೆಯೇ ಇರಲಿಲ್ಲ. ತಾನೇ ಅರಸನಾದ ಆ ಸುಖಕರ ವಿಚಾರದಿಂದ ಹರ್ಷೋನ್ಮಾದವಾದಂತಾಗಿದ್ದಿತು.

ಜನರು ರಾಯನ ಜಯಘೋಷ ಮಾಡಲು 'ಹಾಂ, ನೀವೀಗ ನನ್ನ ಪ್ರಜೆಗಳು-ಈಗ ನಾನೇ ಅರಸು-ನಿಮ್ಮ ಎಲ್ಲರ ಅರಸು ನಾನೇ. ಕರ್ನಾಟಕದ ಸಾರ್ವಭೌಮ ನಾನೇ-

ತಿಳಿಯಿತೆ ಈಗ ನೀವೆಲ್ಲರೂ ನನ್ನ ಜಯಘೋಷ ಮಾಡಬೇಕು – ಹಾಂ, ಅದು ಯೋಗ್ಯ. ನೀವೇನು ಅಪ್ರಬುದ್ಧರೇ—ತಿಳಿಗೇಡಿಗಳೇ? ನನ್ನ ಪ್ರಜೆಗಳೇ, ಇನ್ನು ನಿಮ್ಮ ಗಳ ಅರಸು ನಾನು. ನಿಮ್ಮ ಸದ್ಯದ ಯುವರಾಜ, ಭಾವೀ ಕರ್ನಾಟಕ ಸಮ್ರಾಟ್ ವಿರೂಪಾಕ್ಷನು.

ಆದರೆ ಪ್ರತಾಪದೇವರಾಯನ ಈ ಬಡಬಡಿಕೆ ಯಾರಿಗೂ ಕೇಳುತ್ತಿರಲಿಲ್ಲ. ಎಲ್ಲರೂ ಕನ್ನಡಪ್ರಭು ಕುಶಲವಾಗಿದ್ದುದಕ್ಕೆ ಪಂಪಾಪತಿಗೆ ಪ್ರಾರ್ಥನೆ ಸಲ್ಲಿಸಿದರು. ಪ್ರತಾಪ ದೇವರಾಯನ ಆ ಆಚರಣೆಯ ಬಗ್ಗೆ ಜನರಲ್ಲಿ ತರ್ಕ-ವಿತರ್ಕಗಳಾಗಲಾರಂಭಿಸಿದುವು.

"ಮಹಾರಾಜರು ಕುಶಲರಾಗಿರಲು, ಈತ 'ನಾನೇ ಅರಸು' 'ನಾನೇ ಅರಸು' ಎಂದು ಬಡಬಡಿಸುತ್ತಲಿರುವ ಕಾರಣವೇನು?"

'ಮತಿಭ್ರಮೆಯಾಗಿರಬೇಕು. ಅಕೋ ನೋಡು, ಆ ಅಟ್ಟಹಾಸವನ್ನಾದರೂ ನೋಡು. ಅಂಗವಿಕ್ಷೇಪವನ್ನವಲೋಕಿಸು. ಬಾಯಿ ಹೇಗೆ ತೆರೆಯುತ್ತಾನೆ? ಕೈ ಹೇಗೆ ಎತ್ತುತ್ತಾನೆ? ಇದೆಲ್ಲ ಮತಿಭ್ರಮೆಯ ಲಕ್ಷಣಗಳಲ್ಲವೆ?'

'ಇಂದು ಮುಂಜಾವು ಸುಸ್ಥಿತಿಯಲ್ಲಿರಲಿಲ್ಲವೆ? ಈಗಲೇ ಇಂತಹ ದುರವಸ್ಥೆ ಯುಂಟಾದುದು ಹೇಗೆ?'

'ಅಂದರೆ, ಅದಕ್ಕೇನು ವರುಷಗಟ್ಟಲೆ ಅವಧಿ ಬೇಕೆನ್ನುವಿರೇನು? ಈ ಕ್ಷಣ ಕ್ಷೇಮದಿಂದಿರುವವ ಮರುಕ್ಷಣವೇ ಮೃತನಾಗಬಹುದು.'

'ಛೆ! ಇದಕ್ಕೊಂದು ಪ್ರಬಲ ಕಾರಣವಿರಲೇಬೇಕು. ಒಮ್ಮೆಲೆ ಅಂತಹ ಯಾವ ಕಾರಣವೂ ಇಲ್ಲದೆ ಹೀಗೆ ಮಾರ್ಪಾಟು ಸಂಭವಿಸಲು ಶಕ್ಯವಿಲ್ಲ. ಅತ್ಯಂತ ಹರ್ಷ ಇಲ್ಲವೆ ಅತ್ಯಂತ ದುಃಖ ಸಂಭವಿಸಿರಬೇಕು; ಇಲ್ಲವಾಗಿದ್ದರೆ ಹೀಗೆ ಒಮ್ಮೆಲೆ ಈ ಪರಿಸ್ಥಿತಿ ಯಲ್ಲಿ ಮಾರ್ಪಾಟು ಸಂಭವಿಸಲು ಶಕ್ಯವಿಲ್ಲ. ಅಂತಹ ಪ್ರಬಲ ಕಾರಣವೇನಿರಬೇಕು?'

ಜನರಲ್ಲಿ ಹೀಗೆ ಭಿನ್ನ ಭಿನ್ನ ತರ್ಕಗಳು ನಡೆದಿದ್ದವು. ಅವರವರಿಂದ ಪ್ರತಾಪ ದೇವರಾಯನಿಗೇನು? ತಾನು ಸಮ್ರಾಟ್. ತನ್ನ ಮಗ ಯುವರಾಜ—ಭಾವೀ ಸಮ್ರಾಟ್. ಇಮ್ಮಡಿದೇವರಾಯ ಮತ್ತು ಆತನ ಪಕ್ಷ ಯುವರಾಜ ಸಹಿತ ಸತ್ತು ಹೋದರು—ಈ ವಿಚಾರಗಳ ಹರ್ಷೋನ್ಮಾದದಿಂದ ಉಬ್ಬಿ ಹೋಗಿದ್ದನು.

'ಹಾ ಹಾ ಹಾ! ನನ್ನ ಪ್ರಜೆಗಳೇ, ನೀವು ಇಷ್ಟು ಬೇಗ ಜಾಣರಾಗಬಹು ದೆಂದು ನಾನು ತಿಳಿದಿರಲಿಲ್ಲ; ಆದರೆ ನೀವು ಬಲು ಜಾಣರು. ಅಂತೆಯೇ ನಾನು ಸಮ್ರಾಟನಾದುದಕ್ಕೆ ಆನಂದಪಡುತ್ತಲಿರುವಿರಿ. ಇಂದೇ ಅಪ್ಪಣೆ ಕೊಡುವೆ. ಎರಡು ವರ್ಷ ನೀವು ಯಾವದೇ ತೆರಿಗೆ ಕೊಡಬೇಕಾಗಿಲ್ಲ. ದಿನಾಲೂ ರಾಜಬೊಕ್ಕಸದಿಂದ ದಾನ-ಧರ್ಮಾದಿಗಳು ಕೊಡಲ್ಪಡುವವು. ಎಲ್ಲರೂ ಸ್ವೀಕರಿಸಬೇಕು. ನಮ್ಮ ಸಾಮ್ರಾ ಜ್ಯ ಚಿರಕಾಲವುಳಿಯಲು ಪಂಪಾಪತಿಯನ್ನು ಪ್ರಾರ್ಥಿಸತಕ್ಕದು.'

'ಅಹುದು. ಓಹೋ! ಆ ಹಳೆಯ ಅಧಿಕಾರಿಗಳ ಬಗ್ಗೆ ಯೋಚನೆ ಮಾಡ ಬೇಡಿರಿ. ನಿಮ್ಮಲ್ಲಿ ಯೋಗ್ಯರಿದ್ದವರಿಗೇನೇ ನಾನೆಲ್ಲ ಅಧಿಕಾರಗಳನ್ನು ಕೊಡುವೆನು—'

ಹೀಗೆ ತನ್ನ ಬಡಬಡಿಕೆಯಲ್ಲಿಯೇ ತಾನಿದ್ದನು.

ಜನರಿಗೆ ಅವನ ನಿಜಸ್ವರೂಪ ತಿಳಿಯದೆ, ಎಲ್ಲವೂ ಕುಶಲವೇ ಎಂದು ನಂಬಿಬಿಟ್ಟಿದ್ದರು. ಹೀಗೆ ಇನ್ನೂ ಅದೆಷ್ಟು ಸಮಯ ನಡೆಯುತ್ತಲಿದ್ದಿತೋ ಏನೋ?—ಆ ದುಷ್ಟ ನೋಟ ನೋಡಿ ಚಿನ್ನಾಂಬೆಗೆ ಸಹನವಾಗಲಿಲ್ಲ. ಮಲ್ಲಿಕಾರ್ಜುನಮಂದಿರದಲ್ಲಾದ ಭೀಕರ ಹತ್ಯಾಕಾಂಡವನ್ನಾಕೆ ನೋಡಿದ್ದಳು. ಆಕೆಯ ಹೃದಯ ಆ ದುಸ್ಸಹ ನೋಟದಿಂದ ತಳಮಳಿಸುತ್ತಲಿದ್ದಿತು. ಜನತೆ ಕ್ಷುಬ್ಧವಾಗಬಹುದೆಂದು ಆಕೆ ಯಾರಿಗೂ ಹೇಳಿರಲಿಲ್ಲ; ಆದರೆ ಪ್ರತಾಪದೇವರಾಯನ ಅಟ್ಟಹಾಸ ಆಕೆಗೆ ಭಯಂಕರ ವೇದನೆಯುಂಟು ಮಾಡಿತು. ಹೇಗಾದರೂ ಮಾಡಿ ಆತನ ಆ ದುಷ್ಟಕಾರ್ಯಕ್ಕೆ ತಕ್ಕ ಶಿಕ್ಷೆ ವಿಧಿಸಬೇಕೆಂದು ಆಕೆಗೆ ತ್ವೇಷವುಂಟಾಯಿತು. ಅವನಾ ವಿಕಟಹಾಸ್ಯ ಆಕೆಯ ಹೃದಯದಲ್ಲಿ ಪ್ರಖರವಾದ ಜ್ವಾಲೆಯನ್ನುಂಟುಮಾಡಿತು. ಆ ಅಗ್ನಿಯ ಉಷ್ಣತೆಯಲ್ಲಿ ಆಕೆಯ ಶಾಂತತೆ ಮರೆಯಾಗಿ ಹೋಯಿತು. ತ್ವೇಷದಿಂದ ಆಕೆಯ ಶರೀರವೆಲ್ಲವೂ ಕಂಪಿಸತೊಡಗಿತು. ಆಕೆ ಸಿಟ್ಟಿನಿಂದ ಹುಚ್ಚಳೇ ಆದಳು!

'ದುಷ್ಟಾ, ನೀಚಾ, ಚಾಂಡಾಲಾ! ಈಗ ನೀನು ಮಾಡಿದ ಕಾಪಟ್ಯ ಸಾಕಾಗಲಿಲ್ಲವೆ? ಅಧಮುತನಕ್ಕೆ ಕಿಂಚಿತ್ತಾದರೂ ನಾಚಿಕೆಯೆನಿಸುವದಿಲ್ಲವೆ? ನಿನಗೆ ಹೃದಯವಿಲ್ಲವೇ?—' ಮುಂತಾಗಿ ಗಟ್ಟಿಯಾಗಿ ಕೂಗಹತ್ತಿದಳು.

ಸುತ್ತಲಿನ ಜನರು ಆಕೆಯ ಆ ಕೂಗಾಟ ಕೇಳಿದರು.

'ಮೇಲೊಬ್ಬರಿಗೆ ಹುಚ್ಚು ಹಿಡಿಯಿತೆನ್ನುವಷ್ಟರಲ್ಲಿ ಕೆಳಗೆ ಚಿನ್ನಾಂಬೆಗೂ ಹುಚ್ಚು ಹಿಡಿಯಿತಲ್ಲ!'

'ನೋಡಿ ನೋಡಿ, ಮತ್ತೆ ಆ ಹುಚ್ಚು ರೋಗವೇನಾದರೂ ಪಸರಿಸುತ್ತಲಿದೆಯೋ ಹೇಗೆ?'

'ನಿಜ-ನಿಜ. ಒಂದು ಗಾಳಿ ಬೀಸಹತ್ತಿದ್ದಂತೆ ತೋರುತ್ತದೆ.'

ಹೀಗೆ ಹಾಸ್ಯಕ್ಕಾರಂಭವಾಯಿತು. ಆದರಾ ಹಾಸ್ಯ ಬಹಳ ವೇಳೆ ತಡೆಯಲಿಲ್ಲ. ಚಿನ್ನಾಂಬೆಯ ಆ ತ್ವೇಷದ ಕಾರಣ ತಿಳಿಯುತ್ತಲೆ, ಅವರು ಕ್ರುದ್ಧರಾದರು. ಒಬ್ಬನಿಂದೊಬ್ಬನಿಗೆ ಅಲ್ಪಾವಧಿಯಲ್ಲಿ ಪ್ರತಾಪದೇವರಾಯ ಪ್ರಭುಗಳ ಕೊಲೆಗುದ್ಯುಕ್ತನಾಗಿದ್ದನೆಂಬ ಸಂಗತಿ ತಿಳಿಯಿತು. ಪ್ರಭುದರುಶನದಿಂದುಂಟಾದ ಆ ಹರ್ಷ, ಪ್ರತಾಪದೇವರಾಯನ ಕಪಟ ಕೃತ್ಯದ ಶ್ರವಣದಿಂದ ಅತ್ಯಂತ ಕಠೋರವಾದ ಕೋಪದಲ್ಲಿ ಮಾರ್ಪಾಟಾಯಿತು. ಸಿಟ್ಟಿನಿಂದ ಎಲ್ಲರೂ ಹುಚ್ಚರೇ ಆದರು!

ಮೇಲೆ ನಿಂತ ಪ್ರತಾಪದೇವರಾಯನಿಗೆ ತನ್ನನುಳಿದ ಅನ್ಯಯೋಚನೆಯೇ ಬರುವಂತಿರಲಿಲ್ಲ. 'ಹಾ! ಹಾ-ಹಾ! ನಾನೀಗ ನಿಮ್ಮ ಸಮ್ರಾಟ್..... ...'ಮುಂತಾಗಿ ವಿಕಟಹಾಸ್ಯದಿಂದ ಮಾತನಾಡತೊಡಗಿದನು.

ಪ್ರತಾಪದೇವರಾಯನ ಆ ಅಟ್ಟಹಾಸ ಜನತೆಯ ಕರ್ಣಗಳಲ್ಲಿ ಕಾಯ್ದ ಎಸರು ಹೊಯ್ದಂತಾಯಿತು. ಅವನ ಒಂದೊಂದೇ ಶಬ್ದ ಅವರ ಹೃದಯಕ್ಕೆ ಬಲವಾದ

ಆಘಾತವನ್ನುಂಟು ಮಾಡಲಾರಂಭಿಸಿತು. ಚಿನ್ನಾಂಬೆಯ ಕೋಪವಂತೂ ಅನಿವಾರ ವಾಯಿತು. ಆಕೆಯಿಂದ ಆ ಪೈಶಾಚ್ಯ ನಾಟ್ಯ ನೋಡುವದಾಗಲಿಲ್ಲ. ತನ್ನ ಕಾಲಲ್ಲಿ ಬಿದ್ದಿದ್ದ ಒಂದು ಕಲ್ಲು ತೆಗೆದು, ತಾನೇನು ಮಾಡುತ್ತಲಿದ್ದೇನೆಂಬ ಅರಿವಿಲ್ಲದೆ ಪ್ರತಾಪ ದೇವರಾಯನತ್ತ ಬೀಸಿಬಿಟ್ಟಳು.

ಕೂಡಲೆ ಕಲ್ಮಳೆಗೇ ಆರಂಭವಾಯಿತು. 'ಥೂ! ನೀಚಾ-ಚಾಂಡಾಲಾ! ಮನುಷ್ಯನಾಗಿ ಹುಟ್ಟಲು ನೀನು ತೀರ ಅಯೋಗ್ಯ. ಹುಟ್ಟಿದ ತಪ್ಪಿಗೆ ಸತ್ತಾದರೂ ಹೋಗು....' ಎಂಬ ದ್ವೇಷಭರಿತ ಶಬ್ದಗಳು ಜನರೊಳಗೆ ಕೇಳಬರಲಾರಂಭಿಸಿದುವು.

ಪ್ರತಾಪದೇವರಾಯನ ಅವಸ್ಥೆ ಶೋಚನೀಯವಾಯಿತು. ತೂರಿ ತೂರಿ ಬರುತ್ತಲಿದ್ದ ಪಾಷಾಣಗಳಾಘಾತದಿಂದ ಅವನು ಬಹಳ ದುಃಖಿತನಾದನು. ಪ್ರತಿ ಕ್ಷಣಕ್ಕೆ ಸಾವಿರಾರು ಕಲ್ಲುಗಳು ಬಂದು ಬೀಳಲಾರಂಭಿಸಿದುವು. ಆ ಪಾಷಾಣ ವರ್ಷಾವ ನೋಡುತ್ತಲೆ ಅವನ ಕಣ್ಣು ಕತ್ತಲೆಗೂಡಿಸಿದವು. ಒಂದೊಂದೇ ಕಲ್ಲು ವಜ್ರಪ್ರಾಯ ವಾಗಿ ತೋರಿತು. ಭೀತಿಯಿಂದ ನಡುಗುತ್ತ ನೋಡಲೆತ್ನಿಸುವಲ್ಲಿಯೇ ಕಲ್ಲುಗಳು ಬಂದುವು. ತಪ್ಪಿಸಿಕೊಳ್ಳಬೇಕೆಂದು ಅತ್ತಿತ್ತ ನೋಡುವಷ್ಟರಲ್ಲಿಯೇ ನೂರಾರು ಕಲ್ಲು ಗಳು ಮೇಲೆ ಬಿದ್ದವು. ತಲೆ, ಕಾಲು, ಮೋರೆಗಳಲ್ಲೆಡೆಯಲ್ಲಿಯೂ ಕಲ್ಲಿನೇಟಿನಿಂದ ರಕ್ತಪ್ರವಾಹ ಆರಂಭವಾಯಿತು. ಒಂದೇಸವನೆ ಕಲ್ಲಿನ ಮಳೆ ಸುರಿಯಲು ನಿಂತಲ್ಲಿ ಯೇ ಉರುಳಿದನು. ಕೂಗಲು ಕೂಡ ಅವಕಾಶ ದೊರೆಯಲಿಲ್ಲ. ಗತಪ್ರಾಣನಾಗಿ ಬಿದ್ದರೂ ಕಲ್ಲುಮಳೆ ನಡೆದೇ ನಡೆದಿತ್ತು.

ದ್ವೇಷಗೊಂಡ ಜನಸಮುದಾಯ. ಆತ ತಮ್ಮ ಪ್ರೇಮದ ದೊರೆಯ ಪ್ರಾಣಾಘಾ ತಕ್ಕುದ್ಯುಕ್ತನಾಗಿದ್ದನೆಂಬ ಯೋಚನೆಯೇ ಅವರಿಗೆ ಸಾಕಷ್ಟಾಗಿದ್ದಿತು. ಜನತೆಯ ತಲೆ ತಿರುಗಿ ಹೋಯಿತು. ಕ್ರುದ್ಧರಾದ ಜನರು ಸಿಕ್ಕ ಸಿಕ್ಕ ಕಲ್ಲುಗಳು-ಕಟ್ಟಿಗೆಗಳು- ಕೈಗೆ ದೊರೆತುದರಿಂದ ಪ್ರತಾಪದೇವರಾಯನನ್ನು ಹೊಡೆಯಲಾರಂಭಿಸಿದರು.

ಪ್ರತಾಪದೇವರಾಯ ಒಬ್ಬನೇ ಒಬ್ಬ. ಪರಿಸ್ಥಿತಿಯ ಅರಿವಿಲ್ಲದೆ ನಿಂತಿದ್ದನು. ಜನತೆಯ ಕೋಪ-ತಾಪಗಳನ್ನಾಗಲಿ, ಹರ್ಷ-ಖೇದಗಳನ್ನಾಗಲಿ ಅರಿಯದೆ ನಿಂತಿ ದ್ದನು. ತನ್ನ ಮನಸ್ಸಿಗೆ ತಕ್ಕಂತೆ ತನ್ನ ಎದುರಿನ ನೋಟ ಕಲ್ಪಿಸುತ್ತಲಿದ್ದನು. ತಾನು ಸಮ್ರಾಟನಾದಂತೆ, ಜನತೆ ತನ್ನನ್ನಭಿನಂದಿಸಿದಂತೆ, ತಾನು ಸಿಂಹಾಸನವೇರಿದಂತೆ, ಜನತೆ ತನ್ನ ಜಯಘೋಷ ಮಾಡಿದಂತೆ ಕನಸ್ಸು ಕಾಣುತ್ತಲಿದ್ದನು. ಆ ಕನಸ್ಸೇ ನನಸಾಗಿದ್ದಿತೆಂದು ಅವನು ತಿಳಿದಿದ್ದನು. ಜನರು ಹಾಸ್ಯಕ್ಕೆಂದು ನಕ್ಕರೆ ಹರ್ಷದಿಂದ ನಕ್ಕರೆಂದು ಭಾವಿಸಿದನು. ಜನರು ಕೋಪದಿಂದ ದೂರಿದರೆ ತನ್ನ ಮೇಲಿನ ಭಕ್ತಿ ಯಿಂದ ಜಯಘೋಷಮಾಡಿದರೆಂದು ಭಾವಿಸಿದನು. ಅವನ ಮನದಲ್ಲಿ ಅನ್ಯ ಯೋಚ ನೆಯೇ ಇರಲಿಲ್ಲ!

ಹೀಗಿರಲು ಪಾಷಾಣ ವರ್ಷಣಾಕ್ಕಾರಂಭವಾಯಿತು. ಕಲ್ಲು ಎಲ್ಲಿಂದ ಬರುತ್ತ ಲಿವೆ, ಏಕೆ ಬರುತ್ತಲಿವೆ—ಮುಂತಾದ ಯೋಚನೆ ಮಾಡಿ ಎಚ್ಚರಾಗುವ ಪೂರ್ವ

ದಲ್ಲಿಯೇ ಚೇತನಾಹೀನನಾಗಿ ಕೆಳಕ್ಕುರುಳಿದನು. ಕಲ್ಲು ಬೀಳುತ್ತಲೇ ಇದ್ದುವು.

ಯುವರಾಜ ಮತ್ತು ಹೇಮಾಂಬಿಕೆಯರು ತಮ್ಮ ಅಂತಸ್ಥ ಭೀಕರ ನೋಟ ದಲ್ಲಿ ಮಗ್ನರಾಗಿ ಅಂತರ್ಮುಖರಾಗಿದ್ದರು. ಅವರಿಗೆ ಬಾಹ್ಯಜ್ಞಾನವೇ ಇರಲಿಲ್ಲ. ಕೊಂಚ ಸಮಯ ಕಳೆಯಲು, ಕಲ್ಲುಗಳ ಕಠೋರ ಸಪ್ಪಳ ಕೇಳಬರಹತ್ತಿತು. ಇಬ್ಬರೂ ಗಡಬಡಿಸಿಕೊಂಡೆದ್ದರು. ಹೊರಗೆ ಇಣುಕುವಷ್ಟರಲ್ಲಿ ನಿಜ ಸಂಗತಿ ತಿಳಿಯಿತು. ಪ್ರತಾಪದೇವರಾಯನ ದಾರುಣಾವಸ್ಥೆಗೆ ಯುವರಾಜ ನಡುಗಿದನು. ಲಗುಬಗೆಯಿಂದ ಮೇಲೇರಿ ಹೋಗಿ ಮುಂಬದಿಗೆ ನಿಂತನು. ಜನರು ಯುವರಾಜನನ್ನು ನೋಡಿ ಮೇಲೆ ಮಾಡಿದ ಕೈ ಕೆಳಗಿಳಿಸಿದರು. ಕೋಪ ಮರೆಯಾಗಿ, ಹರ್ಷ ತಲೆದೋರಿತು. ಎಲ್ಲರೂ ಜಯಘೋಷ ಮಾಡಿದರು.

ಯುವರಾಜ ಎಲ್ಲರಿಗೂ ಸುಮ್ಮನಾಗುವಂತೆ ಸೂಚಿಸಿದನು. ಎಲ್ಲರೂ ಯುವ ರಾಜನ ಮೊಗವನ್ನೇ ನಿರೀಕ್ಷಿಸಲಾರಂಭಿಸಿದರು.

'ನನ್ನ ಪ್ರೀತಿಯ ಬಂಧುಗಳೇ, ಇಂದು ತೀರಾ ಅಶುಭ ದಿನವು. ಈ ದುಷ್ಟ ದಿನವನ್ನು ತಡೆಯಲು ನಾವೆಷ್ಟೋ ಕಷ್ಟಪಟ್ಟೆವು; ಆದರೆ ಆಯತ್ತದ ಸಮಯದಲ್ಲಿ ನನ್ನ ಮೂರ್ಖತನದಿಂದ ಭೀಕರ ಸಂಕಟ ಬಂದೊದಗಿತು. ಈಗ ನೀವು ಬರಿಯ ಪ್ರಭುಗಳಿಗೊದಗಿದ ವಿಪತ್ತಿನಿಂದ ಇಷ್ಟು ಕೋಪಿಷ್ಠರಾಗಿರುವಿರಿ; ಆದರೆ ನೀವರಿಯದ ದಾರುಣ ನೋಟ ನಿಮಗಾಗಿ ಕಾದಿದೆ; ಆದರೂ ನಾನು ನಿಮಗೆ ಬಿನ್ನಹ ಮಾಡಿ ಕೊಳ್ಳುವದೇನಂದರೆ, ಶಾಂತರೀತಿಯಿಂದ ಆಚರಿಸಬೇಕು. ಈ ಭೀಕರ ಹತ್ಯಾಕಾಂಡ ಕ್ಕೆಂದೇ ಸಿದ್ಧವಾಗಿದ್ದ ಮಲ್ಲಿಕಾರ್ಜುನ ಮಂದಿರದಲ್ಲಿನ ಹೃದಯದ್ರಾವಕ ನೋಟವನ್ನು ನೀವು ನೋಡಿದಲ್ಲಿ ವಿಜಯನಗರದ ಸಕಲ ಸಾಮಂತ-ಸರದಾರರೂ, ಶೂರ-ವೀರ ಸೇನಾ ಧೀಶರೂ, ಚತುರ ಮಂತ್ರಿಗಳೂ ಅಲ್ಲಿ ಭೀಕರ ಮರಣಕ್ಕೀಡಾಗಿರುವರು. ಹಾಯ್! ಹಾಯ್! ಬಂಧುಗಳೇ, ನಿಜವಾಗಿಯೂ ವಿಪತ್ತು ಭಯಂಕರವಾದುದು. ಹೃದಯ ಪಟಲ ಒಡೆದು ಹೋಗುವಂತಿದೆ--ಉಪಾಯವಿಲ್ಲ. ಆದಾವುದೋ ಒಂದು ದೈವೀ ಕ್ಷೋಭೆಯ ಪರಿಣಾಮವೇ ಇದಾಗಿರಬಹುದು--ಮೃತಜೀವಿಗಳ ಆತ್ಮಶಾಂತ್ಯರ್ಥವಾಗಿ ನಾವು ಪಂಪಾಪತಿಗೆ ಪ್ರಾರ್ಥನೆ ಸಲ್ಲಿಸಬೇಕು. ಈಗ ಪ್ರಭುಗಳು ಅಸ್ವಸ್ಥರಿರುವ ಮೂಲಕವೂ, ಅವರ ಮನಕ್ಕೆ ಸದ್ಯಕ್ಕೆ ಸಂಭವಿಸಿದ ಆಘಾತದಿಂದ ಅವರು ಉದ್ವಿಗ್ನ ವಾಗಿರುವ ಮೂಲಕವೂ ತಾವೆಲ್ಲರೂ ಶಾಂತರೀತಿಯಿಂದ ತಮ್ಮ ಮನೆಗೆ ಹೋಗ ಬೇಕೆಂದು ಬಿನ್ನೈಸುತ್ತೇನೆ.'

ಯುವರಾಜನ ದುಃಖಪೂರ್ಣ ಮಾತುಗಳಿಂದ ಸಕಲರ ದ್ವೇಷ ಅಳಿಸಿತು. ಎಲ್ಲರೂ ತಿರುಗಿದರು. ಯುವರಾಜನ ಮನದಲ್ಲಿ ಮಲ್ಲಿಕಾರ್ಜುನ ಮಂದಿರದ ಭೀಕರ ನೋಟ ಬಲವಾಗಿ ನಾಟಿದ್ದಿತು. ಮುಖದಿಂದಲೂ ಅದೇ ಹೊರಬಿದ್ದಿತು.

ಮಲ್ಲಿಕಾರ್ಜುನಮಂದಿರದಲ್ಲಿ ಸಂಭವಿಸಿದ ಘೋರ ವಾರ್ತೆಯು ತಿಳಿಯುತ್ತಲೇ ಜನತೆ ಗಾಬರಿಯಾಯಿತು. ಸಂಗಣಮಂತ್ರಿಗಳು ಕೂಡ ಆ ಹತ್ಯಾಕಾಂಡಕ್ಕೆ ತುತ್ತಾ

ಗಿದ್ದರೆಂದು ತಿಳಿದು ಜನರ ಹೃದಯ ತಂಗೆಟ್ಟಿತ್ತು. ಯಾರು ಯಾರು ಮೃತ್ಯುವಶರಾಗಿದ್ದರೆಂಬ ಸಂಗತಿ ಅವರ ಊಹೆಗೆ ಏರಿದ್ದಿತು. ಪ್ರತಿಯೊಬ್ಬ ತಂದೆಯೂ ತನ್ನ ಮಗನ ವಿಷಯಕ್ಕೆ ಸಂದೇಹಪಟ್ಟು ಮಗನ ಮೊಗ ನೋಡಲು ಆತುರನಾದನು. ಭೀಕರ ಕೊಲೆಯ ವಾರ್ತೆ ಹಾ ಹಾ ಅನ್ನುವದರಲ್ಲಿ ಊರಲ್ಲಿ ಪಸರಿಸಿತು. ವಿಜಯ ನಗರದ ಆ ದಾರುಣ ಚಿತ್ರ ರೇಖಿಸುವ ಶಕ್ತಿ ನನ್ನ ಬಡ ಲೆಕ್ಕಣಿಕೆಯಲಿಲ್ಲ. ಎಲ್ಲಿ ನೋಡಿದರೂ ಹೃದಯ ವಿದಾರುಣವಾಗುವ ದುಃಖವು ತಾನೇ ತಾನಾಗಿದ್ದಿತು ಪ್ರತಿಯೊಂದು ವ್ಯಕ್ತಿಯೂ ತನ್ನ ಆತ್ಮೀಯರನ್ನರಸುತ್ತಲಿದ್ದಿತು. ಮನೆಯಿಂದ ಹೊರ ಹೋದ ಮಗನ ಬಗ್ಗೆ ಮಾತೆ ಕಳವಳಪಡುತ್ತಲಿದ್ದಾಳೆ. ಹೊರಬಿದ್ದು ಹೋದ ನಲ್ಲನ ವಿಷಯಕ್ಕೆ ನಲ್ಲೆ ಕ್ಲೇಶಪಡುತ್ತಿದ್ದಳು. 'ತನ್ನ ಪ್ರೀತಿಯ ಮಗು ಮಲ್ಲಿಕಾರ್ಜುನ ಮಂದಿರಕ್ಕೆ ಹೋಗಿರಬಹುದೆ? ಅಲ್ಲಿ ಆ ಭೀಕರ ಹತ್ಯಾಕಾಂಡಕ್ಕೆ ಗುರಿಯಾಗಿರಬಹುದೆ?—ಹಾಗಿದ್ದರೆ - ನನ್ನ ಗತಿಯೇನು? ಜೀವನಯಾತ್ರೆಯಲ್ಲಿ ನನ್ನ ಕೈ ಹಿಡಿದು ಕರೆದೊಯ್ಯುವ, ಊರುಗೋಲಾದ, ಮುಂಬೆಳಕೇ ಆಗಿದ್ದ ಮಗನನ್ನುಳಿದು, ಪ್ರೀತಿಯ ಪುತ್ರನನ್ನುಳಿದು ಬದುಕುವದೆಂತು?—' ಪ್ರತಿಯೊಬ್ಬ ತಾಯಿಯೂ ಹೀಗೆ ಅತ್ಯಂತ ಕಷ್ಟಕ್ಕೆ ಗುರಿಯಾಗಿದ್ದಳು.

'ಇನಿಯ ಈಗ ಬರುವನು. ಭಿನ್ನ ಭಿನ್ನ ಉದ್ಯೋಗಗಳಲ್ಲಿ ದಣಿದು ಬರುವನು. ಆತನನ್ನು ಇನಿನುಡಿಗಳಿಂದ ಸಂತಯಿಸಬೇಕು. ಮಧುರ ಪದಾರ್ಥಗಳನ್ನುಣಬಡಿಸಿ ಸಂತೋಷಿಸಬೇಕು—' ಮುಂತಾಗಿ ಮಧುರ ವಿಚಾರಗಳಲ್ಲಿಯೇ ಮುಳುಗಿ ಅತ್ಯಂತ ಉತ್ಸುಕತೆಯಿಂದ ಎದುರು ನೋಡುತ್ತಲಿದ್ದ ನಲ್ವೆಂಡಿರ ನೋವು ತಿಳಿವಿನ ಅಳವು ಮೀರಿದ್ದಿತು. 'ನನ್ನ ಇನಿಯ ಮಲ್ಲಿಕಾರ್ಜುನನಮಂದಿರಕ್ಕೆ ಹೋಗಿರಬಹುದೆ! ಅಲ್ಲ— ಆ ಭೀಕರ ಕೊಲೆಗೆ ಬಲಿಯಾಗಿರಬಹುದೆ? ಹಾಗಿದ್ದರೆ—ನನ್ನ ಗತಿಯೇನು? ನಾನು ಯಾರ ಮೊಗ ನೋಡಬೇಕು? ನನ್ನ ಪ್ರೇಮನಿಧಿಯನ್ನೆಲ್ಲಿ ಅರಸಬೇಕು? ನನ್ನ ಸುಖ-ದುಃಖಗಳನ್ನಾರು ವಿಚಾರಿಸುವರು? ನನಗೆ ಸಂತಸ ನೀಡುವವರಾರು? ದೇವಾ-ದೇವಾ! ಇದೇನಾಗಿದೆ?—' ಎಂದು ಅವರ ಗೋಳಾಟ. ಎಲ್ಲರೂ ತಮ್ಮ ಸಂಬಂಧಿಕರು 'ಅಲ್ಲಿ ಹೋಗದಿರಲಿ. ಸುಖರೂಪವಾಗಿ ಮನೆಗೆ ಬರಲಿ' ಎಂದು ಪಂಪಾಪತಿಗೆ ಪ್ರಾರ್ಥಿಸುತ್ತಲಿದ್ದರು. ಹರಕೆ ಹೊರತ್ತಲಿದ್ದರು. ಮುಡುಪು ಕಟ್ಟಿಡುತ್ತಲಿದ್ದರು.

ಹೀಗೆ ನಗರಕ್ಕೆ ನಗರವೇ ಅಳಲಿನಿಂದ ಬಳಲುತ್ತಲಿದ್ದಂತಿದ್ದಿತು. ಹತ್ತಿಪ್ಪತ್ತು ಸಹಸ್ರ ಜನರು ಮಲ್ಲಿಕಾರ್ಜುನ ಮಂದಿರದಲ್ಲಿನ ಭೀಕರ ನೋಟ ನೋಡಲಾತುರರಾಗಿ ಅತ್ತವೇ ಓಡಿದರು. ಅವರಾ ಆವೇಶ ಮೂಲೋಕ ಮಿಕ್ಕುವಂತಿದ್ದಿತು. ಎಲ್ಲರೂ ಉತ್ಕಂಠೆಯಿಂದ ಓಡಿದರು; ಆದರೆ ಎಷ್ಟು ಜನ ತಾನೇ ಒಳಹೋಗಬಲ್ಲರು. ಅಲ್ಲಿಯ ಕಾವಲುಗಾರರು ಬಾಗಿಲು ಮುಚ್ಚಿಬಿಟ್ಟಿರು. ಜನತೆಯ ತ್ವೇಷ ಬಲವಾಯಿತು. ಆ ಆತುರತೆ, ಆ ಉತ್ಕಂಠೆ, ಆ ದುಃಖ ಎಲ್ಲವುಗಳ ಮೂಲಕ ಜನರು ತೀರ ಕಳವಳಿಸಿ ಹೋಗಿದ್ದರು. ಆ ಎಲ್ಲರೂ ಸಂತಪ್ತರಾಗಿದ್ದರು. ಆ ಭೀಕರ ಹತ್ಯಾ

ಕಾಂಡ ಅವರಲ್ಲಿ ಭಯಂಕರವಾದ ಭಾವನೆಯುಂಟು ಮಾಡಿದ್ದಿತು. ಸಹಸ್ರಗಟ್ಟಲೆ ಜನರ ಉಪಟಳಕ್ಕೆ ಬಾಗಿಲು-ಕಿಡಿಕೆಗಳು ತಡೆಯುವವೇ? ಅಲ್ಪಾವಕಾಶದಲ್ಲಿ ಮಂದಿರಕ್ಕೆ ಮಂದಿರವೇ ಉಧ್ವಸ್ತವಾಯಿತು. ಸಾವಿರಾರು ಜನರ ಆತುರತೆಯ ಪರಿಣಾಮವಾಗಿ ಅವರಿಗೆ ಆ ಭೀಕರ ನೋಟ ನೋಡಲು ದೊರೆಯುವದರ ಬದಲು, ಮೃತಜೀವಿಗಳ ಸಮಾಧಿಯಾದಂತಾಯಿತು. ಅನೇಕರು ಅಲ್ಲಿ ತಮ್ಮ ಬೆಂದೊಡಲು ಕರಗಿದ್ದಂತೆ ಕಂಬನಿ ಸುರಿಸಿದರು. ಅನೇಕರ ಹೃದಯ ಅಲ್ಲಿ ಹರಿಯಿತು. ಅನೇಕ ಮಾತೆಯರ ಅನೇಕ ಸತಿಯರ—ಇನ್ನೂ ಎಷ್ಟೋ ಜನರ ಶೋಕ ಚಿಹ್ನವೇ ಆ ಸ್ಥಲವಾಯಿತು!

ಹೀಗೆ ಆ ಮನೆಯ ಅವಸ್ಥೆಯಾಗಲು ಕಾರಣವಾದರೂ ಅಷ್ಟೇ ಮಹತ್ವವಾದುದು. ಇತಿಹಾಸಿನಲ್ಲಿ ಚಿರಸ್ಮರಣೀಯವಾದ ಪ್ರಸಂಗಗಳಲ್ಲಿ ಇದೊಂದು ವಿರೂಪಾಕ್ಷನ ಸ್ವಾರ್ಥ ಲಾಲಸೆಯ ಪರಿಣಾಮವಾಗಿ ನೂರಾರು ಜನರ ಆಹುತಿ ತೆಗೆದುಕೊಂಡು ತನ್ಮೂಲಕ ಸಾವಿರಾರು ಜನರ ಹೃದಯಗಳು ಕಮರಿ ಹೋದುವು.

ಪ್ರತಾಪದೇವರಾಯನ ಅವಸ್ಥೆ ಭಯಂಕರವಾಗಿದ್ದಿತು. ಹರ್ಷೋನ್ಮಾದದಿಂದಿರುವಾಗಲೆ ಕಲ್ಮಳೆ ಬಂದಿಳಿಯಿತು. ಅನ್ಯವಿಚಾರ ಮಾಡಲವಕಾಶವಿಲ್ಲದೆ ಗತಪ್ರಾಣನಾಗುರುಳಿದನು. ಜನಸ್ತೋಮ ಬಯಲಾಗುತ್ತಲೆ ಯುವರಾಜ ಪ್ರತಾಪದೇವರಾಯನ ಬಳಿಯಲ್ಲಿ ಬಂದು ನೋಡಲು, ಕಲ್ಲಿನ ಹೊಡತಕ್ಕೆ ಪ್ರತಾಪದೇವರಾಯ ಜಿಬ್ಬೆಯಾದಂತಾಗಿದ್ದನು. ತಲೆಯಿಂದ, ಹಣೆಯಿಂದ, ಮೂಗಿನಿಂದ ರಕ್ತಸ್ರಾವವಾಗುತ್ತಲಿದ್ದಿತು.

ಕೂಡಲೆ ರಾಜವೈದ್ಯರನ್ನು ಕರೆಯಿಸಿ ಪ್ರತಾಪದೇವರಾಯನ ಉಪಚಾರ ಕೈಕೊಂಡನು. ಇಮ್ಮಡಿದೇವರಾಯನಂತೂ ಬಂಧುವಿನ ಭೀಕರ ಅವಸ್ಥೆಗೆ ಬಹಳವಾಗಿ ದುಃಖಿಸಿದನು.

'ಗಿರಿ, ಏನು ನಿನ್ನ ಅವಸ್ಥೆಯಿದು? ಹಾಯ್! ಹಾಯ್! ಎಂತಹ ವೇದನೆ ನಿನಗಾಗಬಹುದಪ್ಪಾ? ಏನು ಮಾಡಲಿ? ನಿನಗೆ ಇಂತಹ ಬುದ್ಧಿಯೇಕಾಯಿತು? ನಿನಗೆ ಬೇಕಾಗಿದ್ದ ನನ್ನ ಸಿಂಹಾಸನವನ್ನೇ ಬಿಟ್ಟುಕೊಡುತ್ತಿದ್ದೆನಲ್ಲ! ತಿಳಿಯದೆ ಎಂತಹ ದುರವಸ್ಥೆಗೀಡಾದೆ?—' ಎಂದು ಶೋಕಿಸಲಾರಂಭಿಸಿದನು.

ಯುವರಾಜನಿಗೆ ಅದರಿಂದ ಇನ್ನೂ ಹೆಚ್ಚೇ ಆಘಾತವುಂಟಾಯಿತು. ಚಿಗಪ್ಪನ ಆ ದುರವಸ್ಥೆಗೆ ಅವನು ಬಹಳ ದುಃಖಿಸಿದನು.

ವೈದ್ಯರುಪಚಾರದಿಂದ ಪ್ರತಾಪದೇವರಾಯ ಕಣ್ದೆರೆದನು; ಆದರೆ ಬಹಳ ವೇಳೆ ಬದುಕುವ ಆಶೆಯಿರಲಿಲ್ಲ. ಅವನು ಕಣ್ತೆರೆದು ನೋಡಲು, ಎದುರಿನಲ್ಲಿ ರಾಯ, ಯುವರಾಜ, ಹೇಮಾಂಬಿಕೆಯರು ಕಾಣಿಸಿದರು. ತನ್ನ ನೋಟ ಸುತ್ತಲೂ ಹೊರಳಿಸಿದನು. ವಿರೂಪಾಕ್ಷನೆಲ್ಲಿಯೂ ಕಾಣಲಿಲ್ಲ. ವಿರೂಪಾಕ್ಷನ ಕುಶಲ ಅವನಿಗೆ ಬೇಕಿದ್ದಿತು; ಆದರೆ ಕೇಳಲು ಮಾತೇ ಬರಲಿಲ್ಲ.

ರಾಯ ಅವನಾಶಯವರಿತನು. 'ಗಿರಿ, ನೀನು ದುಃಖಿಸಬೇಡ. ವಿರೂಪಾಕ್ಷ ಕುಶಲನಾಗಿರುವನು. ನಾನಾತನನ್ನು ಕರೆತಂದು ಯೋಗ್ಯವಾಗಿ ಆತನ ಎಲ್ಲ ಕ್ಷೇಮ ಚಿಂತನೆ ಮಾಡುವೆನು' ಎಂದು ಹೇಳಲು, ಪ್ರತಾಪದೇವರಾಯನಿಗೆ ಎಷ್ಟೋ ಸಮಾಧಾನವಾದಂತಾಯಿತು.

ವೈದ್ಯರ ಉಪಚಾರ ನಡೆದೇ ಇದ್ದಿತು. ವೈದ್ಯರು ಪ್ರತಾಪದೇವರಾಯನ ಆಯುರ್ದಾಯ ಸಮೀಪಿಸಿದ್ದಂತೆ ಹೇಳಿದರು. ಅದೇ ಸಮಯಕ್ಕೆ ಪ್ರತಾಪದೇವರಾಯ ದೈನ್ಯದ ನೋಟವನ್ನು ರಾಯನ ಮೇಲೆ ಬೀರಿದನು. 'ನಾನು ತಿಳಿಯದೆ ನಿಮಗೆ ಕೇಡು ಬಗೆಯಲೆತ್ನಿಸಿದೆನು. ನನ್ನ ತಪ್ಪನ್ನು ಕ್ಷಮಿಸಿರಿ; ಮತ್ತು ನನ್ನ ಮೇಲಿನ ಕೋಪ ನನ್ನ ಮಗನ ಮೇಲೆ ತೋರಬೇಡಿರಿ. ಆತನ ಅಪರಾಧ ಕ್ಷಮಿಸಿರಿ—' ಎಂಬ ಭಾವ ಆ ನೋಟದಿಂದ ಸ್ಪಷ್ಟವಾಗುವಂತಿದ್ದಿತು.

ರಾಯ ಮತ್ತೂ ಮತ್ತೂ ವಿರೂಪಾಕ್ಷನ ಬಗ್ಗೆ ಆಶ್ವಾಸನೆಯಿತ್ತನು. ಕೊನೆಗೊಮ್ಮೆ ಪ್ರತಾಪದೇವರಾಯನ ಪ್ರಾಣವಾಯು ಹಾರಿಹೋಯಿತು. ಅವನ ಶರೀರದಲ್ಲಿ ಅದು ಪ್ರವೇಶಮಾಡಿದಂದಿನಿಂದ ಎಷ್ಟೋ ಕಾರ್ಯ ಕೈಗೂಡಿಸಿದ್ದಿತು. ಅನೇಕ ಯುದ್ಧಗಳಲ್ಲಿ ಕರ್ನಾಟಕದ ಕೀರ್ತಿ ಬೆಳಗುವಂತೆ ಮಾಡಿದ್ದಿತು. ಅನೇಕ ಪ್ರಸಂಗಗಳಲ್ಲಿ ಕನ್ನಡ ನಾಡು ಉನ್ನತಿ ಹೊಂದುವಂತೆ ಮಾಡಿದ್ದಿತು. ಕೊನೆಯಲ್ಲಿ ಕರ್ನಾಟಕದಿತಿಹಾಸಿನಲ್ಲಿ ಒಂದು ಅತಿ ದುಷ್ಟ ಪ್ರಸಂಗದ ಸ್ಮರಣೆ ಕೊನೆಯವರೆಗುಳಿಯುವಂತೆ ಮಾಡಿ ನಡೆಯಿತು!

ರಾಯ, ಯುವರಾಜ, ಹೇಮಾಂಬಿಕೆ ಎಲ್ಲರೂ ಪ್ರತಾಪದೇವರಾಯನ ಚರಿತ್ರೆ ಚರ್ಚಿಸುತ್ತಲಿರುವಾಗಲೇ ಪ್ರತಾಪದೇವರಾಯನ ಉತ್ತರ ಕ್ರಿಯೆ ಪೂರೈಸಿದರು.

ಕೂಡಲೆ ಯುವರಾಜ ಮತ್ತು ಇಮ್ಮಡಿ ದೇವರಾಯರೀರ್ವರೂ ವಿರೂಪಾಕ್ಷನನ್ನರಸಲೆತ್ನಿಸಿದರು. ಎಲ್ಲರೂ ಬಹಳವಾಗಿ ಶೋಧಿಸಿದರು.

ಆದರೆ ವಿರೂಪಾಕ್ಷ:—ಆತನ ಅವಸ್ಥೆ ಅತ್ಯಂತ ಶೋಚನೀಯವಾಗಿದ್ದಿತು. ಮನಸ್ಸು ದುಃಖದಿಂದ ತಳಮಳಿಸ ಹತ್ತಿ, ಅತ್ಯಂತ ಉದಾಸಭಾವದಿಂದ ಭೂಮಿಯನ್ನು ನೋಡುತ್ತಲಿದ್ದಿತು. 'ಇನ್ನು ನನ್ನದೆಂಬುದೇನಿದೆ?-ಈ ಭಾಗದಲ್ಲಿ ನಾನು ಮಾಡುವದೇನಿದೆ?-ದೇವಾ! ನನಗೆ ಈ ದುರ್ಬುದ್ಧಿಯನ್ನೇಕೆ ಕೊಟ್ಟೆ?-ನನ್ನ ಉನ್ನತಿ ನೋಡಬೇಕೆಂಬ ತಂದೆ ಈಗ ಮರಣ ಹೊಂದಿದನು. ಹಾಯ್! ಹಾಯ್! ವಿರೂಪಾಕ್ಷ, ನಿನ್ನ ದುರ್ದೈವ ಈಗ ಶಿಖರವೇರಿತು........'

ಶೋಕದಲ್ಲಿ ಅವನಿಗೆ ಬಿಡುವೇ ಇರಲಿಲ್ಲ. ಮೇಲಕ್ಕೆ ಮೊಗವೆತ್ತದೇ ಗುಪ್ತ ಸ್ಥಳವೊಂದರಲ್ಲಿ ಕುಳಿತು ಶೋಕಿಸುತ್ತಲಿದ್ದನು. ಅರಮನೆಯಲ್ಲಿ ಯುವರಾಜನ ಶೋಕ, ಗೌಪ್ಯಸ್ಥಳದಲ್ಲಿ ವಿರೂಪಾಕ್ಷನ ಶೋಕ, ನಗರದಲ್ಲಿ ಅನೇಕ ನರ-ನಾರಿಯರ ಶೋಕ-ಹೀಗೆ ಅಂದಿನ ಆ ದುರ್ದಿನದಲ್ಲಿ ಕನ್ನಡ ರಾಜನ ಮುಖ್ಯಪಟ್ಟಣಕ್ಕೆ ಪಟ್ಟಣವೇ ಶೋಕಸಂತಪ್ತವಾಯಿತು.

# ೧೭ ಶೋಕ!

ವಿಜಯನಗರದ ಬಳಿಯ ತುಂಗಾತೀರ. ಸಾಯಂಕಾಲದ ಸಮಯ. ಆರಕ್ತ ಸಹಸ್ರರಶ್ಮಿಯು ಪಡುವಣ ಕಡಲು ಸಮೀಪಿಸುತ್ತಲಿದ್ದಾನೆ. ಹೊಂಬಣ್ಣದ ಕಿರಣಗಳು ನದಿಯ ಪ್ರವಾಹದ ಮೇಲೆಲ್ಲ ಹರಡಿ ಪ್ರವಾಹಕ್ಕೊಂದು ಅತಿ ಸುಂದರತಮ ಸೌಂದರ್ಯ ನೀಡಿವೆ. ತುಂಗೆ ಪೀತಾಂಬರ ಧರಿಸಿದ ಸುಂದರಿ ದೇವಮಂದಿರಕ್ಕೆ ಹೋಗುವಂತೆ ತೋರುತ್ತಿದ್ದಳು. ಅಲ್ಲಲ್ಲಿ ಜನರು ವಾಯುಸೇವನೆಗೆಂದೂ ಸಾಯಾಹ್ನಿಕ ಪೂರೈಸಲೆಂದೂ ನದಿಯ ತೀರದಲ್ಲಿ ಕುಳಿತಿದ್ದರು. ವೃಕ್ಷರಾಜಿಗಳು ಸಾಯಂಸಂಧ್ಯೆಯ ಕೆಂಗಿರಣಗಳಿಂದ ರಮಣೀಯವಾಗಿ ಶೋಭಿಸುತ್ತಲಿದ್ದುವು. ಪಕ್ಷಿಗಣವು 'ಕಿಲಿ' 'ಬಿಲಿ' ಶಬ್ದ ಮಾಡುತ್ತ ತಮ್ಮ ತಮ್ಮವರಿಗೆ 'ಮನೆಗೆ ಮರಳುವ ಸಮಯವಾಯಿತೆ'ಂದು ಎಚ್ಚರ ಕೊಡುವಂತೆ ಕಾಣುತ್ತಲಿದ್ದಿತು. ಅಂತಹ ಸಮಯದಲ್ಲಿ ಒಂದು ಆಸನದಲ್ಲಿ ಯುವರಾಜ ಮತ್ತು ಹೇಮಾಂಬಿಕೆಯರು ಕುಳಿತಿದ್ದರು.

ಹಿಂದಿನ ಪ್ರಕರಣದಲ್ಲಿ ವರ್ಣಿತವಾದ ದುರ್ಘಟನೆ ನಡೆದು ಇನ್ನೂ ಬಹಳ ದಿವಸವಾಗಿರಲಿಲ್ಲ. ಅಷ್ಟೇ ಅವಧಿಯಲ್ಲಾದರೂ ನಗರದ ಶೋಕ ಮರೆಯಾಗಲಿದ್ದಂತೆ ತೋರುತ್ತಲಿದ್ದಿತು. ಮೃತಜೀವಿಗಳಿಗೆ ಸಂಬಂಧಿಸಿದ ವ್ಯಕ್ತಿಗಳಿನ್ನೂ ಆ ದುಃಖಾವೇಶದಲ್ಲಿಯೇ ಇದ್ದರು. ಆ ತೀವ್ರವಾದ ಗಾಯ ಮೆಲ್ಲಗೆ ಮಾಯುತ್ತಲಿದ್ದಿತು. ತಮ್ಮ ತಮ್ಮ ನಿತ್ಯದ ವ್ಯವಹಾರೋದ್ಯೋಗಗಳಿಗೆ ಕೈಗೊಡುತ್ತಲಿದ್ದರು. ಉಳಿದವರು ಮಾತ್ರ ಬಹುತರವಾಗಿ ಆ ದುರ್ಘಟನೆ ಮರೆತಂತೆಯೇ ಆಗಿದ್ದರು. ಹೀಗೆ ಕರ್ಣಾಟಕದ ಕಣ್ಣಿನಂತಿದ್ದ ವಿಜಯನಗರದ ಮುನ್ನಿನ ಶೋಭೆ ಮರಳಿ ಪಡೆಯಲಿದ್ದಿತು.

ಆದರೆ ಯುವರಾಜ - ಆತನ ಹೃದಯಕ್ಕಾದ ತೀವ್ರತಮಗಾಯ ನಿತ್ಯವೂ ನವೀನವಾಗಿ ಹಬ್ಬುತ್ತಲಿದ್ದಿತು. ಆ ದುರ್ಘಟನೆ ಅವನ ಹೃದಯಕ್ಕೊಂದು ಭಯಂಕರ ವೇದನೆಯನ್ನಿತ್ತಿತು. ಆ ಬಿರುಸಾದ ಆಘಾತದಿಂದ ಹೃದಯಪಟಲ ಬಲವಾಗಿ ಅಲ್ಲಾಡಿ ಹೃದಯವನ್ನೆಲ್ಲ ಕಲಕಾಯಿತು. ನಿರಾಶೆ, ದುಃಖ ಮುಂತಾದ ಭಾವನೆಗಳಿಗೊಳಗಾಗಿ ಯುವರಾಜ ನಿತ್ಯವೂ ದುಃಖಿತನಾಗುತ್ತಲಿದ್ದನು. ಆವಾಗಲೂ ನಿರಾಸೆಯ ಉದ್ಗಾರಗಳೇ ಕೇಳಬರುತ್ತಲಿದ್ದವು. ಊಟ, ನಿದ್ರೆ, ಮಾತು-ಕತೆ, ಸಂಗೀತ-ಸಾಹಿತ್ಯ ಯಾವೂ ಬೇಕಿರಲಿಲ್ಲ. ಸುಮ್ಮನೆ ಕಣ್ಮುಚ್ಚಿಕೊಂಡು ಆ ದುರ್ಘಟನೆ ಸ್ಮರಿಸುತ್ತ ಕಂಬನಿಗರೆಯುತ್ತ ಕುಳಿತು ಬಿಡುತ್ತಲಿದ್ದನು.

ಯುವರಾಜನ ಈ ಅವಸ್ಥೆ ಬಹಳ ಜನರಿಗೆ ಭೀತಿಯನ್ನುಂಟು ಮಾಡುತ್ತಲಿದ್ದಿತು. ತನ್ನಾ ಉದಾಸೀನ ವರ್ತನೆಯ ಪರಿಣಾಮವಾಗಿ ಅದೆಷ್ಟು ಹೃದಯ ತಪಿಸುತ್ತಲಿದ್ದವೆಂಬ ಅರಿವೇ ಆಡರಲಿಲ್ಲ. ಇಮ್ಮಡಿದೇವರಾಯ, ಪೊನ್ನಲದೇವಿ

ಎಲ್ಲರೂ ಅದೆಷ್ಟೋ ವಿಧವಾಗಿ ಪ್ರಯತ್ನಿಸಿದರು. ಯಾರ ಮಾತಿಗೂ ಉತ್ತರವನ್ನೇ ಕೊಡುತ್ತಲಿರಲಿಲ್ಲ. ಉತ್ತರವಿತ್ತರೂ ಉದಾಸಭಾವದಿಂದಲೇ. ನಾಗರಿಕರೂ ಇದರಿಂದ ಭಯಪಟ್ಟರು. ತಮ್ಮ ತಮ್ಮ ಪ್ರೀತಿಯ ಬಂಧುಗಳನ್ನು ಕಳೆದುಕೊಂಡವರಿಗೆ ಕೂಡ ಯುವರಾಜನ ದುಃಖವು ಕನಿಕರವನ್ನುಂಟುಮಾಡಿತು. ಕನಿಕರವು ಭೀತಿಯಲ್ಲಿ ಮಾರ್ಪಾಟಾಯಿತು.

ಆಗಾಗ್ಗೆ ಹೇಮಾಂಬಿಕೆಯೊಡನೆ ಮಾತ್ರ ಮಾತನಾಡುತ್ತಲಿದ್ದನು. ಆಕೆಯ ವಿಷಯಕ್ಕೆ ಆದರವಿದ್ದಿತು. ಅದಕ್ಕೆ ಕಾರಣವೂ ಇದ್ದಿತು. ವಿರೂಪಾಕ್ಷನ ಕಾಪಟ್ಯ ಮೊದಲು ಕಂಡುಹಿಡಿದವಳು ಹೇಮಾಂಬಿಕೆ. ವಿರೂಪಾಕ್ಷನ ಕಪಟಜಾಲವನ್ನೆಲ್ಲ ಸಂಪೂರ್ಣವರಿತು ವಿವರಿಸಿದವಳು ಹೇಮಾಂಬಿಕೆ. ಕೊನೆಗೆ-ಆ ದುರ್ದಿನ-ಅಂದು ತನ್ನ ಶಕ್ತಿಸರ್ವಸ್ವದಿಂದ ಮೊರೆಯನ್ನು-ಭೀಕರ ಕೊಲೆಯಿಂದ ತನ್ನ ತಂದೆಯನ್ನು-ಕರ್ಣಾಟಕದರಸನನ್ನು ಪಾರುಮಾಡಿದವಳು ಹೇಮಾಂಬಿಕೆ ಆದುದರಿಂದ ಆತನಿಗೆ ಹೇಮಾಂಬಿಕೆಯ ವಿಷಯವಾಗಿ ಬಹಳ ಆದರವೆನಿಸುತ್ತಲಿದ್ದಿತು. ಉಳಿದವರ ವಿಷಯವಾಗಿ ಆದರ-ಪ್ರೇಮಗಳಿರಲಿಲ್ಲವೆಂದಲ್ಲ. ತಂದೆ, ತಾಯಿ, ನಾಗರಿಕರೆಲ್ಲರ ವಿಷಯವಾಗಿಯೂ ಅವನಲ್ಲಿ ಪ್ರೇಮಾದರವಿದ್ದವು; ಇಷ್ಟೇ ಅಲ್ಲ, ಪ್ರತ್ಯಕ್ಷ ಆ ದುರ್ಘಟನೆಗೆ ಕಾರಣನಾದ ವಿರೂಪಾಕ್ಷನ ವಿಷಯವಾಗಿಯೂ ದ್ವೇಷವಿರಲಿಲ್ಲ. ಆದರೆ ಆ ಎಲ್ಲ ಪ್ರೇಮಾದರಗಳಿಗಿಂತಲೂ ನಿರಾಶೆ, ಉದ್ವೇಗಗಳು ಹೆಚ್ಚಾಗಿದ್ದುವು. ದುಃಖದಿಂದ ಅವನ ಹೃದಯ ಕಮರಿ ಹೋಗಿದ್ದಿತು. ಯುವರಾಜನ ಈ ಸ್ವಭಾವವನ್ನು ಎಲ್ಲರೂ ಅರಿತಿದ್ದರು. ಅಂತೆಯೇ ಆ ಗಾಯ ಮಾಯಿಸಲು ಮುಂಬರಲಿಲ್ಲ ಭೀಕರ ಗಾಯಕ್ಕೆ ಆಗಾಗ್ಗೆ ಔಷಧಿ ಲೇಪಿಸಲು ಹೇಮಾಂಬಿಕೆಯೇ ಯತ್ನಿಸುತ್ತಲಿದ್ದಳು.

'ಹೇಮಾ, ಅಲ್ಲಿ ನೋಡು. ಸೂರ್ಯ ಹೇಗೆ ಕೆಂದಾಗಿ ಕೆಳಬೀಳಲಿರುವನು. ಮಾನವೀ ಜೀವಿತವಾದರೂ ಹೀಗೆಯೇ ಇದೆಯಲ್ಲವೆ? ನೋಡು. ಈ ಬದಿಯಲ್ಲಿ ಒಳ್ಳೆ ಉತ್ಸಾಹದಿಂದ ಉದಿಸಿದ ಸೂರ್ಯ ತನ್ನ ಪ್ರಖರ ತೇಜದಿಂದ ಬೆಳಗಿದ. ಆದರೇನು? ಕೊನೆಗೆ ದಿನಾಂತ ಸಮೀಪಿಸಲು ಆತನೂ ಕಾತರನಾಗಿರುವ ದುಃಖದಿಂದ ಕೂಗುತ್ತಲಿರುವ ಈ ಭೀಕರ ಅಂತ್ಯ ಪಡೆಯಲು ಉದಿಸಿದ್ದಾದರೂ ಏಕೆ? ಎಂದು ಚಿಂತಿಸುತ್ತಲಿರುವ (ಅಸ್ತವಿಸಲಿದ್ದ ಸೂರ್ಯನನ್ನು ನೋಡಿ) ಯುವರಾಜನಲ್ಲಿ ಅನೇಕ ವಿಚಾರಗಳುಂಟಾದುವು. ಅದನ್ನೇ ಹೇಮಾಂಬಿಕೆಗೆ ಹೇಳಿದನು.

ಹೇಮಾಂಬಿಕೆ ಯುವರಾಜನ ಮಾತು ಕೇಳಿದಳು. ಕಂಪಿಸುವ ಸ್ವರ, ಉದ್ವೇಗಪೂರ್ಣ ಉಚ್ಚಾರ, ಉದಾಸಭಾವಗಳು ಆ ಶಬ್ದಗಳಲ್ಲಿ ಪೂರ್ಣವಾಗಿ ಯುವರಾಜನ ಹೃದಯವನ್ನು ವ್ಯಕ್ತಮಾಡುತ್ತಲಿದ್ದುವು. ಹೇಮಾಂಬಿಕೆಯ ಹೃದಯಕ್ಕೆ ಅವುಗಳಿಂದ ಬಲವಾದ ಆಘಾತವುಂಟಾಯಿತು. ತನ್ನ ಆಘಾತ ತಡೆದುಕೊಂಡು ಯುವರಾಜನ ಉದ್ವೇಗ ಕಳೆಯಬೇಕೆಂದು, 'ಯುವರಾಜ, ಮಾನವೀ ಜೀವಿತವೆಂದರೆ ಸುಖದ ಶಯ್ಯೆಯಿರುವದೋ? ಮೃದುಮಧುರ ಕುಸುಮಗಳಿಂದ ನಿರ್ಮಿತವಾಗಿರು

ವದೇ? ಸಕಲ ರಾಮಣೀಯಕತೆಯ ಸಾರವನ್ನೇ ಸಂಗ್ರಹಿಸಿ ಮಾನವೀ ಜೀವನ ನಿರ್ಮಿಸಲ್ಪಟ್ಟಿರುವದೇ? ಇಲ್ಲ-ಇಲ್ಲ. ನಮ್ಮ ಜೀವನಮಾರ್ಗ ಕಲ್ಲು, ಮುಳ್ಳು, ಕೊರಕಲುಗಳಿಂದ ಪರಿಪೂರ್ಣವಾಗಿದೆ. ಕಲ್ಲುಗಳಲ್ಲಿ ಮುಗ್ಗರಿಸುತ್ತ, ಕಂಟಕಗಳಲ್ಲಿ ನರಳುತ್ತ, ಕೊರಕಲುಗಳಲ್ಲಿ ಉರುಳುತ್ತ ಮುಂದೆ ಸಾಗಲೇಬೇಕಲ್ಲವೆ? ದುಃಖಗಳೆಂದರೇನು? ಪ್ರತಿಕ್ಷಣವೂ ಬಂದು ನಮ್ಮ ಸಂಸಾರನೌಕೆಗೆ ಬಡಿಯುತ್ತಲೇ ಇವೆ' ಉತ್ತೇಜಪರವಾದ ಸ್ವರದಿಂದ ಉಚ್ಚರಿಸಿದಳು.

'ಅಹುದು ಹೇಮಾ, ನಿನ್ನ ಮಾತು ಸಟೆಯಲ್ಲ: ಸಂಪೂರ್ಣ ದಿಟವಿದೆ. ಮಾನವನಿಗೆ ದುಃಖಗಳು ಮೇಲಿಂದ ಮೇಲೆ ಬಂದು ಬಡಿಯುತ್ತಲಿವೆ. ಅಂತೆಯೇ ನಾನು ಅನ್ನುತ್ತಲಿರುವದು.—'

'ಏನೆಂದು? ಹೇಮಾಂಬಿಕೆ ಮಧ್ಯದಲ್ಲಿಯೇ ಪ್ರಶ್ನೆ ಮಾಡಿದಳು.'

'ಇಂತಹ ತೆರದಿಂದ ನಮ್ಮ ಜೀವನನೌಕೆ ಮುಂದೂಡುವದಾದರೂ ಏಕೆ? ಕಲ್ಲು-ಮುಳ್ಳುಗಳ ದಾರಿಯಲ್ಲಿ ತೊಳಲುತ್ತ ಬಳಲುತ್ತ ಮುಂದೋರೆಯುವದಾದರೂ ಏಕೆ?' ಯುವರಾಜ ಕ್ಲೇಶಭರಿತ ಹೃದಯದಿಂದ ನುಡಿದನು.

ಹೇಮಾಂಬಿಕೆ ಪಾರ್ಶ್ವಭೂಮಿ ಸಿದ್ಧಪಡಿಸಿ ತನ್ಮೂಲಕ ಉತ್ಸಾಹಕರ ಚಿತ್ರ ರೇಖಿಸಲು ಸಿದ್ಧಳಾದಳು. 'ಯುವರಾಜ, ನಿಮ್ಮ ವಿಚಾರವೇನೋ ಸರಿಯಾಗಿದೆ; ಆದರೆ ನನಗೆ ಒಂದೆರಡು ಸಂದೇಹಗಳು ಬರುತ್ತವೆ' ಎಂದು ನುಡಿದಳು

ಯುವರಾಜ ಚರ್ಚೆಮಾಡುವ ಸ್ಥಿತಿಯಲ್ಲಿರಲಿಲ್ಲ. ಆದರೂ ಹೇಮಾಂಬಿಕೆಯ ಜಿಜ್ಞಾಸೆಗೆ ಉತ್ತರ ಕೊಡಲೇಬೇಕಾಯಿತು. 'ಅದೇನು?' ಎಂದು ಕೇಳಿದನು.

'ಇನ್ನೇನಿಲ್ಲ; ನಮ್ಮ ಜೀವನಮಾರ್ಗ ಸಂಕಟಮಯವಾಗಿಸಯೆಂದು ನಾನು ಸಮ್ಮತಿಸುತ್ತೇನೆ. ಹೀಗಿದ್ದರೂ ಕೋಟ್ಯವಧಿ ಜನರು ಇಂತಹ ಕಂಟಕಗಳಲ್ಲಿಯೇ ಮುಂದೊರೆಯುತ್ತಲಿದ್ದುದರ ಕಾರಣವೇನು? ಅವರಿಗಾ ಕಂಟಕಗಳ ಅರಿವಿರಲಿಕ್ಕಿಲ್ಲವೆ? ಬಾಧೆಯಾಗುತ್ತಲಿಕ್ಕಿರಲಿಲ್ಲವೆ?' ಹೇಮಾಂಬಿಕೆ ಕೇಳಿದಳು.

'ಎಲ್ಲರಿಗೂ ತಿಳಿಯುತ್ತದೆ. ಎಲ್ಲರೂ ಕಂಟಕಗಳಿಂದ ಬಾಧೆ ಪಡದೇ ಪಡೆಯುತ್ತಾರೆ; ಆದರೂ ಮುಂದೊರೆಯುತ್ತಾರೆ. ಅದಕ್ಕೆ ಕಾರಣವು ಅದರಲ್ಲವರಿಗೆ ಸುಖ ದೊರೆಯುತ್ತದೆಂತಲ್ಲ. ಆದರವರಿಗೆ ಸರಿಯಾದ ದಾರಿಯೇ ತಿಳಿಯದು. ಸರಿಯಾದ ದಾರಿ ದೊರೆತುದಾದರೆ, ಅವರೆಂದೂ ಈ ಮಾರ್ಗ ಹಿಡಿಯುತ್ತಲಿರಲಿಲ್ಲ.' ಯುವರಾಜ ಶಾಂತಚಿತ್ತದಿಂದ ನುಡಿದನು.

'ಆ ಸರಿಯಾದ ದಾರಿ ಯಾವದು?' ಹೇಮಾಂಬಿಕೆ ಉತ್ಕಂಠಿತೆಯುಳ್ಳವಳಂತೆ ಯುವರಾಜನನ್ನು ಕೇಳಿದಳು.

'ಆ ಸರಿಯಾದ ದಾರಿಯನ್ನರಿತು ಪ್ರಭುವೊಬ್ಬನೇ............' ಯುವರಾಜ ಗದ್ಗದ ಕಂಠದಿಂದ ನುಡಿದನು. ಭಕ್ತಿ, ವಿಶ್ವಾಸ, ವಿರಕ್ತಿಗಳು ಅವನ ಸ್ವರದಲ್ಲಿ ಪೂರ್ಣ ಬಿಂಬಿಸಿದ್ದುವು.

'ಆತನಾರು?' ಯುವರಾಜನಾಶಯವರಿತರೂ ಬೇಕೆಂದೇ ಕೇಳಿದಳು.

'ಮಹಾತ್ಮಾ ಗೌತಮಬುದ್ಧನು. ಆ ಪ್ರಭುವೊಬ್ಬ ಮಾತ್ರ ಸರಿಯಾದ ದಾರಿ ಶೋಧಿಸಿದನು. ಅಂತೆಯೇ ಸಕಲ ಸಾಮ್ರಾಜ್ಯವನ್ನೂ ತ್ಯಜಿಸಿ, ಕಾಡು ಸೇರಿ, ಮಾರ್ಗ ಶೋಧಿಸಿ ಅಸಂಖ್ಯಾಕ ಜನರಿಗೆ ಸುಖದ ಮಾರ್ಗ ತೋರಿಸಿದನು' ಯುವರಾಜ ಭಕ್ತಿಪೂರ್ಣ ಹೃದಯದಿಂದ ನುಡಿದನು. ಆ ಬುದ್ಧದೇವನ ಮೂರ್ತಿಮಂತ ದಯೆ ಯುವರಾಜನ ನೋಟದಲ್ಲಿ ಪೂರ್ಣವಾಗಿ ಬಿಂಬಿಸಿದ್ದಿತು.

ಹೇಮಾಂಬಿಕೆ ಯುವರಾಜನ ಹೃದಯವರಿತಿದ್ದಳು ಸಂಸಾರದಲ್ಲುಂಟಾಗಲಿದ್ದ ಪ್ರಬಲ ಅನಾಸಕ್ತಿ ಹೊಡೆದೋಡಿಸದಿದ್ದರೆ ಒಳಿತಾಗದೆಂದರಿತಳು. 'ಯುವರಾಜ, ಅದರಿಂದಾದರೂ ಪೂರ್ಣ ಸುಖ ದೊರೆಯಬಹುದೆಂದು ನನಗನಿಸುವದಿಲ್ಲ.' ಎಂದು ಯುವರಾಜನ ಮನಕೆಣಕಲುದ್ದೇಶಿಸಿ ನುಡಿದಳು.

ಯುವರಾಜ ಆಶ್ಚರ್ಯಪಟ್ಟನು. ಕೊಂಚ ಉತ್ತೇಜಕ ಸ್ವರದಲ್ಲಿ 'ಸಕಲ ಭೂತ, ಭವಿಷ್ಯದ್ವರ್ತಮಾನಗಳನ್ನು ಬೆಳಗುತ್ತಲಿರುವ ಆ ಮಹಾಮಹಿಮ ಶಾಕ್ಯಮುನಿಯ ದಾರಿಯು ಸೌಖ್ಯಕರವಲ್ಲವೆ? ಆ ದಾರಿಯಲ್ಲಿ ಸೌಖ್ಯಸಿಕ್ಕಲಾರದೆ? ಅನೇಕ ಮಹಾ ವ್ಯಕ್ತಿಗಳೂ ಸಮ್ಮತಿಸಿದ ಆ ಬುದ್ಧದೇವನ ಮಾರ್ಗ ನಿನಗೆ ಸಮ್ಮತವಲ್ಲವೆ? ಹೇಮಾ, ಇಂದೇಕೋ ನೀನು ವಿಚಿತ್ರವಾಗಿ ಮಾತನಾಡುತ್ತಲಿರುವೆ? ಶ್ರೇಷ್ಠಪುರುಷ ಗೌತಮನ ವಿಷಯಕ್ಕೆ ಸಂದೇಹ ವ್ಯಕ್ತಪಡಿಸುವೆಯೆಂದು ನಾನೆಂದೂ ತಿಳಿದಿರಲಿಲ್ಲ.' ಎಂದು ನುಡಿದನು.

ಯುವರಾಜ ಉತ್ತೇಜಿತನಾದುದನ್ನರಿತು ಹೇಮಾಂಬಿಕೆ ಆನಂದಿತಳಾದಳು. ಆದರೂ ತೋರಗೊಡದೆ 'ಯುವರಾಜ, ಸಕಲ ವಿಶ್ವವನ್ನೇ ಆತ್ಮಸ್ವರೂಪವಾಗಿ ಕಾಣುವದು ಶಾಕ್ಯಮುನಿಯ ಮುಖ್ಯ ತತ್ವವಲ್ಲವೆ?' ಹೇಮಾಂಬಿಕೆ ಯುವರಾಜನನ್ನು ಕೇಳಿದಳು. 'ಅಹುದು, ಅದೇ. ಸಕಲ ಮಾನವವರ್ಗಕ್ಕೂ ನಿಜವಾದ ಶಾಂತಿಯನ್ನೀಯುವ ಮೂಲಮಂತ್ರವೇ ಅದಾಗಿರುತ್ತದೆ.' ಯುವರಾಜ ಶಾಕ್ಯಮುನಿಗೆ ಕೃತಜ್ಞತೆ ಸಲ್ಲಿಸುತ್ತ ನುಡಿದನು.

'ಹಾಗಾದರೆ —'

'ಹಾಗಾದರೇನು? ಹೇಮಾ, ನಿನ್ನ ಸಂದೇಹವಾದರೂ ಏನು? ವಿವೇಕವುಳ್ಳ ಪ್ರತಿಯೊಂದು ವ್ಯಕ್ತಿಯೂ ಸಮ್ಮತಿಸಬೇಕಾದ ತತ್ವದ ವಿಷಯಕ್ಕೆ ನಿನ್ನ ಸಂಶಯವೆ?' ಯುವರಾಜ ಏರಿಕೆಯ ಸ್ವರದಲ್ಲಿ ಕೇಳಿದನು.

'ಅಹುದು. ನನ್ನದು ಅಜ್ಞವಿಚಾರವಿರಬಹುದು. ಆದರದನ್ನು ನೀವು ಏಕೆ ಸರಿಪಡಿಸಬಾರದು?' ಹೇಮಾಂಬಿಕೆ ಸಲುಗೆಯ ಸ್ವರದಲ್ಲಿ ಪ್ರಶ್ನೆ ಮಾಡಿದಳು.

ಯುವರಾಜನಿಗೆ ಅಂತಹ ಸ್ಥಿತಿಯಲ್ಲಿಯೂ ನಗೆ ಬಂದಿತು. ಅವನು ನಗುತ್ತ 'ಹೇಮಾ, ನಿನ್ನ ಹಂಚಿಕೆಯೇ ತಿಳಿಯುವದಿಲ್ಲ. ಆಗಲಿ, ಕೇಳಿಯಾದರೂ ಕೇಳು ನೋಡುವಾ' ಎಂದು ನುಡಿದನು.

ದುರ್ಘಟನೆ ನಡೆದ ಸಮಯದಿಂದಲೂ ಯುವರಾಜ ನಗೆಗೆ ಆಶ್ರಯವಿತ್ತುದು ಇಂದೇ. ಅನೇಕ ಸಲ ಅನೇಕ ಬಗೆಯಾಗಿ ಹೇಮಾಂಬಿಕೆ ಯತ್ನಿಸುತ್ತಿದ್ದಳು; ಆದರೆ ನಗುವದರ ಬದಲು ಹೆಚ್ಚು ಹೆಚ್ಚು ಉದ್ವಿಗ್ನನೇ ಆಗುತ್ತಲಿದ್ದನು. ಇಂದು ನಕ್ಕುದನ್ನು ನೋಡಿ ಹೇಮಾಂಬಿಕೆಗೆ ಸ್ವಾಭಾವಿಕವಾಗಿ ಅತೀವ ಆನಂದವಾಯಿತು. 'ಇನ್ನೇನಿಲ್ಲ. ಸಕಲ ಪ್ರಾಣಿಸಸ್ಯಾದಿಗಳೆಲ್ಲ ನಮ್ಮ ಆತ್ಮಸ್ವರೂಪವಾಗಿ ಭಾವಿಸಿದರೆ— ಅಂದರೆ ಅವುಗಳನ್ನೆಲ್ಲ ನಮ್ಮಂತೆಯೇ ಪ್ರೀತಿಸಹತ್ತಿದರೆ—'

'ಅಹುದು. ಅದೇ ಆ ಪ್ರಭುವಿನ ಮುಖ್ಯ ಉದ್ದೇಶವು' ಯುವರಾಜನು ಮಧ್ಯದಲ್ಲಿಯೇ ಮಾತನಾಡಿದನು.

'ಹಾಗಿದ್ದರೆ ಆ ಆ ವ್ಯಕ್ತಿಗಳಿಗೆ, ಆ ಆ ಪ್ರಾಣಿಗಳಿಗೆ, ಆ ಆ ಸಸ್ಯಾದಿಗಳಿಗೆ ಆಗುವ ನೋವಿನಿಂದ, ಅವುಗಳು ಅನುಭವಿಸುವ ದುಃಖದಿಂದ ನಮ್ಮ ಮನಕ್ಕೆ ಅದೆಷ್ಟು ತೊಂದರೆಯಾಗಬಹುದೋ ಹೇಳಲು ಸಾಧ್ಯವಿಲ್ಲ.' ಹೇಮಾಂಬಿಕೆ ಒಳ್ಳೇ ಯೋಚನೆಗೊಳಗಾದಂತೆ ನುಡಿದಳು.

'ಅಂ! ಎಂದೂ ಯಾರೂ ಶೋಧಿಸದ ತತ್ವ ನೀನೆಲ್ಲಿ ಶೋಧಿಸಿ ತೆಗೆದೆ?' ಯುವರಾಜ ಆಶ್ಚರ್ಯದಿಂದ ಕೇಳಿದನು.

'ಅದೇನೂ ಹೊಸದಲ್ಲ. ಈಗ ಸಕಲರನ್ನೂ ನಮ್ಮವರೇ ಎಂದು ತಿಳಿದು ಬಿಟ್ಟರೆ, ಅಗ್ಗ ಅವರಿಗಾಗುವ ದುಃಖಗಳು ನಮಗಾದಂತೆಯೇ ಅಲ್ಲವೆ?' ಹೇಮಾಂಬಿಕೆ ಪ್ರಶ್ನೆ ಮಾಡಿದಳು.

'ಸುಖ-ದುಃಖಗಳ ಯೋಚನೆಯೇ ನಮಗಿಲ್ಲ. ಬರುವದೆಲ್ಲಿಯದೋ ಹೋಗುವದೆಲ್ಲಿಯದೋ ಯಾವದೂ ಸಂಬಂಧವಿಲ್ಲ. ಸಕಲರನ್ನೂ ದಯಾದೃಷ್ಟಿಯಿಂದ ನೋಡುವದು; ಸಕಲರಿಗೂ ಸುಖವಾಗುವಂತೆ ಯತ್ನಿಸುವದು' ಯುವರಾಜ ತಿಳಿಮನದಿಂದ ಸ್ಪಷ್ಟೀಕರಿಸಿದನು.

'ಈ ತತ್ವ ಎಲ್ಲ ಧರ್ಮಗಳಲ್ಲಿಯೂ ಇದ್ದೇ ಇರುತ್ತದೆ. ಅದಿರಲಿ. ಈಗಲಾದರೂ ನೀವು ಈ ತತ್ವವನ್ನನುಸರಿಸಲು ಆತಂಕವೇನು?' ಹೇಮಾಂಬಿಕೆ ತನ್ನ ಉದ್ದಿಷ್ಟ ಸಾಧಿಸಲು ನುಡಿದಳು.

'ಅಂದರೇನು? ಹೇಮಾ, ಇಂದೇಕೋ ನೀನು ಬೇರೆ ಬಗೆಯಾಗಿ ಮಾತನಾಡುತ್ತಲಿರುವೆ? ಏನಿದ್ದುದನ್ನು ಸ್ಪಷ್ಟವಾಗಿ ಹೇಳು ನೋಡುವಾ.' ಯುವರಾಜ ಮನಬಿಚ್ಚಿ ಮಾತನಾಡಿದನು.

'ನಿಜ. ಯುವರಾಜ, ನಾನು ಹೇಳಬೇಕೆಂಬ ವಿಷಯ ಬೇರೆಯೇ ಇರುತ್ತದೆ. ಈಗ ನಿಜವಾಗಿಯೂ ಒಂದು ಅತಿ ದಾರುಣವಾದ, ಭಯಂಕರ ಮೋಸದ ಪರಿಣಾಮವಾಗಿ ಒಂದು ಹೃದಯವಿದಾರಣ ಕೃತ್ಯ ನಡೆದುಹೋಯಿತು. ಆ ಕೃತ್ಯದ ಪರಿಣಾಮವಾಗಿ ನಮ್ಮ ರಾಜ್ಯದ ಆಧಾರಸ್ತಂಭಗಳೇ ಅದುರಿದುವು. ಇದರ ಪರಿಣಾಮ ಬಹಳ ಭೀಕರವಾಯಿತು.' ಹೇಮಾಂಬಿಕೆ ಒಳ್ಳೇ ಉದ್ವಿಗ್ನತೆಯಿಂದ ನುಡಿದಳು.

'ಅಹುದು ಹೇಮಾ, ಆ ದಾರುಣ ವ್ಯಥೆಯೇ ನನಗೆ ನೋವನ್ನುಂಟು ಮಾಡಿದೆ. ನನ್ನನ್ನು ಬಲವಾಗಿ ಬಾಧಿಸುತ್ತಲಿದೆ. ನನಗೆ ನಿಜವಾಗಿಯೂ ಮೊಗ ವೆತ್ತಿ ಮಾತನಾಡುವ ಶಕ್ತಿ ಕೂಡಾ ಇಲ್ಲ.' ಯುವರಾಜ ವಿಷಾದದಿಂದ ಉಚ್ಚರಿಸಿ ದನು.

'ನಿಜ. ನಾನದನ್ನರಿತಿರುವೆನು; ಆದರೆ ಆ ವ್ಯಥೆಯು ಬೇರೆಯವರಿಗೂ ಆಗಿ ದೆಯಲ್ಲವೆ? ಅವರ ಯೋಜನೆಯನ್ನೂ ನೀವು ಮಾಡಲೇಬೇಕಾಗುತ್ತದೆ. ಏಕೆಂ ದರೆ, ಸಕಲ ಸಾಮ್ರಾಜ್ಯರಕ್ಷಣೆಯ ಭಾರ ನಿಮ್ಮ ಮೇಲಿದೆ. ಸಕಲ ಪ್ರಜೆಗಳೂ ನಿಮ್ಮನ್ನೇ ನೋಡುವದು ಸ್ವಾಭಾವಿಕವು. ಈ ದುರ್ಘಟನೆಯ ಪರಿಣಾಮವಾಗಿ ಅದೆಷ್ಟು ಜನರು ದುಃಖವಶರಾಗಿರಬಹುದೆಂಬದಾದರೂ ಊಹಿಸಲು ಯೋಗ್ಯವೇ ಆಗಿದೆ. ಮಾತೆಯರು ತಮ್ಮ ಪ್ರೀತಿಯ ಮಕ್ಕಳಿಂದ ಅಗಲಿ ಮುಂದೆ ಮಾರ್ಗ ಕಾಣದೆ ಅದೆಷ್ಟು ಶೋಕಿಸುತ್ತಿರಬಹುದೆಂಬದನ್ನು ಊಹಿಸಿನೋಡಿರಿ. ಇನಿಯ ರನ್ನು ಕಳೆದುಕೊಂಡ ಪತಿವ್ರತೆಯರ ವಿಷಯ ಯೋಚಿಸಿರಿ. ಅನಾಥರಾದ ಶಿಶು ಗಳ ಬಗ್ಗೆ ಕರುಣೆ ತಳೆಯಿರಿ—'

ಹೇಮಾಂಬಿಕೆ ತೀರ ಸರಳವಾದ ಶಬ್ದಗಳಿಂದ ದುರ್ಘಟನೆಯ ಪರಿಣಾಮ ಚಿತ್ರಿಸುತ್ತಲಿದ್ದರೂ ಅದರ ಪರಿಣಾಮ ಯುವರಾಜನ ಮೇಲೆ ಬಹಳವಾಗಲಾರಂಭಿ ಸಿತು. ತನಗೆ ರಕ್ತಸಂಬಂಧವೇನೂ ಇರಲಿಲ್ಲ ತನ್ನ ಸಮೀಪದ ಆಪ್ತರಲ್ಲಾರೂ ಅಗಲಿರಲಿಲ್ಲ. ಹಾಗಿದ್ದೂ ತಾನು ಅಷ್ಟು ದುಃಖಿಸುತ್ತಲಿದ್ದನು. ಪ್ರತ್ಯಕ್ಷ ಹೊಟ್ಟೆ ಯ ಮಗನನ್ನು ಕಳೆದುಕೊಂಡ, ಪ್ರೇಮದ ಇನಿಯರನ್ನಗಲಿದ, ತಂದೆಯಿಲ್ಲದೆ ಅನಾಥ ರಾದ ಆ ಜನರ ದುಃಖವೆಷ್ಟಿರಬೇಕು? ಅವರು ಬಹಳವಾಗಿ ಪ್ರಲಾಪಿಸುತ್ತಿರ ಬಹುದು..ಅವರೆಲ್ಲರನ್ನೂ ಶಕ್ಯವಿದ್ದ ಮಟ್ಟಿಗೆ ಸಂತಯಿಸುವದು ತನ್ನ ಕರ್ತವ್ಯವೇ ಆಗಿ ದ್ದಿತು. ಇಂತಹ ಪರಿಸ್ಥಿತಿಯಲ್ಲಿ ಕರ್ತವ್ಯ ಮರೆತು ದುಃಖಕ್ಕೆ ಆಶ್ರಯವಿತ್ತುದು ತೀರ ಅನುಚಿತವಾಯಿತು....ಇತ್ಯಾದಿ ವಿಚಾರಗಳು ಬರಲಾರಂಭಿಸಿದುವು. ಕರ್ತವ್ಯ ಪ್ರೇರಣೆಯಿಂದ ಯುವರಾಜನ ಖಿನ್ನತೆ ಹಿಂದಾಗಲಾರಂಭಿಸಿದ್ದಿತು. ಕರ್ತವ್ಯಪ್ರೇಮ ಮೊಗದಲ್ಲಿ ಬಿಂಬಿಸಿತು. ಆ ಮೂಲಕ ಯುವರಾಜ ಬೇಗನೆ ಮುನ್ನಿನಂತಾಗುವ ನೆಂದು ಹೇಮಾಂಬಿಕೆಗೆ ನಂಬುಗೆಯಾಗಿ ಆನಂದವೆನಿಸಿತು.

'ಹೇಮಾ, ಇಂದು ನೀನೆಚ್ಚರಿಸಿದುದು ಬಹಳೇ ಯೋಗ್ಯವಾಯಿತು. ನಾನವರ ಮರಣಕ್ಕೆ ಶೋಕಿಸುವದಿಲ್ಲ; ಆದರೆ 'ಮುಂಚೆಯೇ ನಮಗೆ ಕಪಟವ್ಯೂಹ ತಿಳಿ ದಿದ್ದರೂ ನಮ್ಮಿಂದ ಏನೂ ಕಾರ್ಯ ಕೈಗೂಡಲಿಲ್ಲವಲ್ಲ' ಎಂಬ ಯೋಚನೆಯೊಂದೇ ನನ್ನನ್ನು ಅಷ್ಟು ಖಿನ್ನನನ್ನಾಗಿ ಮಾಡಿದ್ದಿತು; ಆದರೆ ಈಗ ಆ ಬಗ್ಗೆ ನಾನು ಯೋಚನೆಯನ್ನೇ ಮಾಡುವದಿಲ್ಲ. ನಡೆ. ಮೊದಲು ನೀನು ಈಗ ಸೂಚಿಸಿದಂತೆ ದುಃಖಿತರನ್ನು ಸಂತೈಸುವ ಕಾರ್ಯ ಮಾಡುವಾ!' ಎಂದು ಉತ್ತೇಜಿತನಾಗಿ ನುಡಿದನು.

ಹೇಮಾಂಬಿಕೆಗೆ ವಿಶೇಷವಾಗಿ ಆನಂದವಾಯಿತು. ಯಾವದೊಂದು ವಿಧದಿಂದ

ಯುವರಾಜ ತನ್ನ ಔದಾಸೀನ್ಯ ಕಳಚಿ ಉತ್ತೇಜಿತನಾಗಬೇಕೆಂಬದೇ ಆಕೆಯ ಹಾರೈಕೆ. ಅದರಲ್ಲಿ ಯಶ ಬರಲು ಆಕೆಗೆ ಅತೀವ ಆನಂದವಾಗುವುದು ಸ್ವಾಭಾವಿಕ.

ನಗರದವರ ದುಃಖ ಸಂತಯಿಸಲು ಯುವರಾಜನನ್ನೇ ಕರೆದೊಯ್ಯಲು ಮುಂದಾದಳು. ಅದುವರೆಗೆ ಆಕೆ ಅನೇಕ ಸಲ ದುಃಖಿತರ ಮಧ್ಯದಲ್ಲಿ ಹೋಗಿದ್ದಳು. ಅವರಾ ಉದ್ವೇಗಕಾರಕ ಸ್ಥಿತಿಯನ್ನವಲೋಕಿಸಿ ಆಕೆ ಬಹಳವಾಗಿ ವಿಷಾದಪಟ್ಟಿದ್ದಳು. ಅನೇಕ ಸಲ ಅವರನ್ನು ಸಂತಯಿಸಲೆತ್ನಿಸಿದ್ದಳು. ಹೇಮಾಂಬಿಕೆಯ ಹೃತ್ಪೂರ್ವಕವಾದ ಅನುತಾಪದಿಂದ ಹಲಕೆಲವರ ಹೃದಯುಗಳಾದರೂ ಶಾಂತತೆಯತ್ತ ಹೊರಟಿದ್ದುವು. ಹೇಮಾಂಬಿಕೆ ಹೋಗದಿದ್ದರೂ ಆ ಆ ಹೃದಯುಗಳು ಶಾಂತವಾಗಿಯೇ ಆಗುತ್ತವೆ. ಅದಕ್ಕೆ ಕಾರಣವು ಕಾಲ. ಕಾಲವು ದುಃಖಿತರ ದುಃಖವನ್ನು ಮರೆಯಿಸಲು, ಖಿನ್ನರ ಖಿನ್ನತೆ ಹರಿಸಲು, ಶೋಕಾರ್ತರ ಶೋಕ ಕಳೆಯಲು ಒಂದು ಉತ್ಕೃಷ್ಟವಾದ ಸಾಧನವಾಗಿರುತ್ತದೆ; ಹೃದಯಕ್ಕಾದ ಭೀಕರ ಗಾಯುಗಳಿಗೆ ಒಳ್ಳೆಯದಾದ ಔಷಧಿಯಿರುತ್ತದೆ. ಇಂದು ದುಃಖಾತಿರೇಕದಿಂದ ಮರಣವನ್ನೇ ಕೋರುತ್ತಲಿರುವ, ಆತ್ಮಹತ್ಯೆಗುದ್ಯುಕ್ತನಾಗಿರುವ, ಜೀವನವೆಂದರೆ ಕಟುವೃಕ್ಷದ ಕಟುತಮ ಫಲವೆಂದು ಆಶೆಯನ್ನು ತೊಲಗಿದ್ದ ಅನೇಕರು ಅಲ್ಪಾವಧಿ ಮುಂದಾಗುತ್ತಲೆ ಹಿಂದಿನ ದುಃಖಗಳನ್ನು, ಸಂಕಟಗಳನ್ನು, ಶೋಕಗಳನ್ನು, ಸಕಲವನ್ನೂ ಮರೆತು, ಮಧುರಜೀವನದ ಮಧುರತಮ ಫಲಗಳ ಆಸ್ವಾದನೆಗೆ ಸಿದ್ಧರಾಗುತ್ತಾರೆ. ಪ್ರೇಮನಿರಾಶೆಯಿಂದ ಬೆಂದಹೃದಯ, ಪ್ರೇಮಿಗಳಗಲುವಿಕೆಯಿಂದ ನೊಂದಹೃದಯ ಮಾನ-ಸನ್ಮಾನಗಳನ್ನು ಕಳೆದುಕೊಂಡ ದುಃಖಿತವಾದ ಹೃದಯ ಎಂತಹ ಭೀಕರ ಗಾಯುಗಳಿದ್ದರೂ ಮಾಯುತ್ತದೆ—ಅಲ್ಪಾವಕಾಶದಲ್ಲಿ ಮಾಯವಾಗುತ್ತದೆ. ಸಹಾನುಭೂತಿಪರ ಶಬ್ದಗಳ ಅಮೃತವರ್ಷಾವವಾದರಂತೂ ತೀರಾ ಅಲ್ಪಾವಧಿಯಲ್ಲಿ ಮಾಯವಾಗಿ, ಮುನ್ನಿಗಿಂತಲೂ ಹೆಚ್ಚಾಗಿ ಉತ್ತೇಜನ ಪಡೆಯುತ್ತದೆ; ಇದು ಜಗತ್ತಿನ ನಿಯಮ. ಹಾಗೆಯೇ ಹೇಮಾಂಬಿಕೆಯ ಪ್ರಯತ್ನದ ಪರಿಣಾಮವಾಗಿ ಅನೇಕ ಸಂತಪ್ತ ಹೃದಯಗಳು ಶಾಂತವಾಗಿದ್ದುವು. ಆದರಾಕೆಗೆ ಯುವರಾಜನ ಹೃದಯದ ಗಾಯ ಮಾಯಿಸುವದು ಅಗತ್ಯವಾಗಿತ್ತು. ಅಂತೆಯೇ ಯುವರಾಜನನ್ನು ಕರ್ತವ್ಯಪಥದತ್ತ ತಿರುಗಿಸಲೆತ್ನಿಸಿದಳು; ಮತ್ತು ಅದರಲ್ಲಿ ಯಶಸ್ವಿಯಾದಳು.

ಈರ್ವರೂ ಕಲೆತು ದುಃಖಿತ ಸಂಸಾರಗಳ ಸಮಾಚಾರಕ್ಕೆ ಹೊರಟರು. ಸ್ವತಃ ಯುವರಾಜನೇ ತಮ್ಮನ್ನು ಸಂತಯಿಸಲು ಬಂದುದನ್ನರಿತು, ಜನತೆ ಬಹಳ ಆನಂದಿತವಾಯಿತು. ಮಗನನ್ನಗಲಿದ ಮಾತೆಯ ಮೊಗ ನೋಡುತ್ತಲೇ ಯುವರಾಜನಿಗೆ ಅತ್ಯಂತ ಖೇದವಾಯಿತು. ತನಗೇ ಹಾಗೆ ಖೇದವಾಗುತ್ತಲಿರಲು, ಆ ಮಾತೆಯ ಹೃದಯವೆಷ್ಟು ಪರಿತಪಿಸುತ್ತಲಿರಬಹುದೆಂಬದು ಆತನಿಗೆ ಸ್ಮರಣವಾಗಲು, ಬಹಳ ಕಳವಳಪಟ್ಟನು. ಅಂತಹ ದುಃಖಿತರ ದುಃಖೀ ಹೃದಯ ಅಲ್ಪವಾದರೂ ಸುಖಿಸುವಂತೆ ಮಾಡಲೇಬೇಕೆಂದು, ತನ್ನ ಸ್ವಭಾವಸಹಜವಾದ ಮೃದುಮಾತುಗಳಿಂದ

ಅವರಿಗೆ ತಮ್ಮ ದುಃಖವನ್ನು ತಡೆದುಕೊಳ್ಳಲು ಕೇಳಿಕೊಂಡನು. ಆ ದುರ್ಘಟನೆಯು ತನಗೂ ಅತಿಯಾದ ನೋವನ್ನುಂಟುಮಾಡಿದ್ದಿತೆಂದು ವಿವರಿಸಿದನು. ತನ್ನನ್ನು ತಮ್ಮ ಸಮೀಪದ ಬಂಧುವೆಂದು ಭಾವಿಸಬೇಕೆಂದು ಬಿನ್ನಹ ಮಾಡಿಕೊಂಡನು. ಹಿರಿಯರಿಗೆ ಮಗನಂತೆಯೂ ಕಿರಿಯರಿಗೆ ಬಂಧುವಿನಂತೆಯೂ ಭಾವವನ್ನುಂಟು ಮಾಡಿದನು.

ಯುವರಾಜನ ಉದಾರವರ್ತನೆಯಿಂದ ಜನರು ಸಂತುಷ್ಟರಾದರು. ಅನೇಕರು ತಮ್ಮ ದಾರುಣದುಃಖದಲ್ಲಿ ಬಹ್ವಂಶವನ್ನು ಮರೆತರು. ಪ್ರತ್ಯಕ್ಷ ಯುವರಾಜನೇ ಮನೆಮುಟ್ಟಿ ಬಂದು ತಮ್ಮೊಡನೆ ಒಂದಾಗಿ ಹೋದ ಸಂಗತಿಯು ಅವರಿಗೆ ಬಹಳ ಉತ್ತೇಜನವಿತ್ತಿತು. ತಮ್ಮ ಯುವರಾಜನಬಗ್ಗೆ ಹೆಮ್ಮೆ ತಳೆದರು. ಹೀಗೆ ದುಃಖಾರ್ತ ಜನಸಮುದಾಯ ಸುಖದ ಸವಿಹಣ್ಣುಗಳತ್ತ ಮುಂದಾಯಿತು ಅದರಿಂದ ಯುವರಾಜನ ಹೃದ್ಗಾಯವೂ ಮಾಯುಲಾರಂಭಿಸಿತು. ಅನೇಕರಿಗೆ ಭಾವೀ ಸುಖದಾಶೆಯಿತ್ತ ತಾನೇ ಇವುಗಳನ್ನಾಶಿಸಕೂಡದೇ? ಅನೇಕರನ್ನು ಸಂತವಿಸಲೆತ್ನಿಸಿದ ತಾನೇ ಸಂತಸಪಡಕೂಡದೆ? ಅನೇಕರ ಹೃದ್ರೋಗಗಳಿಗೆ ಮೇಲ್ತರಗತಿಯ ಓಷಧಿಯಿತ್ತ ತಾನೇ ಆ ಓಷಧಿಯ ಉಪಯೋಗಮಾಡಿಕೊಳ್ಳಕೂಡದೆ?

'ಹೇಮಾ, ನಿಜವಾಗಿಯೂ ನೀನು ಚಾಣಾಕ್ಷಳು.'

'ಅಂದರೇನು ಯುವರಾಜ?'

'ನಾನು ತಿಳಿದುಕೊಂಡಷ್ಟು ಮೆತ್ತನ್ನವಳು ನೀನಿರುವದಿಲ್ಲ.'

'ನಾನೇನು ಕಠಿಣ ವರ್ತನೆಯಿಟ್ಟಿರುವೆ ಯುವರಾಜ?'

'ಇನ್ನೇನು ಬೇಕು? ಪ್ರತ್ಯಕ್ಷ ಉದಾಹರಣೆಯೇ ಎದುರಿಗಿದೆ.'

'ಅಂದರೆ?'

'ಅಂದರೇನು? ನೀನೊಳ್ಳೇ ಮುತ್ಸದ್ದಿ ಇರುವೆಯೆಂಬುದು.'

'ಸ್ಪಷ್ಟವಾಗಿ ಹೇಳಿದರಾಗದೆ?'

'ಅಸ್ಪಷ್ಟವಾದುದೇನಿದೆ?'

'ಅಂತಹ ವರ್ತನೆಯೇನು ಸಂಭವಿಸಿತು ನನ್ನಿಂದ?' ಎಂದೆಂದು, ಹೇಮಾಂಬಿಕೆ ಸುಳ್ಳು ಕೋಪ ನಟಿಸಿದಳು.

'ಹೇಮಾ, ನಿನ್ನಾ ಅಂತರಂಗವನ್ನೇ ನಾನರಿತಿರಲು, ಸುಮ್ಮನೇ ಮುಖದಲ್ಲಿ ಕೋಪ ನಟಿಸಿದರೇನಾಗುತ್ತದೆ? ಇದೋ, ಇಲ್ಲಿ ನೋಡು, ಸುಂದರ ಕುಸುಮಗಳಿರುತ್ತವೆ. ನಿನ್ನ ಜಾಣತನಕ್ಕೆ ತಲೆದೂಗಿ ಮಂದಮಾರುತ ಸುಗಂಧ ತಂದೀಯುತ್ತಲಿರುವ ಕುಸುಮಿತ ವೃಕ್ಷಸಮೂಹ ತಲೆವಾಗಿ ಕರೆಯುತ್ತಲಿವೆ. ಉದಯಿಸಲಿರುವ ಪೂರ್ಣೇಂದು ತನ್ನ ಮೃದುವಾದ ಕರಗಳಿಂದ ನಿನ್ನ ಬೆನ್ನು ತಟ್ಟುತ್ತಲಿದ್ದಾನೆ........'

'ಅದೆಲ್ಲವೂ ಏನೇ ಇರಲಿ, ಈಗ ಯುವರಾಜರ ಉದ್ದೇಶವೇನಿದೆ?'

'ಇನ್ನೇನೂ ಇಲ್ಲ. ನಿನ್ನ ಇನಿಗೊರಲು ನನ್ನ ಹೃದಯಕ್ಕೆ ಕೇಳಲೆಂದೇ.

ಬಹಳ ದಿನವಾಯಿತು. ಹೃದಯಮಧುರ ಕಂಠ ಕೇಳಲಾತುರವಾಗಿದೆ. ಅದು ದರಿಂದ ಒಂದು ಮಧುರವಾದ ಪದವನ್ನಾದರೂ ಹೇಳು ನೋಡುವಾ? ಹೇಳುವೆ ಯಲ್ಲವೆ ಹೇಮಾ?' ಯುವರಾಜ ಮನವೊಲಿಸುವ ಸ್ವರದಲ್ಲಿ ಕೇಳಿದನು.

ಯುವರಾಜ ಸಂಗೀತಾತುರನಾದ ಸಂಗತಿ ಹೇಮಾಂಬಿಕೆಗೆ ಅತ್ಯಾನಂದ ವನ್ನುಂಟುಮಾಡಿತು. ಯುವರಾಜ ಕೇಳಲು, ಇಲ್ಲೆನ್ನುವದು ಹೇಮಾಬಿಂಕೆಯಿಂದ ಕಾಲತ್ರಯದಲ್ಲಿಯೂ ಸಾಧ್ಯವಿರಲಿಲ್ಲ. ಆತ ನಿಜವಾದ ರಸಿಕ, ಕಲಾಪ್ರಿಯ, ಸಂಗೀತಜ್ಞ. ಅಂಥವನಿಗೆ ತನ್ನ ಸಂಗೀತ ಕೇಳಿಸದೆ ಇನ್ನಾರಿಗೆ ಕೇಳಿಸುವಳು?

'ಯುವರಾಜ, ಪದವನ್ನು ಹೇಳಲು ನಾನೇನೋ ಸಿದ್ಧಳೇ.'

'ಮತ್ತೇನು?'

'ಸಂಗೀತಶಾಲೆಯಲ್ಲಾದರೆ........'

'ಇದಾದರೇನು? ಸಂಗೀತಶಾಲೆಯಲ್ಲವೆ? ನೈಸರ್ಗಿಕರಮ್ಯವಾದ ಸಂಗೀತ ಶಾಲೆಯೇ ಇರಲು, ಬೇರೇ ಕೃತಕವಾದ ಸಂಗೀತಶಾಲೆಯ ಅವಶ್ಯಕತೆಯೇನೂ ಇಲ್ಲ. ಇಲ್ಲಿ ನೋಡು, ನಿಸರ್ಗದೇವಿ ನಿನ್ನಂತಹ ಸಂಗೀತಕುಶಲಗಳಿಗೋಸುಗ ಹಸುರ ರತ್ನಗಂಬಳಿ ಹಾಸಿರುವಳು. ಸಂಗೀತಜ್ಞ ಅನೇಕ ವೃಕ್ಷಸಮೂಹ ತೆರೆದ ಕುಸುಮ ಗಳ ಕಣ್ಣಗಳಿಂದವಲೋಕಿಸುತ್ತ, ಪಲ್ಲವ ಕರಗಳಿಂದ ಆದರಿಸಿ ಕರೆಯುತ್ತಲಿರುವವು. ಕೋಗಿಲೆ, ಶುಕ-ಪಿಕಗಳು ಪಾರ್ಶ್ವವರ್ತಿಗಳಾಗಿ ಇನಿವಾದ್ಯ ಮಧುರವಾಗಿ ನುಡಿಸಲು ಸಿದ್ಧವಾಗಿರುವವು. ಅದೋ, ಅಲ್ಲಿ ನೋಡು, ಸೋಗೆ ನವಿಲು ತನ್ನ ಬಿಂಕವನ್ನೆಲ್ಲ ಮರೆತುಬಿಟ್ಟು, ತಾಲಕ್ಕೆ ಸರಿಯಾಗಿ ನರ್ತಿಸಲು ಅತ್ಯಂತ ಆತುರತೆಯಿಂದ ನಿರೀಕ್ಷಿ ಸುತ್ತಲಿರುವದು. ಈ ನಿಸರ್ಗರಮ್ಯ ಸಂಗೀತ ಜೋಡಣೆ ನಿನ್ನ ಸಂಗೀತಶಾಲೆ ಯಲ್ಲಿ ಸಿಕ್ಕುವವೇ?........' ಯುವರಾಜ ಹೇಮಾಂಬಿಕೆಯ ಇನಿಮೊಗವನೀಕ್ಷಿಸುತ್ತ ಹೃಷ್ಟಮನಸ್ಕನಾಗಿ ನುಡಿದನು. ಹೇಮಾಂಬಿಕೆ ಮಾತನಾಡದೇ ನಗುಮುಖದಿಂದ ಯುವರಾಜನ ಮೊಗವನ್ನೇ ನೋಡುತ್ತ ನಿಂತಳು.

'ಏನು ಹೇಮಾ, ಯೋಚನೆಯೇನು ನಡೆದಿದೆ? ಸಂಗೀತಸ್ಮರಣೆಯಾಗುವ ದಿಲ್ಲವೆ?' ಯುವರಾಜ ಮತ್ತೆ ಪ್ರಶ್ನೆ ಮಾಡಿದನು.

'ಛೆ! ಹಾಗೇನೂ ಇಲ್ಲ.' ಹೇಮಾಂಬಿಕೆ ನಗುತ್ತ ನುಡಿದಳು.

'ಹಾಗಾದರಿನ್ನೇನು?' ಯುವರಾಜ ಆಶ್ಚರ್ಯಬಟ್ಟವನಂತೆ ಕೇಳಿದನು.

'ಇನ್ನೇನೂ ಇಲ್ಲ. ನನ್ನ ಸಂಗೀತ ಇದಕ್ಕಿಂತಲೂ ಸುಂದರವಾಗುವದು ಸಾಧ್ಯವಿದೆಯೇ ಅಂತ.' ಹೇಮಾಂಬಿಕೆ ತುಂಬುಗಣ್ಣುಗಳಿಂದ ಯುವರಾಜನ ಮೊಗ ವನ್ನೇ ನೋಡುತ್ತ ನುಡಿದಳು.

'ಇದಕ್ಕಿಂತ ಅಂದರೆ, ರಮ್ಯ ನಿಸರ್ಗಕ್ಕಿಂತಲೂ ಎಂದೆಯೇನು? ಇಲ್ಲವೆ ಶುಕ-ಪಿಕಗಳ ಮಧುರರವಕ್ಕಿಂತಲೂ ಎಂದೆಯಾ?' ಯುವರಾಜ ಆನಂದದಿಂದ ಪ್ರಶ್ನೆ ಮಾಡಿದನು.

'ಛೀ! ಎರಡೂ ಅಲ್ಲ' ಹೇಮಾಂಬಿಕೆ ನಗುತ್ತಲೇ ನುಡಿದಳು.

'ಹಾಗಾದರಿನ್ನೇನು?' ಯುವರಾಜ ಆಶ್ಚರ್ಯದಿಂದ ಪ್ರಶ್ನೆ ಮಾಡಿದನು.

'ನಿಮ್ಮ ಸುಂದರವಾದ ಕಾವ್ಯಕ್ಕಿಂತ.' ಹೇಮಾಂಬಿಕೆ ಉತ್ಸಾಹದಿಂದ ಮಾತ ನಾಡಿದಳು.

'ಆಂ! ನನ್ನ ಕಾವ್ಯವೇ? ಅದೆಲ್ಲಿಯದು?' ಯುವರಾಜ ಆಶ್ಚರ್ಯಚಕಿತನಾದಂತೆ ಪ್ರಶ್ನೆ ಮಾಡಿದನು.

'ಈಗಲೇ ನಿಸರ್ಗ ವರ್ಣನೆಯ ಬಹು ಸುಂದರವಾದ ಗೀತ ಹಾಡಿದಿರಲ್ಲ!' ಹೇಮಾಂಬಿಕೆ ಉತ್ತರವಿತ್ತಳು.

'ನಾ ನಾ ಅನ್ನುವ ವಾಕ್ಪಟುಗಳ ಬಾಯಿ ಮುಚ್ಚಿ ಬಿಡುವ ಚದುರೆ ನೀನು. ನಿನ್ನ ಸಂಗಡ ವಾದಮಾಡಿ ನಾನು ಗೆಲ್ಲುವನೆ? ಹೋಗಲಿ. ಈಗ ನೀನೇನು ಹಾಡು ವವಳೋ ಇಲ್ಲವೋ?' ಯುವರಾಜ ನಟನೆಯ ಕೋಪದಿಂದ ಕೇಳಿದನು.

'ಇಲ್ಲದಿದ್ದರೆ?' ಹೇಮಾಂಬಿಕೆ ನಗುತ್ತಲೇ ಪ್ರಶ್ನೆ ಮಾಡಿದಳು.

'ಇಲ್ಲದಿದ್ದರೆ ನಿನಗೆ ಶಿಕ್ಷೆ ವಿಧಿಸುವೆನು.' ಯುವರಾಜ ನಗುತ್ತಲೇ ಉತ್ತರ ವಿತ್ತನು.

'ಏನೆಂದು?' ಹೇಮಾಂಬಿಕೆ ಕೊಂಕು ನುಡಿಯಲ್ಲಿ ಕೇಳಿದಳು.

'ನನ್ನ ಮನಸ್ಸು ತಣಿಯುವವರೆಗೂ ಪದ ಹೇಳುತ್ತಲೇ ಇರಬೇಕೆಂದು.' ಯುವರಾಜ ಆನಂದದಿಂದ ನುಡಿದನು.

'ಸಹ್ಯದ ಯುವರಾಜ ಭಾವೀಸಮ್ರಾಟ್——'

'ಹೇಮಾಂಬಿಕೆಯ ಸಂಗೀತ.——'

ಹೇಮಾಂಬಿಕೆ ತನ್ನ ಇನಿಗೊರಲಿನಿಂದ ಸುಂದರವಾಗಿ ಹಾಡಿದಳು. ಸಂಗೀತ ಕಲೆ ಆಕೆಗೆ ಜನ್ಮದಿಂದಲೂ ಸಾಧಿಸಿದುದು. ಅಂದು ಯುವರಾಜ ತನ್ನ ವಿಷಾದವ ನ್ನೆಲ್ಲ ಮರೆತು ಮುನ್ನಿನ ಸಂತಸಕ್ಕೆಡೆಗೊಟ್ಟ ಕಾರಣದಿಂದ ಆಕೆಗೆ ಅತ್ಯಾನಂದವಾಗಿ ದ್ದಿತು. ಅದರಲ್ಲಿ ಯುವರಾಜ—ಹೇಮಾಂಬಿಕೆಯ ಹೃದಯೇಶ್ವರ, ಪ್ರೇಮದ ನಿಧಿ—— ಯುವರಾಜನೇ ಕೇಳಿದ್ದನು.

ಅಂದು ಆಕೆಯ ಸಂಗೀತ ಅತ್ಯಂತ ಮಧುರವಾಗಿದ್ದಿತು. ಆಕೆಗಾಗಲಿ ಆಕೆಯ ಆ ಸುಮಧುರ ಸಂಗೀತದಲ್ಲಿ ಮುಗ್ಧನಾದ ಯುವರಾಜನಿಗಾಗಲಿ ಮೈಮೇಲೆ ಭಾನವೇ ಇರಲಿಲ್ಲ. ಮೊದ ಮೊದಲು ಯುವರಾಜನಿಗಾಗಬೇಕೆಂಬ ಯೋಚನೆ ಹೇಮಾಂಬಿ ಕೆಯ ಮನದಲ್ಲಿದ್ದರೂ ಆ ವಿಚಾರ ಬಹಳ ವೇಳೆ ಉಳಿಯಲಿಲ್ಲ. ಹೃದಯ ಆನಂದ ಭರಿತವಾದುದರಿಂದ, ಹೇಮಾಂಬಿಕೆ ಅಲ್ಪಾವಕಾಶದಲ್ಲಿಯೇ ಕಲೆಯೊಡನೆ ಒಂದು ಗೂಡಿ ಮೈಮರೆತಳು. ತಾನು ಹಾಡುತ್ತಲಿದ್ದುದರ ಎಚ್ಚರವೇ ಆಕೆಗಿರಲಿಲ್ಲ.

ಯುವರಾಜನ ಅವಸ್ಥೆಯೂ ಹಾಗೆಯೇ ಆಗಿದ್ದಿತು. ಅವನ ಮನದಲ್ಲಿ ಬೇರೆ ಯೋಚನೆಯೇ ಇರಲಿಲ್ಲ. ಅವನ ಮನಸ್ಸು ಕರ್ಣದ್ವಾರದಿಂದ ಆ ಗಾಯನದಿಂತು ಸವಿ

ಯುತ್ತಲೇ ಇದ್ದಿತು. ಕಣ್ಣಿಂದ ಆ ಮೋಹಕ ರೂಪು ನೋಡುತ್ತಲಿದ್ದಿತು.

ಯುವರಾಜ ಎವೆಯಿಕ್ಕದೆ ಹೇಮಾಂಬಿಕೆಯ ಕಮನೀಯ ಕಮಲ ಮೊಗವನ್ನೇ ನೋಡುತ್ತಲಿದ್ದನು. ಸಂಗೀತ ಸರಸಿನ ಮೇಲೆ ಅರಳಿರುವ ಸುಂದರವಾದ ಇಂದೀವರ ಕುಸುಮದಂತೆ ಹೇಮಾಂಬಿಕೆ ಕಾಣಿಸಿದಳು. ಹೇಮಾಂಬಿಕೆಯ ಪ್ರತಿಯೊಂದು ಸೂಕ್ಷ್ಮಾಲಾಪವೂ ಯುವರಾಜನ ಹೃದಯವೀಣೆಯ ತಂತಿಯನ್ನು ಮಿಟಿದು ಅವನ ಹೃದಯವನ್ನೆಲ್ಲ ಸಂಗೀತಮಯವಾಗುವಂತೆ ಮಾಡಿತು. ಅವನ ಹೃದಯ ಹೇಮಾಂಬಿಕೆಯ ಸುಮಧುರ ಸಂಗೀತದೊಡನೆ ಒಂದುಗೂಡಿಹೋಯಿತು. ಯುವರಾಜನ ದೇಹಕ್ಕೆ ದೇಹವೇ ಹೇಮಾಂಬಿಕೆಯ ಸಂಗೀತದ ಸೂಕ್ಷ್ಮಘಾತದಿಂದಲುಗಾಡಲಾರಂಭಿಸಿತು.

ಹೀಗೆ ಈರ್ವರೂ ಅದೆಷ್ಟೋ ಸಮಯ ಕುಳಿತುಬಿಟ್ಟರು. ಹೇಮಾಂಬಿಕೆಯ ಸಂಗೀತ ಮುಗಿಯಿತು. ನಂದನವನದಿಂದ ಭೂಮಿಗಿಳಿದವನಂತೆ ಯುವರಾಜನೆಚ್ಚತ್ತನು. ಅವನ ಮನಸ್ಸು ಅತೀವ ಸಂತುಷ್ಟವಾಗಿದ್ದಿತು.

'ಧನ್ಯೆ! ಹೇಮಾ, ಧನ್ಯೆ! ಸಂಗೀತದೇವತೆ ನಿನಗೆ ಮರುಳಾಗಿ, ನಿನ್ನನ್ನೇ ಮೊರೆಹೊಕ್ಕಿರುವಳು. ನಿನ್ನಾ ಗಾನಾನಂದೆಯ ಗಾನವೇ ಅಪೂರ್ವವಾದುದೆಂದು ಭಾವಿಸಿದ್ದೆನು; ಆದರೆ ಇಂದಿನದು ಮಿಗಿಲಾದುದು.'

'ಬಹಳ ದಿನಗಳಿಗೆ ದೊರೆತ ಯಾವದಾದರೂ ಪದಾರ್ಥವು ರುಚಿಕರವಾಗುವದು ಸ್ವಾಭಾವಿಕವಾದುದು.'

'ಹಾಗೂ ಇರಬಹುದು; ಆ ದುಷ್ಟ ನೋಟದಿಂದ ಕಂಗೆಟ್ಟು ಹೋದ ನನ್ನ ಹೃದಯ ಬಹಳವಾಗಿ ಸಂತುಷ್ಟವಾಯಿತು.

---

## ೧೮ ಸಪ್ಪಿ.

ವಿಜಯನಗರದ ರಾಜಸಭೆ ಅಂದವಾಗಿ ಶೋಭಿಸುತ್ತಲಿದ್ದಿತು. ಮಲ್ಲಿಕಾರ್ಜುನ ಮಂದಿರದ ಉತ್ಪತ್ತಿ, ಭೀಕರ ಲಯಗಳೆಲ್ಲ ಕೊನೆಗಂಡು ಸುಮಾರು ಒಂದು-ಒಂದೂವರೆ ತಿಂಗಳಾಗಿದ್ದಿತು. ನಾಗರಿಕರು, ಪ್ರಜೆಗಳು ಆ ದುರ್ಘಟನೆಯನ್ನು ಮೆಲ್ಲನೆ ಮರೆಯುತ್ತಲಿದ್ದರು. ಆಗ್ಗೆ ರಾಜಸಭೆ ಕೂಡಿದ್ದಿತು. ಆ ದುರ್ಘಟನೆಯ ನಂತರ ರಾಜಸಭೆ ಕೂಡಿದುದು ಇದೇ ಮೊದಲು. ಅಂದು ರಾಜಸಭೆ ಕೂಡುವದರಲ್ಲಿ ಎರಡು-ಮೂರು ಉದ್ದೇಶಗಳಿದ್ದವು. ಮೊದಲಿನದು ಮತ್ತು ಮುಖ್ಯವಾದುದೆಂದರೆ, ದುಃಖಿತರ ಸಂತೈಕೆ, ಅವರಿಗೆ ಯುವರಾಜ ಮತ್ತು ಹೇಮಾಂಬಿಕೆಯರು ಎಲ್ಲೆಡೆಯಲ್ಲಿಯೂ ತಿರುಗಾಡಿ, ಪ್ರತಿಯೊಂದು ಮನೆಗೂ ಹೋಗಿ, ಅಲ್ಲಿ ದುಃಖಕ್ಕೊಳಗಾದವರೆಲ್ಲರನ್ನೂ ಸಂತಯಿಸುತ್ತಲೇ ಇದ್ದರು. ಅವರ ಪ್ರೇಮಳ ಉದಾರ ವರ್ತನದಿಂದ ಜನರು

ಬಹಳವಾಗಿ ಸಂತುಷ್ಟರಾಗಿದ್ದರು. ಆದರೂ ಪ್ರಸಿದ್ಧ ರೀತಿಯಿಂದ ಅವರ ದುಃಖ ಶಮನ ಮಾಡುವದು ಅತ್ಯಗತ್ಯವೇ ಆಗಿದ್ದಿತು.

ಇನ್ನು ನಡೆದ ದುರ್ದೈವೀ ಆಪತ್ತಿನ ಪರಿಣಾಮವಾಗಿ ನೂರಾರು ಅಧಿಕಾರೀ ಸ್ಥಳಗಳು ಬರಿಯವಾಗಿದ್ದುವು. ಅವುಗಳೆಲ್ಲಕ್ಕೂ ಅಧಿಕಾರಿಗಳನ್ನು ನಿಯಮಿಸಬೇಕಿದ್ದಿತು. ಇವೇ ಮುಂತಾದ ಕಾರಣಗಳಿಂದ ಅಂದು ಸಭೆ ನೆರೆದಿದ್ದಿತು.

ಮಂತ್ರಿದ್ವಯರಲ್ಲೊಬ್ಬನಾದ ಸಂಗಣ್ಣಮಂತ್ರಿ ಅಂದಿನ ಭಯಂಕರ ಕಾಪಟ್ಯಕ್ಕೆ ಬಲಿಬಿದ್ದಿದ್ದನು. ಇನ್ನೊಬ್ಬನಾದ ಲಕ್ಷಣ್ಣ ಮಂತ್ರಿ ನಗರದಲ್ಲಿರಲಿಲ್ಲ. ಹಿಂದೆ ಹೇಳಿದ್ದಂತೆ ಅವನಿನ್ನು ಸಿಂಹಳದ್ವೀಪದಲ್ಲಿಯೇ ಉಳಿದಿದ್ದನು. ಈ ದುರ್ಘಟನೆ ಸಂಭವಿಸಿದ ನಾಲ್ಕಾರು ದಿನಗಳಲ್ಲಿಯೇ ರಾಯನು ಸಂಗತಿಯೆಲ್ಲವನ್ನೂ ಬರೆದು ಬೇಗನೆ ಬರುವಂತೆ ಆತನಿಗೆ ತಿಳಿಸಿದನು. ಅವನಾದರೂ ಆ ಅಸಕ್ತೃದ ಪರಿಸ್ಥಿತಿಯನ್ನರಿತು ಲಗುಬಗೆಯಿಂದ ಪೊರಟು ಬಂದಿದ್ದನು.

ಲಕ್ಷಣ್ಣಮಂತ್ರಿ ಲಂಕೆಯಿಂದ ಬಂದೊಡನೆ ಅರಸುಮನೆಯವರಿಗೆ ಅಗಲಿದ ಆಪ್ತನನ್ನು ಕಂಡಂತಾಯಿತು. ರಾಯನಂತೂ ಮುಂಗಾಣದಾಗಿದ್ದನು ಅಂತೆಯೇ ಲಗುಬಗೆಯಿಂದ ಪೇಳಿಕಳುಹಿದ್ದನು. ಲಕ್ಷಣ್ಣಮಂತ್ರಿಯನ್ನು ನಿತ್ಯವೂ ಎದುರು ನೋಡುತ್ತಲಿದ್ದನು. ಬಂದೊಡನೆ ರಾಜ್ಯಶಕಟ ಸಾಗಿಸುವ ಸಮರ್ಥ ಬಂದನೆಂದು ಆನಂದ ಹೊಂದಿದನು ತನ್ನ ದುಃಖಭಾರವನ್ನೆಲ್ಲ ಹಗುರು ಮಾಡಲು ಲಕ್ಷಣ್ಣಮಂತ್ರಿಗೆ ಎಲ್ಲ ವಿಧದಿಂದಲೂ ಸಹಾಯ ಕೇಳಿದನು. ಲಕ್ಷಣ್ಣಮಂತ್ರಿ ಹಗಲೂ ಇರುಳೂ ಕುಳಿತು ಅದುವರೆಗೆ ನಡೆದಿದ್ದ ಸಂಗತಿ, ದುರ್ಘಟನೆಯಲ್ಲಿ ಬಲಿಬಿದ್ದ ಅಧಿಕಾರಿಗಳ ಬಗ್ಗೆ ಸಂಪೂರ್ಣ ವಿವರಣೆ ದೊರಕಿಸಿದನು. ಅವರವರ ಮನೆಯವರಿಗೆ ಮಾಡಬೇಕಾಗಿದ್ದ ಸಹಾಯದ ಪಟ್ಟಿ ಸಿದ್ಧಪಡಿಸಿದನು. ರಾಯನು ಸಕಲದರಲ್ಲಿಯೂ ಮಂತ್ರಿವರನಿಗೆ ಸ್ವಾತಂತ್ರ್ಯ ಕೊಟ್ಟಿದ್ದನು; ಮತ್ತು ಮಂತ್ರಿಯಾದರೂ ಮೇಲಿಂದ ಮೇಲೆ ಅರಸಿಗೆ ತೊಂದರೆ ಕೊಡದೆ, ತನಗೆ ಸರಿತೋರುವಂತೆ ನಡೆಯಿಸಿದ್ದನು. ಇದಲ್ಲದೆ ತೆರವಾದ ಸ್ಥಳಗಳಿಗೆ ಯೋಗ್ಯ ಅಧಿಕಾರಿಗಳನ್ನಾಯುವುದೂ ಅವನ ಕೆಲಸವೇ ಆಗಿದ್ದಿತು. ಪ್ರಯಾಸದಿಂದ ಶೋಧಿಸಿ, ಅಂತಹ ಜನರನ್ನೂ ಗೊತ್ತು ಮಾಡಿದನು. ಹೀಗೆ ಅನೇಕ ತೊಂದರೆಗಳನ್ನು ಸುಲಭವಾಗಿ ಬಿಡಿಸಲು ಲಕ್ಷಣ್ಣಮಂತ್ರಿ ಬಹಳವಾಗಿ ಕಷ್ಟವಹಿಸಿದನು. ಆ ಮೇಲೆ ರಾಯ-ಯುವರಾಜರ ವಿಚಾರ-ವಿನಿಮಯದೊಡನೆ ಸಭೆಯ ದಿವಸವನ್ನೂ ಗೊತ್ತುಪಡಿಸಿ, ಹಾಗೆ ಪ್ರಕಟಿಸಿದನು.

ಆ ದಿನ ಪ್ರಥಮ ಪ್ರಹರ ಕಳೆದಿದ್ದಿತು ಹೊಂಬಣ್ಣದಿಂದ ಶುಭ್ರವಾದ ಸೂರ್ಯ ಕಿರಣಗಳಿಂದ ವಿಜಯನಗರವು ತೇಜೋಹೀನವೇ ಆದಂತೆ ತೋರುತ್ತಲಿದ್ದಿತು. ಕೊಂಚ ಬಿಳುಪು ಕೊಂಚ ಅರಿಸಿಣಗಳ ಸಮ್ಮಿಶ್ರಣದಿಂದ ವೇದನಾಮಯವಾದ ತರುಣಿಯ ಮುಖಮಂಡಲದಂತೆ ತೋರುತ್ತಲಿದ್ದಿತು. ಅಗಲಿದ ವೀರರ ಸ್ಮರಣೆ ಇನ್ನೂ ಅಳಿಸಿರಲಿಲ್ಲ. ನಾಗರಿಕರು ಗುಂಪುಕಟ್ಟಿಕೊಂಡು ರಾಜಸಭೆಯತ್ತ ಸಾಗಿದ್ದರು. ಅಂದಿನ ಆ

ಭೀಕರ ದುರ್ಘಟನೆ ಮಾತ್ರ ಅವರ ಸ್ಮರಣೆಯಲ್ಲಿ ಅಚ್ಚೊತ್ತಿರುವುದಿತು. ಅದನ್ನೇ ಸ್ಮರಿಸುತ್ತ, ತಮ್ಮ ತಮ್ಮೊಳಗೆ ಚರ್ಚಿಸುತ್ತ, ಹರ್ಷ-ಖೇದಗಳಿಂದ ಮಿಶ್ರಿತವಾದ ಭಾವದಿಂದ ಹೊರಟಿದ್ದರು

ನಿಯಮಿತ ವೇಳೆಗೆ ಸಭೆಯ ಕಾರ್ಯಕ್ರಮಕ್ಕಾರಂಭವಾಯಿತು. ಆ ದಿನ ಸಭಾಲಯ ಜನರಿಂದ ಪರಿಪೂರ್ಣವಾಗಿದ್ದಿತು. ಒಂದು ದುರ್ಘಟ ಬೇನೆಯಿಂದ ಉಳಿದವನನ್ನು ಕಾಣಲು ಅನೇಕರು ಹೋಗುವದಿಲ್ಲವೆ? ಹಾಗೆಯೇ ಒಂದು ಮಹತ್ಕ್ರಾಂತಿಯಿಂದ ಸಭಾಲಯ ಅಳಿಯದುಳಿದಿದ್ದಿತು. ಕೊಂಚವೇ ಪ್ರಮಾದ ಸಂಭವಿಸಿದ್ದಾಗಿದ್ದರೆ, ಈಗ ಕಾಣುವ ನೋಟಕ್ಕಿಂತಲೂ ತೀರಾ ಭಿನ್ನವಾದ ನೋಟ ತೋರಬಹುದಿದ್ದಿತು. ಕ್ರೂರ, ಕಪಟ, ವಂಚಕ ವಿರೂಪಾಕ್ಷ ಸಭಾಲಯವನ್ನು ತನ್ನ ಆಧ್ಯತೆಯಿಂದಾಕ್ರಮಿಸಿ, ಭಯಚಕಿತ ಜನರೇ ಎಲ್ಲೆಡೆಯಲ್ಲಿಯೂ ಕಾಣುವಂತೆ ಮಾಡಬಹುದಿದ್ದಿತು. ಜನರೆಲ್ಲರೂ ಭೀತಿಯಿಂದ ನಡುಗುತ್ತ ಮುಂಗಾಣದೆ ಮೂಢರಾಗಿ ನಿರಾಶೆಯಿಂದ ಕುಳ್ಳಿರಬಹುದಿತ್ತು. ಇಂತಹ ಅನರ್ಥಗಳಿಂದ ಕರ್ನಾಟಕ ಸಾಮ್ರಾಜ್ಯ ಉಳಿದಿದ್ದಿತು. ತಮ್ಮಾ ಸುಂದರ ರಾಜಮಂದಿರದಲ್ಲಿ ಶಾಂತಿಯಿಂದ ಕುಳಿತುಕೊಂಡು, ನಡೆಯುವ ಕಾರ್ಯಕ್ರಮವನ್ನು ಕಣ್ಣಾರೆ ನೋಡಬೇಕೆಂದು ಆತುರರಾಗಿ ಎಲ್ಲರೂ ನೆರೆದಿದ್ದರು. ಪ್ರತಿಯೊಬ್ಬನ ಮೊಗವೂ ಹೃದಯದ ಸಂತುಷ್ಟಿಯನ್ನು ದ್ಯೋತಿಸುತ್ತಲಿದ್ದಿತು.

ಸಭಾಕಾರ್ಯಕ್ಕಾರಂಭವಾಯಿತು. ಮೊದಲು ಎದ್ದು ನಿಂತವ ಲಕ್ಷ್ಮಣ ಮಂತ್ರಿಯು.

'ವೈಭವಪೂರ್ಣ ಕರ್ನಾಟಕಸಾಮ್ರಾಜ್ಯಾಧೀಶ್ವರರೇ, ಮತ್ತು ಪ್ರೀತಿಯ ಬಂಧುಭಗಿನಿಯರೇ, ಕಳೆದ ವಿಜಯ ದಶಮಿಯ ದಿನ ತಾವೆಲ್ಲರೂ ನಮ್ಮೆಲ್ಲರ ಹೆಮ್ಮೆಯ ವೀರ, ಉದಾರ, ಚತುರ ಯುವರಾಜರನ್ನು ಸನ್ಮಾನಿಸಲು ನೆರೆದಿದ್ದಬಗ್ಗೆ ನಾನು ಕೇಳಿದೆನು. ಅದು ನಿಮ್ಮಗಳಿಗೆ ಅತ್ಯಂತ ಯೋಗ್ಯವಾದುದು; ಆದರೆ ಅಂದಿನ ಆ ನಿಮ್ಮ ಉತ್ಸಾಹದಲ್ಲಿ ಒಂದು ನಿರುತ್ಸಾಹ ಯಾರಿಗೂ ತಿಳಿಯದಂತುಂಟಾದ ಬಗ್ಗೆ ಈಗ ತಾವೆಲ್ಲರೂ ಊಹಿಸಿರಬಹುದು; ಮತ್ತು ಅದರ ಪರಿಣಾಮವೇ ಈಗ ಇಲ್ಲಿಂದ ಕಾಣದಾಗಿರುವ ನನ್ನ ಅನೇಕ ಜನ ಸನ್ಮಿತ್ರರುಗಳು. ಆ ದುರ್ಘಟನೆಯ ಬಗ್ಗೆ ಇನ್ನಿತರರಿಗೆ ಸಂದೇಹವೇ ಬಂದಿರಲಿಲ್ಲ. ಆ ಬಗ್ಗೆ ಅಲ್ಪವಾದರೂ ಸಂದೇಹ ಬಂದದ್ದಾಗಿದ್ದರೆ, ಆ ಬಂಧುಗಳನ್ನೆಲ್ಲ ಬೇಕಾದ ಹಾಗೆ ಪಾರುಗಾಣಿಸಬಹುದಿತ್ತು. ಆಗಲಿ. ಉಪಾಯವಿಲ್ಲ.

ಈ ಸಂದರ್ಭದಲ್ಲಿ ನಾವು ಕುಶಾಸತಿಯನ್ನು ಪ್ರಾರ್ಥಿಸುವ ವಿಷಯವೊಂದಿದೆ. ಅದೆಂದರೆ, ನಮ್ಮ ಹೊರೆಗಳು ಆ ಭಯಂಕರ ಕುತ್ತಿನಿಂದ ಪಾರುಗಂಡುದುದು. ನಮ್ಮ ಭಾವೀ ಯುವರಾಜ್ಞಿಯರು- ನಮೆಲ್ಲರನ್ನೂ ಅತ್ಯಂತ ಪುತ್ರವಾತ್ಸಲ್ಯದಿಂದ ಕಾಣುತ್ತಲಿದ್ದ ರಾಜಪುತ್ರಿ ಹೇಮಾಂಬಿಕಾದೇವಿ-ಇವರಲ್ಲಿ, ಅಸಾಮಾನ್ಯ ಚಾತುರ್ಯ, ಅದ್ವಿತೀಯ ಪ್ರಸಂಗಾವಧಾನ, ಅನುಪಮ ಧೈರ್ಯಗಳಿಲ್ಲವಾಗಿದ್ದರೆ, ನಾವೆಲ್ಲರೂ ನಮ್ಮ

ಹೃದಯ ಹಾರಿಹೋಗುವಂತೆ ಶೋಕಿಸುವ ಸಮಯ ಬರುತ್ತಲಿದ್ದಿತು. ಆದುದರಿಂದ ಮೊದಲು ನಾನಾ ಮಹಾ ಮಹಿಮರಿಗೆ ವಂದನೆಯರ್ಪಿಸುತ್ತೇನೆ. ಆ ಮಹಾ ತಾಯಿಗೆ ದೀರ್ಘಾಯುವನ್ನೂ, ಉತ್ಕೃಷ್ಟ ಆರೋಗ್ಯವನ್ನೂ ನೀಡಲು ಪಂಪಾಪತಿಗೆ ಬೇಡಿಕೊಳ್ಳುತ್ತೇನೆ. ನಮ್ಮ ಭಾವೀ ಯುವರಾಜ್ಞಿಯವರು ಕರ್ನಾಟಕದ ಉನ್ನತಿಗೆ ಬಹಳವಾಗಿ ಸಹಾಯ ಮಾಡುವರೆಂದು ಆಶಿಸುತ್ತೇನೆ.

ಇನ್ನು ಮುಂದಿನ ವಿಷಯವೆಂದರೆ ಅಗಲಿ ಹೋದವರ ಆತ್ಮಕ್ಕೆ ಶಾಂತಿ ನೀಡಲು ಪಂಪಾಪತಿಯನ್ನು ಪ್ರಾರ್ಥಿಸುವದು.

ಆ ಮೇಲೆ ನಾವು ಆ ಆ ಮೃತರ ಬಂಧುಗಳಿಗೆ ವಿನಂತಿಮಾಡಿಕೊಳ್ಳುವದು. ಈ ಬಗ್ಗೆ ನಾನು ಹೇಳುವದೆಂದರೆ, ನಮ್ಮನ್ನಗಲಿದವರು ಅವರ ಮನೆಗಷ್ಟೇ ಸಂಬಂಧಿಸಿರದೆ, ಸಕಲ ಕರ್ನಾಟಕಕ್ಕೂ ಸಂಬಂಧಿಸಿದವರು. ಅವರ ಬಂಧು-ಬಳಗದವರಿಗೆ ದುಃಖಮಾಡಲು ಎಷ್ಟು ಅಧಿಕಾರವಿದೆಯೋ, ಅಷ್ಟೇ ಅಧಿಕಾರ ಸಕಲ ಕನ್ನಡಿಗರಿಗಿದೆ. ಆದುದರಿಂದ ಆ ಮನೆತನದವರ ಯೋಗಕ್ಷೇಮ ಕನ್ನಡಿಗರ ಮೇಲೆಯೇ ಇದೆಯೆಂದರೆ ತಪ್ಪಲ್ಲ. ಸಕಲ ಕನ್ನಡಿಗರ ಪ್ರತಿನಿಧಿಗಳಾದ ನಮ್ಮ ಪ್ರಭುಗಳು ಅವರ ಯೋಗಕ್ಷೇಮದ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಿರುವರು. ಆದುದರಿಂದ ಆ ಆ ದುಃಖಿತ ಜನರು ನಮ್ಮನ್ನೆಲ್ಲ ಸೌಹಾರ್ದ್ರ ದೃಷ್ಟಿಯಿಂದ ನೋಡಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನು ನಮ್ಮ ಶ್ರೇಷ್ಠರಾಜ್ಯಶಕಟ ನಡೆಯಿಸಲು ಬೇರೆ ಬೇರೆ ಅಧಿಕಾರಿಗಳನ್ನು ನಿಯಮಿಸುವದಿರುತ್ತದೆ. ನಾವು ಆ ಬಗ್ಗೆ ಯೋಗ್ಯ ಜನರನ್ನೇ ಆರಿಸುವದು. ಆ ಆ ಜನರು ತಮ್ಮ ತಮ್ಮ ಹೊಣೆಯರಿತು, ಕನ್ನಡಿಗರ ಮಹತಿಯರಿತು, ಕನ್ನಡ ನಾಡಿನ ಸೇವೆ ಮನಃಪೂರ್ವಕ ಮಾಡುವರೆಂದು ನಾನು ಆಶಿಸುತ್ತೇನೆ.

ಇನ್ನು ದುಃಖದಿಂದ ಹೇಳಬೇಕಾದ ಸಂಗತಿಯೆಂದರೆ, ನನ್ನ ಅತ್ಯಂತ ಪ್ರೇಮದ ಮಿತ್ರರಾದ ಸಂಗಣ್ಣಮಂತ್ರಿಗಳ ಸ್ಥಾನ ಮಾತ್ರ ತೀವ್ರವಾಗಿ ತುಂಬಲಾರದೆಂದು ತೋರುತ್ತದೆ. ಆ ಚಾತುರ್ಯ, ಆ ವಿದ್ವತ್ತೆ, ಆ ಸ್ವಾಭಾವಿಕವಾದ ಹಾಸ್ಯ, ಅದಕ್ಕೆ ಸರಿಯಾದ ಶಾಂತತೆ— ಎಲ್ಲವೂ ಇನ್ನೆಲ್ಲಿ ತಾನೇ ದೊರೆಯಬಹುದು. ಅಂತಹ ಶ್ರೇಷ್ಠ ವ್ಯಕ್ತಿ ಮರೆಯಾದುದರಿಂದ ರಾಜ್ಯದ ವಿಶೇಷ ನೊಗ ನನ್ನ ಮೇಲೆಯೇ ಬಿದ್ದಿದೆ. ನಾವೀರ್ವರೂ ಎರಡು ಎತ್ತುಗಳಿಂತಿದ್ದೆವು. ಅದರಲ್ಲಾದಾಗಲೂ ಸಂಗಣ್ಣಮಂತ್ರಿಗಳೇ ಮುಂದೆ. ಅವರಾ ಯೋಚನೆ, ಹಂಚಿಕೆಗಳನ್ನು ಕೇಳುತ್ತಲಿ ನನಗೆ ಅಚ್ಚರಿಯಾಗುತ್ತಲಿದ್ದಿತು; ಮತ್ತು ಉತ್ತೇಜನವೆನಿಸುತ್ತಲಿದ್ದಿತು ಹೀಗಿರಲು, ನಾನೋರ್ವನೇ ಹೇಗೆ ಜುಂದೊರೆಯಲು ಸಮರ್ಥನಾಗುವೆನೋ ಆ ಪಂಪಾಪತಿಗೇನೇ ಅರಿಕೆ.

ಮಂತ್ರಿಯ ಕಣ್ಣಿನಿಂದ ಅಶ್ರುಗಳು ಧಾರೆಗಟ್ಟಿದುವು. ಕೇಳಲಿಕ್ಕೆ ಕುಳಿತವರ ಕಣ್ಣುಗಳೂ ನೀರುದುಂಬಿದುವು. ಮೇಲೆ ಸಿಂಹಾಸನದಲ್ಲಿ ಕುಳಿತ ಅರಸು-ಅವನ ಹೃದಯ ಕರಗಿ ಹೋಯಿತು. ಹೀಗೆ ರಾಜ-ಪ್ರಜೆಗಳಿಬ್ಬರೂ ದುಃಖಮಗ್ನರಾಗಿ ಕುಳಿಬಿಟ್ಟಿದ್ದರು.

ಲಕ್ಷ್ಮಣ್ಣಮಂತ್ರಿ ತನ್ನ ಭಾಷಣ ಮುಗಿಸಿದನು. ರಾಯನಾದರೂ ಆ ಸಮಯಕ್ಕೆ ತಕ್ಕಂತೆ ಒಂದು ಚಿಕ್ಕದಾದ ಭಾಷಣಮಾಡಿದನು. ಆ ಮೇಲೆ ನೂತನ ಅಧಿಕಾರಿಗಳಿಗೆ ವಸ್ತ್ರವೀಯುವುದಾಯಿತು. ಒಬ್ಬೊಬ್ಬ ಅಧಿಕಾರಿಯು ಮುಂದೆ ಬಂದು ಆ ವಸ್ತ್ರವನ್ನು ಸ್ವೀಕರಿಸಲಾರಂಭಿಸಿದನು.

——

# ೧೯ ಮಂಗಲ.

— o —

ವಿಜೃಂಭಣೆಯ ವೈಭವದ ವಿಜಯನಗರದ ಅಂದಿನ ಆ ನೋಟವೇ ನೋಟ. ಕನ್ನಡಿಗರು ಕಣ್ದಣೀ ನೋಡಿದರು. ಮತ್ತೆ ಮತ್ತೆ ನೋಡಿ ಮನತಣಿಸುತ್ತಲಿದ್ದರು. ನಗರಕ್ಕೆ ನಗರವೇ ನಲಿವಿನಿಂದ ನರ್ತಿಸುವಂತೆ ತೋರುತ್ತಲಿದ್ದಿತು. ಊರಲ್ಲೆಲ್ಲ ತಳಿರ್ತೋರಣಗಳು ಬೆಡಗಿನಿಂದ ಶೋಭಿಸುತ್ತಲಿದ್ದುವು. ಅಂದವಾದ ಪತಾಕೆಗಳು ನೋಡಿದಲ್ಲೆಲ್ಲ ಫಡಫಡಿಸುತ್ತಲಿದ್ದವು. ಪ್ರತಿಯೊಂದು ಮನೆಯೂ ಅಂದವಾದ ಚಿತ್ರಗಳಿಂದ, ಬಣ್ಣಗಳಿಂದ ಸುಂದರವಾಗಿ ಶೋಭಿಸುತ್ತಲಿದ್ದಿತು. ಬೀದಿಗಳಲ್ಲಿ ಸುವಾಸವಿಡಿಗಿ ಹೋಗಿದ್ದುವು. ಅಲ್ಲಲ್ಲಿ ಸುಂದರವಾದ ರಂಗವಲ್ಲಿಗಳು ಬಹಳ ರಮಣೀಯವಾಗಿ ಕಂಗೊಳಿಸುತ್ತಲಿದ್ದವು. ಸುಂದರವಾದ ಹೂದೋಟ-ಹಣ್ಣುದೋಟಗಳು ಮೊದಲೇ ವಿಜಯನಗರವನ್ನು ಅಲಂಕರಿಸಿದ್ದುವು; ಆದರೆ ಆ ದಿನ ನಗರವೆಲ್ಲವೂ ಕುಸುಮ ಸಮೂಹದಿಂದ ಬಹಳವಾಗಿ ಶೋಭಿಸುತ್ತಲಿದ್ದಿತು.

ನಗರದ ಪ್ರತಿಯೊಂದು ವ್ಯಕ್ತಿಯೂ ಆನಂದದಿಂದ ಉಬ್ಬಿಹೋಗಿದ್ದಿತು. ಪ್ರತಿಯೊಬ್ಬನಿಗೆ ತನ್ನ ಮನೆಯಲ್ಲಿಯೇ ಒಂದು ಮಂಗಲೋತ್ಸವ ನಡೆದಂತೆ ತೋರುತ್ತಲಿದ್ದಿತು. ಎಲ್ಲರೂ ಉತ್ಸಾಹದಿಂದ ಕಾರ್ಯದಲ್ಲಿ ಮಗ್ನರಾಗಿದ್ದರು. ಎಲ್ಲರ ಮುಖದಲ್ಲಿಯೂ ನಗೆ ಮನೆಮಾಡಿದ್ದಿತು; ಹೃದಯ ನಲಿವಿನಿಂದ ನಲಿದಾಡುತ್ತಲಿದ್ದಿತು. ಅಂದಿನ ಅವರ ಉತ್ಸಾಹವೆಂದರೆ ಅವರ್ಣನೀಯವೇ ಸರಿ. ಎಲ್ಲರೂ ಅತೀವ ಆನಂದದಿಂದ ನಲಿಯುತ್ತಿದ್ದರು.

ಈ ಎಲ್ಲ ಸಮಾರಂಭದ ಮುಖ್ಯ ಕಾರಣವು ಅಂದು ವಿಜಯನಗರದ ರಾಜಮನೆತನದಲ್ಲಿ ನಡೆದ ಮಂಗಲೋತ್ಸವವು. ನಮ್ಮ ಕಥಾನಾಯಕ ಮಲ್ಲಿಕಾರ್ಜುನನ ವಿವಾಹ ಸಮಾರಂಭವು ನಡೆದಿದ್ದಿತು. ವಧುವು ಇದುವರೆಗೂ ಓದುಗರು ಆಪ್ತೆಯೆಂದರಿತ ಹೇಮಾಂಬಿಕೆಯೇ ಆಗಿದ್ದಳು.

ಮಲ್ಲಿಕಾರ್ಜುನ ಮತ್ತು ಹೇಮಾಂಬಿಕೆಯರು ಒಬ್ಬರೊಬ್ಬರಲ್ಲಿ ಅನುರಕ್ತರಾದುದನ್ನು ಅರಸು ಅರಿತಿದ್ದನು. ಹೇಮಾಂಬಿಕೆಯಾದರೋ ಅಪ್ರತಿಮ ವಧುವಾಗಿದ್ದಳು. ರೂಪ, ಗುಣ, ಜಾಣತನಗಳೆಲ್ಲವುಗಳಿಂದ ಯುವರಾಜನಿಗೆ ತಕ್ಕವಳೇ ಆಗಿದ್ದಳು. ತನ್ನ ಪ್ರೇಮಳ ಸ್ವಭಾವದಿಂದ ಸಕಲರನ್ನೂ ತನ್ನವರನ್ನಾಗಿ ಮಾಡಿಕೊಂಡಿದ್ದಳು. ಅಂದು ಅರಸನನ್ನು ಭಯಂಕರ ವಿಪತ್ತಿನಿಂದ ಪಾರುಮಾಡಿದ್ದರಿಂದಂತೂ

ಅರಸು, ಅರಸಿ, ಇನ್ನಿತರರು ಹೇಮಾಂಬಿಕೆಯನ್ನು ಬಹಳ ಪ್ರೇಮದಿಂದ ಕಾಣುತ್ತ ಲಿದ್ದರು. ಎಲ್ಲರೂ ಹೇಮಾಂಬಿಕೆಯೆಂದರೆ, ತಮ್ಮಗಳನ್ನೆಲ್ಲ ಪರಿಪಾಲಿಸಲು, ಪ್ರೇಮ ದಿಂದ ಸಂತಯಿಸಲು, ತಮ್ಮೆಲ್ಲರ ಯೋಗಕ್ಷೇಮ ವಿಚಾರಿಸಲು ಏತಂದ ದೇವಿಯೇ ಎಂದು ನಂಬಿದ್ದರು.

ಪೊನ್ನಲದೇವಿಗಂತೂ ಅಂದಿನುತ್ಸಾಹವೇ ಉತ್ಸಾಹ. ಹೇಮಾಂಬಿಕೆಯನ್ನು ಚಿಕ್ಕಂದಿನಿಂದಲೂ ವಾತ್ಸಲ್ಯದಿಂದ ಪಾಲಿಸಿ-ಪೋಷಿಸಿದ್ದಳು. ಮಗಳಿಗಿಂತಲೂ ಹೆಚ್ಚಾಗಿ ಪ್ರೇಮದಿಂದ ಕಾಣುತ್ತಲಿದ್ದಳು. ಪತಿ-ಪುತ್ರರ ಪ್ರಾಣವನ್ನು ಭಯಂಕರ ವಿಪತ್ತಿನಿಂದುಳುಹಿದುದರಿಂದಂತೂ ಹೇಮಾಂಬಿಕೆ ಆಕೆಗೆ ಪ್ರಾಣಕ್ಕಿಂತಲೂ ಪ್ರಿಯ ಳಾಗಿ ತೋರುತ್ತಲಿದ್ದಳು. ಅಂತಹ ಹೇಮಾಂಬಿಕೆಯೇ ಈಗ ತನ್ನ ಸೊಸೆಯಾಗುತ್ತ ಲಿದ್ದಳು. ತನ್ನರಮನೆಯಲ್ಲಿಯೇ ಸರ್ವ ಕಾಲವೂ ವಾಸಿಸುತ್ತಲಿದ್ದಳು. ಅಂದಲ್ಲಿ ಲಾಭವಾಗದೇನು? ಸ್ವತಃ ತಾನೇ ನಿಂತು ಬೆಲೆಯುಳ್ಳ ರತ್ನಾಭರಣಗಳಿಂದಲೂ ಉತ್ಕೃಷ್ಟ ವಸನಗಳಿಂದಲೂ ಹೇಮಾಂಬಿಕೆಯನ್ನಲಂಕರಿಸಿದಳು. ಹೇಮಾಂಬಿಕೆಯ ಅನುಪಮ ಸೌಂದರ್ಯ ಕಣ್ಣಾರೆ ನೋಡಿದಳು. ಅಂತಹ ಸುಂದರಿಗೆ ತನ್ನ ದೃಷ್ಟಿಯೇ ತಗಲಬಹುದೆಂಬ ಭೀತಿಯಿಂದ ಬೇಗನೆ ದೃಷ್ಟಿ ಮುರಿದಳು.

ಲಗ್ನ ಸಮಾರಂಭದ ಮೆರವಣಿಗೆ ನಗರದಲ್ಲಿ ಹೊರಟಿದ್ದಿತು. ಆಹಾ! ಎಂತಹ ವೈಭವವಿದು! ಆಕಾಶದಲ್ಲಿ ಪ್ರತ್ಯಕ್ಷ ದೇವತೆಗಳು ಬಂದು ನಿಂತು ಆ ಸುಂದರ ನೋಟ ನೋಡಿದುದಾಗಿದ್ದರೆ ತಮ್ಮಲ್ಲೆಂದೂ ಅಂತಹ ಸುಂದರ ನೋಟ ಸಿಕ್ಕಲಿಲ್ಲವೆಂದು ಪೂರ್ಣ ಮನಗಂಡಿರಬೇಕು. ಸುವಸ್ತ್ರಾಭರಣಗಳಿಂದ ಸುಭೂಷಿತರಾದ ಸುವಾಸಿನಿ ಯರು, ಸುರನಾರಿಯರ ಸೊಬಗನ್ನು ಸವಾಲರಿಗೂ ಸಿಕ್ಕುವಂತೆಸೆದರು. ಅಂದವಾದಾ ಸುಂದರ ನೋಟ ನೋಡಿ ನೋಡಿ ಎಲ್ಲರೂ ಮೈಮರೆದರು. ಒಳ್ಳೇ ವೈಭವದ ಆ ಮೆರವಣಿಗೆ ಪಂಪಾಧೀಶನ ವರೆಗೆ ಹೋಗಿ, ಯಥಾವಿಧಿಯಾಗಿ ಅಲ್ಲಿ ಮಂಗಲಾರುತಿ ಮುಂತಾದ ನಿತ್ಯನಿಯಮಗಳನ್ನೆಲ್ಲ ಪೂರಯಿಸಿ ಮನೆಯತ್ತ ಮರಳಿತು.

ರಾಯ ತನ್ನ ಮಂತ್ರಿವರನೊಂದಿಗೆ ಅರಮನೆಯ ಮುಮ್ಮಾಳಿಗೆಯ ಮುಂಬದಿ ಯಲ್ಲಿ ಮೆರವಣಿಗೆಯ ಬರವನ್ನೇ ನಿರೀಕ್ಷಿಸುತ್ತ ನಿಂತಿದ್ದನು. ಹೇಮಾಂಬಿಕೆಯ ವಿಷಯಕವಾದ ವಾತ್ಸಲ್ಯ ಅವನಲ್ಲಿ ಬಲವಾಗಿದ್ದಿತು. ಆಗ್ಗೆ—ಮಾನವ ಸ್ವಭಾವವೇ ಅದು. ಸುಖದ ಸುಗ್ಗಿಯಲ್ಲಿ ಹಿಗ್ಗುತ್ತಿರುವಾಗ ಹಿಂದಿನ ದುಃಖಗಳ ಕುಗ್ಗು ಏಕೆ ಬರುತ್ತದೆ. ಒಳ್ಳೇ ಆನಂದಕರ ನೋಟ ನೋಡುತ್ತಿರುವಾಗಲೆ ಹಿಂದೆ ಅನುಭವಿಸಿದ ದುಃಖಗಳ ಸ್ಮರಣೆಯಾಗುತ್ತದೆ: ಇಲ್ಲವೆ ಹಿರಿಯರು ಕಳೆದು ಹೋದ ತಾಯಿ-ತಂದೆ, ಅಜ್ಜ-ಅಜ್ಜಿ ಮುಂತಾದವರು ಆ ವೈಭವ ನೋಡಲಿಕ್ಕೆ ಉಳಿಯಲಿಲ್ಲವಲ್ಲ! ಇಂತಹ ಆನಂದ ಅವರಿಗೆ ಅನುಭವಿಸಲು ದೊರೆಯಲಿಲ್ಲವಲ್ಲ! ಎಂಬ ವಿಚಾರವಾದರೂ ಬಂದೇ ಬರುತ್ತದೆ. ಹಾಗೆ ರಾಯನು ಹೇಮಾಂಬಿಕೆಯ ಬಗ್ಗೆ ಹೆಮ್ಮೆಪಡುತ್ತಲಿರುವಾಗಲೇ ಹಿಂದಿನ ಒಂದು ನೋಟ ಕಣ್ಣೆದುರು ಬಂದು ನಿಂತಿತು. ಕನ್ನಡಿಗರು ತಮ್ಮ ಶತ್ರು

ಗಳೊಡನೆ ನಡೆಯಿಸಿದ ಒಂದು ಹೋರಾಟದ ಪರಿಣಾಮ ಗೆಲುವೇ ಆಗಿದ್ದಿತು. ಆದರಾ ಹೋರಾಟದ ಪರಿಣಾಮವಾಗಿ ಇಮ್ಮಡಿ ದೇವರಾಯನ ಪ್ರೀತಿಯ ಸರದಾರ ಮೃತ್ಯು ವಶನಾದನು. ಆತನ ಅಂತ್ಯಕಾಲದ ಸಮಯ ರಾಯನ ಸ್ಮರಣೆಗೆ ಬಂದಿತು. ಗಾಯಗೊಂಡ ಸರದಾರನಿಗೆ ಅಂತ್ಯಕಾಲ ಸಮೀಪಿಸಿದೆ. ಅಲ್ಲಲ್ಲಿ ಗಾಯಗಳು ಬಲವಾಗಿದ್ದರೂ ಹಸನ್ಮುಖದಿಂದ ಮಲಗಿದ್ದಾನೆ. ಮಾರ್ಗದಲ್ಲಿ ವಿಜಯಶ್ರೀ ನಲಿದಾಡುತ್ತಲಿದ್ದಾಳೆ. ಮರಣವೆಂದರೆ, ಅವನಿಗೆ ವಿವಾಹದಲ್ಲಿನ ವಧುವಿನಂತಿರುವಳು; ಆದರೆ ರಾಯನಿಗೆ ತನ್ನಾ ಪ್ರೀತಿಯ ಶೂರ, ಧೀರ, ಚತುರ ಸರದಾರ ಕಣ್ಮರೆಯಾಗುವನೆಂಬ ಕಲ್ಪನೆಯಿಂದ ಕಡು ದುಃಖವಾಯಿತು. ತನ್ನ ರಾಜವೈದ್ಯರಿಗೆ ಮತ್ತೆಮತ್ತೆ ಉಪಚರಿಸಲು ಹೇಳುತ್ತಲಿದ್ದನು. ವೈದ್ಯರಾದರೂ ತಮ್ಮ ಶಕ್ತಿಮೀರಿ ಯತ್ನಿಸುತ್ತಲಿದ್ದರು; ಆದರೂ ಯಶಬರುವ ಚಿಹ್ನ ತೋರಲಿಲ್ಲ. ಆ ಸರದಾರನಿಗೆ ತನ್ನ ಮರಣದ ಬಗ್ಗೆ ಮನವರಿಕೆಯಾಗಲು, ಆತ ವೈದ್ಯರ ಔಷಧಿ ನಿರಾಕರಿಸಿದನು.

'ಬಂಧು. ಹೀಗೆ ಮಾಡಬೇಡ. ಔಷಧಿ ತೆಗೆದುಕೋ'

'ಪ್ರಭುಗಳೇ, ಇನ್ನು ಔಷಧಿಯ ಆವಶ್ಯಕತೆಯಿಲ್ಲ.'

'ಅದೇಕೆ? ನಮ್ಮ ವೈದ್ಯರು ಅಸಾಮಾನ್ಯರಿರುವರು.'

'ಆದರೂ ಅಂತಕನನ್ನು ಗೆಲ್ಲಲಾರರು. ಪ್ರಭುಗಳೇ, ನನ್ನ ಮರಣ ನಿಶ್ಚಿತವಾಗಿದೆ. ಆ ಬಗ್ಗೆ ನನಗೆ ದುಃಖವೇನೂ ಇಲ್ಲ. ಇಷ್ಟೇ ಅಲ್ಲ, ನನಗೆ ಅತ್ಯಾನಂದವಾಗಿದೆ; ಏಕೆಂದರೆ, ನಾನೇನು ಯಾವದೊಂದು ರೋಗದಿಂದ ಸಾಯಲಿರುವದಿಲ್ಲ. ಕೆಮ್ಮುತ್ತ, ಗೂರುತ್ತ, ತಿಂಗಳುಗಟ್ಟಲೆ ಹಾಸಿಗೆಯಲ್ಲಿ ಹೊರಳುತ್ತ ಬಿದ್ದಿಲ್ಲ. ವೀರ ಕ್ಷತ್ರಿಯನಿಗುಚಿತವಾದ ವೀರಮರಣವನ್ನೇ ಪಡೆದಿರುವೆನು. ನನ್ನ ತಾಯ್ನಾಡಿಗಾಗಿ, ನನಗೆ ಪಾಲನೆ-ಪೋಷಣೆಯಿತ್ತ ಜನ್ಮಭೂಮಿಗಾಗಿ, ನನ್ನ ಕನ್ನಡ ನಾಡಿಗಾಗಿ ಜೀವವಿರುವ ವರೆಗೂ ಹೋರಾಡಿದನೆಂಬ ಸಂಗತಿಯೇ ನನಗೆ ಅತ್ಯಾನಂದವಾಗಿರುತ್ತದೆ. ಆ ನನ್ನ ಕನ್ನಡ ನಾಡಿಗಾಗಿಯೇ ನಾನೀಗ ಮಡಿಯುತ್ತಲಿರುವೆನೆಂದು ಹೆಮ್ಮೆ ಪಡುತ್ತಲಿರುವೆನು. ನನ್ನಂತಹ ಭಾಗ್ಯ ಅನ್ಯರಿಗೆ ಸಿಕ್ಕದು. ಸ್ವತಂತ್ರ ಕನ್ನಡ ಭೂಮಿಯ ಮೇಲೆ ಮಲಗಿರುವೆ. ಕನ್ನಡ ನಾಡಿನುನ್ನತಿಗಾಗಿಯೇ ಇಲ್ಲಿ ಮಲಗಿರುವೆ. ಕನ್ನಡ ನಾಡೊಡೆಯ, ಕಣ್ಣೆದುರಿರುವ ಕನ್ನಡ ಭೂಮಿ ಸ್ವತಂತ್ರವಾಗಿರುವದನ್ನು ನೋಡುತ್ತಲೆ ಮಡಿಯುವೆ. ಇದಕ್ಕಿಂತಲೂ ಹೆಚ್ಚಿನದೇನು ಬೇಕು?'

ಆಗ್ಗೆ ರಾಯನ ಕಣ್ಣುಗಳಿಂದ ಅಶ್ರುಧಾರೆ ಸುರಿಯಲಾರಂಭಿಸಿತು.

'ಪ್ರಭುಗಳೇ, ದುಃಖಿಸಬೇಡಿರಿ. ನಾನು ಮಡಿದರೇನಾಯಿತು? ನನ್ನ ಆತ್ಮ ಚಿನ್ನದಂತಹ ಕನ್ನಡ ನಾಡು ಬಿಟ್ಟು ಇನ್ನೆಲ್ಲಿಯೂ ಹೋಗದು. ಸಗ್ಗಸುಖವನ್ನೂ ನೂಕಿ, ಮತ್ತೆ ನನ್ನೀ ಕನ್ನಡ ನಾಡಿನಲ್ಲಿಯೇ ಅಲೆಯುವದು. ಕನ್ನಡದೇಳ್ಗೆಯನ್ನೇ ಬಯಸುವದು. 'ಕನ್ನಡ' 'ಕನ್ನಡ' ಎಂದು ನನ್ನಯ ಕನ್ನಡ ನಾಡು, ಕನ್ನಡ ಜನತೆ, ಕನ್ನಡ ಭಾಷೆಗಳ ಜಪವನ್ನೇ ಮಾಡುತ್ತಲಿರುವದು. ಆದುದರಿಂದ ಇಂತಹ ಸ್ವಾನಂದ

ಮಗ್ನವಾಗುವ ನನ್ನೀ ಅಂತರಾತ್ಮನಿಗೆ ನೀವು ಆನಂದದಿಂದಪ್ಪಣೆಯನ್ನು ನೀಡಬೇಕಲ್ಲದೆ ಶೋಕಿಸಕೂಡದು.'

'ಭಾಪು, ಭಾಪು! ಬಂಧು, ಭಾಪು! ಇಂದು ನನಗೆ ಹರ್ಷ-ಖೇದಗಳೆರಡೂ ಏಕ ಕಾಲಕ್ಕೆ ಆಗುತ್ತಲಿವೆ. ಈ ಕನ್ನಡ ನಾಡಿನಲ್ಲಿ ನಿನ್ನಂತಹ ಕನ್ನಡಾಭಿಮಾನಿಗಳಿರುವರೆಂದರಿತು ಅತ್ಯಾನಂದವಾಯಿತು; ಮತ್ತು ನೀನೀಗ ಅಗಲುತ್ತಿರುವೆಯೆಂದು ದುಃಖವೂ ಆಯಿತು. ಇರಲಿ. ನಿನ್ನ ಕೊನೆಯ ಬಯಕೆಯೇನಾದರೂ ಇದ್ದರೆ ಸಂಕೋಚಪಡದೆ ತಿಳಿಸು.'

'ನನ್ನ ಕೊನೆಯ ಬಯಕೆಯೇ? ಅಹುದು. ನನ್ನ ಕನ್ನಡ ನಾಡು ಆವಾಗಲೂ ಉನ್ನತಿಯನ್ನೇ ಹೊಂದುತ್ತಲಿರಬೇಕು. ನನ್ನ ಕನ್ನಡ ಬಂಧುಗಳು ಕನ್ನಡ ನಾಡಿನುನ್ನತಿಗಾಗಿ ನನ್ನಗಿಂತಲೂ ನೂರ್ಮಡಿಯಾಗಿ ಯತ್ನಿಸಬೇಕು. ನನ್ನ ಕನ್ನಡ ಭಾಷೆ ಸದ್ಯ ಆಸ್ಥಾನದಲ್ಲಿ ಶೋಭಿಸುತ್ತಲಿರುವ ಕವಿವರರಂತೆ ಆವಾಗಲೂ ಕವಿವರರಿಂದ ಅಲಂಕರಿಸಲ್ಪಡಬೇಕು. ನನ್ನ ಕನ್ನಡ ಸರ್ವತೋಪರಿ ಉನ್ನತಿ ಹೊಂದಬೇಕು.'

'ಧನ್ಯ! ನಿನ್ನಂತಹ ಸತ್ಪುತ್ರನನ್ನು ಹೆತ್ತ ಕನ್ನಡಮಾತೆಯೇ ಧನ್ಯಳು!'

ಅದೇ ಸಮಯದಲ್ಲಿ ಆತನ ಚಿಕ್ಕಬಾಲಿಕೆ ಹೇಮಾಂಬಿಕೆ 'ಅಪ್ಪಾ' ಎಂದು ದುಃಖಿಸುತ್ತ ತಂದೆಯ ಬಳಿಗೆ ಬಂದಳು.

'ಮಗು, ನಾನಿನ್ನು ಹೋಗುವೆ. ಅನಾಥೆಯಾದೆಯೆಂದು ದುಃಖಿಸಬೇಡ. ಕನ್ನಡ ನಾಡೇ ನಿನ್ನದಿದೆ. ನಿನ್ನ ಕನ್ನಡ ನಾಡಿನಲ್ಲಿ ನಿನಗೆ ಏತರದೂ ಕೊರತೆಯಿಲ್ಲ. ಕನ್ನಡ ನಾಡೊಡೆಯ ನಿಂತಿರುವರು. ಅವರ ಪಾದದೆಡೆಗೆ ಸೇರು; ಹಾಗು ಕನ್ನಡ ನಾಡು, ಕನ್ನಡ ನಾಡೊಡೆಯರ ಸೇವೆಯನ್ನು ತನುಮನದಿಂದ ಸಲ್ಲಿಸು; ಮತ್ತು ನನ್ನಂತೆ 'ನನ್ನ ಕನ್ನಡ' 'ನನ್ನ ಕನ್ನಡ' ಅನ್ನುತ್ತಲೇ ಪ್ರಾಣ ಬಿಡು.'

ಆ ಚಿಕ್ಕಮಗುವಿಗೇನು ತಿಳಿಯ ಬಲ್ಲದು! ಆದರವನ ಕನ್ನಡಭಿಮಾನದಿಂದ ರಾಯನ ಕಂಠ ತುಂಬಿ ಬಂದಿತು. ಅವನು ಅತ್ಯಂತ ಪ್ರೇಮದಿಂದ ಹೇಮಾಂಬಿಕೆಯನ್ನು ಎದೆಗವಚಿಕೊಂಡನು.

ಅಂದಿನ ತಂದೆಯ ಉಪದೇಶ ತಿಳಿದಿರದಿದ್ದರೂ ಅದನ್ನು ಅಕ್ಷರಶಃ ಪಾಲಿಸಿದ ಆ ಹೇಮಾಂಬಿಕೆ ಕನ್ನಡ ನಾಡನ್ನೇ ತನ್ನದಾಗಿ ಮಾಡಿಕೊಂಡಿದ್ದಳು.

ಅರಸನ ಕಣ್ಣು ಹಸಿಯಾದ ಕಾರಣ ಲಕ್ಕಣ್ಣಮಂತ್ರಿಗೆ ತಿಳಿಯಿತು. 'ಪ್ರಭುಗಳೇ, ಯುವರಾಜ್ಞಿಯವರು ತಮ್ಮ ತಂದೆಯ ಕಾರ್ಯವನ್ನು ಅವನಿಗಿಂತಲೂ ಹೆಚ್ಚಾಗಿಯೇ ಮುಂದೊರೆಸುತ್ತಲಿರುವರು' ಎಂದು ಅಭಿಮಾನಪೂರ್ವಕವಾಗಿ ನುಡಿದನು.

'ಅಹುದು; ಮಂತ್ರಿಗಳೇ, ಹೇಮಾಂಬಿಕೆಯ ಕನ್ನಡಾಭಿಮಾನ, ಕನ್ನಡ ನಾಡಿನಲ್ಲಿದ್ದ ಪ್ರೇಮ, ಕನ್ನಡಿಗರ ಬಗ್ಗೆ ತೋರುವ ಹೆಮ್ಮೆಗಳು ಅವರ್ಣನೀಯವಾಗಿವೆ' ಗದ್ಗದಿತನಾಗಿ ಅರಸು ತುಂಬುಕಂಠದಿಂದ ನುಡಿದನು.

'ಇವರು ಕನ್ನಡನಾಡಿನ ಪುತ್ರ-ಪುತ್ರಿಯರಿಗೆ ಮಾದರಿಯಾಗಿರುವರು.' ಲಕ್ಷ್ಮಣ ಮಂತ್ರಿ ಹೆಮ್ಮೆಯಿಂದ ನುಡಿದನು.

ಅಷ್ಟರಲ್ಲಿ ಮಂಗಲವಾದ್ಯಗಳು ಕೇಳಬರಹತ್ತಿದವು. ಇಬ್ಬರೂ ಉತ್ಸುಕತೆಯಿಂದ ಮೆರವಣಿಗೆ ನೋಡಹತ್ತಿದರು. ಆ ಜನರ ಉತ್ಸಾಹ, ಹೊರಹೊಮ್ಮುತ್ತಲಿರುವ ಸೊಬಗು, ಸೂಸುತ್ತಲಿರುವ ಸೌಂದರ್ಯ ಇವುಗಳು ಅರಸು-ಮಂತ್ರಿಗಳೀರ್ವರನ್ನೂ ಮುಗ್ಧರನ್ನಾಗಿ ಮಾಡಿದವು. ಈರ್ವರೂ ಮೈಮರೆತು ಆ ಸುಂದರ ನೋಟ ನೋಡುತ್ತಲೇ ನಿಂತುಬಿಟ್ಟರು.

ಕೂಡಲೆ ಕೆಳಗಿನಿಂದ ಕರೆ ಬರಲು, ಮುಂದಿನ ವಿಧಿಗಳನ್ನು ಪೂರೈಸಲು ಪೂರ್ಣಹೃದಯದಿಂದ ಕೆಳಗಿಳಿದರು.

# ೨೦ ಉಪಸಂಹಾರ.

ಓದುಗ ಮಹಾಶಯ, ಈ ಕತೆ ಮುಗಿಯಿತು. ಇನ್ನು ಉಳಿದುದೇನೆಂದರೆ, ಅಲ್ಪ ಸ್ವಲ್ಪ ಮಿಕ್ಕ ಸಂಗತಿಯೇ ಸರಿ.

ವಿರೂಪಾಕ್ಷನಿಗೆ ಈ ಸಂಗತಿಯಿಂದ ಬಲವಾದ ಪೆಟ್ಟು ಕುಳಿತಿತು. ಈ ಬಲವಾದ ಆಘಾತದ ಪರಿಣಾಮವಾಗಿ ಮುಂದೆ ೨೦-೨೫ ವರುಷ ಅವನಿಗೆ ಎಲ್ಲಿಯೂ ತಲೆಯೆತ್ತಲವಕಾಶ ದೊರೆಯಲಿಲ್ಲ; ಆದರೂ ಅವನ ರಾಜ್ಯತೃಷ್ಣೆ ಮಾತ್ರ ಮರೆಯಾಗಲಿಲ್ಲ. ಸಂತತವಾಗಿ ಪ್ರಯತ್ನಿಸುತ್ತಲೇ ಇದ್ದು, ಮುಂದೆ ಇ. ಸ. ೧೪೬೬ರಲ್ಲಿ ಆಳುತ್ತಲಿದ್ದ ಉದಾರ ಮಲ್ಲಿಕಾರ್ಜುನರಾಯನನ್ನು ಅವನು ಸಿಂಹಾಸನದಿಂದುರುಳಿಸಿ, ಆ ಸಿಂಹಾಸನವನ್ನಾಕ್ರಮಿಸಿ ರಾಜ್ಯಪದ ಸಂಪಾದಿಸಿದನು.

ಹೀಗೆ ಕರ್ನಾಟಕದರಸು ಮನೆತನದಲ್ಲಿ ನಡೆದ ಒಂದು ಘಾತುಕ ಅಂತಃಕಲಹದ ಪ್ರಸಂಗವಿದು. ಪ್ರತಿಯೊಂದು ವ್ಯಕ್ತಿಯ ಜೀವನದಲ್ಲಿಯೂ ಇಂತಹ ಪ್ರಸಂಗಗಳು ಬಂದೇ ಬರುತ್ತವೆ; ಮತ್ತು ಅವು ಬರುವ ಮೂಲಕವೇ ಅವುಗಳ ದವಡೆಯಲ್ಲಿ ಸಿಕ್ಕು ಪಾರುಗಂಡ ಮಹಾ ವ್ಯಕ್ತಿಗಳಿಗೆ ಮಹತ್ವ ದೊರೆಯುತ್ತದೆ.

ಮಲ್ಲಿಕಾರ್ಜುನ ಈ ದುರ್ಘಟನೆಯಿಂದ ಉಳಿದುದು ಕನ್ನಡಿಗರಿಗೊಂದು ಅತ್ಯಂತ ಭೂಷಣಾಸ್ಪದ ಪ್ರಸಂಗವೇ ಎಂದು ಬೇರೆ ಹೇಳಬೇಕಿಲ್ಲ; ಆದರೂ ಆತ ತನ್ನ ಔದಾರ್ಯ ಕಳೆದುಕೊಳ್ಳಲಿಲ್ಲ. ಪ್ರತ್ಯಕ್ಷ ಔದಾರ್ಯದ ಮೂರ್ತಿಯೇ ಅವನಾಗಿದ್ದನು. ಇಷ್ಟೆಲ್ಲ ದುಷ್ಟತನಕ್ಕೆ ಕಾರಣನಾಗಿದ್ದರೂ, ವಿರೂಪಾಕ್ಷನನ್ನೆಂದೂ ಕೋಪದಿಂದ ದೂಷಿಸಲಿಲ್ಲ. ಎಲ್ಲೆಡೆಯಲ್ಲೂ ಅವನಿಗೋಸುಗ ಅರಸಿದನು; ಆದರೆ ಸಿಕ್ಕಲಿಲ್ಲ.

ಹೀಗೆ ಮಲ್ಲಿಕಾರ್ಜುನ ತನ್ನಾ ಔದಾರ್ಯದಿಂದ ಸಕಲ ಕನ್ನಡಿಗರ ಮನವನ್ನು ಸೆಳೆದು, ಎಲ್ಲರಿಗೂ ಅತ್ಯಂತ ಪ್ರೀತಿಯವನಾಗಿದ್ದನು.

ಓದುಗ ಮಹಾಶಯ, ವೈಭವದಿಂದ ಬೆಳೆದು, ಬಾಳಿ, ಅಳಿದು, ಸಕಲರ ಹೃದಯಗಳಲ್ಲಿಯೂ ಚಿರಸ್ಥಾಯಿಯಾಗುಳಿದ, ಆ ಘನತೆಪಡೆದ ಕರ್ನಾಟಕ ಸಾಮ್ರಾಜ್ಯದ ಇತಿಹಾಸದೊಳಗಿನ ಒಂದು ಪುಟವಿದು. ಇಂತಹ ಸಹಸ್ರಾವಧಿ ಪುಟಗಳ ಕನ್ನಡದಿತಿಹಾಸವಿದೆ. ಅದರಲ್ಲಿನ ಒಂದು ಪುಟ ತಮ್ಮೆದುರಿಟ್ಟಿರುವೆನು.

ಮಾನವನ ಹೃದಯ ದುರ್ಬಲವಿರುವದೂ ಉಂಟು, ಸಬಲವಿರುವದೂ ಉಂಟು. ಕಲೋಪಾಸಕರ ಕಾರ್ಯ ಇದ್ದದ್ದನ್ನು ಇದ್ದಂತೆ ಹೇಳುವದು. ಹಾಗೆ ನಾನು ಯತ್ನಿಸಿರುವೆ. ತಮಗೆ ಆ ಮಹಾತ್ಮರ ಚರಿತ್ರೆಯ ಮೂಲಕವಾಗಿ ಕೊಂಚ ಆನಂದವಾದರೆ, ನನ್ನ ಪ್ರಯತ್ನ ಸಾರ್ಥಕವಾದಂತಾಯಿತು.

ಸಂಪೂರ್ಣ

Printed by

B. P. KALE [illegible]

Shri Sheshachal Press

A[illegible]

### ೨ ಸಾಮಾಜಿಕ ಕಾದಂಬರಿ

೧ ಅಪರಾಜಿತ ೪ಆ
೨ ಎರಡನೇ ಹೆಂಡತಿ (೨ನೇ ಆ.) ೮ಆ
೩ ಕಣ್ಣೀರು ೨ ರೂ
೪ ಕಮಲಾಕಾಂತ ಸಾಧು ೧೦ಆ
೫ ಗೃಹಲೀಲೆ [೨ನೇ ಆ.] ೧೨ಆ
೬ ಚಂದ್ರಕಾಂತ ೧೦ಆ
೭ ನೀಚ ಜನಾಮದಾರ (೩ನೇಆ) ೧೨ಆ
,, ರಫ್ ೧೦ಆ
೮ ನನ್ನ ಗೃಹಿಣಿ ೧೦ಆ
೯ ನನ್ನ ಅತ್ತಿಗೆ ೬ಆ
೧೦ ಪರಿವರ್ತನ. ೪ಆ
೧೧ ಬಂಧುಪ್ರೇಮ (೨ನೇ ಆ) ೮ಆ
೧೨ ಭಾಮಿನಿ ,, ೮ಆ
೧೩ ಭಾವಭಿನ್ನತೆ (೨ನೇ ಆ) [illegible]
೧೪ ಮಣಿ [illegible]
೧೫ ಮಹಾತ್ಮಾ [illegible]
೧೬ ರಾಜನಂದಿನಿ (೨ನೇ ಆ) [illegible]
೧೭ ರಾಕಾಚಂದ್ರ [illegible]
೧೮ ವಿಚಿತ್ರ ಸಂಸಾರ [illegible]
೧೯ ವಿಲಕ್ಷಣ ಪತಿಸೇವೆ [illegible]
೨೦ ಸುಮತಿ ೬ಆ
೨೧ ಸೌಭಾಗ್ಯ ಗ್ಲೇಜ[೨ನೇ ಆ] ೧ರೂ
,, ರಫ್ ೧[illegible]
೨೨ ಸದ್ಗುಣಿಕಮಲಾ [೨ನೇಆ.] ೧[illegible]
೨೩ ಸತಿಸಾಹಸ [೨ನೇ ಆ.] [illegible]
೨೪ ಸ್ಕೂಲ ಮಿಸ್ಟ್ರೆಸ್ ೧|[illegible]
೨೫ ಸಾಧನ-ಕುಟೀರ ಗ್ಲೇಜ ೧ರೂ. ೪ಆ
,, ರಫ್ ೧ರೂ. ೨ಆ

### ೩ ಡಿಟೆಕ್ಟಿವ್ಹ ಕಾದಂಬರಿ

೧ ಅಂಬಿಕೆ (೨ನೇ ಆ.) ೧ರೂ. ೪ಆ
೨ ಇಂದುಮುಖಿ (೩ನೇ ಆ.) ೮ಆ
೩ ಕಳವೋ-ಕೊಲೆಯೋ? ೬ಆ
೪ ಕಳ್ಳಸಿಗೆ ಕಾಣಿಕೆ [೨ನೇ ಆ] ೮ಆ
೫ ಕೃತಕ ಕೈಬೆರಳು ೧ರೂ
೬ ಘಾತುಕ ಶಿಲೆಕಂಠ [೨ನೇ ಆ] ೧೦ಆ
೭ ತುಬ್ಬುಗಾರ ಸುಬ್ಬಣ್ಣ ೧|ರೂ
೮ ನಿಗೂಢ ಕೊಲೆ! [೨ನೇ ಆ.] ೮ಆ
೯ ಪತ್ತೇದಾರ ಪರಸಿಂಗರಾಯ ೪ಆ
೧೦ ಫಿರಂಗಿಯ ಪ್ರತಿಹಿಂಸೆ ೧|ರೂ
ರಫ್ ೧ರೂ.
೧೧ ಭಗವಾನ್ ದಾಸ (೨ನೇ ಆ) ೧ರೂ.
೧೨ ಭಯಂಕರ ಕೊಲೆ [೨ನೇ ಆ] ೧೨ಆ
೧೩ ಮಂಗನೇ ಕಳ್ಳ ೨ಆ
೧೪ ಮೋಹಿನಿ ಗ್ಲೇಜ ೧||ರೂ
,, ರಫ್ ೧|ರೂ
೧೫ ಮೋಹನನ ಜೀವನ ಗ್ಲೇಜ ೧|ರೂ
,, ರಫ್ ೧ರೂ.
೧೬ ಮಾಯಾವತಿ ಗ್ಲೇಜ ೧|ರೂ.
,, ರಫ್ ೧ರೂ. ೨ಆ
೧೭ ರಾಜಕೀಯ ಗುಪ್ತ ರಹಸ್ಯ ೧||ರೂ.
,, ರಫ್ ೧|ರೂ
೧೮ ಲಲಿತೆ ೧೦ಆ
೧೯ ವಿಚಿತ್ರ ಚಟ [೩ನೇ ಆ] ೮ಆ
೨೦ ವಿಲಕ್ಷಣ ಸಾಹಸ ೮ಆ
೨೧ [illegible] ೩ಆ

### ೪ ಪೌರಾಣಿಕ ಕಾದಂಬರಿ

೧ [illegible] ೩ಆ
೨ ಸತೀ-ಸಾಹಸ ೮ಆ
೩ [illegible] ೩ಆ
೪ ಸತೀ-ಸೀಮಂತಿನಿ ೨ಆ

### ೫ ಚರಿತ್ರೆಗಳು

೧ ಆನಂದಮೂರ್ತಿ ೩ಆ
೨ ಶ್ರೀ ಏಕನಾಥ ಚರಿತ್ರೆ ೧ರೂ

೩ ಶ್ರೀ ಕೇಶವ ಸ್ವಾಮಿಗಳು ೨ಆ
೪ ಕನಕಮುಷಿಮಾದರ್ಶ (೨ನೇ ಆ.) ೮ಆ
೫ ಶ್ರೀ ಗಿರಿಯಮ್ಮನ ಚರಿತ್ರೆ ೮ಆ
೬ ಗುಜರಾಥದ ಇತಿಹಾಸ ೬ಆ
೭ ಶ್ರೀ ಚಿದಂಬರ ವಿಜಯ ೧|||ರೂ
೮ ಶ್ರೀ ಜಯರಾಮ ಸ್ವಾಮಿಗಳು ೩ಆ
೯ ಶ್ರೀ ಟೆಂಬೇಮಹಾರಾಜರು ೧೦ಆ
೧೦ ಶ್ರೀ ನಾರಾಯಣ ಭಗವಾನರು ೮ಆ
೧೧ ಶ್ರೀ ನಾರಾಯಣ ಮಹಾರಾಜ ೪ಆ
೧೨ ಶ್ರೀನಾಗಲಿಂಗಸ್ವನವರು ೨ನೇಆ. ೨ಆ
೧೩ ಸಂತ-ತುಕಾರಾಮ (೨ನೇ ಆ) ೧ರೂ
೧೪ ಬೆಳದಡಿ ಶ್ರೀಬ್ರಹ್ಮಾನಂದರು ೨ಆ
೧೫ ಶ್ರೀ ಬ್ರಹ್ಮೇಂದ್ರ ಸ್ವಾಮಿಗಳು ೪ಆ
೧೬ ಮರಾಟಗೂ-ಇಂಗ್ಲಿಷರೂ ೧|ರೂ
೧೭ ಶ್ರೀ ಸ. ರಾಮದಾಸರು ೧ರೂ ೨ಆ
೧೮ ಶ್ರೀ ರಾಘವೇಂದ್ರವಿಜಯ ೧||ರೂ
೧೯ ಶ್ರೀರಂಗನಾಥ ಸ್ವಾಮಿಗಳು ೫ಆ
೨೦ ಶ್ರೀ ಸ್ವಾಮಿ ಶ್ರದ್ಧಾನಂದ ೧೨ಆ
೨೧ ಶ್ರೀವಾದಿರಾಜ ಕಥಾಮೃತ ೧೨ಆ
೨೨ ಶ್ರೀಶೇಷಾಚಲ ಚರಿತ್ರೆ (ಪದ್ಯ) ೧೦ಆ
,, ರಫ್ ೮ ಆ
೨೩ ಸಾಧು ಸದಾಶಿವಲೀಲೆ ೪ಆ
೨೪ ಸಮರ್ಥ ಪಂಚಾಯತನ ೨ರೂ
೨೫ ಸೌರಾಷ್ಟ್ರ ೫ಆ
೨೬ ಶ್ರೀ ಜ. ಸು. ಆಚಾರ್ಯರು ೧೨ಆ
೨೭ ಶ್ರೀ ಜ್ಞಾನೇಶ್ವರರು ೮ಆ

### ೬ ನಾಟಕಗಳು

೧ ಜಲಂಧರ (೨ನೇ ಆವೃತ್ತಿ) ೮ಆ
೨ ದೇವ-ದಾನವರು ಗ್ಲೆಜ ೧೨ಆ
,, ರಫ್ ೧೦ಆ
೩ ನಿರ್ಭಾಗ್ಯ ಭ್ರಾಂತಿ (೨ನೇ ಆ.) ೬ಆ
೪ ನಾರದಲೀಲಾ (೨ನೇ ಆ.) ೮ಆ
೫ ಪನ್ನೆ ೬ಆ
೬ ಪ್ರೇಮಲೀಲಾ ಸಂಗೀತ ೧ರೂ
೭ ಮೋಜಿನ ಮರಣ (೨ನೇ ಆ) ೧೨ಆ
ರಫ್ ೮ ಆ

### ೭ ಪೌರಾಣಿಕ-ಪಾರಮಾರ್ಥಿಕ

೧ ಈಶಾವಾಸ್ಯೋಪನಿಷತ್ತು ೧೦ಆ
೨ ಏಕನಾಥೀ ಅವಧೂತಗೀತೆ ೧ರೂ
೩ ಶ್ರೀದಿನಕರರಾಮದಾಸ-ಬಾಲಗೀತೆ ೮ಆ
೪ ಕರ್ನಾಟಕ ಕಥಾಸರಿತ್ಸಾಗರ ೨||ರೂ
೫ ಶ್ರೀ ದಾಸಬೋಧ ಸಂಪೂರ್ಣ ೬ರೂ
೬ ಮಹಿ-ಪ್ರೈಲಿಗಗಳ ಗುಟ್ಟು ೪ಆ
೭ ಪಂಢರಿ ಮಹಾತ್ಮ್ಯ [೪ನೇ ಆ] ೮ಆ
೮ ಶ್ರೀ ರೇಣುಕಾ ಮಾಹಾತ್ಮ್ಯ ೪ಆ
೯ ವೇಂಕಟೇಶ ಮಾಹಾತ್ಮ್ಯ ೧ರೂ
೧೦ ಶ್ರೀಶೇಷಾಚಲ ಬೋಧಾಮೃತ ೧ರೂ
೧೧ ಹಂಸಗೀತೆ ೬ಆ

### ೮ ಧಾರ್ಮಿಕ ಹಾಗು ಇತರ

೧ ಕಾಣ್ವ ತ್ರಿಕಾಲ ಸಂಧ್ಯಾ ೨ಆ
೨ ಕಾಣ್ವ ನಿತ್ಯವಿಧಿ [೨ನೇ ಆ] ೮ಆ
೩ ಕನಾಟಕಕ್ಕೆ ದೇವತೆಗಳು ೧೦ಆ
೪ ಜ್ವರ ಪ್ರಕರಣ ೧ರೂ
೫ ಧರ್ಮಸಿಂಧು (೧ನೇ ಭಾಗ) ೧ರೂ
೬ ಪ್ರಗತಿ-ದಾಸ್ಯವಿಮೋಚನ ೬ಆ
೭ ಮಿತ್ರದುಃಖ (೨ನೇ ಆವೃತ್ತಿ) ೪ಆ

ಈ ಕೆಳಗಿನ ಪುಸ್ತಕಗಳು ದೇವನಾಗರಿ ಲಿಪಿಯಲ್ಲಿರುವವು.

೮ ಋಗ್ವೇದಿ ತ್ರಿಕಾಲಸಂಧ್ಯಾ ೨ಆ
೯ ಶು. ಯ. ಕಾಣ್ವಸಂಹಿತೆ ೩ರೂ
೧೦ ಶಾಂತಿಮಾರ್ತಂಡ ಭಾ.೧-೨ ೨ರೂ
೧೧ ಶ್ರಾದ್ಧಮಾರ್ತಂಡ [೨ನೇ ಆ.] ೧ರೂ
೧೨ ಸಂಸ್ಕಾರಮಾರ್ತಂಡ ೨ರೂ
೧೩ ನಿತ್ಯವಿಧಿ (ಆಚಾರಮಾರ್ತಂಡ) ೧ರೂ
೧೪ ಉತ್ಸರ್ಜನೋಪಾಕರಣ ೮ ಆ
೧೫ ಅಗ್ನಿಮುಖ ವಿಧಿಃ ೨ಆ

# ಮೈಸೂರ ಸಂಸ್ಥಾನದ ಎಲ್ಲ ಹೆಡ್‌ಮಾಸ್ತರರಲ್ಲಿ ವಿಜ್ಞಾಪನೆ.

ಮೈಸೂರ ಸಂಸ್ಥಾನದ ಟೆಕ್ಸ್ಟ್ ಬುಕ್ ಕಮಿಟಿಯವರು ತಮ್ಮ T B C. No. 271 of 30-31 ರಂತೆ ಸದ್ಗ್ರಂಥ [illegible] ಸಂಪುಟದಿಂದ ಮೈಸೂರ ಸಂಸ್ಥಾನದ ಎಲ್ಲ ಸರಕಾರೀ ಸ್ಕೂಲಿನವರು ತಗೆಸಲಿಕ್ಕೆ ಮಂಜೂರ ಮಾಡಿರುವರು. ಈ ಕೆಳಗೆ ಬರೆದ ಗ್ರಂಥಗಳು ಸ. ಚಂದ್ರಿಕೆಯಲ್ಲಿ [illegible]ನೇ ಸಂಪುಟದಿಂದಲೇ ಪ್ರಕಟವಾಗಿರುವದರಿಂದ ಎಲ್ಲ ಸ್ಕೂಲಿನವರು ತರಿಸಿ ಪ್ರೋತ್ಸಾಹಿಸಬೇಕು.

| | | | | | |
|---|---|---|---|---|---|
| 1 ಮರಾಠರ [illegible] | ೧\| ರೂ. | 7 [illegible] | ೮ಆ | 13 ಮಂದಾಕಿನಿ | ೧೨ಆ |
| | | 8 [illegible] | | 14 [illegible] ನಕಲತ್ತೆ | ೯ ಆ |
| 2 ಸೂರ್ಯಾಸ್ತ | [illegible] | 9 [illegible] | ೮ಆ | 15 [illegible] | ೩ ಆ |
| 3 ಹಂಸಾ | ೧\| ರೂ. | 10 [illegible] | | 16 [illegible] | ೧\| ರೂ. |
| 4 [illegible] | | 11 [illegible] | ೧೦ ಆ | 17 ಎಚ್ಚ ನಾಯಕ | ೮ಆ |
| 5 [illegible] | [illegible] | 11 [illegible] | ೮ಆ | 18 ಗೆಲವಿನ ಶಕ್ತಿ | ೧೨ ಆ |
| 6 [illegible] ಅಭ್ಯುದಯ | ೧೨ ಆ | 12 [illegible] | ೮ಆ | 19 [illegible] | ೧\| ರೂ. |
| | | [illegible] ಪುಸ್ತಕಗಳು. | | 20 [illegible] ಕುಟೀರ | ೧\| ರೂ. |

## T.B.C. No. 29 of 32-33 ರಂತೆ ಇವು ಮಂಜೂರಾಗಿವೆ.

| | | | |
|---|---|---|---|
| 1 ಶ್ರೀ ದಾಸಬೋಧ ಸಂಗ್ರಹ | ೩ ರೂ. | 3 [illegible] | ೧೦ ಆ. |
| 2 ಸಮರ್ಥ [illegible] | ೨ ರೂ. | 4 [illegible] | ೧ರೂ. |

## ಇವು T.B.C. No. 49 of 1936-37 ರಂತೆ ಮಂಜೂರಾಗಿವೆ.

| | | | |
|---|---|---|---|
| 1 ಮೋಹಿನಿ | ೧\|\| ರೂ. | 6 [illegible] | ೧೪ ಆ |
| 2 ಚಾಲುಕ್ಯರ ಅಭ್ಯುದಯ | ೧೨ ಆ. | 7 [illegible] | ೧\| ರೂ |
| 3 ಸದ್ಗುಣಿ ಕಮಲಾ | ೧ ರೂ. | 8 [illegible] | ೧\|\| ರೂ |
| 4 ಆತ್ಮಬಲಿ | ೧ ರೂ. | 9 [illegible] | ೧\| ರೂ |
| 5 ಶೌರ್ಯ ಸಂಜೀವನ | ೧೪ ಆ. | 10 [illegible] ಬೋಜಗಳಾಯು | ೨ ರೂ |

## ಇವು T.B.C. No. 105 of 37-38 ರಂತೆ ಮಂಜೂರಾಗಿವೆ.

1 ಚದುರೆ ೧| ರೂ. 3 ಶಕ್ತಿಮಯಿ ೧ ರೂ

2 ವಿಮಲಾ ೧೪ ಆ. 4 [illegible] ೧೦ ಆ 5 ಸೌಭಾಗ್ಯ ತಿಲಕ ೧ ರೂ.

## ಇವು T.B.C. No. 65 of 1938-39 ರಂತೆ ಮಂಜೂರಾಗಿವೆ.

1 ಅಮಾತ್ಯನಂದಿನಿ ೧|| ರೂ. 2 ನನ್ನ ಅತ್ತಿಗೆ ೬ ಆ. 3 ನನ್ನ ಗೃಹಿಣಿ ೧೦ ಆ.

4 ಎರಡನೇ ಹೆಂಡತಿ ೮ ಆಣೆ 5 [illegible] ೧| ರೂ.

ವಿಳಾಸ—ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ, ಡಿ. ಧಾರವಾಡ

---

ದೇವನಾಗರಿ ಲಿಪಿಯಲ್ಲಿ ಅಚ್ಚಾಗಿರುವ

ಪಾ. ಯು. [illegible]

| | |
|---|---|
| ೧. ನಿತ್ಯವಿಧಿ | ೨ ಶ್ರಾವಣೀಪ್ರಯೋಗ |
| (ಆಚಾರ ಮಾರ್ತಂಡ) | (ಉತ್ಸರ್ಜನೋಪಾಕರಣ) |
| ಬೆಲೆ ೧ ರೂ. | ಬೆಲೆ ೮ ಆಣೆ |

ವಿಳಾಸ:—ಶ್ರೀ. ಪ. ಶಾಸ್ತ್ರೀ, ಪೋ. ಆನಂದವನ, ಡಿ. ಧಾರವಾಡ

# ಅಮಾತ್ಯನಂದಿನಿ.

ಶ್ರೀ

ಚಂದ್ರಹಾಸ ಮಹಾರಾಜನಿಗೆ ಸಂಬಂಧಿಸಿದ ಪೌರಾಣಿಕ ಕಾದಂಬರಿ. ದುಷ್ಟಬುದ್ಧಿ, ಮದನ, ಅಮಾತ್ಯನಂದಿನಿ, ಚಂಪಕಮಾಲಿನಿ, ಕುಳಿಂದ, ಶಶಾಂಕಶೇಖರ ಮುಂತಾದ ಭಿನ್ನ ಪ್ರಕೃತಿಯ, ಆದರೆ ಅನುಕರಣೀಯ ಗುಣಗಳುಳ್ಳ ಪಾತ್ರಗಳ ಹೃದಯವೇಧಕ ಸಂಗತಿಗಳ ಮೂಲಕ ಪುಸ್ತಕವು ವಾಚನೀಯವಾಗಿದೆ


ಕ್ರಾನ ಪುಟ ೩೦೦. ರಫ್ ಪ್ರತಿ ರೂ. ೧-೪-೦ ಗ್ಲೇಜ ರೂ ೧-೮-೦



## ಸ್ಕೂಲ ಮಿಸ್ಟ್ರೆಸ್ಸ

ಕ್ರಾನ ಪುಟ ೨೩೮

ಬೆಲೆ ೧-೪-೦ ರೂ.



## ಕರಿನೀರು

ಸ್ವ. ಬ್ಯಾರಿಸ್ಟರ ಸಾವರಕರರಿಂದ

ಬರೆಯಲ್ಪಟ್ಟ

ಅಂದಮಾನ ಸಂಬಂಧದ

ಗಮ್ಯ-ಭೀಷಣ ಕಾದಂಬರಿಯ

ಕನ್ನಡ ಅನುವಾದ.

೪೦೦ ಪುಟ, ನುಣುಪು ಕಾಗದ.

ಬೆಲೆ ೩ ರೂ.

ವಿಳಾಸ:— ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ, ಡಿ. ಧಾರವಾಡ.